
ಡಿಸೆಂಬರ್ 2011

₹ 10/-

# ಯುಗರಶ್ಮಿ

ತ್ರೈಮಾಸಿಕ





- ಅಹ್ಮದಿಯಾ ಖಲೀಫರಿಂದ ಪೋಪ್‌ರಿಗೆ ಸಂದೇಶ
- ಸರಕಾರಗಳ ವಿರುದ್ಧ ಪ್ರತಿಭಟನೆಗಳು
- ಜಾಗತಿಕ ಶಾಂತಿಯನ್ನು ಸ್ಥಾಪಿಸುವುದು ಹೇಗೆ?
- ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ
- ವಾಗ್ದತ್ತ ಮಸೀಹರ ಆಗಮನ ❖ ಬುಖಾರಿ ಇಸ್ಲಾಂನ ಮುಖವೇ?
- ದುರೂದ್ ಶರೀಫ್

"ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ಕೊಡಬೇಕೆಂದೂ ಜನರೆಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವಂಥದ್ದು ಅತ್ಯುತ್ತಮವಾದುದು. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಕಾಣುವವನೂ ಆಗಿದ್ದಾನೆ.

ಪವಿತ್ರ ಖುರ್‌ಆನ್ (4 : 59)

ಬಿಡಿ ಪ್ರತಿ : ರೂ. 10/- ವಾರ್ಷಿಕ ಚಂದಾ : ರೂ. 40/- ಅಂಚೆ ಮೂಲಕ : ರೂ. 50/-

## ವಿಷಯ ಸೂಚಿಕೆ

ಪುಟ


☆ ಶರಣಾರ್ಥಿಯನ್ನು ಸಂರಕ್ಷಿಸುವ ಜಗದ್ರಕ್ಷಕ 1
☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
☆ ಸರಕಾರಗಳ ವಿರುದ್ಧ ಪ್ರತಿಭಟನೆಗಳು 3
☆ ಜಾಗತಿಕ ಶಾಂತಿಯನ್ನು ಸ್ಥಾಪಿಸುವುದು ಹೇಗೆ? 6
☆ ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ - 2 13
☆ ವಾಗ್ದತ್ತ ಮಸೀಹರ ಆಗಮನ 25
☆ ಬುಖಾರಿ ಇಸ್ಲಾಂನ ಮುಖವೇ 32
☆ ದುರೂದ್ ಶರೀಫ್ 35
☆ ಇಸ್ಲಾಮಿನ ಪ್ರಾಥಮಿಕ ಪಾಠಗಳು 41
☆ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಗತಿ
☆ ನಿಧನ ವಾರ್ತೆ: ಸಾಹಿಬ್‌ಝಾದಿ ಸಯ್ಯಿದ ನಾಸಿರ ಬೇಗಂಬ ಸಾಹಿಬ 43
☆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಶಾಂತಿಪ್ರಿಯ; ಉಗ್ರವಾದಕ್ಕೆ ವಿರೋಧಿ 44
☆ ಬೆಂಗಳೂರು ಬುಕ್‌ಫೇರ್‌ನಲ್ಲಿ ಅಹ್ಮದಿಯಾ ಸ್ಟಾಲ್ 45
☆ ಓದಿದ್ದು :
*☆ ಕ್ರಿಸ್ಮಸ್ ವಾಣಿಜ್ಯೀಕರಣ : ಪೋಪ್ ಬೆನೆಡಿಕ್ಟ್ ತರಾಟೆ ☆ ಶಿಶುಕಾಮಿಗಳಿಗೆ ಶಿಕ್ಷೆ*
*☆ ಕರಪತ್ರ ಹಂಚಿಕೆ : ಹತ್ಯೆಗೆ ಪ್ರಚೋದನೆ ☆ ಪಾಕ್ : ಅಹಮದಿ ವಿದ್ಯಾರ್ಥಿನಿಯ ಉಚ್ಚಾಟನೆ* 46
*☆ ಪಾಕ್ ಮಕ್ಕಳಿಗೆ ಹಿಂದು ದ್ವೇಷ ಪಾಠ ☆ ತಸ್ಲೀರ್ ಹಂತಕನಿಗೆ ಕ್ಷಮೆ : ಜರ್ದಾರಿಗೆ ಜಮಾತೆ ಆಗ್ರಹ*
*☆ ಶಾಲೆಯಲ್ಲಿ ನಮಾಜ್ : ವಿರೋಧ ☆ ಶಿಶು ಆತ್ಮಾಹುತಿ ಬಾಂಬರ್‌ಗಳ ಬಳಕೆ : ಖಂಡನೆ* 47
*☆ ಸರ್ಕೋಜಿ ಮನಗೆದ್ದ ಭಾರತದ ಬಾಲೆ ☆ "ಆತ್ಮಾಹುತಿ ಬಾಂಬ್ ದಾಳಿ ಧರ್ಮಬಾಹಿರ" ☆ ಮಸೀದಿಯಲ್ಲಿ ಸಂಭ್ರಮ* 48
*☆ "ಪಾಕ್‌ನಿದ ಉಗ್ರರ ಪೋಷಣೆ" ☆ ಬಾಂಗ್ಲಾ : 'ಅಲ್ಲಾ' ವಿಚಾರದಲ್ಲಿ ಘರ್ಷಣೆ*
*☆ ಅಮೇರಿಕ : 6 ಮಂದಿಯಲ್ಲೊಬ್ಬ ಬಡವ ☆ ಇಟಲಿ : ಬುರ್ಖಾ ನಿಷೇಧ* 49
*☆ ಅಫ್ಘಾನ್ : ಕಲ್ಲು ತೂರಿ ತಾಲಿಬಾನ್ ಕಮಾಂಡರ್‌ನ ಹತ್ಯೆ ☆ ಜೀಸಸ್ ಕ್ರಿಸ್ತ ಮೃತಪಟ್ಟಿದ್ದು ಕಾಶ್ಮೀರದಲ್ಲಿ*
*☆ ಕಾಶ್ಮೀರದಲ್ಲಿ ಕ್ರಿಸ್ತನ ಸಮಾಧಿ : ಮತ್ತೆ ವಿವಾದ* 50
*☆ ಟೋನಿ ಬ್ಲೇರ್ ಕುರಾನ್ ಪಠನ ☆ ರಾಮಾಯಣ ☆ ಠಾಕ್ರೆ ಮೊಮ್ಮಗಳ ಮದುವೆ ಮುಸ್ಲಿಂ ಜತೆ!*
*☆ ಪಾಕ್ : ಉಪವಾಸ ಮುರಿದ 25 ಮಂದಿ ಬಂಧನ* 51
☆ "ಯುಗರಶ್ಮಿ"ಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯ ಸನ್ಮಾನ 42
☆ ಅಹ್ಮದಿಯಾ ಖಲೀಫರಿಂದ ಪೋಪ್‌ರಿಗೆ ಸಂದೇಶ


ಮುಖಪುಟ ಚಿತ್ರ : ಅಹ್ಮದಿಯಾ ಖಲೀಫರ ಸಂದೇಶ ಮತ್ತು ಇಟೆಲಿಯನ್ ಭಾಷೆಯ ಖುರ್‌ಆನ್ ಅನುವಾದವನ್ನು ಶರೀಫ್ ಔದೇ ಸಾಹೇಬ್ ಪೋಪ್‌ರಿಗೆ ಹಸ್ತಾಂತರಿಸುತ್ತಿರುವುದು.

ವಿಳಾಸ :- 10-23-1008/1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ನಿಗಾವಣೆ : ಮುಹಮ್ಮದ್ ಶಫೀಉಲ್ಲಾಹ್
ಸೌತ್ ಝೋನಲ್ ಅಮೀರ್,
ಅಹ್ಮದಿಯಾ ಮುಸ್ಲಿಂ ಜಮಾಅತ್,
ಕರ್ನಾಟಕ.

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 28 | ಡಿಸೆಂಬರ್ 2011 | ಫತಹ್ 1390 | ಸಂಚಿಕೆ : 2-4 |
|---|---|---|---|---|

## ಶರಣಾರ್ಥಿಯನ್ನು ಸಂರಕ್ಷಿಸುವ ಜಗದ್ರಕ್ಷಕ

ಒಬ್ಬನು ದೇವನೊಡನಿರುವ ತನ್ನ ವಿಶ್ವಾಸದ ಶಕ್ತಿಯನುಸಾರ ಭೌತಿಕತೆಯ ಆಶ್ರಯದಿಂದ ಮುಖ ತಿರುಗಿಸುತ್ತಾನೆ. ವಿಶ್ವಾಸ ಎಷ್ಟು ಹೆಚ್ಚು ವಿಕಾಸಗೊಳ್ಳುತ್ತದೋ, ಪ್ರಗತಿ ಹೊಂದುತ್ತದೋ ಅಷ್ಟು ಹೆಚ್ಚು ಭೌತಿಕತೆಯ ಆಶ್ರಯದಿಂದ ಆತನು ವಿಮುಖನಾಗುತ್ತಾನೆ. ವಾಸ್ತವಿಕವಾಗಿ ಲೋಕವು ವಂಚನಾತ್ಮಕವೆಂಬುದು ಸ್ಪಷ್ಟ. ಪ್ರಗತಿಗೆ ಕಾರಣವೆಂದು ಭಾವಿಸಲ್ಪಡುವ ಭೌತಿಕ ಲೋಕದ ವಸ್ತುಗಳು ಅಧೋಗತಿಗೆ ಹೇತುವಾಗುತ್ತವೆ. ಲೋಕದ ಆದರ ಮತ್ತು ಸ್ಥಾನ ಲಭ್ಯವಾಗಲಿಕ್ಕೆ ಸಂಪತ್ತು ಮೂಲಕ ವ್ಯಾಜ ಮತ್ತು ಕೃತ್ರಿಮವಾದ ಅನೇಕ ಮಾರ್ಗಗಳು ಅವಲಂಬಿಸಲ್ಪಡುತ್ತವೆ. ಜನರು ತಮ್ಮ ಗುರಿ ಸಾಧಿಸಲು ಅಸತ್ಯ ಮಾರ್ಗಗಳನ್ನು ಹುಡುಕುತ್ತಾರೆ. ತಮ್ಮ ಜೀವಿತ ಲಕ್ಷ್ಯಗಳ ಸಾಕ್ಷಾತ್ಕಾರಕ್ಕೆ ಇಂತಹ ರೀತಿಗಳನ್ನು ಕೈಗೊಳ್ಳಬೇಕೆಂದು ಅವರು ಭಾವಿಸುತ್ತಾರೆ. ಇದು ಎಷ್ಟರ ಮಟ್ಟಿಗೆಂದರೆ, ಇಂತಹ ಕುತ್ಸಿತ ಮಾರ್ಗಗಳ ಮೂಲಕ ಸಿದ್ಧಿಸಿದ ಗಳಿಕೆಗಳನ್ನು ಅವರ ಸ್ನೇಹಿತರ ಮುಂದೆ ಬಹಳ ಅಭಿಮಾನದಿಂದ ವಿವರಿಸುತ್ತಾರೆ. ಇದನ್ನು ದೈವಿಕ ಜ್ಞಾನ ಮತ್ತು ನೀತಿಯ ವೀಕ್ಷಣೆಯಲ್ಲಿ ಮೌಲ್ಯಮಾಪನ ಮಾಡುವಾಗ ಅವರ ಈ ರೀತಿಗಳೂ ಕ್ರಮಗಳೂ ಅವರಿಗೆ ಹೆಚ್ಚು ದಿನ ಬಾಕಿಯಾಗುವ ಸಂತೋಷ ಮತ್ತು ಸಂತೃಪ್ತಿಯನ್ನು ಪ್ರದಾನ ಮಾಡುವುದಿಲ್ಲವೆಂದು ನಮಗೆ ಕಾಣಲು ಸಾಧ್ಯ. ಯಾವಾಗಲಾದರೂ ಅವರೊಡನೆ ಇಂತಹ ವಿಚಾರಗಳ ಬಗ್ಗೆ ಕೇಳಿರಿ. ಅವರು ಸದಾ ನಿರಾಶೆ ಮತ್ತು ದುಃಖದ ಮುಖ ತೋರಿಸುವರು. ಶಾಂತಿ ಮತ್ತು ಸಂತೋಷ ಎಂದಿಗೂ ಅವರ ಮುಖಗಳಲ್ಲಿ ಕಾಣಿಸದು.

ದೇವಾನುಗ್ರಹದಿಂದ ಮಾತ್ರವೇ ಒಬ್ಬನ ಮುಖದಲ್ಲಿ ಸಂತೃಪ್ತಿಯ ಚಿಹ್ನೆಗಳು ಪ್ರಕಟಗೊಳ್ಳುವುವು. ಎಷ್ಟರವರೆಗೆ ಒಬ್ಬನು ದೇವನಲ್ಲಿ ಪೂರ್ಣವಾಗಿ ನಂಬಿಕೆಯಿರಿಸುವುದಿಲ್ಲವೋ, ಯಾವೊಬ್ಬನು ದೇವನ ವಾಗ್ದಾನಗಳನ್ನು ನಂಬಿ, ಅವನು ವಿಜಯಗಳನ್ನು ಒದಗಿಸಲು ಶಕ್ತನೆಂದು ದೃಢವಾಗಿ ನಂಬುವುದಿಲ್ಲವೋ, ಯಾವೊಬ್ಬನು ತನ್ನ ಜೀವನದಲ್ಲಿ ಒಂದು ಸಮೂಲ ಬದಲಾವಣೆ ತರುವುದಿಲ್ಲವೋ ಅಷ್ಟರವರೆಗೆ ಅವನಿಗೆ ಪೂರ್ಣ ಸಂತೃಪ್ತಿ ಲಭಿಸದು.

ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: "ಅವನು ಸಜ್ಜನರಿಗೆ ಸಂರಕ್ಷಣೆ ನೀಡುತ್ತಾನೆ." (7:197) ಅಂದರೆ,

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

❖ ಶುಚಿತ್ವ ವಿಶ್ವಾಸದ ಅರ್ಧಾಂಶವಾಗಿದೆ. ನಮಾಝ್ ಪ್ರಕಾಶವಾಗಿದೆ. ದಾನಧರ್ಮ ವಿಶ್ವಾಸದ ಲಕ್ಷಣವಾಗಿದೆ. (ಮುಸ್ಲಿಂ)

❖ ಹುತಾತ್ಮನಾಗಲು ಪ್ರಾಮಾಣಿಕವಾಗಿ ಅಲ್ಲಾಹನೊಡನೆ ಪ್ರಾರ್ಥಿಸುವವನು ತನ್ನ ಹಾಸಿಗೆಯಲ್ಲಿ ಮಲಗಿ ಮೃತಪಟ್ಟರೂ ಹುತಾತ್ಮನ ಪದವಿಯನ್ನು ಅಲ್ಲಾಹು ಅವನಿಗೆ ಪ್ರದಾನ ಮಾಡುವನು. (ಮುಸ್ಲಿಂ)

❖ ನೀನು ಎಲ್ಲಿದ್ದರೂ ಅಲ್ಲಾಹನ ಆಜ್ಞೆ ಅನುಸರಿಸಿ ಬದುಕಬೇಕು.

❖ ಅನಾವಶ್ಯಕಗಳಿಂದ ಬಿಟ್ಟು ನಿಲ್ಲುವುದು ಇಸ್ಲಾಮಿನ ಸೌಂದರ್ಯದಲ್ಲಿ ಸೇರಿದೆ.

❖ ನಿಶ್ಚಯವಾಗಿಯೂ ನೀವು ಅಲ್ಲಾಹನ ಮೇಲೆ ಬೇಕಾದ ರೀತಿಯಲಿ ಭರವಸೆಯನ್ನಿಟ್ಟರೆ, ಪಕ್ಷಿಗಳಿಗೆ ಆಹಾರ ಕೊಡುವ ಪ್ರಕಾರ ಅವನು ನಿಮಗೆ ಆಹಾರ ನೀಡುವನು. ಪಕ್ಷಿಗಳು ಬೆಳಿಗ್ಗೆ ಹಸಿದು ಬರಿ ಹೊಟ್ಟೆಯಲ್ಲಿ ಹೊರಗೆ ಹೋಗಿ ಹೊಟ್ಟೆ ತುಂಬಿಸಿ ಮರಳಿ ಬರುತ್ತವೆ.

❖ ನೀವು ಸತ್ಕರ್ಮಗಳಲ್ಲಿ ಮುನ್ನೇರಿರಿ. ಇರುಳು ತುಂಬಿದ ರಾತ್ರಿಯಂತೆ ಉಪಟಳ ಉಂಟಾಗುತ್ತಿರುವುವು. ಪ್ರಭಾತದ ಸತ್ಯವಿಶ್ವಾಸಿ ಪ್ರದೋಷದಲ್ಲಿ ಸತ್ಯನಿಷೇಧಿಯಾಗುವನು; ಪ್ರದೋಷದ ಸತ್ಯವಿಶ್ವಾಸಿ ಪ್ರಭಾತದಲ್ಲಿ ಸತ್ಯನಿಷೇಧಿಯಾಗುವನು. ಇದು ತನ್ನ ಧರ್ಮವನ್ನು ಐಹಿಕ ಗಳಿಕೆಗೋಸ್ಕರ ಮಾರಾಟ ಮಾಡುವ ಕಾರಣದಿಂದಾಗಿದೆ. (ಮುಸ್ಲಿಂ)

❖ ಅಲ್ಲಾಹನು ಹೇಳುತ್ತಾನೆ: ನನ್ನ ದಾಸನು ನನ್ನ ಬಳಿಗೆ ಒಂದು ಗೇಣು ಹತ್ತಿರವಾದರೆ ನಾನು ಒಂದು ಮೊಳ ಹತ್ತಿರವಾಗುವೆನು. ಅವನು ಒಂದು ಮೊಳ ಹತ್ತಿರವಾದರೆ ನಾನು ಒಂದು ಗಜ ಹತ್ತಿರವಾಗುವೆನು. ನನ್ನ ಬಳಿಗೆ ಅವನು ನಡೆದು ಬಂದರೆ, ಅವನ ಬಳಿಗೆ ನಾನು ಓಡಿ ಹೋಗುವೆನು. (ಬುಖಾರಿ)

❖ ಪ್ರಧಾನವಾದ ಎರಡು ಅನುಗ್ರಹಗಳನ್ನು ಗಳಿಸುವುದರಲ್ಲಿ ಹೆಚ್ಚಿನವರು ಪರಾಜಿತರು – ಆರೋಗ್ಯ ಮತ್ತು ವಿಶ್ರಾಂತಿ.

❖ ನಮಾಝ್ ಮಾಡುವಾಗ ಸಾಲುಗಳನ್ನು ನೀವು ಸರಿಪಡಿಸಿರಿ. ಅಲ್ಲವಾದರೆ ನಿಮ್ಮೆಡೆಯಲ್ಲಿ ಅಲ್ಲಾಹು ಭಿನ್ನತೆಯನ್ನುಂಟುಮಾಡುವನು. (ಬುಖಾರಿ, ಮುಸ್ಲಿಂ)

❖ ಅಗ್ನಿ ನಿಮ್ಮ ಶತ್ರು, ನಿದ್ರಿಸುವಾಗ ನೀವು ಅದನ್ನು ನಂದಿಸಬೇಕು. (ಬುಖಾರಿ, ಮುಸ್ಲಿಂ)

---

ಪರಿಷ್ಕರಣ ಮತ್ತು ಒಳಿತಿನ ಮಾರ್ಗದಲ್ಲಿ ಸಂಚರಿಸುವವನಿಗೆ ದೇವನು ರಕ್ಷಕನಾಗುವನು. ಅಂತಹ ವ್ಯಕ್ತಿಗಳನ್ನು ದೇವನು ಎಲ್ಲ ರೀತಿಯಲ್ಲೂ ರಕ್ಷಿಸುವನು.

ಒಬ್ಬನಿಗೆ ಓರ್ವ ರಕ್ಷಕನಿದ್ದರೆ ಅವನ ಹಲವು ಭಾರಗಳು ಹಗುರವಾಗಲು ಸಾಧ್ಯ. ಓರ್ವ ಮಾತೆ ಮಗುವಿನ ರಕ್ಷಣೆಗೋಸ್ಕರ ವರ್ತಿಸುವಾಗ ಮಗು ಅದರ ಆವಶ್ಯಕತೆಗಳ ಸಂಬಂಧಿಸಿ ಏನೂ ಆತಂಕಗೊಳ್ಳಬೇಕಾಗಿಲ್ಲ. ತಾಯಿ ಆ ಮಗುವಿನ ಎಲ್ಲ ಆವಶ್ಯಕತೆಗಳನ್ನು ಪೂರೈಸಿಕೊಡುವಳು. ಮಗುವಿನ ಆಹಾರ, ವಸ್ತ್ರ ಮುಂತಾದವುಗಳಿಗೆಲ್ಲ ಮಾತೆ ಉತ್ಕಂಠಗೊಳ್ಳುತ್ತಾಳೆ. ಅವಳು ಮಗುವಿನ ಆರೋಗ್ಯವನ್ನು ಪರಿಪಾಲಿಸುತ್ತಾಳೆ. ಅದನ್ನು ಮೀಯಿಸಿ ಸ್ವಚ್ಛಗೊಳಿಸುತ್ತಾಳೆ. ಕೆಲವೊಮ್ಮೆ ತಾಯಿ, ಮಗು ಆಹಾರ ತಿನ್ನಲು, ಪಾನೀಯ ಕುಡಿಯಲು ಮತ್ತು ವಸ್ತ್ರ ಉಡಿಸಲು ಮೆಲ್ಲನೆ ಹೊಡೆಯುತ್ತಾಳೆ. ಮಗುವಿಗೆ ತನ್ನ ಆವಶ್ಯಕತೆಗಳೇನೆಂದು ತಿಳಿಯುವುದಿಲ್ಲ. ಆದರೆ ತಾಯಿ ಅದನ್ನು ತಿಳಿದು ಅದನ್ನು ಪೂರೈಸಲು ನಿರತಳಾಗುತ್ತಾಳೆ. ಮಗು ಮಾತೆಯ ಸಂರಕ್ಷಣ ವಲಯದಲ್ಲಿ ಬೆಳೆದು ದೊಡ್ಡದಾಗುವಾಗ ಸ್ವಾಭಾವಿಕವಾಗಿ ಅವನಿಗೆ ಕೆಲವು ರಕ್ಷಣಾಧಿಕಾರಿಗಳ ಆವಶ್ಯಕತೆ ಸಹ ಉಂಟಾಗುತ್ತದೆ. (ಮಲ್‌ಫೂಝಾತ್)

– ಹ಼ಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು

# ಸರಕಾರಗಳ ವಿರುದ್ಧ ಪ್ರತಿಭಟನೆಗಳು

**ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು 1-4-2011ರಂದು ಲಂಡನಿನ ಬೈತುಲ್ ಫುತೂಹ್ ಮಸೀದಿಯಲ್ಲಿ ಮಾಡಿದ ಜುಮುಅ ಖುತುಬದ ಸಂಕ್ಷೇಪ.**

ಮುಸ್ಲಿಂ ರಾಷ್ಟ್ರಗಳ ಆಡಳಿತೆಗಾರರು ತಮ್ಮ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕಾಗಿದೆ ಎಂಬ ಸಂದೇಶವನ್ನು ಅವರ ಮುಂದೆ ತಲಪಿಸಲಿಕ್ಕೆ ನಾನು ಅಹ್ಮದಿಯರೊಡನೆ ಹೇಳಿದ್ದೆ. ಅವರಿಗೆ ಈ ಕೆಲಸ ನೆರವೇರಿಸಲಿಕ್ಕೆ ಪರಿಮಿತಿಗಳಿವೆ. ಆದುದರಿಂದ ಪ್ರಾರ್ಥನೆಗಳಲ್ಲಿ ಪೂರ್ವಾಧಿಕ ಮಗ್ನರಾಗಿ ಮುಸ್ಲಿಂ ಆಡಳಿತೆಗಾರರಿಗೆ ಸದ್ಬುದ್ಧಿ ಬರಲು ಅಲ್ಲಾಹನೊಡನೆ ಯಾಚಿಸಿರಿ.

ಆಡಳಿತೆಗಾರರ ಹಾಗೆಯೇ ಜನ ಸಾಮಾನ್ಯರಿಗೂ ಈ ವಿಚಾರದಲ್ಲಿ ಬಹಳ ಹೆಚ್ಚು ಜವಾಬ್ದಾರಿಕೆಗಳಿವೆ. ಈ ಹಿನ್ನೆಲೆಯಲ್ಲಿ ಅಹ್ಮದಿಯರಿಗೆ ಇನ್ನೊಂದು ಸಂದೇಶವನ್ನು ಸಹ ನೀಡಲು ನಾನು ಇಚ್ಛಿಸುತ್ತೇನೆ. "ತೀವ್ರವಾದ" ಯಾವುದಕ್ಕೂ ಪರಿಹಾರವಲ್ಲವೆಂದೂ ಅತಿ ಶಕ್ತಿಯುತ ಆಯುಧ ದುಆ (ಪ್ರಾರ್ಥನೆ) ಎಂದೂ ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡಬೇಕು. ಅಹ್ಮದಿಯರು ಸಾಮಾನ್ಯವಾಗಿ ಶಾಂತಶೀಲರಾಗಿದ್ದಾರೆ. ಆದರೆ ದುಷ್ಕರ್ಮಿಗಳಿಂದ ಆಡಳಿತೆಗಾರರೊಂದಿಗೆ ಅಹ್ಮದಿಯರು ಯಾವ ಧೋರಣೆ ಕೈಗೊಳ್ಳಬೇಕೆಂದು ಕೇಳುತ್ತಾರೆ. ಅವರ ವಿರುದ್ಧದ ಪ್ರತಿಭಟನೆಯಲ್ಲಿ ಭಾಗವಹಿಸಬಹುದೇ ಎಂದು ಸಹ ಅವರು ಕೇಳುತ್ತಾರೆ. ಅರಬ್ ದೇಶಗಳ ಈ ಪ್ರತಿಭಟನೆಗಳ ಸಂಬಂಧಿಸಿ ಸ್ಪಷ್ಟವಾದ ಧೋರಣೆಗಳನ್ನು ಅರಬಿಕ್ ಡೆಸ್ಕಿನ ಹೊಣೆಗಾರಿಕೆ ವಹಿಸುವ ಜನಾಬ್ ಹಾನೀ ತಾಹಿರ್ ಸಾಹೇಬರೊಡನೆ ನಾನು ಸುದೀರ್ಘವಾಗಿ ಮಾತನಾಡಿ ವ್ಯಕ್ತಪಡಿಸಿದ್ದೇನೆ. ಸರಕಾರಕ್ಕೂ ಜನ ಸಾಮಾನ್ಯರಿಗೂ ಉಂಟಾಗಬಹುದಾದ ಒಳಿತು – ಕೆಡುಕುಗಳನ್ನು ಯಾವ ರೀತಿಯಲ್ಲಿ ನಾವು ಕಾಣಬೇಕೆಂದು ನಾನು ಅವರೊಡನೆ ಹೇಳಿದ್ದೇನೆ. ಆದರೆ ಕೆಲವು ಪತ್ರಗಳಿಂದ, ಅಹ್ಮದಿಯರಿಗೆ ಸಂಶಯ ಬಾಕಿಯುಳಿದಿದೆಯೆಂದು ತಿಳಿಯಲು ಸಾಧ್ಯವಾಯಿತು.

ಅಹ್ಮದಿಯಾ ವೀಕ್ಷಣದ ಆಧಾರ ಪವಿತ್ರ ಖುರ್‌ಆನ್, ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಅವರ ಚರ್ಯೆ ಮತ್ತು ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್[ಅ] ಅವರ ಉಪದೇಶಗಳಾಗಿವೆ. ಮೌಲಿಕವಾಗಿ ಪವಿತ್ರ ಖುರ್‌ಆನ್ ಈ ವಿಚಾರದಲ್ಲಿ ನೀಡುವ ಉಪದೇಶವೇನೆಂದು ನಾವು ಮನಗಾಣಬೇಕು. ಖುರ್‌ಆನ್ ಹೇಳುತ್ತದೆ: **"ನಾನಾ ತರ ಅಸಭ್ಯತೆಯನ್ನೂ, ದುಷ್ಕೃತ್ಯವನ್ನೂ ನಿಯಮೋಲ್ಲಂಘನೆಯನ್ನೂ ಅವನು ನಿಷಿದ್ಧಗೊಳಿಸಿದ್ದಾನೆ."** (16:91)

ಈ ವಚನದ **'ಬಗ್‌ಯ್'** ಎಂಬ ಪದದ **ವಿಶದೀಕರಣವನ್ನು** ಮಾತ್ರ ಈಗ ನಾನು ನೀಡಲು ಉದ್ದೇಶಿಸುತ್ತೇನೆ. ಹಕ್ಕುಗಳಲ್ಲೂ ಕರ್ತವ್ಯಗಳಲ್ಲೂ ಕೊರತೆ ಮತ್ತು ಅಮಿತತ್ವ ತೋರಿಸುವುದನ್ನು 'ಬಗ್‌ಯ್' ಎಂದು ಹೇಳಲಾಗುತ್ತದೆ. ಆಡಳಿತಾಧಿಕಾರಿ ಮತ್ತು ಜನಸಾಮಾನ್ಯರು ತಮ್ಮ ಕರ್ತವ್ಯಗಳ ಕುರಿತು ಮತ್ತು ಹಕ್ಕುಗಳ ಬಗ್ಗೆ ಅಮಿತತ್ವ ಅಥವಾ ಕೊರತೆ ತೋರಿಸಬಾರದು. ಈ ಆಜ್ಞೆಗೆ ವಿರುದ್ಧವಾಗಿ ವರ್ತಿಸುವವರು ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿ ವರ್ತಿಸುವವರಾಗುವರು.

ಈ ಕಾಲದಲ್ಲಿ ಸರಕಾರಕ್ಕೆ ವಿರುದ್ಧವಾಗಿ ತೀವ್ರವಾಗಿ ಪ್ರತಿಕ್ರಿಯಿಸಲು ಜನರು ಬಯಸುತ್ತಾರೆ. ಈ ವಿಚಾರದ ಬಗ್ಗೆ ಈಗ ನಾನು ಹೇಳಲು ಇಚ್ಛಿಸುತ್ತೇನೆ. ಆಡಳಿತಾಧಿಕಾರಿಗಳ ತಪ್ಪಾದ ಕ್ರಮಗಳಿದ್ದರೂ ಜನಸಾಮಾನ್ಯರೊಡನೆ ಮತ್ತು ಮೂಮಿನ್ (ವಿಶ್ವಾಸಿ)ಗಳೊಡನೆ ಸಹನೆ ಕೈಗೊಳ್ಳಬೇಕೆಂದು ಹದೀಸುಗಳಲ್ಲಿ ಪ್ರತಿಪಾದಿಸಲಾಗಿದೆ. ಸಹೀಹ್ ಬುಖಾರಿಯಲ್ಲಿರುವ ಒಂದು ಹದೀಸು ಹೀಗಿದೆ:

*ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಅನ್ಸಾರ್‌ಗಳೊಡನೆ ಹೀಗೆ ಹೇಳಿದರು: "ನನ್ನ ನಂತರ ನೀವು ಇಷ್ಟಪಡದ ಹಲವು ವರ್ತನೆಗಳನ್ನು ಕಾಣುವಿರಿ." ಅಬ್ದುಲ್ಲಾಹಿಬ್ನು ಝೈದ್‌ಬ್ನು ಅಮಿರ್[ರ] ಹೇಳುತ್ತಾರೆ: ಹಝ್ರತ್ ಪೈಗಂಬರ್[ಸ] ಅನ್ಸಾರ್‌ಗಳೊಡನೆ ಹೀಗೆ ಸಹ ಹೇಳಿದರು: "ಹೌಳಿಲ್ ಕೌಸರ್‌ನಲ್ಲಿ ನನ್ನನ್ನು ಭೇಟಿಯಾಗುವ ವರೆಗೆ ಈ ವಿಚಾರದಲ್ಲಿ ನೀವು ಸಹನೆ ವಹಿಸಿರಿ." ಝೈದ್‌ಬ್ನು ವಹಬ್ ಹೇಳುತ್ತಾರೆ: ನಾನು ಅಬ್ದುಲ್ಲಾಹಿಬ್ನು ಮಸ್‌ಊದ್[ರ] ಹೇಳುವುದನ್ನು ಕೇಳಿದೆ: ಪೈಗಂಬರ್[ಸ] ನಮ್ಮೊಡನೆ ಹೇಳಿದರು: "ನಿಮ್ಮ ಹಕ್ಕನ್ನು ಧ್ವಂಸಿಸಿಕೊಂಡು ಇತರರಿಗೆ ಪರಿಗಣನೆ ನೀಡುವುದಾಗಿ ನನ್ನ ನಂತರ ನೀವು ಕಾಣುವಿರಿ. ನಿಮಗೆ ಇಷ್ಟವಿಲ್ಲದ ಹಲವು ವಿಚಾರಗಳನ್ನೂ ನೀವು ಕಾಣುವಿರಿ." ಇದು ಕೇಳಿ ಅನುಚರರು ಪ್ರಶ್ನಿಸಿದರು: "ಓ ಪೈಗಂಬರರೇ, ಆ ಸಂದರ್ಭದಲ್ಲಿ ನಾವು ಏನು ಮಾಡಬೇಕು?" ಪೈಗಂಬರ್[ಸ] ನುಡಿದರು: "ಆ ಕಾಲದಲ್ಲಿ ಆಡಳಿತಾಧಿಕಾರಿಗಳಿಗೆ ಸಲ್ಲಬೇಕಾದ ಕರ್ತವ್ಯಗಳನ್ನು ನೀವು ನೆರವೇರಿಸಿರಿ. ನಿಮ್ಮ ಹಕ್ಕುಗಳನ್ನು ಅಲ್ಲಾಹನೊಡನೆ ಯಾಚಿಸಿರಿ." (ಬುಖಾರಿ)*

*ಇಬ್ನು ಅಬ್ಬಾಸ್[ರ] ನಿವೇದಿಸಿದ ಇನ್ನೊಂದು ಹದೀಸ್‌ನಲ್ಲಿ ಹಝ್ರತ್ ಪೈಗಂಬರ್[ಸ] ಹೇಳಿದರು: "ತನ್ನ ಅಮೀರ್‌ನ ಏನಾದರೂ ವರ್ತನೆ ಯಾರಿಗಾದರೂ ಅನಿಷ್ಟಕರವಾಗಿ ತೋಚಿದರೆ ಆತನು ಸಹನೆ ವಹಿಸಲಿ. ಕಾರಣವೇನೆಂದರೆ, ಅಮೀರ್‌ನ ಅನುಸರಣ ವೃತ್ತದಿಂದ ಒಂದು ಗೇಣಾದರೂ ಅಗಲಿದವನು ಜಾಹಿಲಿಯ್ಯತಿನ (ಅಜ್ಞಾನದ) ಮರಣ ಪಡೆಯುವನು. ಉಸ್ಯೈದ್‌ಬ್ನು ಝುಬೈರ್[ರ] ವರದಿ ಮಾಡಿದ ಹದೀಸ್‌ನಲ್ಲಿ ಹೀಗೆ ಹೇಳಲಾಗಿದೆ: "ಓ ಪೈಗಂಬರರೇ, ತಾವು ಇಂಥವನನ್ನು ಆಡಳಿತಾಧಿಕಾರಿಯಾಗಿ ನಿಶ್ಚಯಿಸಿರುವಿರಿ. ನನಗೆ ಅಧಿಕಾರ ನೀಡಲಿಲ್ಲ." ಪೈಗಂಬರ್[ಸ] ಹೇಳಿದರು: "ಇತರರಿಗೆ ನಿಮಗಿಂತ ಆದ್ಯತೆ ನೀಡಿರುವುದಾಗಿ ನೀವು ಕಾಣುವಿರಿ. ಖಿಯಾಮತ್ ದಿನದಂದು ನನ್ನನ್ನು ಭೇಟಿಯಾಗುವವರೆಗೆ ನೀವು ಸಹನೆ ವಹಿಸಿರಿ."*

*ಸಲ್ಮಾನುಬ್ನು ಯಝೀದ್ ಅಲ್‌ಜಾಫಿ ಹಝ್ರತ್ ಪೈಗಂಬರರೊಡನೆ[ಸ] ಕೇಳಿದರು: "ಓ ಪೈಗಂಬರರೇ, ನಮ್ಮಿಂದ ಹಕ್ಕುಗಳನ್ನು ಕೇಳಿ ಪಡೆದುಕೊಂಡು, ಆ ಬಳಿಕ ನಮ್ಮ ಹಕ್ಕುಗಳನ್ನು ನೀಡದಿರುವ ಒಬ್ಬ ಆಡಳಿತಾಧಿಕಾರಿ ನಮಗಿದ್ದರೆ, ನಾವು ಏನು ಮಾಡಬೇಕೆಂದು ನೀವು ಆದೇಶಿಸುತ್ತೀರಿ?" ಈ ಪ್ರಶ್ನೆಯನ್ನು ಆಲಿಸಿ ಪೈಗಂಬರ್[ಸ] ಪ್ರಶ್ನಿಸುವವನಿಂದ ಮುಖ ತಿರುಗಿಸಿದರು. ಆ ವ್ಯಕ್ತಿ ಪ್ರಶ್ನೆಯನ್ನು ಪುನರಾವರ್ತಿಸಿದನು. ಪೈಗಂಬರ್[ಸ] ಪುನಃ ಮುಖ ತಿರುಗಿಸಿದರು. ಆ ವ್ಯಕ್ತಿ ಮೂರನೇ ಸಲ ಪ್ರಶ್ನಿಸಿದನು. ಇದನ್ನು ಕಂಡಾಗ ಅಬ್ಬಾಸಿಬ್ನು ಖೈಸ್ ಆತನನ್ನು ಹಿಂದಕ್ಕೆಳೆದರು. (ಪೈಗಂಬರರಿಗೆ ಈ ಪ್ರಶ್ನೆ ಇಷ್ಟವಾಗದ ಕಾರಣ ಮೌನವಹಿಸಲು ಆತನಿಗೆ ಸಂಜ್ಞೆ ಮಾಡಿದರು.) ಆಗ ಪೈಗಂಬರ್[ಸ] ನುಡಿದರು: "ಅಂತಹ ಸಂದರ್ಭದಲ್ಲಿ ನಿಮ್ಮ ಆಡಳಿತಾಧಿಕಾರಿಗಳ ಮಾತುಗಳನ್ನು ಕೇಳಿ ಅವರನ್ನು ಅನುಸರಿಸಿರಿ. ಅವರಲ್ಲಿ ಅರ್ಪಿತವಾಗಿರುವ ಜವಾಬ್ದಾರಿಕೆ ಕುರಿತು ಅವರು ಪ್ರಶ್ನಿಸಲ್ಪಡುವರು.*

*ನಿಮ್ಮಲ್ಲಿ ಅರ್ಪಿತವಾದ ಹೊಣೆಗಾರಿಕೆ ಬಗ್ಗೆ ನೀವು ಸಹ ಪ್ರಶ್ನಿಸಲ್ಪಡುವಿರಿ."*

*ಜುನೈದ್‌ಬ್ನು ಉಮಯ್ಯರಿಂದ್[ರ] ವರದಿ: ಉಬಾದ್‌ಬ್ನು ಸಾಬಿತ್[ರ] ಹೇಳಿದರು: "ನಾವು ಪೈಗಂಬರರ ಕೈಯಲ್ಲಿ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಿದೆವು. ಸಂತೋಷದಲ್ಲೂ ದುಃಖದಲ್ಲೂ ಕಷ್ಟದಲ್ಲೂ ಸುಖದಲ್ಲೂ ಹಕ್ಕು ಧ್ವಂಸನವಾದರೂ ನಾವು ಅನುಸರಿಸುವೆವೆಂಬ ವಿಚಾರದಲ್ಲಿ ನಾವು ಪ್ರತಿಜ್ಞೆ ಮಾಡಿದೆವು. ಯಾರು ಆಡಳಿತಾಧಿಕಾರಿಯಾದರೂ ಅವರೊಡನೆ ನಾವು ತರ್ಕಿಸಲಿಕ್ಕಿಲ್ಲವೆಂದೂ ನಮ್ಮಿಂದ ಕರಾರು ಪಡೆದರು – ಅವರು ಪ್ರತ್ಯಕ್ಷವಾಗಿ ಕುಫ್ರ್ ಮಾಡುವುದು ನೀವು ಕಂಡು ಅದಕ್ಕಿರುವ ಸ್ಪಷ್ಟವಾದ ಪುರಾವೆಗಳು ನಿಮ್ಮ ಬಳಿ ಇದ್ದರೆ ಹೊರತು."*

ಕೊನೆಗೆ ಹೇಳಿದ ಹದೀಸನ್ನು ಸ್ವಲ್ಪ ವಿವರಿಸಬೇಕಾಗಿದೆ. ಸಲಫಿಗಳೂ ವಹ್ಹಾಬಿಗಳೂ ಕೆಲವು ತೀವ್ರವಾದಿ ಸಂಘಟನೆಗಳ ಜನರೂ ಆಡಳಿತಾಧಿಕಾರಿಗಳಿಂದ ಸ್ಪಷ್ಟವಾದ ಕುಫ್ರ್ ಪ್ರಕಟವಾಗಿ ಕಾಣುವ ತನಕ ಸಹನೆ ವಹಿಸಲಿಕ್ಕೆ ಹೇಳುತ್ತಾರೆ. ಆದರೆ ಆಡಳಿತಾಧಿಕಾರಿಗಳಿಂದ ಕುಫ್ರ್ ಪ್ರಕಟವಾದರೆ ಅದರಿಂದ ಆತನನ್ನು ವಿಮುಕ್ತಗೊಳಿಸುವುದು ಮತ್ತು ಆತನಿಂದ ಅಧಿಕಾರವನ್ನು ಕಸಿದುಕೊಳ್ಳಲು ಹೋರಾಡುವುದು ಕಡ್ಡಾಯವೆಂದು ಕೆಲವು ಧರ್ಮ ಪಂಡಿತರೂ ತೀವ್ರವಾದಿಗಳೂ ಈ ಹದೀಸಿನ ಆಧಾರದಲ್ಲಿ ಹೇಳುತ್ತಾರೆ. "ನಾವು ಕಾಫಿರ್ ಮಾಡಿದವನನ್ನು ಕಾಫಿರ್ ಎಂದು ಮನಗಾಣದವನು ಸಹ ಕಾಫಿರ್" ಎಂಬುದು ಅವರ ವಾದ. ಪ್ರಕಟವಾಗಿ ಕುಫ್ರ್ ಮಾಡುವುದಾಗಲೀ ಹಾಗೆ ಮಾಡಲು ಪ್ರೇರೇಪಿಸುವುದಾಗಲೀ ಮಾಡುವವರ ಹೊರತಾದ ಆಡಳಿತಾಧಿಕಾರಿಗಳನ್ನು ಅನುಸರಿಸಬೇಕು ಎಂದಾಗಿದೆ ಈ ಹದೀಸಿನ ಉದ್ದೇಶ. ಪ್ರಕಟವಾಗಿ ಕುಫ್ರ್ ಮಾಡಿದರೆ ಕೂಡ ನಿಯಮೋಲ್ಲಂಘನೆಗೆ ಅನುಮತಿ ಇಲ್ಲ. ಅಹ್ಮದಿಯರ ಉದಾಹರಣೆ ನೋಡಿರಿ. ಪಾಕಿಸ್ತಾನದಲ್ಲಿ ಅಹ್ಮದಿಯರೊಡನೆ, ಅವರು ಸ್ವಯಂ ಮುಸ್ಲಿಂ ಎಂದು ಹೇಳಬಾರದೆಂದೂ ಕಲಿಮ ಉಚ್ಚರಿಸಬಾರದೆಂದೂ ಪರಸ್ಪರ ಸಲಾಂ ಅಭಿವಾದನ ಮಾಡಬಾರದೆಂದೂ ಖುರ್‌ಆನ್ ಪಾರಾಯಣ ಮಾಡಬಾರದೆಂದೂ ಹೇಳುತ್ತಾರೆ. ಆದರೆ ಇವೆಲ್ಲ ಧಾರ್ಮಿಕ ವಿಚಾರಗಳಾದುದರಿಂದ ಹದೀಸಿನಲ್ಲಿ ಹೇಳಿದ ಪ್ರಕಾರ ಅನುಸರಿಸಬೇಕಾಗಿಲ್ಲ. ಆದರೂ ಇಲ್ಲಿ 'ಬಗಾವತ್' ಮಾಡುವುದಿಲ್ಲ. ಅದು ರಾಜದ್ರೋಹವಾದುದರಿಂದ ನಾವು ಹಾಗೆ ಮಾಡುವುದಿಲ್ಲ. ಇಮಾಂ ನವವಿಯವರ ಅಭಿಪ್ರಾಯ ಇದಾಗಿದೆ. ಅಹ್ಮದಿಯರ ಅಭಿಪ್ರಾಯ ಸಹ ಇದೇ ಆಗಿದೆ. ಸ್ಪಷ್ಟವಾದ ಕುಫ್ರ್ ಬಹಿರಂಗವಾಗದೆ ಸರಕಾರದ ಅಧೀನದಲ್ಲಿದ್ದುಕೊಂಡು ಆಡಳಿತಾಧಿಕಾರಿಯೊಂದಿಗೆ ನೀವು ಹೋರಾಡುವುದು ಅಥವಾ ಆಕ್ಷೇಪಿಸುವುದು ಸಲ್ಲದು. ಖುರ್‌ಆನ್ ಮತ್ತು ಹದೀಸ್ ಇದಕ್ಕೆ ಸಾಕ್ಷ್ಯನೀಡುತ್ತದೆ. ಸ್ಪಷ್ಟವೂ ಸಾಬೀತುಗೊಳಿಸಲ್ಪಟ್ಟದ್ದೂ ಆದ ಕುಫ್ರ್ ಕಂಡರೆ ಆ ವಿಚಾರದಲ್ಲಿ ಅವರೊಡನೆ ಪ್ರತಿಭಟನೆ ತೋರಿಸಿರಿ. ಸತ್ಯವನ್ನು ಧೈರ್ಯದಿಂದ ಸ್ಪಷ್ಟವಾಗಿ ಹೇಳಿರಿ. ನಿಯಮೋಲ್ಲಂಘನೆ ಮತ್ತು ಹೋರಾಟ ಸಲ್ಲದು – ಆಡಳಿತಾಧಿಕಾರಿಗಳು ಕ್ರೂರರೂ ಕೆಡುಕು ತುಂಬಿದವರಾಗಿದ್ದರೂ ಸರಿ.

ದುಷ್ಕರ್ಮಿಯಾದ ಆಡಳಿತಾಧಿಕಾರಿಗಳ ವಿರುದ್ಧ ಕೂಡ ಹೋರಾಡುವುದು ಅಥವಾ ದಂಗೆಯೇಳುವುದು ಕೂಡದೆಂದು ಅಹ್ಲು ಸುನ್ನತಿನ ಏಕಕಂಠವಾದ ತೀರ್ಮಾನವಾಗಿದೆ. ಹಾಗೆ ಮಾಡಿದರೆ ಅಂಥ ಸ್ವೇಚ್ಛಾಧಿಕಾರಿಗಳು ಇರುವುದಕ್ಕಿಂತ ದೊಡ್ಡ ರಕ್ತಪಾತಗಳೂ ಆಕ್ರಮಣಗಳೂ ಪರಿಣಿತ ಫಲವಾಗಿ ಉಂಟಾಗುವುದು. ಇತ್ತೀಚೆಗಿನ ಘಟನೆಗಳು ಇದು ಸರಿಯೆಂದು ಸಾಬೀತುಗೊಳಿಸಿವೆ.

ಬುಖಾರಿಯ ಒಂದು ಹದೀಸಿನಲ್ಲಿ ಹಡಗು ಯಾತ್ರಿಕರ ಒಂದು ಉದಾಹರಣೆಯನ್ನು ಹಝ್ರತ್ ಪೈಗಂಬರ್[ಸ] ವಿವರಿಸಿದ್ದಾರೆ. ಹಡಗು ಯಾತ್ರಿಕರಲ್ಲಿ ಕೆಲ ಅಂತಸ್ತಿನಲ್ಲಿರುವವರು ನೀರು ತೆಗೆಯಲಿಕ್ಕೋಸ್ಕರ ಮೇಲಿನ ಅಂತಸ್ತಿಗೆ ಬರುತ್ತಿದ್ದರು. ಅದು ಮೇಲಿನ ಅಂತಸ್ತಿನವರಿಗೆ ತೊಂದರೆ ಉಂಟುಮಾಡಿತು. ಈ ಕಾರಣದಿಂದ ಕೆಳ ಅಂತಸ್ತಿನಲ್ಲಿರುವ ಒಬ್ಬ ಯಾತ್ರಿಕ ಒಂದು ಕೊಡಲಿಯೆತ್ತಿ ಹಡಗಿನ ಕೆಳಭಾಗದಲ್ಲಿ ಒಂದು ತೂತು ಮಾಡಲು ಪ್ರಯತ್ನಿಸಿದನು. ಆತ ಹೇಳಿದ್ದು, ಮೇಲೆ ಹೋಗುವಾಗ ಅದು ಮೇಲಿನ ಅಂತಸ್ತಿನವರಿಗೆ ತೊಂದರೆಯಾಗುತ್ತದೆ. ನಮಗಾದರೋ ನೀರು ಬೇಕು. ಆದುದರಿಂದ ನಾನು ತೂತು ಮಾಡಿದ್ದು ಎಂದು. ಮೇಲಿನ ಅಂತಸ್ತಿನ ಯಾತ್ರಿಕರು ಈತನನ್ನು ತಡೆದರೆ ಎಲ್ಲರೂ ಪಾರಾಗುವರು. ಇನ್ನು ತಡೆಯದಿದ್ದರೆ ತೂತು ಮಾಡಿದವನೂ ಇತರರೆಲ್ಲರೂ ನಾಶವಾಗುವರು. ಈ ಹದೀಸ್ ಪ್ರಕಾರ ಗಲಭೆಕೋರರನ್ನು ಸರಕಾರ ತಡೆಯಬಹುದಾಗಿದೆ.

ಅಬೂ ಸಈದುಲ್ ಖುದ್‌ರಿ[ರ] ವರದಿ ಮಾಡಿದ ಹದೀಸಿನಲ್ಲಿ "ನೀವು ಯಾರನ್ನಾದರೂ ಅನಿಷ್ಟವಾಗಿ ವರ್ತಿಸುವುದನ್ನು ಕಂಡರೆ, ಅದನ್ನು ನಿಮ್ಮ ಕೈಯಿಂದ ತಡೆಯಿರಿ. ಅದು ಸಾಧ್ಯವಾಗದಿದ್ದರೆ ನಾಲಗೆಯಿಂದ ತಡೆಯಿರಿ. ಅದು ಕೂಡ ಸಾಧ್ಯವಾಗದಿದ್ದರೆ ಹೃದಯದಿಂದ ತಡೆಯಿರಿ. ಇದು ಅತಿ ಬಲಹೀನವಾದ ಪ್ರತಿಕ್ರಿಯೆಯಾಗಿದೆ." ಇಮಾಂ ಮುಲ್ಲಾ ಅಲಿಯ್ಯುಲ್ ಖಾರಿಯವರ ಅಭಿಪ್ರಾಯ ಪ್ರಕಾರ, ಅನಿಷ್ಟಕರವಾದ ವರ್ತನೆಯನ್ನು ಕೈಯಿಂದ ತಡೆಯಬೇಕೆಂದು ಹೇಳಿದ್ದು ಆಡಳಿತಾಧಿಕಾರಿಗಳೊಡನೆಯಾಗಿದೆ. ನಾಲಗೆಯಿಂದ ತಡೆಯಬೇಕಾದವರು ಧರ್ಮ ಪಂಡಿತರು. ಹೃದಯದಿಂದ ಅದನ್ನು ದ್ವೇಷಿಸಬೇಕಾದವರು ಜನಸಾಮಾನ್ಯರು. ನಮ್ಮ ಅಭಿಪ್ರಾಯ ಸಹ ಇದೇ ಆಗಿದೆ. **"ಅಲ್ಲಾಹು ಗಲಭೆಯನ್ನು ಇಷ್ಟಪಡುವುದಿಲ್ಲ"** ಎಂದು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. (2:206)

ಖುರ್‌ಆನಿನಲ್ಲಿ ಪ್ರಸ್ತಾಪಿಸಲಾದ ಪ್ರವಾದಿಗಳ ಚರಿತ್ರೆ ಸಹ ಇದನ್ನೇ ಪ್ರಕಟಿಸುತ್ತದೆ. ಯಾರೇ ಓರ್ವ ಪ್ರವಾದಿ ಅಲ್ಲಿ ಸ್ಥಾಪಿತವಾಗಿದ್ದ ಆಡಳಿತಾಧಿಕಾರಿಗಳ ವಿರುದ್ಧವಾಗಿ ಭೌತಿಕ ವಿಚಾರಗಳಿಗೋಸ್ಕರ ನಿಯಮೋಲ್ಲಂಘನೆ ಅಥವಾ ವಿಧ್ವಂಸಕ ಕೃತ್ಯಗಳು ನಡೆಸಿದ್ದಾಗಿ ಸಾಬೀತುಪಡಿಸಲು ಸಾಧ್ಯವೇ? ಅವರು ಆಡಳತಾಧಿಕಾರಿಗಳ ಮುಂದೆ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಿದ್ದರು. ಹಝ್ರತ್ ಯೂಸುಫ್ ಪ್ರವಾದಿಯವರನ್ನು[ಅ] ಉದಾಹರಣೆಯಾಗಿ ತೆಗೆಯಬಹುದು. ಈಜಿಪ್ಟಿನ ರಾಜನ ಕ್ಯಾಬಿನೆಟ್‌ನಲ್ಲಿ ಅವರೋರ್ವ ಮಂತ್ರಿಯಾಗಿದ್ದರು. ರಾಜನಿಂದ ಪ್ರವಾದಿ ಯೂಸುಫ್‌ರವರ ವಿರುದ್ಧ ಅಥವಾ ಪ್ರವಾದಿ ಯೂಸುಫ್‌ರಿಂದ ರಾಜನ ವಿರುದ್ಧ ಯಾವುದೇ ಅವಿಶ್ವಾಸವಾಗಲಿ, ಕಪಟತನವಾಗಲಿ, ಕಂಡು ಬರಲಿಲ್ಲ.

ಖುರ್‌ಆನ್ ಹೇಳುತ್ತದೆ: **"ಹೀಗೆ ಯೂಸುಫ್‌ರಿಗೋಸ್ಕರ ನಾವೊಂದು ಯೋಜನೆ ಮಾಡಿದೆವು. ಅಲ್ಲಾಹನು ಇಚ್ಛಿಸದಿರುತ್ತಿದ್ದರೆ ಆ ರಾಜನ ಕಾನೂನು ಪ್ರಕಾರ ತನ್ನ ತಮ್ಮನನ್ನು ಹಿಡಿದಿಡಲು ಅವರಿಗೆ (ಯೂಸುಫರಿಗೆ) ಮಾರ್ಗವಿರಲಿಲ್ಲ."** (12:77) ಪ್ರವಾದಿ ಯೂಸುಫ್,[ಅ] ಕಾಫಿರ್ ಮತ್ತು ಮುಶ್ರಿಕ್ ಆಗಿದ್ದ ರಾಜನ ನಿಯಮಗಳನ್ನು ಅನುಸರಿಸಲು ಬದ್ಧರಾಗಿದ್ದರು. ಆದರೆ ಧಾರ್ಮಿಕ ವಿಚಾರಗಳಲ್ಲಿ ಅನುಸರಿಸಲಿಲ್ಲ.

**"ಎಲೈ ವಿಶ್ವಾಸಿಗಳೇ, ಅಲ್ಲಾಹನಿಗೆ ನೀವು ವಿಧೇಯರಾಗಿರಿ. (ಅವನ) ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ.** (ಪವಿತ್ರ ಖುರ್‌ಆನ್ 4:60.) ಇಲ್ಲಿ ಅಲ್ಲಾಹನಿಗೂ ಅಲ್ಲಾಹನ ಸಂದೇಶವಾಹಕನಿಗೂ ವಿಧೇಯರಾಗುವ ಜೊತೆಗೆ 'ಉಲುಲ್ ಅಮ್ರ್'ಗೂ ವಿಧೇಯರಾಗ ಬೇಕೆಂದು ಹೇಳಲಾಗಿದೆ. ಇದರಲ್ಲಿ ಸರಕಾರ ಒಳಪಡುವುದಿಲ್ಲ ಎಂದು ಯಾರಾದರೂ ಹೇಳಿದರೆ ಅದು ಅವರ ಅಜ್ಞತೆಯಾಗಿದೆ. ನಮ್ಮನ್ನು ವಿರೋಧಿಸದವರು ನಮ್ಮ ಪೈಕಿಯವರೇ

ಆಗಿದ್ದಾರೆ. ಸರಕಾರವನ್ನು ಅನುಸರಿಸಬೇಕೆಂದೇ ಈ ವಚನದ ಉದ್ದೇಶವೆಂದು ಖುರ್‌ಆನಿ ನಿಂದಲೂ ವ್ಯಕ್ತವಾಗುತ್ತದೆ. ಆಡಳಿತಾಧಿಕಾರಿ ದುಷ್ಕರ್ಮಿಯಾಗಿದ್ದರೂ ಆತನನ್ನು ದೂಷಿಸುವುದು ಸರಿಯಲ್ಲ. ಒಳಿತಿನ ಮಾದರಿಗಳಾಗಿ ಎಲ್ಲವನ್ನೂ ದೇವನಿಗೆ ಒಪ್ಪಿಸಬೇಕು. ನಿಯಮೋಲ್ಲಂಘನೆ ಯಾವ ಸಂದರ್ಭದಲ್ಲೂ ಸಲ್ಲದು.

ಉಲಿಲ್ ಅಮ್ರಿ ಮಿನ್‌ಕುಂ (ನಿಮ್ಮ ಪೈಕಿಯ ಆಡಳಿತಾಧಿಕಾರಿ ಗಳು) ಎಂದರೆ ಮುಸ್ಲಿಂ ಆಡಳಿತಾಧಿಕಾರಿಗಳು ಮಾತ್ರವಲ್ಲ. ಈ ಬಗ್ಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) (ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ) ಹೀಗೆ ವಿಶದೀಕರಿಸಿದರು:

"ಇದು ಮುಸ್ಲಿಂ ಆಡಳಿತಾಧಿಕಾರಿಗಳನ್ನು ಮಾತ್ರ ಅನುಸರಿಸುವ ಕುರಿತೆಂದು ಕೆಲವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಆದರೆ ಇದು ಪವಿತ್ರ ಖುರ್‌ಆನಿನ ಮೂಲತತ್ವಕ್ಕೆ ವಿರುದ್ಧವಾಗಿದೆ. ಇಲ್ಲಿ 'ಮಿನ್‌ಕುಂ' ಎಂಬ ಪದ ಇದೆಯೆಂಬುದು ಸರಿಯೇ. ಆದರೆ ಇಲ್ಲಿ ಮಿನ್‌ಕುಂ ಎಂದರೆ ನಿಮ್ಮ ಧರ್ಮಕ್ಕೆ ಸೇರಿದ ವ್ಯಕ್ತಿ ಎಂದು ಅರ್ಥವಲ್ಲ. ಇದರ ಉದ್ದೇಶ ನಿಮ್ಮ ಪೈಕಿ ಯಾರು ಆಡಳಿತಾಧಿಕಾರಿಯಾಗಿ ನೇಮಿಸಲ್ಪಟ್ಟಿರುವರೋ ಅವರು ಎಂದಾಗಿದೆ. ಪವಿತ್ರ ಖುರ್‌ಆನಿನಲ್ಲಿ 'ಮಿನ್‌ಕುಂ' ಈ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆ. ಅವಿಶ್ವಾಸಿಗಳನ್ನು ಸಂಬೋಧಿಸಿ ಅಲ್ಲಾಹು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ: "ಅಲಂಯಅ್‌ತೀಕುಂ ರುಸುಲುನ್ ಮಿನ್‌ಕುಂ'. ಇಲ್ಲಿ ಮಿನ್‌ಕುಂ ಎಂಬ ಪದವಿದೆ. ಇದು ಒಂದೇ ಧಾರ್ಮಿಕ ವಿಶ್ವಾಸವೆಂದು ಅರ್ಥ ಕೊಡುವುದಾದರೆ, ನಊಧುಬಿಲ್ಲಾಹ್, ಪ್ರವಾದಿಗಳಿಗೆ ಕುಫ್ರ್‌ಗಳ ಅದೇ ಧಾರ್ಮಿಕ ವಿಶ್ವಾಸ ಇತ್ತೆಂದು ಭಾವಿಸಬೇಕಾದೀತು. ಆದುದರಿಂದ 'ಮಿನ್‌ಕುಂ' ಎಂಬುದು ಒಂದೇ ಧರ್ಮ ವಿಶ್ವಾಸವನ್ನು ಹೊಂದಿದವರನ್ನು ಮಾತ್ರ ಉದ್ದೇಶಿಸಿ ಹೇಳಿರಬೇಕೆಂದಿಲ್ಲ. ಇದು ಬೇರೆ ಅರ್ಥಗಳಲ್ಲೂ ಪ್ರಯೋಗಿಸಲ್ಪಡುತ್ತದೆ. ಇಲ್ಲಿ ಇದರ ಅರ್ಥ 'ನಿಮ್ಮ ನಾಡಿನ ಆಡಳಿತಾಧಿಕಾರಿ' ಎಂದಾಗಿದೆ. ಇಲ್ಲಿ ಹೇಳಿದ್ದು ಊರಿನ ಹೊರಗಿರುವ ಇತರ ಆಡಳಿತಾಧಿಕಾರಿಗಳನ್ನು ಅನುಸರಿಸಲಿಕ್ಕಲ್ಲ. ನಿಮ್ಮ ಆಡಳಿತಾಧಿಕಾರಿಗಳನ್ನು ಅನುಸರಿಸಬೇಕೆಂದಾಗಿದೆ."

"ಯಾವುದೇ ವಿಚಾರದಲ್ಲಿ ಭಿನ್ನಾಭಿಪ್ರಾಯ ತಲೆದೋರಿದರೆ ಅಲ್ಲಾಹನ ಮತ್ತು ಅವನ ಸಂದೇಶ ವಾಹಕನ ಆದೇಶಗಳೆಡೆಗೆ ಮರಳಿರಿ" ಎಂಬ ಖುರ್‌ಆನಿನ ಆಜ್ಞೆಗಳ ಆಧಾರದಲ್ಲಿ, ಸರಕಾರಗಳು ತಪ್ಪೆಸಗುವುದಾದರೆ ಜನರು ಆ ಬಗ್ಗೆ ಎಚ್ಚರವಹಿಸಬೇಕು. ಅವರು ಅಂಗೀಕರಿಸುವುದಿಲ್ಲವಾದರೆ ಆ ವಿಚಾರಗಳನ್ನು ಅಲ್ಲಾಹನಿಗೆ ಬಿಡಿರಿ. ಅವನು ಆ ಬಗ್ಗೆ ತೀರ್ಮಾನಿಸಿ ಅತಿಕರ್ಮಿಯನ್ನು ನಿಯಂತ್ರಿಸುವನು. ಹಝ್ರತ್ ಯೂಸುಫ್ ಪ್ರವಾದಿಯ ವಿಚಾರದಲ್ಲಿ ವ್ಯಕ್ತವಾಗುವುದೇನೆಂದರೆ, ಆಡಳಿತಾಧಿಕಾರಿಗಳು ಕಾಫಿರ್ ಆಗಿದ್ದರೂ ಆಡಳಿತೆಯಲ್ಲಿ ಪಾಲುಗೊಳ್ಳಬಹುದೆಂದೂ ಅವರನ್ನು ಅನುಸರಿಸಬಹುದೆಂದೂ ಆಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಶಾಂತಿಭಂಗ, ರಾಜದ್ರೋಹ ಚಟುವಟಿಕೆಗಳು ಕೊಲೆಗಿಂತ ಮಾರಕವಾಗಿದೆ. 'ಉಲುಲ್ ಅಮ್ರ್' ಎಂಬುದರಿಂದ ಉದ್ದೇಶಿಸುವುದು ಭೌತಿಕಾರ್ಥದಲ್ಲಿ ರಾಜರುಗಳು ಮತ್ತು ಆಧ್ಯಾತ್ಮಿಕ ಅರ್ಥದಲ್ಲಿ ಕಾಲಘಟ್ಟದ ಇಮಾಮ್‌ಗಳು. ಭೌತಿಕವಾಗಿ ನಮ್ಮ ವಿರೋಧಿಗಳಲ್ಲದ ಎಲ್ಲರೂ ಅವರು ಮುಖೇನ ಧಾರ್ಮಿಕ ಗಳಿಕೆ ನಮಗೆ ಲಭಿಸುವುದಾದರೆ ಅವರು ನಮಗೆ ಸೇರಿದವರಾಗಿದ್ದಾರೆ."

ಒಮ್ಮೆ ಲಾಹೋರ್ ಯುನಿವರ್ಸಿಟಿಯಲ್ಲಿ ಮುಷ್ಕರ ಉಂಟಾದಾಗ ಅದರಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳೊಡನೆ, ಈ ರೀತಿಯ ಮುಷ್ಕರದಲ್ಲಿ ಭಾಗವಹಿಸುವುದು ನಮ್ಮ ಅಧ್ಯಾಪನೆಗೆ ವಿರುದ್ಧವೆಂದೂ ಅದು ರಾಜದ್ರೋಹ ಚಟುವಟಿಕೆಗಳಿಗೆ ಸೇರುತ್ತದೆಂದೂ ಯಾರಾದರೂ ಹಾಗೆ ಮಾಡಿದ್ದರೆ ಕ್ಷಮೆ ಯಾಚಿಸಿ ಪುನಃ ಕಾಲೇಜಿಗೆ ಹೋಗಬೇಕೆಂದೂ ಹಝ್ರತ್ ಮಸೀಹ್ ಮೌಊದ್(ಅ) ಉಪದೇಶಿಸಿದರು. ಆದೇಶವನ್ನು ಪಾಲಿಸಿದ ಅಹ್ಮದೀ ವಿದ್ಯಾರ್ಥಿಗಳ ಮಾದರಿ ಕಂಡು ಇತರ ವಿದ್ಯಾರ್ಥಿಗಳು ಸಹ ಹಾಗೆಯೇ ಮಾಡಿದರು. ಖಲೀಫತುಲ್ ಮಸೀಹ್ ಸಾನಿಯ ನಿರ್ದೇಶ ಸಹ ಹೀಗೆಯೇ ಇತ್ತು. ಆಡಳಿತಾಧಿಕಾರಿಗಳು ದ್ರೋಹಿಗಳಾಗಿದ್ದರೆ ಜನರು ಸಹಿಸಬೇಕು. ಅದು ಸಾಧ್ಯವಾಗದಿದ್ದರೆ ಆ ಊರನ್ನು ಬಿಟ್ಟುಹೋಗಬೇಕು. ಅನುಸರಣೆಯಲ್ಲಿ ಅಲ್ಲಾಹು ಮತ್ತು ಪ್ರವಾದಿಯ ನಂತರ "ಉಲಿಲ್ ಅಮ್ರ್" ಮೊದಲ ಸ್ಥಾನದಲ್ಲಿ; ಧರ್ಮಪಂಡಿತರು ಮತ್ತು ಇತರರು ಎರಡನೇ ಸ್ಥಾನದಲ್ಲಿದ್ದಾರೆ.

1929 ನವೆಂಬರ್‌ನಲ್ಲಿ ಒಂದು ಹರತಾಳವಾದಾಗ ಖಲೀಫತುಲ್ ಮಸೀಹ್ ಸಾನಿಯವರೊಡನೆ, ತಾವೇನು ಮಾಡಬೇಕೆಂದು ಕೇಳಿದಾಗ ಅವರು ಹೇಳಿದರು: "ಹರತಾಳದಲ್ಲಿ ಭಾಗವಹಿಸಬಾರದು. ಇದಕ್ಕೆ ಸಂಬಂಧಿಸಿ ಸಭೆಗಳನ್ನೂ ಮತಪ್ರದರ್ಶನಗಳನ್ನೂ ಏರ್ಪಡಿಸಿದ್ದರೆ ಅದರಲ್ಲಿ ಭಾಗವಹಿಸಬಹುದು. ನಿಮ್ಮ ಹಕ್ಕುಗಳನ್ನು ಪಡೆಯಲು ಸಭೆಗಳನ್ನು ನಡೆಸಬಹುದು. ಪ್ರತಿಭಟನೆ ಮಾಡಬಹುದು. ಕಾರಣವೇನೆಂದರೆ, ಒಂದು ಮಿತಿಯವರೆಗೆ ಸರಕಾರ ಅದಕ್ಕೆ ಅನುಮತಿ ನೀಡಿದೆ. ಆದರೆ ಹರತಾಳ ಮತ್ತು ಅಂಗಡಿಗಳನ್ನು ಬಂದು ಮಾಡುವುದು, ಹೊಡೆದು ಬಡಿದು ನಾಶನಷ್ಟ ಮಾಡುವುದು ಇತ್ಯಾದಿ ಸಮ್ಮತನೀಯವಲ್ಲ."


ಓರ್ವ ವ್ಯಕ್ತಿ ಹೇಳಿದನು: "ಪಟ್ಟಣಗಳಲ್ಲಿ ಅಹ್ಮದಿಯರ ಅಂಗಡಿಗಳು ಬಹಳ ಕಡಿಮೆ ಇವೆ; ತೆರೆದರೆ ಆಕ್ರಮಣಕ್ಕೆ ಗುರಿಯಾಗುವುವು. ಹರತಾಳಗಾರರು ಬಲಾತ್ಕಾರದಿಂದ ಬಂದ್ ಮಾಡಿಸುವರು." ಖಲೀಫ ಉತ್ತರಿಸಿದರು: "ನಿರ್ಬಂಧಿಸಿದರೆ ಹಾಗೆ ಮಾಡಿರಿ. ಇದನ್ನು ಪೊಲೀಸರಿಗೆ ತಿಳಿಸಿರಿ. ಪೊಲೀಸ್ ರಕ್ಷಣೆ ನೀಡುವುದಾದರೆ ತೆರೆಯಿರಿ. ಅಲ್ಲವಾದರೆ ತೆರೆಯಬೇಕಾಗಿಲ್ಲ. ನಿಯಮೋಲ್ಲಂಘನ ಮಾಡುವ ಯಾವುದರೊಂದಿಗೂ ನಮಗೆ ಹೊಂದಾಣಿಕೆ ಮಾಡಲು ಸಾಧ್ಯವಲ್ಲ. ಸರಕಾರ ಅಹ್ಮದಿಯರಿಗೆದುರಾಗಿ ತಿರುಗಿದರೂ ನಮ್ಮನ್ನು ಶಿಲುಬೆಗೆ ಹಾಕಿ ಕೊಂದರೂ ಶರೀಅತ್ ಕಾನೂನು ಮತ್ತು ನಾಡಿನ ಕಾನೂನುಗಳನ್ನು ಉಲ್ಲಂಘಿಸಲು ನಾವು ಸಿದ್ಧರಲ್ಲ. ಖುರ್‌ಆನ್ ಹೇಳುತ್ತದೆ:

**"ಅವರು ಅಧಿಕಾರ ಪಡೆದರೆ ನಾಡಿನಲ್ಲಿ ಗಲಭೆ ಸೃಷ್ಟಿಸಲಿಕ್ಕೂ ಉತ್ಪನ್ನಗಳನ್ನು ಮತ್ತು ಮನುಷ್ಯ ಸಂತತಿಗಳನ್ನು ನಾಶಪಡಿಸಲಿಕ್ಕೂ ಬೇಕಾಗಿ ಓಡಾಡುತ್ತಾರೆ. ಆದರೆ ಅಲ್ಲಾಹು ಗಲಭೆಕೋರರನ್ನು ಇಷ್ಟಪಡುವುದಿಲ್ಲ."** (2:206)

ಉತ್ಪನ್ನಗಳನ್ನೂ ಸಂತತಿಗಳನ್ನೂ ನಾಶಪಡಿಸುವವರು ದುಷ್ಟ ಆಡಳಿತಾಧಿಕಾರಿಗಳಾಗಿದ್ದಾರೆ. ಅದರೊಂದಿಗೆ 'ಫಸಾದ'ನ್ನು ಅಂದರೆ ಗಲಭೆ ಗೊಂದಲಗಳನ್ನು ಅಲ್ಲಾಹು ಇಷ್ಟಪಡುವುದೂ ಇಲ್ಲ. ಆಡಳಿತಾಧಿಕಾರಿಗಳಿಗೂ ಜನಸಾಮಾನ್ಯರಿಗೂ ಈ ವಿಚಾರದಲ್ಲಿ ಮಾರ್ಗನಿರ್ದೇಶನಗಳಿವೆ. ಸಮಾಜದಲ್ಲಿ ಇದ್ದವನು ಮತ್ತು ಇಲ್ಲದವನು ತಮ್ಮಲ್ಲಿರುವ ಅಂತರ ಹೆಚ್ಚಾಗಬಾರದು. ಅದು ಗಲಭೆಗೊಂದಲಕ್ಕೆ ದಾರಿಯಾಗುತ್ತದೆ. ಆಡಳಿತಾಧಿಕಾರಿಗಳು ಹಲವರು ಸಾರ್ವಜನಿಕ ಸೊತ್ತುಗಳನ್ನು ಕದ್ದು ತಿನ್ನುತ್ತಾರೆ. ಮುಸ್ಲಿಂ ರಾಷ್ಟ್ರಗಳಲ್ಲಿ ಈ ಸ್ವಭಾವ ಹೆಚ್ಚಾಗಿ ಕಾಣುತ್ತದೆ. ಜನಕ್ಷೇಮ ಚಟುವಟಿಕೆಗಳನ್ನು ನಡೆಸದೆ 'ಫಸಾದಿ'ಗೆ ಕಾರಣವಾಗುವ ಚಟುವಟಿಕೆಗಳನ್ನು ಆಡಳಿತಾಧಿಕಾರಿಗಳು ಕೈಗೊಳ್ಳುತ್ತಾರೆ.

ಹಝ್ರತ್ ಉಮರ್(ರ) ಅವರ ಆಡಳಿತೆ ಬರಲು ಕ್ರೈಸ್ತರು ಬಯಸಿದ್ದು ನೀತಿ–ನ್ಯಾಯಪಾಲನೆಯ ಭರವಸೆಯಿಂದಾಗಿತ್ತು. ಈಗ

*(12ನೇ ಪುಟಕ್ಕೆ ..................)*



# ಜಾಗತಿಕ ಶಾಂತಿಯನ್ನು ಸ್ಥಾಪಿಸುವುದು ಹೇಗೆ?

*ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V*
*(ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರರು)*

ಯುನೈಟೆಡ್ ಕಿಂಗ್ಡಮ್ ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ ಎಂಟನೆಯ ಶಾಂತಿ ಸಿಂಪೋಸಿಯಂ ಲಂಡನಿನ ಸರ್ರೆ, ಮೋರ್‌ಡನ್‌ನಲ್ಲಿರುವ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ 2011 ಮಾರ್ಚ್ ದಿನಾಂಕ 26 ಶನಿವಾರ ದಂದು ಏರ್ಪಡಿಸಲ್ಪಟ್ಟಿತ್ತು. ಒಂದು ಸಾವಿರಕ್ಕಿಂತ ಹೆಚ್ಚು ಜನರು ಅದರಲ್ಲಿ ಹಾಜರಾಗಿದ್ದರು. ಮಂತ್ರಿಗಳು, ಪಾರ್ಲಿ ಮೆಂಟಿನ ಹೌಸ್ ಆಫ್ ಕಾಮನ್ಸ್ ಸದಸ್ಯರು, ಲಾರ್ಡ್ಸ್ ಸಭೆಯ ಸದಸ್ಯರು, ಒಂಬತ್ತು ದೇಶಗಳ ರಾಯಬಾರಿ ಕಚೇರಿಗಳ ಪ್ರತಿನಿಧಿಗಳು, ಭೂಸೇನೆ ಮತ್ತು ನಾವಿಕ ಸೇನೆಯ ಹಿರಿಯ ಅಧಿಕಾರಿಗಳು, ಧಾರ್ಮಿಕ ನಾಯಕರು, ಸರಕಾರಿ ಅಧಿಕಾರಿಗಳು, ಡಾಕ್ಟರ್‌ಗಳು, ಲಾಯರ್‌ಗಳು, ಲೇಖಕರು, ಅಧ್ಯಾಪಕರು ಮತ್ತು ಸ್ಥಳೀಯ ಜನರು ಅಲ್ಲಿ ಜಮಾಯಿಸಿದ್ದರು.

ಯು.ಕೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಅಧ್ಯಕ್ಷರಾದ ರಫೀಕ್ ಅಹ್ಮದ್ ಹಯಾತ್ ತನ್ನ ಸ್ವಾಗತ ಭಾಷಣ ದಲ್ಲಿ ಹೀಗೆ ಹೇಳಿದರು: ಇಸ್ಲಾಮ್ ಧರ್ಮದ ಬಗ್ಗೆ ಇರುವ ತಪ್ಪುಗ್ರಹಿಕೆಗಳನ್ನು ದೂರೀಕರಿಸುವ ಕೆಲಸದಲ್ಲಿ ಅಹ್ಮದಿಯಾ ಸಂಘಟನೆ ಮುಂಚೂಣಿಯಲ್ಲಿದೆ. ಇಸ್ಲಾಮ್ ಧರ್ಮವು ಶಾಂತಿಯನ್ನು ಪ್ರತಿಪಾದಿಸುತ್ತದೆ. ಆದುದರಿಂದ ಅಹ್ಮದಿಯಾ ಮುಸ್ಲಿಂ ಜಮಾಅತ್ ಅನ್ಯ ಧರ್ಮದವರೊಂದಿಗೆ ಸೌಹಾರ್ದ ವನ್ನು ಸ್ಥಾಪಿಸಲು ಸಂವಾದ ನಡೆಸಲು ಪ್ರಯತ್ನಿಸುತ್ತಾ ಇದೆ.

ಸಿಯೋಭೈನ್ ಮೆಕ್‌ಡೊನಾಗ್, ಪಾರ್ಲಿಮೆಂಟ್ ಸದಸ್ಯೆಯೂ ಆಲ್ ಪಾರ್ಟಿ ಪಾರ್ಲಿಮೆಂಟ್‌ರಿ ಗ್ರೂಪ್ ಫೋರ್ ದಿ ಅಹ್ಮದಿಯಾ ಮುಸ್ಲಿಮ್ ಕಮ್ಯುನಿಟಿಯ ಅಧ್ಯಕ್ಷೆಯೂ ಆಗಿದ್ದಾರೆ. ಮಿಟ್‌ಚಮ್ ಮತ್ತು ಮೋರ್‌ಡನ್ ಪಾರ್ಲಿಮೆಂಟರಿ ಕ್ಷೇತ್ರವನ್ನು ಆಕೆ ಪ್ರತಿನಿಧೀಕರಿಸುತ್ತಾರೆ. ಆಕೆ ಪವಿತ್ರ ಖುರ್‌ಆನಿನ ಒಂದು ವಚನವನ್ನು ಉಲ್ಲೇಖಿಸಿ ಹೀಗೆ ಹೇಳಿದರು: ಪವಿತ್ರ ಖುರ್‌ಆನ್ ಎಲ್ಲಾ ಸಂದರ್ಭಗಳಲ್ಲೂ ನ್ಯಾಯ ಮತ್ತು ಉತ್ತಮ ವರ್ತನೆಯ ಬಗ್ಗೆ ಒತ್ತಿ ಹೇಳುತ್ತಿದೆ. ನ್ಯಾಯಪಾಲನೆ ಮತ್ತು ಸಹಿಷ್ಣು ಭಾವನೆ ಸಮಾಜದಲ್ಲಿ ಶಾಂತಿ ಸ್ಥಾಪನೆಗೆ ಮೂಲಭೂತ ಘಟಕಗಳಾಗಿವೆ.

ಕಳೆದ ವರ್ಷ ಅಹ್ಮದಿಯಾ ಪೀಸ್ ಪ್ರೈಝ್ (ಅಹ್ಮದಿಯಾ ಶಾಂತಿ ಸಮ್ಮಾನ) ಗಳಿಸಿದ ಲಾರ್ಡ್ ಎರಿಕ್ ಆವ್‌ಬರೀ ಲೋಕದಾದ್ಯಂತ ಮಾನವರ ಮೂಲಭೂತ ಹಕ್ಕುಗಳ ಸ್ಥಾಪನೆಗೆ ನಿರಂತರ ಪರಿಶ್ರಮ ನಡೆಸುವವರಾಗಿದ್ದಾರೆ. ಅವರು ಹೀಗೆಂದರು: ಜಗತ್ತಿನಲ್ಲಿ ಇತ್ತೀಚೆಗೆ ನಡೆದ ಸಂಘರ್ಷಗಳಿಗೆ ಸಹನಾಹೀನತೆಯೇ ಕಾರಣವಾಗಿದೆ. ಸಂಯುಕ್ತ ರಾಷ್ಟ್ರ ಸಂಘದ ವ್ಯವಸ್ಥೆಯಲ್ಲಿ ಪರಿಷ್ಕಾರ ಆವಶ್ಯಕವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಶಾಂತಿ ಸ್ಥಾಪನೆಯ ನಿಟ್ಟಿನಲ್ಲಿ ಪ್ರಧಾನ ಪಾತ್ರ ವಹಿಸಲು ಅರ್ಹತೆಯನ್ನು ಹೊಂದಿದೆ.

ಸುರ್‌ಬಿಟೋನ್ ಮತ್ತು ಕಿಂಗ್‌ಸ್ಟನ್ ಕ್ಷೇತ್ರದ ಪಾರ್ಲಿಮೆಂಟ್ ಸದಸ್ಯರೂ ಬ್ರಿಟಿಷ್ ಸರಕಾರದಲ್ಲಿ ಸಚಿವರೂ ಆಗಿರುವ (ಮಿನಿಸ್ಟರ್ ಆಫ್ ಸ್ಟೇಟ್ ಫೋರ್ ಎಂಪ್ಲೋಯ್ ಮೆಂಟ್ ರಿಲೇಶನ್ಸ್) ಎಡ್ ಡೇವಿ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಜಾಗತಿಕ ಶಾಂತಿಗೋಸ್ಕರ ಮಾಡುವ ಅಭಿಯಾನವನ್ನು ಪ್ರಶಂಸಿಸಿ ಹೀಗೆ ಹೇಳಿದರು: "ಎಲ್ಲರೊಂದಿಗೂ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ" ಎಂಬ ಆದರ್ಶ ಸೂಚಕ ವಚನ ನಿಜವಾಗಿಯೂ ಸ್ಫೂರ್ತಿದಾಯಕವಾಗಿದೆ.

ಮಕ್‌ಸೂದ್ ಅಹ್ಮದ್ ಓ.ಬಿ.ಇ.(OBE) ಧಾರ್ಮಿಕ ವಿಷಯಗಳಲ್ಲಿ ಬ್ರಿಟಿಷ್ ಸರಕಾರದ ಹಿರಿಯ ಸಲಹೆಗಾರ ರಾಗಿದ್ದಾರೆ. ಮಿನಿಸ್ಟರ್ ಫಾರ್ ಕಮ್ಯುನಿಟೀಸ್ ಆಗಿರುವ ಆಂಡ್ರೂ ಸ್ಟನ್ನೆಲ್ ಎಂ.ಪಿ. ಕಳುಹಿಸಿದ ಸಂದೇಶವನ್ನು ಅವರು ಓದಿ ಹೇಳಿದರು.

ಬೇಕನ್ಸ್ ಫೀಲ್ಡ್ ಕ್ಷೇತ್ರದ ಸದಸ್ಯ ಮತ್ತು ಅಟೋರ್ನಿ ಜನರಲ್ ಆಗಿರುವ ದಿ ರೈಟ್ ಆನರೇಬಲ್ ಡೋಮಿನಿಕ್ ಗ್ರೀವ್ ಕ್ಯೂ. ಸಿ. ಹೀಗೆ ಹೇಳಿದರು: ಕಳೆದ ವರ್ಷ ಅಸಹಿಷ್ಣು ಮನೋಭಾವ ಸೂಚಿಸುವ ಅನೇಕ ಘಟನೆಗಳನ್ನು ಲೋಕವು ಕಂಡಿತು. ಅಹ್ಮದಿಯಾ ಮುಸ್ಲಿಮರ ಮತ್ತು ಕ್ರೈಸ್ತರ ಮೇಲೆ ಮಾಡಲಾದ ಆಕ್ರಮಣಗಳು ಇವುಗಳ ಉದಾಹರಣೆಗಳಾಗಿವೆ. ಲೋಕವು ನಿರಂತರವಾಗಿ ಪಂಥಾಹ್ವಾನಗಳನ್ನು ಎದುರಿಸುತ್ತಿದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಆತ್ಮಸಾಕ್ಷಿಯನ್ನು ಸಂರಕ್ಷಿಸಿ ತನ್ನ ಸ್ವತಂತ್ರ ವಿಚಾರವನ್ನು ಕಾಪಾಡಲು ಸಾಮರ್ಥ್ಯವನ್ನು ಪಡೆಯುವಂತೆ ಮಾಡುವುದು ಇವುಗಳಲ್ಲಿ ಅತ್ಯಂತ ಮುಖ್ಯವಾದುದಾಗಿದೆ. ಈ ತತ್ವವನ್ನು ಪರಿಪಾಲಿಸುವುದಾದರೆ ಸಂಘರ್ಷಭರಿತ ದೇ ಗಳಲ್ಲಿರುವ ಜನರು ಎಂತಹ ಹಕ್ಕುಗಳನ್ನು ಪಡೆಯುವರೆಂದರೆ ಬ್ರಿಟನಿನ ಜನರು ಸಹಜವಾಗಿ ಹೊಂದಿರುವ ಹಕ್ಕುಗಳಿಗೆ ಅವು ಸಮಾನವಾಗಿರುವುವು.

ಅಹ್ಮದಿಯಾ ಜಮಾಅತಿನ ಪಂಚಮ ಖಲೀಫರೂ ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರು ದ್ವಿತೀಯ ಅಹ್ಮದಿಯಾ ಮುಸ್ಲಿಮ್ ಪೀಸ್ ಪ್ರೈಝನ್ನು ಪಾಕಿಸ್ತಾನದಲ್ಲಿ ಕಾರ್ಯ ನಿರತರಾಗಿರುವ ಈದಿ ಫೌಂಡೇಶನಿನ ಸ್ಥಾಪಕರಾದ ಅಬ್ದುಸ್ಸತ್ತಾರ್ ಈದಿ ಅವರಿಗೆ, ಅವರು ಸಾಮಾಜಿಕ ಹಿತಕ್ಕಾಗಿ ಮತ್ತು ಸಂತ್ರಸ್ತ ಮಾನವರ ಸೇವೆಗಾಗಿ ಮಾಡಿದ ಪ್ರಶಂಸಾರ್ಹ ಕೆಲಸಗಳಿಗೋಸ್ಕರ ನೀಡಿದರು. ಅದನ್ನು ಅವರ ಪರವಾಗಿ ಈದಿ ಫೌಂಡೇಶನಿನ ಬ್ರಿಟನ್ ಮತ್ತು ಯುರೋಪಿನ ಶಾಖೆಯ ಅಧ್ಯಕ್ಷರಾದ ತಾರಿಖ್ ಅವಾನ್‌ರವರು ಸ್ವೀಕರಿಸಿದರು.

ಈ ಬಹುಮಾನವನ್ನು ಅಂಗೀಕರಿಸಿ ಅಬ್ದುಸ್ಸತ್ತಾರ್ ಈದಿ ವೀಡಿಯೋ ಸಂದೇಶದಲ್ಲಿ ಹೀಗೆ ಹೇಳಿದರು:

"ನಾನು ಭಿನ್ನಾಭಿಪ್ರಾಯಗಳಲ್ಲಿ ನಂಬಿಕೆ ಹೊಂದಿಲ್ಲ. ನಾನು ಮಾನವೀಯತೆಯಲ್ಲಿ ನಂಬಿಕೆ ಇರಿಸಿದ್ದೇನೆ. ನೆರವಿನ ಆವಶ್ಯಕತೆ ಇರುವವರು ಯಾವ ಧರ್ಮಕ್ಕೆ ಸೇರಿರುವರೆಂದು ನಾನು ಎಂದೂ ಪ್ರಶ್ನಿಸುವುದಿಲ್ಲ. ಅವರು ಮನುಷ್ಯರು, ಅವರಿಗೆ ನನ್ನ ಸಹಾಯದ ಆವಶ್ಯಕತೆ ಇದೆ ಎಂದು ಮಾತ್ರ ನಾನು ನೋಡುತ್ತೇನೆ. ಶಾಂತಿ ಸ್ಥಾಪನೆಗೆ ಅತ್ಯುತ್ತಮ ಮಾರ್ಗ ಮಾನವೀಯತೆಯಾಗಿದೆ. ನಮ್ಮ ಸಹಜೀವಿಗಳಾದ ಮನುಷ್ಯರ ಬಗ್ಗೆ ನಾವು ಪ್ರೀತಿಯುಳ್ಳವರಾಗಬೇಕು."

ಈ ಪೀಸ್ ಸಿಂಪೋಸಿಯಂ (ಶಾಂತಿ ವಿಚಾರ ಸಂಕಿರಣ)ದಲ್ಲಿ ಉಪಸ್ಥಿತರಾಗಿದ್ದ ಇತರ ಗಣ್ಯ ವ್ಯಕ್ತಿಗಳಲ್ಲಿ ಕೆಲವರ ಹೆಸರು ಹೀಗಿವೆ:

* ಪೌಲ್ ಬರ್‌ಸ್ಟೋವ್ M.P. (ಸಟ್ಟನ್ ಮತ್ತು ಚೀಮ್ ಕ್ಷೇತ್ರ) – ಮಿನಿಸ್ಟರ್ ಫೋರ್ ಕೇರ್ ಸರ್ವೀಸಸ್.

* ಸ್ಟೀಫನ್ ಹೆಮ್ಮಂಡ್ (ಪಾರ್ಲಿಮೆಂಟರಿ ಪ್ರೈವೇಟ್ ಸೆಕ್ರೆಟರಿ ಟು ದಿ ಸೆಕ್ರೆಟರಿ ಆಫ್ ಸ್ಟೇಟ್ ಫೋರ್ ಕಮ್ಯುನಿಟೀಸ್ ಆ್ಯಂಡ್ ಲೋಕಲ್ ಗವರ್ನ್‌ಮೆಂಟ್).

* ಜೇನ್ ಎಲ್ಲಿಸನ್ M.P. (ಬೆಟ್ಟರ್‌ಸೀ).

* ಮ್ಯಾಥ್ಯೂ ಓಫೋರ್ಡ್ M.P. (ಹೆಂಡನ್).

* ಮಿಗುಯೆಲ್ ಏಂಜಲ್ ಸೋಲಾನೋ ಲೋಪೆಝ್, ಪೆರುಗ್ವೇಯ ರಾಯಭಾರಿ.

* ವಿಂಬಲ್ಡನಿನ ಲಾರ್ಡ್ ತಾರಿಖ್ ಅಹ್ಮದ್.

* ರೈಟ್ ರೆವರೆಂಡ ಬಿಷಪ್ ಪೌಲ್ ಹೆಂಡ್ರಿಕ್ಸ್, ಆಗ್ಸಿಲರಿ ಬಿಷಪ್, ಸೌತ್‌ವಾರ್ಕ್

* ತಾಂಬಾ ಎಂ. ಎನ್‌ಗೇಗ್‌ಬಾ, ಡೆಪ್ಯುಟಿ ಹೈಕಮಿಷನರ್ ಸಿಯೆರ್ರಾಲಿಯೋನ್

* ಇರಾನ್, ರಷ್ಯಾ, ಘಾನ, ಐವರಿ ಕೋಸ್ಟ್, ಇಂಡೋನೇಶಿಯಾ, ಸೂಡಾನ್, ಉಗಂಡಾ, ಝಾಂಬಿಯಾ ದೇಶಗಳ ರಾಯಭಾರಿ ಕಚೇರಿಗಳ ಪ್ರತಿನಿಧಿಗಳು.

* ನೆಝಿರ್ ಕರಬಸ್ M.P. ಟರ್ಕಿ ಪಾರ್ಲಿಮೆಂಟ್ ಸದಸ್ಯ.

**ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫರು) ಪೀಸ್ ಸಿಂಪೋಸಿಯಂನಲ್ಲಿ ಮಾಡಿದ ಭಾಷಣ:**

ಪ್ರಾರಂಭಿಕ ಪ್ರಾರ್ಥನೆಗಳ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ V ಹೀಗೆ ಹೇಳಿದರು:

ಎಲ್ಲಾ ಸನ್ಮಾನ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್ – ನಿಮಗೆಲ್ಲರಿಗೂ ಶಾಂತಿ ಮತ್ತು ಅಲ್ಲಾಹನ ಅನುಗ್ರಹವಿರಲಿ.

ಒಂದು ವರ್ಷದ ನಂತರ ನಾವೆಲ್ಲರೂ ನಮ್ಮ ಈಗಿನ ವಾರ್ಷಿಕ ಸಂಪ್ರದಾಯ ಪ್ರಕಾರ ಇಲ್ಲಿ ಜಮಾಯಿಸಿದ್ದೇವೆ. ಅಹ್ಮದಿಯಾ ಸಂಘಟನೆಯ ವಾರ್ಷಿಕ ಕಾರ್ಯಕ್ರಮಗಳಲ್ಲಿ ಈ ಸಭೆ ಸ್ಥಿರವಾಗಿ ಸೇರುವುದು ನಿರ್ಧರಿಸಲ್ಪಟ್ಟಿದ್ದು ಇದರಲ್ಲಿ ಭಾಗವಹಿಸುವವರಲ್ಲಿ ಬಹುತೇಕ ಜನರು ನಮ್ಮ ಸಂಘಟನೆಗೆ ಸೇರದ ನಮ್ಮ ಸ್ನೇಹಿತರಾಗಿದ್ದಾರೆ.

ಈ ಸಮಾವೇಶಕ್ಕೆ ಕೇವಲ ಒಂದು ಉದ್ದೇಶವಿದೆ. ನಾವು ಸ್ನೇಹದ ವಾತಾವರಣದಲ್ಲಿ ಬಂದು ಕುಳಿತು ನಾವೆಲ್ಲರೂ ಆಶಿಸುವ ಒಂದು ಗುರಿಯನ್ನು ತಲಪುವ ಬಗ್ಗೆ ಮಾತನಾಡುವುದೇ ನಮ್ಮ ಉದ್ದೇಶವಾಗಿದೆ. ನಾವೆಲ್ಲರೂ ಬಯಸುವುದು ಪ್ರೀತಿ, ವಾತ್ಸಲ್ಯ, ಭ್ರಾತೃತ್ವ ಮತ್ತು ಶಾಂತಿಯನ್ನು ಪ್ರೋತ್ಸಾಹಿಸುವುದಾಗಿದೆ.

ಈ ಶಾಂತಿ ಸಮ್ಮೇಳನವನ್ನು ನಡೆಸುವ ನಾವು ಅಹ್ಮದೀ ಮುಸ್ಲಿಮರಾಗಿದ್ದೇವೆ. ಬೇರೆ ಕೆಲವು ಮುಸ್ಲಿಮ್ ಪಂಗಡಗಳು ನಮ್ಮನ್ನು ಇಷ್ಟಪಡುವುದಿಲ್ಲವಾದರೂ ನಮ್ಮ ಈ ಸಮ್ಮೇಳನಕ್ಕೆ ಹಲವಾರು ಅಹ್ಮದಿಯೇತರ ಮುಸ್ಲಿಮರು ಸಂತೋಷದಿಂದ ಬಂದು ಭಾಗವಹಿಸಿದ್ದಾರೆ. ಕ್ರೈಸ್ತ ಧರ್ಮಕ್ಕೆ ಸೇರಿದ ಸ್ನೇಹಿತರು, ಯಹೂದಿ ಧರ್ಮಕ್ಕೆ ಸೇರಿದ ಸ್ನೇಹಿತರು, ಹಿಂದೂಗಳಾದ ಸ್ನೇಹಿತರು ಮತ್ತು ಸಿಖ್ಖ್ ಧರ್ಮದ ಸ್ನೇಹಿತರು ಇಂದು ಇಲ್ಲಿಗೆ ಬಂದಿದ್ದಾರೆ. ಅವರು ಇದರ ಮೊದಲು ಸಹ ಆಗಮಿಸುತ್ತಾ ಇದ್ದರು. ಕೆಲವು ನಾಸ್ತಿಕರು ಸಹ ಇಲ್ಲಿಗೆ ಬರುತ್ತಾರೆ.

ವಿವಿಧ ದೇಶಗಳ ಮತ್ತು ಜನಾಂಗಗಳ ಪ್ರತಿನಿಧಿಗಳು ಇಲ್ಲಿಗೆ ಆಗಮಿಸಿದ್ದಾರೆ. ಇಂದು ಹತ್ತು ದೇಶಗಳ ಪ್ರತಿನಿಧಿಗಳು ಇಲ್ಲಿಗೆ ಆಗಮಿಸಿದ್ದಾರೆ ಎಂದು ನನಗೆ ತಿಳಿಸಲಾಗಿದೆ. ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಜನಾಂಗೀಯ ವ್ಯತ್ಯಾಸಗಳು ಮತ್ತು ನಿಲುವುಗಳು ಇದ್ದರೂ ಒಳ್ಳೆಯ ಮನೋಭಾವದ ಜನರು ಮಾನವೀಯ ಮೌಲ್ಯಗಳನ್ನು ಸ್ಥಾಪಿಸಿ ವೃದ್ಧಿಪಡಿಸಿ ತಮ್ಮ ಮಾನವೀಯತೆಯನ್ನು ಸಾಬೀತು ಗೊಳಿಸಲು ಒಗ್ಗೂಡುತ್ತಾರೆಂಬುದನ್ನು ಈ ಶಾಂತಿ ಸಮ್ಮೇಳನವು ಪ್ರಾಯೋಗಿಕವಾಗಿ ಪ್ರಕಟಿಸುತ್ತದೆ. ಶಾಂತಿ ಮತ್ತು ಸೌಹಾರ್ದವು ಲೋಕದಲ್ಲಿ ಸ್ಥಾಪಿಸಲ್ಪಡಲು ಅನುಯೋಜ್ಯವಾದ ಸರ್ವಸಮ್ಮತವಾದ ಮೌಲ್ಯಗಳನ್ನು ಕಂಡುಕೊಳ್ಳಲು ಮತ್ತು ಅನುಷ್ಠಾನಕ್ಕೆ ತರಲು ಜನರು ಇಲ್ಲಿಗೆ ಆಗಮಿಸುತ್ತಾರೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಈ ಉದ್ದೇಶಕ್ಕಾಗಿ ನಡೆಸಲಾಗುವ ಬಹುಸಾಂಸ್ಕೃತಿಕ ಮತ್ತು ಬಹುರಾಷ್ಟ್ರೀಯ ಸಮಾವೇಶದ ಒಂದು ಚಿಕ್ಕ ಉದಾಹರಣೆ ಇದಾಗಿದೆ.

ಈ ಸಮಾವೇಶವು ಜಾಗತಿಕ ಶಾಂತಿಯನ್ನು ತಕ್ಷಣ

ಸುಧಾರಣೆ ಮಾಡುವುದಿಲ್ಲವಾದರೂ ನಾವೆಲ್ಲರೂ ಪರಸ್ಪರ ಒಗ್ಗೂಡಿ ನಮ್ಮ ಮಾನವೀಯ ಮೌಲ್ಯಗಳನ್ನು ವರ್ಧಿಸಲು ಸಾಧ್ಯವಿದೆ.

ಇಂದಿನ ಕಾಲಘಟ್ಟದಲ್ಲಿ ಅನೇಕ ದೇಶಗಳಲ್ಲಿ ಬಹು ಸಾಂಸ್ಕೃತಿಕ ಸಮುದಾಯಗಳಿವೆ. ಅವುಗಳಲ್ಲಿ ವಿವಿಧ ಧರ್ಮಗಳ ಅನುಯಾಯಿಗಳು ವಾಸಿಸುತ್ತಿದ್ದಾರೆ. ಒಬ್ಬರಿನ್ನೊಬ್ಬರ ಅಭಿಪ್ರಾಯಗಳನ್ನು ಆಲಿಸುತ್ತಾ ಕ್ರಮಬದ್ಧವಾಗಿ ಪರಸ್ಪರ ಭೇಟಿಯಾಗುತ್ತಾ ಸಂಶಯಗಳನ್ನು ಮತ್ತು ಅನುಮಾನಗಳನ್ನು ಸಹಜವಾಗಿ ದೂರೀಕರಿಸಲು ಮತ್ತು ಆ ಮೂಲಕ ಸಹಿಷ್ಣು ಮನೋಭಾವವನ್ನು ಬೆಳೆಸಲು ಸಧ್ಯವಾಗುವುದು. ನೀವು ಅನ್ಯರ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳುವಳಿಕೆ ಗಳಿಸಿದರೂ ಚಿಕ್ಕಪುಟ್ಟ ಸಮಸ್ಯೆಗಳ ಬಗ್ಗೆ ಗಮನ ಹರಿಯಲಾರದು ಮತ್ತು ಅವುಗಳು ಕಡೆಗಣಿಸಲ್ಪಡುವುವು. ನಾವು ಒಬ್ಬರಿನ್ನೊಬ್ಬರೊಂದಿಗೆ ಸಂಪರ್ಕ ಬೆಳೆಸುವಾಗ ನಾವು ಸಹಜವಾಗಿ ವಿಶಾಲ ಮನೋಭಾವದವರೂ ಔದಾರ್ಯವಂತರೂ ಆಗುತ್ತೇವೆ.

ಯು.ಕೆ. (ಯುನೈಟೆಡ್ ಕಿಂಗ್‌ಡಮ್ – ಗ್ರೇಟ್ ಬ್ರಿಟನ್) ಎಂತಹ ದೇಶವಾಗಿದೆ ಎಂದರೆ ವಿವಿಧ ಜನಾಂಗಗಳ, ಸಂಸ್ಕೃತಿಗಳ ಮತ್ತು ಧರ್ಮಗಳ ಜನರು ವಾಸಿಸುವ ದೇಶಗಳಲ್ಲಿ ಇದು ಒಂದಾಗಿದೆ. ಅನೇಕ ದೊಡ್ಡ ದೇಶಗಳಿಗೆ ಹೋಲಿಸಿದರೆ ಈ ದೇಶವು ಚಿಕ್ಕದಾಗಿದ್ದರೂ ಈ ದೇಶದ ಜನರ ವಿಶಾಲ ಮನೋಭಾವವು ಈ ದೇಶವನ್ನು ಒಂದು ಚಿಕ್ಕ ಜಗತ್ತನ್ನಾಗಿ ಮಾಡಿದೆ.

ಕೆಲವು ಯುರೋಪಿಯನ್ ದೇಶಗಳು ಇಸ್ಲಾಮ್ ಧರ್ಮದ ಉಪದೇಶಗಳ ಬಗ್ಗೆ ಮತ್ತು ಸಂಪ್ರದಾಯಗಳ ಬಗ್ಗೆ ಅನುಮಾನಗಳನ್ನು ಹೊಂದಿವೆ. ಕೆಲವು ದೇಶಗಳು ಅವುಗಳ ಮೇಲೆ ನಿಯಂತ್ರಣಗಳನ್ನು ಹೇರಿವೆ. ಬೇರೆ ಕೆಲವು ದೇಶಗಳು ಅಂತಹ ನಿಯಂತ್ರಣಗಳನ್ನು ಜಾರಿಗೊಳಿಸುವುದು ಹೇಗೆಂದು ಯೋಚಿಸುತ್ತಿವೆ. ಆದರೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿ (ಗ್ರೇಟ್ ಬ್ರಿಟನ್‌ನಲ್ಲಿ) ಹೀಗೆ ಇಲ್ಲ. ಇಲ್ಲಿನ ಜನರ ವಿಶಾಲ ಮನೋಭಾವ ಮತ್ತು ಪ್ರಗತಿಪರ ಚಿಂತನೆಯ ಕಾರಣದಿಂದ ಇಲ್ಲಿ ಗುಣಾತ್ಮಕ ಪ್ರಭಾವವಿದೆ. ಇದರ ಪರಿಣಾಮವಾಗಿ, ಈ ದೇಶದಲ್ಲಿ ಯಾವ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಅದು ಧಾರ್ಮಿಕ ವಿಷಯಗಳ ಬಗ್ಗೆ ಚರ್ಚಿಸುವಾಗ ಧರ್ಮಗಳ ಅನುಯಾಯಿಗಳ ಭಾವನೆಗಳಿಗೆ ನೋವನ್ನುಂಟುಮಾಡುವುದಿಲ್ಲ. ಇಲ್ಲಿನ ಜನರು ನ್ಯಾಯಕ್ಕಾಗಿ ಹೊಂದಿರುವ ಹಂಬಲವು ಅವರ ಮಾರ್ಗ ಸೂಚಕ ತತ್ವವಾಗಿ ಬಾಕಿಯಾಗಿ ಉಳಿಯಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಬ್ರಿಟಿಷರು ಹಿಂದೂಸ್ಥಾನದಲ್ಲಿ ರಾಜ್ಯಾಡಳಿತೆ ನಡೆಸುತ್ತಿದ್ದಾಗ ಅಹ್ಮದಿಯಾ ಸಂಘಟನೆಯ ಸ್ಥಾಪಕರು (ಅವರ ಮೇಲೆ ಶಾಂತಿ ಇರಲಿ) ಬ್ರಿಟಿಷ್ ಜನಾಂಗಕ್ಕೆ ನ್ಯಾಯದ ಬಗ್ಗೆ ಇದ್ದ ಪ್ರೀತಿಯನ್ನು ಮೆಚ್ಚಿಕೊಂಡಿದ್ದರು ಮತ್ತು ಅವರನ್ನು ಈ ಕಾರಣಕ್ಕಾಗಿ ಹೊಗಳಿದ್ದರು. ಧಾರ್ಮಿಕ ಸ್ವಾತಂತ್ರ್ಯದ ತತ್ವದಲ್ಲಿ ಹಸ್ತಕ್ಷೇಪ ಮಾಡದುದಕ್ಕಾಗಿ ಸರಕಾರವನ್ನು ಅವರು ವಿಶಿಷ್ಟವಾಗಿ ಹೊಗಳಿದ್ದರು. ಕ್ರೈಸ್ತ ಧರ್ಮ ಪ್ರಚಾರಕರಿಗೆ ತಮ್ಮ ಧರ್ಮವನ್ನು ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ನೀಡಿದ ಹಾಗೆಯೇ ಮುಸ್ಲಿಮರು ಸಹ ತಮ್ಮ ಧರ್ಮವನ್ನು ಅನುಷ್ಠಿಸಲು ಮತ್ತು ಪ್ರಚಾರ ಮಾಡಲು ಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದರು. ಆ ಕಾಲಘಟ್ಟದಲ್ಲಿ ಅಹ್ಮದಿಯಾ ಸಂಘಟನೆಯ ಸ್ಥಾಪಕರ ವಿರುದ್ಧ ಅನೇಕ ಮೊಕದ್ದಮೆಗಳನ್ನು ನ್ಯಾಯಾಲಯದಲ್ಲಿ ಹೂಡಲಾಗಿತ್ತು.

ಅಹ್ಮದಿಯಾ ಸಂಘಟನೆಯ ಸ್ಥಾಪಕರ ವಿರುದ್ಧ ಮುಸ್ಲಿಮರ ಅನ್ಯ ಪಂಗಡಗಳು, ಕ್ರೈಸ್ತರು ಮತ್ತು ಹಿಂದುಗಳು ಕಾರ್ಯ ನಿರತರಾದ ಕಾರಣ ಅವರು ದೋಷಾರೋಪ ಹೊರಿಸಿ ಮೊಕದ್ದಮೆಗಳನ್ನು ಹೂಡಿದರು. ಈ ಮೊಕದ್ದಮೆಗಳ ನ್ಯಾಯಾಧೀಶರು ಕ್ರೈಸ್ತರಾದ ಬ್ರಿಟಿಷರಾಗಿದ್ದರು. ಕೆಲವು ಮೊಕದ್ದಮೆಗಳನ್ನು ಕ್ರೈಸ್ತ ಧರ್ಮದ ಜನರೇ ಹೂಡಿದ್ದರು. ಆದರೆ ಬ್ರಿಟಿಷ್ ನ್ಯಾಯಾಧೀಶರು ನ್ಯಾಯನಿಷ್ಠರಾಗಿ ವರ್ತಿಸಿ ತಮ್ಮದೇ ಧರ್ಮಕ್ಕೆ ಸೇರಿದ ಕಕ್ಷಿಗಾರರ ವಿರುದ್ಧ ತೀರ್ಪು ನೀಡಿದ್ದರು. ಹೀಗೆ ಬ್ರಿಟಿಷ್ ಸರಕಾರದ ಆಡಳಿತೆಯ ಕಾಲದಲ್ಲಿ ಪ್ರತಿಯೊಬ್ಬ ನಾಗರಿಕನಿಗೆ ಸಮಾನ ಹಕ್ಕುಗಳನ್ನು ನೀಡಲಾಗಿತ್ತು. ಇಂತಹ ಪ್ರಾಮಾಣಿಕತೆ ಮೂಲಕವೇ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗುವುದು. ಬ್ರಿಟಿಷ್ ಜನಾಂಗವು ಈ ಅಮೂಲ್ಯ ಸ್ವಭಾವ ಗುಣವನ್ನು ಮುಂದುವರಿಸಿಕೊಂಡು ಹೋಗುವುದೆಂದೂ ಅವರು ಇಂದಿನ ಜಾಗತಿಕ ಪರಿಸ್ಥಿತಿಯಲ್ಲಿ ತಮ್ಮ ಪಾತ್ರವನ್ನು ಇದೇ ರೀತಿ ನಿಭಾಯಿಸುವರೆಂದೂ ನಾನು ಆಶಿಸುತ್ತೇನೆ.

ಈ ಸಮಾವೇಶವು ವಿವಿಧ ಜನಾಂಗಗಳ ಒಟ್ಟುಗೂಡುವಿಕೆ ಎಂದೂ ಇದರ ಉದ್ದೇಶ ಶಾಂತಿಗೋಸ್ಕರ ಪರಿಶ್ರಮಿಸುವುದು, ಪ್ರೀತಿ ಮತ್ತು ಸಹೋದರತೆಯನ್ನು ಪೋಷಿಸುವುದು ಎಂದೂ ನಾನು ಇದರ ಮೊದಲು ಸೂಚಿಸಿದ್ದೇನೆ. ಆದರೆ ನಾವು ವಾಸಿಸುವ ಪ್ರದೇಶದ ಸಮಾಜದಲ್ಲಿ ಮತ್ತು ವಾತಾವರಣದಲ್ಲಿ ಮಾತ್ರ ಇವುಗಳ ಬಗ್ಗೆ ನಾವು ಪರಿಶ್ರಮಪಡಲು ಸಾಧ್ಯ. ಈ ಸಭೆಗೆ ಸಮಾಜದ ವಿವಿಧ ವರ್ಗಗಳಿಂದ ಜನರು ಬಂದಿದ್ದಾರೆ. ಕೆಲವರು ರಾಜಕೀಯ ಪಕ್ಷಗಳಿಗೆ ಸೇರಿದವರಾಗಿದ್ದಾರೆ. ಕೆಲವರು ಸರಕಾರದೊಂದಿಗೆ ಸಂಬಂಧ ಹೊಂದಿದ್ದಾರೆ. ಕೆಲವರು ರಾಜತಾಂತ್ರಿಕ ವಲಯದಿಂದ ಬಂದಿದ್ದಾರೆ. ಮಾನವರ ಹಕ್ಕುಗಳಿಗೆ ಹೋರಾಡುವುದರಲ್ಲಿ ಯಾವಾಗಲೂ ಮುಂಚೂಣಿಯಲ್ಲಿರುವ ನಮ್ಮ ಸ್ನೇಹಿತ ಲಾರ್ಡ್ ಎರಿಕ್ ಆವ್‌ಬರಿಯ ಹಾಗೆ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸುವ ಸಂಸ್ಥೆಗಳಿಗೆ ಅಥವಾ ಗುಂಪುಗಳಿಗೆ ಸೇರಿದ ಕೆಲವರು ಸಹ ಇಲ್ಲಿಗೆ ಬಂದಿದ್ದಾರೆ.

ಇದೇ ರೀತಿ ನಮ್ಮ ಸ್ಥಳೀಯ ಪಾರ್ಲಿಮೆಂಟ್ ಸದಸ್ಯೆ ಸಿಯೋಭೈನ್ ಮೆಕ್ ಡೊನಾಗ್ ಸ್ನೇಹ ಮತ್ತು ನ್ಯಾಯದ ಹಕ್ಕುಗಳನ್ನು ನೆರವೇರಿಸುತ್ತಾ ಇಲ್ಲಿಗೆ ಆಗಮಿಸಿದ್ದಾರೆ. ರೈಟ್ ಆನರೇಬಲ್ ಡೊಮಿನಿಕ್ ಗ್ರೀವ್ M.P. ಮತ್ತು ಎಡ್ ಡೇವಿ M.P. ಇವರಿಬ್ಬರು ನಾವು ಶಾಂತಿಗೋಸ್ಕರ ಮಾಡುವ ಪ್ರಯತ್ನಗಳಿಗೆ ನಮಗೆ ಸಹಾಯ ನೀಡುತ್ತಿದ್ದಾರೆ. ಕೆಲವು ಸಾರಿ ಸ್ನೇಹ ಬಾಂಧವ್ಯದ ಹಕ್ಕುಗಳನ್ನು ಈಡೇರಿಸುವಾಗ ನ್ಯಾಯವನ್ನು ನ್ಯಾಯನಿಷ್ಠೆಯಿಂದ ಪಾಲಿಸುವುದು ಬಹಳ ಕಷ್ಟಕರವಾಗಿರುತ್ತದೆ. ಆದರೆ ಈ ಎಲ್ಲಾ ಸ್ನೇಹಿತರು ಮತ್ತು ರಾಜಕೀಯ ಮುಂದಾಳುಗಳು ತಮ್ಮ ಈ ಎರಡು ಕರ್ತವ್ಯಗಳನ್ನೂ ನಿಷ್ಠೆಯಿಂದ ಈಡೇರಿಸುತ್ತಾರೆ.

ನಾನು ದೃಢವಾಗಿ ನಂಬುವುದೇನೆಂದರೆ, ನಮ್ಮ ಗಣ್ಯ ಅತಿಥಿಗಳು ಶಾಂತಿ ಸ್ಥಾಪನೆಯ ಬಗ್ಗೆ ನಾವೆಲ್ಲರೂ ಹೊಂದಿರುವ ಕಾಳಜಿಯ ಬಗ್ಗೆ ತಂತಮ್ಮ ವಲಯದಲ್ಲಿ ಪರಿಶ್ರಮ ಪಡುವುದಾದರೆ, ಕಾಲ ಕಳೆದಂತೆ ಅವರು ತಮ್ಮ ವಲಯವನ್ನು ವಿಸ್ತರಿಸಬಹುದು ಮತ್ತು ನಿಶ್ಚಯವಾಗಿಯೂ ಜಗತ್ತಿನಾದ್ಯಂತ ಶಾಂತಿ ಸ್ಥಾಪನೆಗೋಸ್ಕರ ಅವರು ಪಾತ್ರವಹಿಸಲು ಶಕ್ತರಾಗುವರು.

ಅಹ್ಮದಿಯಾ ಮುಸ್ಲಿಮ್ ಸಮುದಾಯದ ಬಗ್ಗೆ ಹೇಳುವುದಾದರೆ, ನಾವು ಲೋಕದಲ್ಲಿ ಶಾಂತಿ ಸ್ಥಾಪನೆಯ ಬಗ್ಗೆ ಮತ್ತು ಇಸ್ಲಾಮಿನ ನೈಜ ತತ್ವಗಳಿಗನುಸಾರವಾಗಿ ಹಿಂಸಾಚಾರವನ್ನು ಕೊನೆಗೊಳಿಸಲು ಆವೇಶಭರಿತ ಹಂಬಲವನ್ನು ಹೊಂದಿದ್ದೇವೆ. ಆದರೆ ದುರದೃಷ್ಟಕರವಾಗಿ ನಾವು ಇದನ್ನು ಕೃತಿರೂಪಕ್ಕೆ ತರಲು ಶಕ್ತರಾಗಿಲ್ಲ. ಏಕೆಂದರೆ ನಾವು ಲೌಕಿಕವಾಗಿ ಯಾವ ಶಕ್ತಿಯನ್ನೂ ಹೊಂದಿಲ್ಲ. ಬೇರೆಯವರೊಂದಿಗೆ ಹೋಲಿಸುವಾಗ ನಾವು ಚಿಕ್ಕ ಧಾರ್ಮಿಕ ಸಮುದಾಯ ವಾಗಿದ್ದೇವೆ. ಇಂದಿನ ಕಾಲದಲ್ಲಿ ನಮ್ಮನ್ನು ಲೋಕವು ಗಮನಾರ್ಹವೆಂದು ಗಣಿಸಿಲ್ಲ. ಹೀಗಿದ್ದರೂ ನಮ್ಮ ಉನ್ನತ ಆದರ್ಶಗಳು ನಾವು ಶಾಂತಿಗೋಸ್ಕರ ಮಾಡುವ ನೈಜ ಪ್ರಯತ್ನ ನಮ್ಮನ್ನು ಗುರಿಗೆ ಸಾಗಿಸುವುದು. ನಮ್ಮ ಆದರ್ಶಗಳ ಅಸ್ತಿಭಾರವು ಇಸ್ಲಾಮ್ ಧರ್ಮದ ತತ್ವಗಳಲ್ಲಿ ಅಡಕವಾಗಿದೆ. "ಇಸ್ಲಾಮ್" ಶಾಂತಿ ಮತ್ತು ಭದ್ರತೆಯ ದೀಪಸ್ತಂಭವೆಂದು ಲೋಕವು ಗಣಿಸುವ ಕಾಲವು ಬರುವುದು.

ಇಸ್ಲಾಮ್ ಧರ್ಮವು ದೌರ್ಜನ್ಯಗಾರನಿಗೂ ದೌರ್ಜನ್ಯ ಪೀಡಿತನಿಗೂ ಸಹಾಯ ನೀಡಲು ನಮಗೆ ಉಪದೇಶ ನೀಡುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಶಿಷ್ಯರಿಗೆ ಹಾಗೆ ಉಪದೇಶಿಸಿದಾಗ, ಶಿಷ್ಯರು ಕೇಳಿದರು: ಕ್ರೂರಿಯಾದ ದೌರ್ಜನ್ಯ ಗಾರನಿಗೆ ಸಹಾಯ ನೀಡುವುದು ಹೇಗೆ? ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ದೌರ್ಜನ್ಯಗಾರನ ಕೈಯ್ಯನ್ನು ತಡೆಯುವ ಮೂಲಕ ಎಂದರೆ ಅವನನ್ನು ದೌರ್ಜನ್ಯಕಾರಕ ಕೆಲಸ ದಿಂದ ತಡೆಗಟ್ಟುವ ಮೂಲಕ ಅವನಿಗೆ ಸಹಾಯ ಮಾಡಬಹುದು.

ದೌರ್ಜನ್ಯಗಾರನು ಆಲೋಚಿಸುವುದು ಬಲಾತ್ಕಾರದಿಂದ ತನ್ನ ವಿರೋಧಿಯನ್ನು ಸೋಲಿಸಬಹುದೆಂದಾಗಿದೆ. ಆದರೆ ಧಾರ್ಮಿಕ ಮನೋಭಾವ ಹೊಂದಿದವರು ನಂಬುವುದೇ ನೆಂದರೆ, ಸರ್ವಶಕ್ತನಾದ ದೇವನು ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನಾಗಿದ್ದಾನೆ. ಅವನು ದೌರ್ಜನ್ಯಗಾರನನ್ನು ನಿಶ್ಚಯವಾಗಿಯೂ ಶಿಕ್ಷಿಸುವನು.

ಆದುದರಿಂದ ದೌರ್ಜನ್ಯಗಾರನನ್ನು ಅವನು ಮಾಡಲಿರುವ ಕ್ರೂರ ಕೃತ್ಯದಿಂದ ತಡೆಯುವ ಮೂಲಕ ಅವನಿಗೆ ಸಹಾಯ ಮಾಡಬೇಕು. ಹಾಗೆ ಮಾಡುವುದರ ಮೂಲಕ ದೇವನ ಕೋಪದಿಂದ ಅವನನ್ನು ರಕ್ಷಿಸಬಹುದು.

ದೌರ್ಜನ್ಯಗಾರರನ್ನು ಅವರ ದೌರ್ಜನ್ಯ ಕೃತ್ಯಗಳಿಂದ ತಡೆಯಲು ನಮ್ಮ ಸಂಘದವರಿಗೆ ಈಗ ಶಕ್ತಿ ಸಾಮರ್ಥ್ಯಗಳು ಇಲ್ಲವಾದರೂ ನಾವು ಎಲ್ಲಾ ರೀತಿಯ ಕ್ರೂರ ಕೃತ್ಯಗಳನ್ನು ತಡೆಯಲು ಇತರರಿಗೆ ಮಾರ್ಗದರ್ಶನ ನೀಡುತ್ತೇವೆ. ಎಂದರೆ ಅಧಿಕಾರ ಹೊಂದಿದವರ ಗಮನ ಅದರ ಕಡೆಗೆ ಹರಿಸುವ ಮೂಲಕ ಅಥವಾ ಪ್ರಾರ್ಥನೆ ಮೂಲಕ ನಿರಂತರ ಪ್ರಯತ್ನ ಮಾಡುತ್ತಾ ಇರುತ್ತೇವೆ.

ಸರಕಾರಗಳು ಮತ್ತು ಅಧಿಕಾರ ಹೊಂದಿದ ಸಂಸ್ಥೆಗಳು ಅಥವಾ ಜಾಗತಿಕ ಸಂಸ್ಥೆಗಳು ಶಾಂತಿ ಸ್ಥಾಪಿಸುವ ತಮ್ಮ ಕರ್ತವ್ಯಗಳನ್ನು ಈಡೇರಿಸದಿದ್ದರೆ ಅಂತಹ ಕೇಂದ್ರಗಳು ಕೊನೆಗೆ ನಿರುಪಯುಕ್ತವಾಗುತ್ತವೆ.

ನಾವು ಸಂಯುಕ್ತ ರಾಷ್ಟ್ರ ಸಂಘದ ಚರಿತ್ರೆ ಬಗ್ಗೆ ಅಧ್ಯಯನ ಮಾಡುವುದಾದರೆ, ಕೆಲವು ಸಂದರ್ಭಗಳಲ್ಲಿ ಹೊರತು ಅದು ಎಂದೂ ನ್ಯಾಯಪಾಲನೆಯ ಆವಶ್ಯಕತೆಗಳನ್ನು ಈಡೇರಿಸಲಿಲ್ಲ. ಅದು ತನ್ನ ಕರ್ತವ್ಯವನ್ನು ಸರಿಯಾಗಿ ಈಡೇರಿಸುವುದರಲ್ಲಿ ಸೋತು ಹೋಗಿದೆ. ಭೌತಿಕವಾದ ದೇಶಗಳ ಒಕ್ಕೂಟ ಮತ್ತು ಒಪ್ಪಂದಗಳು, ಸ್ವಾರ್ಥ ಲಾಭಗಳು, ವೈಯಕ್ತಿಕ ದ್ವೇಷ, ಹಗೆತನ ಇವುಗಳೆಲ್ಲಾ ನ್ಯಾಯಯುತವಾಗಿ ವರ್ತಿಸುವುದಕ್ಕೆ ತಡೆಗಳಾಗಿವೆ. ಸಂಯುಕ್ತ ರಾಷ್ಟ್ರ ಸಂಘಕ್ಕೆ ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಏಕೆಂದರೆ, ಅದು ನೈಜ ನಿಷ್ಪಕ್ಷ ಧೋರಣೆ ಹೊಂದಲಿಲ್ಲ ಮತ್ತು ಸರಿಯಾದ ರೀತಿ ವ್ಯವಹಾರ ಮಾಡಲಿಲ್ಲ.

ನಾನು ಇದರ ಮೊದಲು ಹೇಳಿದ ಹಾಗೆ, ಇಲ್ಲಿ ಕುಳಿತಿರುವ ನಮ್ಮ ಪೈಕಿ ಬಹುತೇಕ ಜನರು ಲೋಕಕ್ಕೆ ಶಾಂತಿಯನ್ನು ತರಲು ಶಕ್ತರಾಗಿಲ್ಲ. ಏಕೆಂದರೆ, ನಮಗೆ ಅದಕ್ಕೆ ಆವಶ್ಯಕವಾದ ಶಕ್ತಿ ಸಾಮರ್ಥ್ಯಗಳಾಗಲಿ ಸಂಪನ್ಮೂಲಗಳಾಗಲಿ ಇಲ್ಲ. ಹೀಗಿದ್ದರೂ ಲೋಕದ ಇಂದಿನ ಪರಿಸ್ಥಿತಿಯಲ್ಲಿ ನಾವು ನಿರಾಶೆ ಹೊಂದಿಲ್ಲ. ಪ್ರತಿಯೊಂದು ಹಂತದಲ್ಲಿಯೂ ನಾವು ನಮಗೆ ಸಾಧ್ಯವಿರುವಷ್ಟು ಈ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ ಮತ್ತು ಇನ್ನು ಮುಂದೆ ಸಹ ಯಾವಾಗಲೂ ನಮ್ಮ ಪ್ರಯತ್ನಗಳನ್ನು ಮುಂದುವರಿಸಿಕೊಂಡು ಹೋಗುವೆವು. ಒಂದು ಚಿಕ್ಕ ಪ್ರದೇಶದಲ್ಲಿ ಜನರಲ್ಲಿ ನ್ಯಾಯಪಾಲನೆಗೋಸ್ಕರ ಆಶೆ ಮತ್ತು ಪ್ರಯತ್ನದ ಬಗ್ಗೆ ಪ್ರಭಾವವನ್ನು ನಾವು ಬೀರಬಹುದಾದರೆ, ನಾವು ಆ ಸಂದರ್ಭವನ್ನು ಎಂದೂ ಕೈಬಿಡಲಾರೆವು. ಇದೇ ಕಾರಣದಿಂದ ನಾವು ಪ್ರತಿವರ್ಷ ಪೀಸ್ ಸಿಂಪೋಸಿಯಂ (ಶಾಂತಿಗೋಸ್ಕರ ವಿಚಾರ ಸಂಕಿರಣ) ನಡೆಸುತ್ತೇವೆ. ನಮಗೆ ಸಂದರ್ಭ ದೊರೆತಾಗಲೆಲ್ಲಾ ನಾವು ಸಾಮಾಜಿಕ ಶಾಂತಿ ಸ್ಥಾಪನೆಗೋಸ್ಕರ ಕರೆ ನೀಡುತ್ತೇವೆ.

ಮುಂದೆ ಒಂದು ಕಾಲದಲ್ಲಿ ದೊಡ್ಡ ಕ್ಷೇತ್ರಗಳಲ್ಲಿ ಇರುವ ಜನರು ಸಹ ನ್ಯಾಯಪಾಲನೆಯನ್ನು ಆಶಿಸುವರೆಂದು ನಾವು ನಂಬುತ್ತೇವೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರು ಪ್ರತಿಪಾದಿಸಿದ ಮೂಲಭೂತ ತತ್ವವೇನೆಂದರೆ, ನ್ಯಾಯಪಾಲನೆ ಮಾಡದೆ ಶಾಂತಿಯನ್ನು ಸ್ಥಾಪಿಸಲು ಸಾಧ್ಯವಾಗದು. ಆದರೆ ನ್ಯಾಯಪಾಲನೆಯು ಸ್ಥಾಪಿತವಾಗಬೇಕಾದರೆ ದೇವನೊಂದಿಗೆ ಸಂಬಂಧ ಹೊಂದದೆ ಸಾಧ್ಯವಾಗಲಾರದು. ಈ ಲೋಕದ ಸೃಷ್ಟಿಕರ್ತನೊಂದಿಗೆ ಸಂಬಂಧವನ್ನು ಸ್ಥಾಪಿಸುವುದು ನ್ಯಾಯ ಪಾಲನೆಗೆ ಮುಂಚಿತವಾಗಿ ಸಾಧಿಸಬೇಕಾದ ಆವಶ್ಯಕತೆಯಾಗಿದೆ.

ಸರ್ವಶಕ್ತನಾದ ದೇವನು ನಮಗೆ ಅನೇಕ ವಿಧಗಳ ವರದಾನಗಳನ್ನು ದಯಪಾಲಿಸಿದ್ದಾನೆ. ಅವನೊಂದಿಗೆ ಸಂಬಂಧ ಸ್ಥಾಪಿಸುವುದಲ್ಲದೆ ನಮ್ಮ ಅತ್ಯಂತ ಮುಖ್ಯ ಕರ್ತವ್ಯ ನಮ್ಮ ಸಹಜೀವಿಗಳಾದ ಪುರುಷರಿಗೂ ಮಹಿಳೆಯರಿಗೂ ಅವರವರ ಹಕ್ಕುಗಳನ್ನು ಈಡೇರಿಸಿಕೊಡಬೇಕಾಗಿದೆ ಎಂದು ದೇವನು ನಮಗೆ ಕಲಿಸಿರುವನು.

ಅಹ್ಮದಿಯಾ ಸಂಘಟನೆಯ ಸ್ಥಾಪಕರು ನಮಗೆ

ಉಪದೇಶಿಸಿರುವುದೇನೆಂದರೆ, ಕೆಲವು ಸಂದರ್ಭಗಳಲ್ಲಿ ಮಾನವರಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಿಕೊಡುವುದಕ್ಕೆ ದೇವನಿಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಿಕೊಡುವುದಕ್ಕಿಂತ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದಾಗಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತ ಕಾಲದಲ್ಲಿ ಇಂತಹ ಅನೇಕ ಉದಾಹರಣೆ ಗಳನ್ನು ಕಾಣಬಹುದಾಗಿದೆ. ದೇವನಿಗೆ ಸಂಬಂಧಿಸಿದ ಹಕ್ಕುಗಳನ್ನು ನೆರವೇರಿಸಿಕೊಡುವ ಮೊದಲು ಮಾನವರಿಗೆ ಸಂಬಂಧಿಸಿದ ಹಕ್ಕುಗಳನ್ನು ಅವರು ನೆರವೇರಿಸಿ ಕೊಟ್ಟರು. ಉದಾಹರಣೆಗೆ: ಕಡ್ಡಾಯ ನಮಾಝ್ ಅನುಷ್ಠಿಸುವ ವೇಳೆಯನ್ನು ಮುಂದೂಡಿ ಅದಕ್ಕಿಂತ ಮೊದಲು ಮಾನವರ ಸೇವೆಯ ಕೆಲಸ ಮಾಡಿದರು.

ಈ ಕಾಲಘಟ್ಟದ ವಾಗ್ದತ್ತ ಮಸೀಹ್ ಮತ್ತು ಮಹ್‌ದಿ ಯಾಗಿ ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಸರ್ವಶಕ್ತನಾದ ದೇವನು ಇಸ್ಲಾಮಿನ ನೈಜ ತತ್ವಗಳನ್ನು ಪುನಃ ಲೋಕದಲ್ಲಿ ಸ್ಥಾಪಿಸಲು ಕಳುಹಿಸಿರುವನು ಎಂದು ಅಹ್ಮದೀ ಮುಸ್ಲಿಮರಾದ ನಾವು ನಂಬುತ್ತೇವೆ. ಅವರು ತನ್ನ ಒಂದು ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ:

"ನನ್ನನ್ನು ದೇವನು ಯಾವ ಕೆಲಸಕ್ಕೋಸ್ಕರ ನೇಮಿಸಿ ಕಳುಹಿಸಿರುವನೋ ಅದೇನೆಂದರೆ, ದೇವನು ಮತ್ತು ಅವನ ಸೃಷ್ಟಿಗಳ ಮಧ್ಯೆ ಇರುವ ಸಂಬಂಧದಲ್ಲಿ ಸಂಭವಿಸಿರುವ ಮಲಿನ ಸ್ಥಿತಿಯನ್ನು ದೂರೀಕರಿಸಿ ಪ್ರೀತಿ ಮತ್ತು ನಿಷ್ಕಳಂಕತೆಯ ಸಂಬಂಧವನ್ನು ಪುನಃ ನಾನು ಸ್ಥಾಪಿಸಬೇಕು; ಸತ್ಯವನ್ನು ಬಹಿರಂಗಪಡಿಸಿ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಿ ಶಾಂತಿ ಸಂಧಾನಗಳ ಅಸ್ತಿಭಾರವನ್ನು ನಾನು ಹಾಕಬೇಕು ಮತ್ತು ಲೋಕದ ಕಣ್ಣುಗಳಿಂದ ಮರೆಯಾಗಿದ್ದ ಧಾರ್ಮಿಕ ಸತ್ಯಗಳನ್ನು ನಾನು ಪ್ರಕಟಿಸಬೇಕು."

(ಲೆಕ್ಚರ್ ಲಾಹೋರ್ – ರೂಹಾನಿ ಖಜಾಯಿನ್ – ಸಂಪುಟ 20, ಪಟ 180)

ದೇವನೊಂದಿಗೆ ಪ್ರೀತಿಯ ಸಂಬಂಧ ಸ್ಥಾಪಿಸುವುದು ಆವಶ್ಯಕ ಎಂಬ ತತ್ವವನ್ನು ಮಾನವರು ಮನವರಿಕೆ ಮಾಡಿಕೊಳ್ಳಬೇಕು. ದೇವನು ತನ್ನ ಸೃಷ್ಟಿಗಳನ್ನು ಪ್ರೀತಿಸುತ್ತಾನೆ ಎನ್ನುವುದನ್ನು ನೀವು ಮನಗಾಣುವುದಾದರೆ ಮನುಷ್ಯನು ತನ್ನ ಸ್ವಾರ್ಥಲಾಭಗಳನ್ನು ಪರಿಗಣಿಸದೆ ಅನ್ಯರ ಬಗ್ಗೆ ಸಹಜವಾಗಿ ಪ್ರೀತಿಯನ್ನು ಬೆಳೆಸಿಕೊಳ್ಳುವನು.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಮಾಡಿದ ಇನ್ನೊಂದು ಅತ್ಯಂತ ಮುಖ್ಯ ಉಪದೇಶವೇನೆಂದರೆ, ಸತ್ಯವನ್ನು ಬಹಿರಂಗಪಡಿಸುವ ಮೂಲಕ ಧಾರ್ಮಿಕ ಯುದ್ಧಗಳನ್ನು ಕೊನೆ ಗೊಳಿಸಬಹುದು. ನಿಶ್ಚಯವಾಗಿಯೂ ಹೀಗೆ ಧಾರ್ಮಿಕ ಯುದ್ಧಗಳು ಕೊನೆಗೊಳ್ಳುವುದಲ್ಲದೆ ಶಾಂತಿ ಮತ್ತು ಸೌಹಾರ್ದದ ಅಸ್ತಿಭಾರವು ಅದರ ಮೂಲಕ ಹಾಕಲ್ಪಡುವುದು.

ಶಾಂತಿ ಮತ್ತು ಸೌಹಾರ್ದದ ಸ್ಥಾಪನೆಗೋಸ್ಕರ ಕೆಲವು ಪ್ರಯತ್ನಗಳು ನಡೆಸಲ್ಪಡುತ್ತಿರುವುದನ್ನು ನಾವು ಕಾಣುತ್ತಿರುವೆವೆ ಯಾದರೂ ಕೆಲವು ಸಂಕಟಗಳು ಮುಂದುವರಿಯುತ್ತಾ ಇವೆ. ಇದಕ್ಕೆ ಕಾರಣವೇನೆಂದರೆ, ಸಂಕಟಗಳಿಗೆ ಪರಿಹಾರ ನೀಡಿ ಶಾಂತಿಯನ್ನು ಸ್ಥಾಪಿಸಿದುದು ಪ್ರಾಮಾಣಿಕವಾದ ಅಸ್ತಿಭಾರದ ಮೇಲೆ ಅಲ್ಲ. ಶಾಂತಿ ಸ್ಥಾಪನೆಗೆ ಪ್ರಾಮಾಣಿಕತೆ ಅವಶ್ಯಕ. ಅದು ಹೃದಯದಿಂದ ಮೂಡಿ ಬರುತ್ತದೆ.

ಇಂದಿನ ಲೋಕದಲ್ಲಿ ಧಾರ್ಮಿಕ ಯುದ್ಧಗಳು ನಡೆಯುವುದಿಲ್ಲವಾದರೂ ಪರಸ್ಪರ ಹಗೆತನ ಮತ್ತು ದ್ವೇಷ ಮುಂದುವರಿಯುತ್ತಿದೆ. ಶಸ್ತ್ರರಹಿತವಾದ ಈ ಯುದ್ಧದ ದುರದೃಷ್ಟಕರವಾದ ಒಂದು ಪರಿಣಾಮವು ನಾನು ಇದರ ಮೊದಲು ಪ್ರಸ್ತಾಪಿಸಿದ ಹಾಗೆ ಕೆಲವು ದೇಶಗಳಲ್ಲಿ ಕಾಣಿಸಿ ಕೊಂಡಿದೆ. ಮುಸ್ಲಿಮರ ಕೆಲವು ಹಾನಿಕಾರಕವಲ್ಲದ ಸಂಪ್ರದಾಯ ಗಳು ನಿಯಂತ್ರಿಸಲ್ಪಟ್ಟಿವೆ ಅಥವಾ ನಿಷಿದ್ಧ ಗೊಳಿಸಲ್ಪಟ್ಟಿವೆ. ಈ ಕ್ರಮದ ಬಗ್ಗೆ, ಅವುಗಳಿಗೆ ಧಾರ್ಮಿಕ ಕಾರಣಗಳಲ್ಲವೆಂದೂ ಮುಸ್ಲಿಮರನ್ನು ಸಮಾಜದಲ್ಲಿ ಸೇರ್ಪಡಿಸುವುದಕ್ಕೆ ಹೀಗೆ ಮಾಡಲಾಗುತ್ತಿದೆ ಎಂದೂ ವಾದಿಸಲಾಗುತ್ತಿದೆ.

ಇದರ ಬಗ್ಗೆ ದೀರ್ಘ ಚರ್ಚೆ ಮಾಡಲಿಕ್ಕಿದೆ. ಆ ವಿಷಯ ವನ್ನು ಈಗ ನಾನು ಚರ್ಚೆಗೆ ಎತ್ತಿಕೊಳ್ಳುವುದಿಲ್ಲ. ಆದರೆ ಈ ಕ್ರಮಗಳಿಗೆ ಪ್ರತಿಕ್ರಿಯೆಯಾಗಿ ಕೆಲವು ಮುಸ್ಲಿಮರು ಕೈಗೊಂಡ ಚಟುವಟಿಕೆಗಳು ಇಸ್ಲಾಮಿನ ಉಪದೇಶಗಳಿಗೆ ವಿರುದ್ಧವಾಗಿವೆ. ಎರಡು ಕಡೆಯ ಜನರೂ ಪ್ರಾಮಾಣಿತೆಯಿಂದ ವರ್ತಿಸಲಿಲ್ಲ.

ಪ್ರಾಮಾಣಿಕ ವರ್ತನೆಯ ಮೂಲಕ ಪರಸ್ಪರ ಪ್ರೀತಿ ವರ್ಧಿಸುತ್ತದೆ. ಪ್ರಾಮಾಣಿಕತೆಯಿಂದ ವರ್ತಿಸುವುದಾದರೆ, ನಿಮ್ಮ ಹೃದಯದಲ್ಲಿ ನೀವು ಹೊಂದಿರುವ ಭಾವನೆ ಮತ್ತು ನೀವು ಮಾಡುವ ಕೆಲಸಗಳಲ್ಲಿ ವ್ಯತ್ಯಾಸವಿರುವುದಿಲ್ಲ. ಒಬ್ಬ ಮನುಷ್ಯನು ತನ್ನ ಬಗ್ಗೆ ತಪ್ಪು ಪರಿಚಯ ನೀಡಬಾರದು. ರಾಷ್ಟ್ರೀಯ ಮಟ್ಟದಲ್ಲೂ ಅಂತರ್‍ರಾಷ್ಟ್ರೀಯ ಮಟ್ಟದಲ್ಲೂ ಸತ್ಯದ ಉನ್ನತ ಮಾನದಂಡವನ್ನು ಪಾಲಿಸುತ್ತಿರುವುದಾಗಿ ಕಂಡು ಬರುವುದಿಲ್ಲ. ಇಂದು ಲೋಕದ ಕೆಲವು ದೇಶಗಳಲ್ಲಿ ಆಂತರಿಕ ಮತ್ತು ರಾಜಕೀಯ ಅಶಾಂತಿಯು ಕಂಡುಬರುತ್ತದೆ. ಆ ದೇಶಗಳ ಜನರು ತಮ್ಮ ಸರಕಾರ, ತಮ್ಮ ಮುಂದಾಳುಗಳು ಮತ್ತು ಆಡಳಿತೆಗಾರರನ್ನು ಎದುರಿಸುತ್ತಿದ್ದಾರೆ. ನಾವು ಇಂತಹ ಉದಾಹರಣೆಗಳನ್ನು ಅರಬ್, ಗಲ್ಫ್, ಉತ್ತರ ಆಫ್ರಿಕಾ ಮತ್ತು ಪಶ್ಚಿಮ ಆಫ್ರಿಕದ ದೇಶಗಳಲ್ಲಿ ಕಾಣುತ್ತಿದ್ದೇವೆ. ಅಲ್ಲಿ ಆಂತರಿಕ ಕಲಹಗಳನ್ನು ಮತ್ತು ಗಲಭೆಗಳನ್ನು ಕಾಣುತ್ತಿದ್ದೇವೆ.

ಇವುಗಳು ಅಂತರ್‍ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಬೆದರಿಕೆಯೊಡ್ಡಬಹುದಾದ ಕಾರಣ ಲೋಕ ರಾಷ್ಟ್ರಗಳು ಇವುಗಳ ಬಗ್ಗೆ ಬಹಳ ಆತಂಕಗೊಂಡಿವೆ. ಅಂತರ್‍ರಾಷ್ಟ್ರೀಯ ಸಂಸ್ಥೆಗಳು ಸರಕಾರಗಳ ಮೇಲೆ ಒತ್ತಡ ಹೇರಿ, ಜನರನ್ನು ಹಿಂಸಿಸದೆ ಮಾನವೀಯ ಮೌಲ್ಯಗಳನ್ನು ಕಾಪಾಡಲು ಮತ್ತು ಜನರಿಗೆ ಅವರ ಹಕ್ಕುಗಳನ್ನು ನೀಡಲು ಒತ್ತಾಯಿಸುತ್ತವೆ. ಆದರೆ ನೀವು ಒಂದು ದೇಶದ ಜನರನ್ನು, ಅವರ ಸರಕಾರದಿಂದ ದೌರ್ಜನ್ಯ ಗಳಿಂದ ರಕ್ಷಿಸಲು ಸತ್ಯಸಂಧವಾಗಿ ಬಯಸುವಿರಾದರೆ ಹಿಂಸಾತ್ಮಕ ಚಳುವಳಿಗಳಲ್ಲಿ ಭಾಗವಹಿಸಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಗೆ ಹಾನಿಉಂಟುಮಾಡುವ ಕೃತ್ಯಗಳನ್ನು ಮಾಡ ಬಾರದೆಂದು ಸಹ ನೀವು ಆ ದೇಶದ ಜನತೆಗೆ ಉಪದೇಶ ನೀಡಬೇಕು. ಶಾಂತಿ ಸ್ಥಾಪಿತವಾದ ನಂತರ ಈ ತತ್ವವನ್ನು ಅನುಸರಿಸಿ ಅದನ್ನು ಜಾರಿಯಲ್ಲಿರುವಂತೆ ಮಾಡಬೇಕು. ಆದರೆ ನಿಜವಾದ ಸದ್ಗುಣ ಮತ್ತು ಪ್ರಾಮಾಣಿಕತೆಯನ್ನು ತೋರ್ಪಡಿಸಲಾಗುತ್ತಿಲ್ಲ. ಈ ಕಾರಣದಿಂದ ಎರಡು ಬೇರೆ ಬೇರೆ ದೇಶಗಳಲ್ಲಿ ಒಂದೇ ರೀತಿಯ ಪರಿಸ್ಥಿತಿಗಳಿದ್ದರೂ ಅಂತರ್‍ರಾಷ್ಟ್ರೀಯ ಸಮುದಾಯ

ಒಂದು ದೇಶದ ಸರಕಾರಕ್ಕೆ ಬೆಂಬಲ ನೀಡುವಾಗ ಇನ್ನೊಂದು ದೇಶದ ಸೈನ್ಯದ ಮೇಲೆ ಜನರನ್ನು ರಕ್ಷಿಸುವ ನೆವನದಲ್ಲಿ ಕ್ಷಿಪಣಿಗಳಿಂದ ಆಕ್ರಮಣ ನಡೆಸುತ್ತಿದೆ.

ಕೆಲವು ದಿವಸಗಳ ಹಿಂದೆ ಬಿ.ಬಿ.ಸಿ.ಯ ಒಬ್ಬ ವರದಿಗಾರ ಅಮೇರಿಕದ ವೈಟ್ ಹೌಸ್ ಪ್ರತಿನಿಧಿಯನ್ನು ಪ್ರಚಲಿತ ಜಾಗತಿಕ ಸ್ಥಿತಿಯ ಬಗ್ಗೆ ಸಂದರ್ಶನ ನಡೆಸಿದನು. ಬಿ.ಬಿ.ಸಿ. ವರದಿಗಾರ ಹೀಗೆ ಕೇಳಿದನು: ಬಹರೈನ್, ಯಮನ್ ಮತ್ತು ಇತರ ದೇಶಗಳೊಂದಿಗೆ ನಿಮ್ಮ ವರ್ತನೆಗೆ ಹೋಲಿಸಿ ನೋಡುವಾಗ ನೀವು ಲಿಬಿಯಾದ ವಿರುದ್ಧ ಬೇರೆಯೇ ರೀತಿ ವರ್ತಿಸಲು ಕಾರಣವೇನು? ವೈಟ್ ಹೌಸ್ ವಕ್ತಾರನಿಗೆ ಈ ಪ್ರಶ್ನೆಗೆ ಸಮಂಜಸ ಉತ್ತರ ನೀಡಲು ಸಾಧ್ಯವಾಗಲಿಲ್ಲ.

ಸ್ವಾರ್ಥ ಹಿತಾಸಕ್ತಿಗಳಿಗೆ ಪ್ರಾಮಾಣಿಕತೆ ಮತ್ತು ನ್ಯಾಯ ಪಾಲನೆಯ ಮೇಲೆ ಯಾವಾಗಲೂ ಆದ್ಯತೆ ನೀಡಲಾಗುತ್ತಿದೆ ಎಂದು ನಿಮಗೂ ನಮಗೂ ಚೆನ್ನಾಗಿ ತಿಳಿದಿದೆ. ಲೋಕದ ಶಕ್ತಿಶಾಲಿ ದೇಶಗಳು ಬೇರೆ ಕೆಲವು ದೇಶಗಳ ಸಂಪತ್ತು ಮತ್ತು ಸಂಪನ್ಮೂಲಗಳಿಗೆ ಸುಲಭವಾಗಿ ತಲಪಲು ಬಯಸುತ್ತವೆ ಮತ್ತು ಈ ಸಂಪನ್ಮೂಲಗಳಿಗೆ ಸಂಪೂರ್ಣ ಸ್ವಾಧೀನತೆಯನ್ನು ಹೊಂದಲು ಇತರ ದೇಶಗಳೊಂದಿಗೆ ಸ್ಪರ್ಧಿಸುವುದನ್ನು ತಪ್ಪಿಸಿಕೊಳ್ಳಲು ಬಯಸುತ್ತವೆ. ಆದುದರಿಂದ ದೇಶದ ಜನರಿಗೆ ಸಹಾಯ ನೀಡುವ ನೆವನದಿಂದ ಅಥವಾ ಲೋಕದಲ್ಲಿ ಶಾಂತಿ ಸ್ಥಾಪಿಸುವ ನೆವನದಿಂದ ತೀರ್ಮಾನಗಳು ಜಾರಿಗೊಳಿಸಲ್ಪಡುತ್ತವೆ.

ಎರಡು ಶಕ್ತಿರಾಷ್ಟ್ರಗಳ ಅಧೀನದಲ್ಲಿ ದೇಶಗಳ ಎರಡು ಗುಂಪುಗಳಿದ್ದುವು. ಆ ಎರಡು ಗುಂಪುಗಳು ಒಡೆದು ಹೋಗಿವೆ ಎಂದು ತೋರುತ್ತಿತ್ತು. ಆದರೆ ವಾಸ್ತವಿಕವಾಗಿ ಅವು ಎಂದೂ ಒಡೆದು ಹೋಗಿರಲಿಲ್ಲ. ಆದರೆ ಅವುಗಳು ನಿಶ್ಚಲಾವಸ್ಥೆಯಲ್ಲಿದ್ದುವು. ಇಂದು ಲೋಕದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಈ ಎರಡು ಗುಂಪುಗಳು ಪುನಃ ಸ್ಥಾಪಿತವಾಗುತ್ತಿರುವುದು ಸ್ಪಷ್ಟವಾಗುತ್ತಾ ಇದೆ. ವಾಸ್ತವಿಕವಾಗಿ ಈ ದೇಶಗಳ ರಾಜಕೀಯ ಅಸ್ಥಿರತೆಗೆ ಮುಖ್ಯ ಕಾರಣವಾಗಿರುವುದು ಪ್ರಚಲಿತ ಅಂತರ್ರಾಷ್ಟ್ರೀಯ ಆರ್ಥಿಕ ಸ್ಥಿತಿಯಾಗಿದೆ. ಅದು ಇನ್ನೊಂದು ಮಹಾಯುದ್ಧದ ಕಡೆಗೆ ಎಳೆದೊಯ್ಯುತ್ತಿದೆ.

ಈ ದೇಶಗಳು ಸತ್ಯಸಂಧವಾಗಿ ವರ್ತಿಸುವುದಾದರೆ ಅವರು ಪರಸ್ಪರ ನ್ಯಾಯಬದ್ಧವಾದ ರೀತಿಯಲ್ಲಿ ಲಾಭವನ್ನು ಗಳಿಸಬಹುದಾಗಿದೆ. ಸರಿಯಾದ ಕೈಗಾರಿಕೆ ಮತ್ತು ಆರ್ಥಿಕ ಒಡಂಬಡಿಕೆಗಳನ್ನು ಒಳ್ಳೆಯ ರೀತಿಯಲ್ಲಿ ವ್ಯವಹರಿಸಿ ಮಾಡಿಕೊಳ್ಳಬಹುದಾಗಿದೆ. ಅವರು ಒಬ್ಬರಿನ್ನೊಬ್ಬರ ಸಂಪನ್ಮೂಲಗಳಿಂದ ಅನ್ಯಾಯಕರವಾದ ರೀತಿಯಲ್ಲಿ ಲಾಭ ಪಡೆಯಲು ಪ್ರಯತ್ನಿಸಬಾರದು. ಅವರು ಒಟ್ಟಿಗೆ ಸೇರಿ ಪರಸ್ಪರ ಸಹಾಯ ಮಾಡಲು ಪ್ರಯತ್ನಿಸಬೇಕು. ಪವಿತ್ರ ಖುರ್‌ಆನ್ ಅನ್ಯದೇಶಗಳ ಮತ್ತು ಅನ್ಯ ಜನರ ಸಂಪತ್ತಿನ ಬಗ್ಗೆ ಅಧ್ಯಾಯ 10 ವಚನ 132ರಲ್ಲಿ ಹೀಗೆ ಹೇಳುತ್ತದೆ: **"ಅವರ ಪೈಕಿ ಕೆಲವರಿಗೆ ನಾವು ಇಹಲೋಕ ಜೀವನದ ವೈಭವಗಳನ್ನು ನೀಡಿ ಸುಖ ಸೌಕರ್ಯಗಳನ್ನು ಅನುಭವಿಸುವಂತೆ ಮಾಡಿದುದನ್ನು ನೀನು ಕಣ್ಣೆತ್ತಿ ನೋಡಬೇಡ. ಆ ಮೂಲಕ ಅವರನ್ನು ಪರೀಕ್ಷಿಸಲಿಕ್ಕೋಸ್ಕರ ನಾವು ಅದನ್ನು ನೀಡಿದ್ದೇವೆ. ನಿನ್ನ ಪ್ರಭುವಿನ ಅನುಗ್ರಹ ಅತ್ಯುತ್ತಮವಾದುದೂ ಶಾಶ್ವತವಾದುದೂ ಆಗಿದೆ."**

ಪವಿತ್ರ ಖುರ್‌ಆನ್ ಈ ಆಜ್ಞೆ ನೀಡಿರುವುದು ಏಕೆಂದರೆ ಒಂದು ದೇಶದ ಒಳಗಿನ ಅಸ್ವಸ್ಥತೆ ಮತ್ತು ದೇಶಗಳ ಮಧ್ಯೆ ಇರುವ ದ್ವೇಷ ಮತ್ತು ಶತ್ರುತ್ವಕ್ಕೆ ಮುಖ್ಯ ಕಾರಣ ಪರಸ್ಪರ ಹೊಂದಿರುವ ಸಂಪತ್ತು ಮತ್ತು ಸಂಪನ್ಮೂಲಗಳಾಗಿವೆ. ದುರಾಶೆಯ ಕಾರಣ ಜಗಳಗಳು ಪ್ರಾರಂಭವಾಗುತ್ತವೆ. ಅದರಿಂದ ಘೋರ ಪರಿಣಾಮಗಳು ಉಂಟಾಗುತ್ತವೆ. ಈ ಹಿಂದೆ ನಡೆದ ಜಾಗತಿಕ ಮಹಾಯುದ್ಧಗಳಿಗೆ ಮೂಲ ಕಾರಣ ಇಂತಹ ಹಗೆತನವಾಗಿದೆ.

ಆದುದರಿಂದ ಇಂತಹ ದಾರುಣ ಸಂಭವಗಳು ನಡೆಯುವುದನ್ನು ತಡೆಗಟ್ಟಲು ಮೇಲೆ ನಾನು ಉದ್ಧರಿಸಿದ ಆಜ್ಞೆಯನ್ನು ಪವಿತ್ರ ಖುರ್‌ಆನ್ ನೀಡಿದೆ. ಕಡಿಮೆ ಸಂಪನ್ಮೂಲ ಹೊಂದಿದವರು ಅಸೂಯೆಯಿಂದ ಅನ್ಯರ ಸಂಪತ್ತಿನ ಕಡೆಗೆ ನೋಡಬಾರದೆಂದು ಆಜ್ಞಾಪಿಸಲಾಗಿದೆ. ಹೆಚ್ಚು ಸಂಪತ್ತು ಹೊಂದಿದವರು ಕಡಿಮೆ ಸಂಪತ್ತನ್ನು ಹೊಂದಿದ ಬಡವರಿಗೆ ಸಹಾಯ ಮಾಡಬೇಕೆಂದು ಸಹ ಆಜ್ಞಾಪಿಸಲಾಗಿದೆ. ದೇಶಗಳು ಅನ್ಯರ ಸಂಪನ್ಮೂಲಗಳಿಂದ ನ್ಯಾಯಬದ್ಧವಾದ ರೀತಿಯಲ್ಲಿ ಲಾಭವನ್ನು ಪಡೆಯಬೇಕೆಂಬ ತತ್ವವನ್ನು ಕಲಿಸಲಾಗಿದೆ,

ಈ ವಿಷಯದ ಬಗ್ಗೆ ಸೀಮಿತ ಸಮಯದೊಳಗೆ ಸಂಪೂರ್ಣವಾಗಿ ವಿವರಿಸಲು ಸಾಧ್ಯವಾಗಲಾರದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಇಂದಿನ ಕಾಲದಲ್ಲಿ ಲೋಕದಲ್ಲಿ ದೇಶಗಳೊಳಗೆ ಮತ್ತು ಅಂತರ ರಾಷ್ಟ್ರವಲಯದಲ್ಲಿ ಸಂಭವಿಸುತ್ತಿರುವ ಅಸ್ತವ್ಯಸ್ತತೆಗೆ ಕಾರಣ ಒಂದೇ ಒಂದಾಗಿದೆ - ನ್ಯಾಯ ಪಾಲನೆಯ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯತೆ. ಈ ಕಾರಣದಿಂದ ಆತಂಕ ಮತ್ತು ಅಸ್ವಸ್ಥತೆಗಳು ತಲೆದೋರುತ್ತವೆ.

ಇಲ್ಲಿ ಉದಿಸುವ ಪ್ರಶ್ನೆ ಏನೆಂದರೆ ಲೋಕದ ಇಂದಿನ ಪರಿಸ್ಥಿತಿಯನ್ನು ಸುಧಾರಿಸುವುದು ಹೇಗೆ? ನಾನು ಇದರ ಬಗ್ಗೆ ಉತ್ತರವನ್ನು, ಅಹ್ಮದಿಯಾ ಜಮಾಅತಿನ ಸ್ಥಾಪಕರ ಉಪದೇಶಗಳನ್ನು ಉಲ್ಲೇಖಿಸಿ ನೀಡಿದ್ದೇನೆ. ದೇವನೊಂದಿಗೆ ಸಂಬಂಧ ಸ್ಥಾಪಿಸಬೇಕೆಂದೂ ಸತ್ಯವನ್ನು ಅವಲಂಬಿಸಬೇಕೆಂದೂ ಅವರು ಉಪದೇಶಿಸಿದ್ದರು.

ನಾನು ಬಹಳ ವ್ಯಸನಭರಿತವಾಗಿ ಹೀಗೆ ಹೇಳ ಬಯಸುತ್ತೇನೆ. ಧರ್ಮವನ್ನು ಅವಲಂಬಿಸುವವರೆಂದು ಹೇಳಿಕೊಳ್ಳುತ್ತಿರುವ ಕೆಲವರು ಎಂದರೆ ತಾವು ಇಸ್ಲಾಮ್ ಧರ್ಮದ ಪ್ರತಿನಿಧಿಗಳೆಂದು ವಾದಿಸುವವರು ವಾಸ್ತವಿಕವಾಗಿ ಮತಭ್ರಾಂತಿಯನ್ನು ಹರಡುತ್ತಾ ಇದ್ದಾರೆ.

ಹೀಗಿದ್ದರೂ ದೇವನೊಂದಿಗೆ ಸಂಬಂಧ ಸ್ಥಾಪಿಸುವುದು ಪರಿಹಾರ ಮಾರ್ಗವೆಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಅಹ್ಮದಿಯಾ ಜಮಾಅತ್ ಹೀಗೆ ಸ್ಪಷ್ಟಪಡಿಸಲು ಬಯಸುತ್ತದೆ: ನಾವು ಶಾಂತಿಗೋಸ್ಕರ ಘೋಷಣೆಗಳನ್ನು ಕೂಗುವುದಕ್ಕೆ ನಮ್ಮ ಚಟುವಟಿಕೆಗಳನ್ನು ಸೀಮಿತಗೊಳಿಸುವುದಿಲ್ಲ. ನಾವು ಸಹಿಷ್ಣುತೆಗೋಸ್ಕರ, ಶಾಂತಿ ಮತ್ತು ಸಹನೆಯನ್ನು ಸ್ಥಾಪಿಸಲಿಕ್ಕೋಸ್ಕರ ಕೃತಿಶೀಲರೂ ಆಗಿದ್ದೇವೆ ಎಂಬುದಕ್ಕೆ ನಮ್ಮೊಂದಿಗೆ ಸಮೀಪ ಸಂಬಂಧ ಸ್ಥಾಪಿಸಿದವರು ಸಾಕ್ಷಿಗಳಾಗಿದ್ದಾರೆ. ಇಸ್ಲಾಮ್ ಧರ್ಮದ ಉಪದೇಶಗಳನ್ನು ಸರಿಯಾದ ರೀತಿಯಲ್ಲಿ ಅನುಸರಿಸಲು ದೇವನ ಪ್ರೀತಿಯನ್ನು ಗಳಿಸುವುದಕ್ಕೆ ನಾವು ಆದ್ಯತೆ ನೀಡುತ್ತೇವೆ.

ನಮ್ಮ ಸಂಘಟನೆಗೆ ಮಾನಸಿಕ ನೋವುಂಟಾದಾಗ ನಾವು ಸಹನೆಯಿಂದಲೂ ಸಹಿಷ್ಣುತೆಯಿಂದಲೂ ವರ್ತಿಸುತ್ತೇವೆ. ನಮ್ಮ ನಾಗರಿಕ ಹಕ್ಕುಗಳಿಂದ ನಮ್ಮನ್ನು ವಂಚಿತರನ್ನಾಗಿ ಮಾಡಿದಾಗ ನಾವು ಸಹನೆಯಿಂದಲೂ ಸಹಿಷ್ಣುತೆಯಿಂದಲೂ ವರ್ತಿಸಿದೆವು. ಉದ್ದೇಶಪೂರ್ವಕವಾಗಿ ನಮಗೆ ಆರ್ಥಿಕ ಹಾನಿಯನ್ನು ಉಂಟುಮಾಡಿದಾಗ ನಾವು ಸಹನೆಯಿಂದಲೂ ಸಹಿಷ್ಣುತೆಯಿಂದಲೂ ವರ್ತಿಸಿದೆವು. ನಮ್ಮ ಸ್ವತ್ತುಗಳು ಮತ್ತು ಸಂಪತ್ತು ಲೂಟಿ ಮಾಡಲ್ಪಟ್ಟಾಗ ಅಥವಾ ನಾಶಗೊಳಿಸಲ್ಪಟ್ಟಾಗ ನಾವು ಸಹನೆಯಿಂದಲೂ ಸಹಿಷ್ಣುತೆಯಿಂದಲೂ ವರ್ತಿಸಿದೆವು. ನಮ್ಮ ಜನರ ಜೀವಗಳಿಗೆ ಹಾನಿಯನ್ನುಂಟುಮಾಡಿದಾಗಲೂ ನಾವು ಸಹನೆಯಿಂದಲೂ ಸಹಿಷ್ಣುತೆಯಿಂದಲೂ ವರ್ತಿಸಿದೆವು.

ಪಾಕಿಸ್ತಾನದಲ್ಲಿ ನಮ್ಮ ಧರ್ಮವನ್ನು ಅನುಷ್ಠಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಹೀಗಿದ್ದರೂ ನಾವು ಯಾವುದೇ ಶಾಂತಿಭಂಗ ಉಂಟುಮಾಡುವುದಿಲ್ಲ. ಕಳೆದ ವರ್ಷ ಮೇ ತಿಂಗಳಿನಲ್ಲಿ ಶುಕ್ರವಾರದ ನಮಾಝ್ ಅನುಷ್ಠಿಸುತ್ತಿದ್ದ 86 ಅಹ್ಮದೀ ಮುಸ್ಲಿಮರನ್ನು ಕಗ್ಗೊಲೆ ನಡೆಸಿ ಹುತಾತ್ಮರನ್ನಾಗಿ ಮಾಡಲಾಯಿತು. ನಾವು ಈ ದಾರುಣ ಹತ್ಯೆಯನ್ನು ಸಹನೆಯಿಂದ ಸಹಿಸಿದೆವು. ಇಂಡೋನೇಶಿಯಾದಲ್ಲಿ ಅಹ್ಮದೀ ಮುಸ್ಲಿಮರನ್ನು ಇತ್ತೀಚೆಗೆ ಕ್ರೂರವೂ ಬರ್ಬರವೂ ಆದ ರೀತಿಯಲ್ಲಿ ಕೊಂದು ಹುತಾತ್ಮರನ್ನಾಗಿ ಮಾಡಲಾಯಿತು. ನಾವು ಹಿಂಸಾತ್ಮಕವಾಗಿ ಪ್ರತಿಭಟಿಸಲಿಲ್ಲ. ನಾವು ರಹಸ್ಯವಾಗಿ ಆಕ್ರಮಣ ನಡೆಸಲೂ ಇಲ್ಲ.

ಪಾಕಿಸ್ತಾನ, ಇಂಡೋನೇಶಿಯಾ ಮತ್ತು ಇತರ ದೇಶಗಳಲ್ಲಿ ವಾಸಿಸುವ ಅಹ್ಮದಿಯರು ಆ ದೇಶಗಳ ನಾಗರಿಕರಾಗಿದ್ದಾರೆ. ಅಹ್ಮದಿಯರು ಸ್ಥಳೀಯ ಜನರಿಗೆ ಮತ್ತು ಗುಂಪುಗಳಿಗೆ ಸೇರಿದವರೂ ಆಗಿದ್ದಾರೆ. ಭೀಕರ ಕೃತ್ಯಗಳು ನಡೆಯುತ್ತಿರುವ ಸಮುದಾಯದಿಂದಲೇ ಅಹ್ಮದಿಯರೂ ಬಂದಿರುತ್ತಾರೆ. ನಮ್ಮ ಸಮುದಾಯದ ಜನರು ಇಚ್ಛಿಸುತ್ತಿದ್ದರೆ ಬಹಿರಂಗವಾಗಿ ಅಲ್ಲವಾದರೂ ರಹಸ್ಯವಾಗಿ ವಿಧ್ವಂಸಕ ಕೃತ್ಯಗಳನ್ನು ನಡೆಸಬಹುದಾಗಿತ್ತು. ಆದರೆ ನಾವು ಎಂದೂ ಉಗ್ರ ಪ್ರತಿಕ್ರಿಯೆ ನೀಡಿರಲಿಲ್ಲ. ನಾವು ಎಂದೂ ಯಾವುದೇ ರೀತಿಯಲ್ಲಿ ತಪ್ಪು ಪ್ರತಿಕ್ರಿಯೆ ನೀಡಲಿಲ್ಲ. ಏಕೆಂದರೆ ಸಹನೆ ಮತ್ತು ಸಹಿಷ್ಣುತೆಯಿಂದ ವರ್ತಿಸಲು ನಮಗೆ ಉಪದೇಶ ನೀಡಲಾಗಿದೆ.

"ನೀವು ನಿಯಮವನ್ನು ನಿಮ್ಮ ಕೈಗೆತ್ತಿಕೊಳ್ಳಬಾರದು. ನೀವು ನಿಮ್ಮ ದೇಶದ ಹಿತಕ್ಕಾಗಿ ಉತ್ತಮ ರೀತಿಯಲ್ಲಿ ವರ್ತಿಸಬೇಕು. ಯಾವಾಗಲೂ ದೇಶದಲ್ಲಿ ಗಲಭೆಗೊಂದಲಗಳನ್ನು ಉಂಟುಮಾಡಬಾರದು. ನೀವು ನಿಮ್ಮ ದೇಶದ ಬಗ್ಗೆ ನಿಜವಾದ ಪ್ರೀತಿಯನ್ನು ಹೊಂದಿರುವುದಾದರೆ ಹೀಗೆ ವರ್ತಿಸಬೇಕು" ಎಂದು ಇಸ್ಲಾಮ್ ಧರ್ಮವು ನಮಗೆ ನೀಡಿದ ಉಪದೇಶವನ್ನು ನಾವು ಅನುಸರಿಸುತ್ತಿದ್ದೇವೆ.

ಅಹ್ಮದೀ ಮುಸ್ಲಿಮರು ಲೋಕದಲ್ಲಿ ಎಲ್ಲಿ ವಾಸಿಸುತ್ತಿದ್ದರೂ ಏಶಿಯಾದಲ್ಲಿ, ಆಫ್ರಿಕದಲ್ಲಿ, ಅರಬ್‌ದೇಶದಲ್ಲಿ, ಯುರೋಪಿನಲ್ಲಿ, ಅಮೇರಿಕದಲ್ಲಿ ವಾಸಿಸುತ್ತಿರುವವರಾದರೂ ಅವರೆಲ್ಲರ ಸ್ವಭಾವ ಗುಣಗಳು ಒಂದೇ ರೀತಿ ಇರುತ್ತವೆ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕೋಸ್ಕರ ಅವರು ಯಾವಾಗಲೂ ಎಲ್ಲಾ ರೀತಿಯ ಶಾಂತಿಭಂಗ ಕೃತ್ಯಗಳಿಂದ ದೂರವಿರುತ್ತಾರೆ. ಈ ರೀತಿಯ ನಡವಳಿಕೆ ಅರಾಜಕತೆಯಿಂದ ಲೋಕವನ್ನು ಸಂರಕ್ಷಿಸುವುದು ಮಾತ್ರವಲ್ಲ, ಅದು ಜಾಗತಿಕ ಶಾಂತಿ ಸ್ಥಾಪನೆಗೆ ಖಾತರಿ ಯಾಗುವುದು.

ಇಂದಿನ ಕಾಲಘಟ್ಟದಲ್ಲಿ ಸೃಷ್ಟಿಕರ್ತನನ್ನು ಗುರುತಿಸಿ ಅವನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸಿ ಕೊಡುವುದು ಅತ್ಯಾವಶ್ಯಕ ಎಂಬ ಮನೋಭಾವವನ್ನು ಎಲ್ಲಾ ಹಂತಗಳಲ್ಲೂ ಹೊಂದುವುದು ಲೋಕಕ್ಕೆ ಆವಶ್ಯಕವಾದುದಾಗಿದೆ. ಲೋಕದ ಜನರು ತಮ್ಮ ಹಕ್ಕುಗಳ ಬಗ್ಗೆ ಕಾಳಜಿ ಹೊಂದುವುದರೊಂದಿಗೆ ತಮ್ಮ ಕರ್ತವ್ಯಗಳ ಬಗ್ಗೆ ಸಹ ಕಾಳಜಿ ಹೊಂದಿ ಅನ್ಯರ ಹಿತಕ್ಕಾಗಿ ಕಾರ್ಯೋನ್ಮುಖರಾಗಬೇಕು. ಈ ತತ್ವವನ್ನು ವೈಯಕ್ತಿಕ ನೆಲೆಯಲ್ಲೂ ರಾಷ್ಟ್ರೀಯ ನೆಲಯಲ್ಲೂ ಅಂತರ್ರಾಷ್ಟ್ರೀಯ ನೆಲೆಯಲ್ಲೂ ಪಾಲಿಸಬೇಕು. ರಾಷ್ಟ್ರೀಯ ನಾಯಕರು ಈ ತತ್ವವನ್ನು ಅಂಗೀಕರಿಸಬೇಕು ಮತ್ತು ಲೋಕದ ಪ್ರಮುಖ ರಾಷ್ಟ್ರಗಳು ಸಹ ಇದರ ಪಾಲನೆ ಮಾಡಬೇಕು. ಈ ತತ್ವವನ್ನು ಪರಿಗಣಿಸದೆ ಶಾಂತಿಗೋಸ್ಕರ ಮಾಡುವ ಪ್ರಯತ್ನವು ತಾತ್ಕಾಲಿಕ ಪ್ರಭಾವ ಉಂಟುಮಾಡುವುದು. ಅದು ಶಾಶ್ವತ ಶಾಂತಿಯ ಖಾತರಿ ನೀಡಲಾರದು.

ನೀವು ಮತ್ತು ನಾವು ಆಶಿಸುವ ಜಾಗತಿಕ ಶಾಂತಿ ಲೋಕದಲ್ಲಿ ಬೇಗನೆ ಸ್ಥಾಪಿತವಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಕೊನೆಯದಾಗಿ, ಇಲ್ಲಿಗೆ ಆಗಮಿಸಿ ಈ ಸಮಾರಂಭವನ್ನು ಚಂದಗಾಣಿಸಿ ನನ್ನ ಭಾಷಣವನ್ನು ಆಲಿಸಿದ ನಿಮಗೆಲ್ಲರಿಗೂ ನಾನು ಹೃತ್ಪೂರ್ವಕವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಿಮಗೆ ಕೃತಜ್ಞತೆಗಳು.

**(The Review of Religions - May 2011 ಸಂಚಿಕೆಯಿಂದ)**

**ಭಾಷಾಂತರ : ಎಂ. ಉಬೈದುಲ್ಲಾ**

*(.....................5ನೇ ಪುಟದಿಂದ)*

ಮುಸ್ಲಿಂ ಆಡಳಿತಾಧಿಕಾರಿಗಳ ವಿರುದ್ಧ ಮುಸ್ಲಿಮರು ನ್ಯಾಯಕ್ಕೆ ಯಾಚಿಸುತ್ತಾ ಹೋರಾಡುತ್ತಾರೆ. ಆಡಳಿತಾಧಿಕಾರಿಗಳೂ ಜನಸಾಮಾನ್ಯರೂ ಖುರ್‌ಆನಿನ ತತ್ವಗಳನ್ನು ಮನವರಿಕೆ ಮಾಡಬೇಕಾಗಿದೆ. ಅಹ್ಮದಿಯರು ಈ ಗಲಭೆಗೊಂದಲಗಳಿಂದೆಲ್ಲ ಬಿಟ್ಟು ನಿಂತು ಪ್ರಾರ್ಥನೆ ಮಾಡಿರಿ.

ಆಕ್ರಮಣಗಳ ಮೂಲಕ ದುಷ್ಟ ಆಡಳಿತಾಧಿಕಾರಿಯನ್ನು ಮೂಲೋತ್ಪಾಟನೆ ಮಾಡಿದರೆ ತಾತ್ಕಾಲಿಕವಾಗಿ ಶಾಂತಿವೇರ್ಪಡಬಹುದು. ಆದರೆ ಪುನಃ ದುಷ್ಟ ಆಡಳಿತಾಧಿಕಾರಿಗಳು ಉದಿಸುವರು. ಒಬ್ಬ ದುಷ್ಟ ಹೋದರೆ ಇನ್ನೊಬ್ಬ ದುಷ್ಟ ರಂಗಪ್ರವೇಶ ಮಾಡುವನು. ದುಷ್ಟ ಆಡಳಿತಾಧಿಕಾರಿಗಳಿಂದ ಅಲ್ಲಾಹು ನಮಗೆ ವಿಮೋಚನೆ ನೀಡಲಿ. ಆಡಳಿತಾಧಿಕಾರಿಗಳೂ ಜನಸಾಮಾನ್ಯರೂ ತಮ್ಮ ಕರ್ತವ್ಯಗಳನ್ನು ನೆರವೇರಿಸುವವರಾಗಲಿ.

*

**(ಅನುವಾದ : ಮುಹಮ್ಮದ್ ಯೂಸುಫ್)**

# ಪವಿತ್ರ ಖುರ್‌ಆನ್ ವಿರುದ್ಧ ಪಾದರಿಯ ಆಕ್ಷೇಪಗಳಿಗೆ ಉತ್ತರ - 2

*ಲೇಖಕ ಮೌಲವಿ ಅಬ್ದುಲ್ ಮೂಮಿನ್ ರಾಶಿದ್*
*ಅಧ್ಯಾಪಕರು, ಜಾಮಿಅ ಅಹ್ಮದಿಯಾ, ಖಾದಿಯಾನ್*

**ಅಮೇರಿಕದ ಫ್ಲೋರಿಡಾದ ಡವ್ (Dove) ಚರ್ಚ್ ಪಾದರಿ ಟೆರ್ರಿ ಜೋನ್ಸ್ ಆಕ್ಷೇಪ ಸಂಖ್ಯೆ - 4 :**

ಮುಹಮ್ಮದ್ (ಪೈಗಂಬರ್) ಬಗ್ಗೆ ಮೊದಲನೆಯ ಬಾರಿ ಬರೆದ ದಾಖಲೆಗಳು ಅವರು ಮೃತರಾಗಿ 120 ವರ್ಷ ದಾಟಿಹೋದ ನಂತರ ಬರೆಯಲಾಯಿತು. ಇಸ್ಲಾಮಿಗೆ ಸಂಬಂಧಿಸಿದ ಪವಿತ್ರ ಖುರ್‌ಆನ್, ಹದೀಸ್, ಜೀವನ ಚರಿತ್ರೆ, ವರದಿಗಳು ಮತ್ತು ಚರಿತ್ರೆ ಗಲಿಬಿಲಿ ಉಂಟುಮಾಡುವಂತಹದ್ದೂ ವೈರುದ್ಧ್ಯಭರಿತವೂ ಪರಸ್ಪರ ಸಂಬಂಧವಿಲ್ಲದವೂ ಆಗಿವೆ. ಮುಹಮ್ಮದ್ (ಪೈಗಂಬರ್) ಜನಿಸಿದ ಬಗ್ಗೆ ನಮ್ಮ ಬಳಿಯಲ್ಲಿ ಯಾವುದೇ ಅಧಿಕೃತ ದಾಖಲೆಗಳಿಲ್ಲ. ಪ್ರಾಯಶಃ ಅವರು ಜನಿಸಿರಲಿಲ್ಲವೋ ಏನೋ? ಹೀಗಿದ್ದರೂ ಮುಸ್ಲಿಮರು ಪ್ರಶ್ನೆ ಕೇಳದೆ ವಿನಾಶಕಾರಿ ಉಪದೇಶಗಳನ್ನು ಅಂಗೀಕರಿಸುತ್ತಾರೆ.

**ಆಕ್ಷೇಪ ಸಂಖ್ಯೆ - 5 :** ಮುಹಮ್ಮದ್ (ಪೈಗಂಬರ್)ರ ಜೀವಿತ ಮತ್ತು ಸಂದೇಶ ಗೌರವಾರ್ಹವಲ್ಲ. ಮಕ್ಕದ ಜೀವಿತದಲ್ಲಿ ಅವರ ಆಸಕ್ತಿ ಸತ್ಯದ ಅನ್ವೇಷಣೆ ಮತ್ತು ಧರ್ಮದ ಕಡೆಗಿತ್ತು. ಆದರೆ ಮದೀನದ ಕಾಲಘಟ್ಟದಲ್ಲಿ ಅವರು ಲೌಕಿಕ ಶಕ್ತಿ ಮತ್ತು ಆಶಾಭಿಲಾಷೆಗಳ ಕೆಟ್ಟ ಪ್ರಭಾವಕ್ಕೆ ಒಳಗಾದರು.

## ಉತ್ತರ

ಪವಿತ್ರ ಖುರ್‌ಆನ್ ಅವತೀರ್ಣಗೊಂಡು 120 ವರ್ಷಗಳ ನಂತರ ಅದನ್ನು ಬರೆದಿಡಲಾಯಿತೆಂದೂ ಅದರಲ್ಲಿ ವೈರುದ್ಧ್ಯಗಳಿವೆ ಎಂದೂ ಹೇಳುವುದು ಸಂಪೂರ್ಣ ಸುಳ್ಳು ಆಕ್ಷೇಪವಾಗಿದೆ. ಪವಿತ್ರ ಖುರ್‌ಆನಿನ ಪ್ರತಿಯೊಂದು ಶಬ್ದ ಮತ್ತು ಪ್ರತಿಯೊಂದು ಅಕ್ಷರ ಅಲ್ಲಾಹನ ವಾಣಿಯಾಗಿದೆ. ಅವು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಸಂದೇಶವಾಣಿಯ ರೂಪದಲ್ಲಿ ಅವತೀರ್ಣಗೊಂಡವು. ಬೈಬಲ್‌ನಲ್ಲಿ, ಆಗಮಿಸಲಿರುವ ಈ ವೈಭವಶಾಲಿ ಪ್ರವಾದಿಯ ಬಗ್ಗೆ ಹೀಗೆ ಹೇಳಲಾಗಿದೆ:

**"ನಿಮ್ಮ ದೇವರಾದ ಕರ್ತನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು (ನಿಮಗೆ) ಏರ್ಪಡಿಸುವನು. ಅವನಿಗೇ ನೀವು ಕಿವಿಗೊಡಬೇಕು." (ಧರ್ಮೋಪದೇಶಕಾಂಡ 18:15)**

ಪುನಃ ಹೀಗೆ ಹೇಳಲಾಗಿದೆ:

**"ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು. ಅವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಗೊಡುವುದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು. ಆದರೆ ಯಾವ ಪ್ರವಾದಿ ನನ್ನಿಂದ ಅಧಿಕಾರ ಹೊಂದದೆ ನಾನು ಪ್ರೇರಣೆ ಮಾಡದ ಮಾತುಗಳನ್ನು ಕರ್ತನ ಮಾತೆಂದು ಹೇಳಿ ಜನರಿಗೆ ತಿಳಿಸುವನೋ ಇಲ್ಲವೆ ಇತರ ದೇವರುಗಳ ಹೆಸರಿನಲ್ಲಿ ಮಾತಾಡುವನೋ ಅವನಿಗೆ ಮರಣ ಶಿಕ್ಷೆಯಾಗಬೇಕೆಂದು ಹೇಳಿದನು." (ಧರ್ಮೋಪದೇಶ ಕಾಂಡ 18:18-20)**

ಪುನಃ ಹೀಗೆ ಬರೆದಿದೆ:

**"ಪ್ರವಾದಿಯು ಹೇಳಿದ ಮಾತು ಕರ್ತನ ಮಾತಲ್ಲವೆಂದು ತಿಳಿದುಕೊಳ್ಳುವುದು ಹೇಗೆ ಅಂದುಕೊಳ್ಳುತ್ತೀರೋ? ಪ್ರವಾದಿಯು ಕರ್ತನ ಮಾತೆಂದು ಹೇಳಿ ಮುಂತಿಳಿಸಿದ ಸಂಗತಿ ನಡೆಯದೆ ಹೋದರೆ ಅವನ ಮಾತು ಕರ್ತನದಲ್ಲವೆಂದು ನೀವು ತಿಳಿದುಕೊಳ್ಳಬೇಕು. ಅವನು ಅಧಿಕಾರವಿಲ್ಲದೆ ಮಾತಾಡಿದನು. ಅವನಿಗೆ ಹೆದರಬಾರದು." (ಧರ್ಮೋಪದೇಶ ಕಾಂಡ 18:21-22)**

ಬೈಬಲಿನ ಮೇಲಿನ ವಚನಗಳಲ್ಲಿ ಈ ಕೆಳಗಿನ ವಿಷಯಗಳು ವಿವರಿಸಲ್ಪಟ್ಟಿವೆ:

1. ಒಬ್ಬ ಪ್ರವಾದಿ ಮೂಸಾ (ಮೋಶೆ) ಪ್ರವಾದಿಯ ಹಾಗೆ ಧರ್ಮಶಾಸ್ತ್ರದೊಂದಿಗೆ ಆಗಮಿಸುವರು.

2. ಈ ಪ್ರವಾದಿಗೆ ದೇವನು ತನ್ನ ವಚನಗಳನ್ನು ಅವತೀರ್ಣಗೊಳಿಸುವನು ಮತ್ತು ಆ ವಚನಗಳನ್ನು ಅವರು ಪುನರುಚ್ಚರಿಸುವರು.

3. ಯಾರು ಆ ಪ್ರವಾದಿಯನ್ನು ನಂಬುವುದಿಲ್ಲವೋ ದೇವನು ಅವನನ್ನು ಶಿಕ್ಷಿಸುವನು.

4. ಪ್ರವಾದಿಯ ಸತ್ಯತೆಗೆ ಇರುವ ಗುರುತಿನ ಚಿಹ್ನೆ ಏನೆಂದರೆ ಪ್ರವಾದಿಯೆಂದು ವಾದಿಸುವವನು ಸುಳ್ಳುಗಾರನಾಗಿದ್ದರೆ ಅವನು ಕೊಲ್ಲಲ್ಪಡುವನು. ಪ್ರವಾದಿ ಎಂದು ವಾದಿಸುವವನು ಕೊಲ್ಲಲ್ಪಡದಿದ್ದರೆ ಅವನು ಸತ್ಯವಾದಿಯಾಗಿರುವನು.

5. ಪ್ರವಾದಿಯ ಸತ್ಯತೆಗೆ ಇರುವ ಇನ್ನೊಂದು ಗುರುತು ಏನೆಂದರೆ, ಪ್ರವಾದಿಯು ದೇವನ ಮಾತೆಂದು ಮುಂಚಿತವಾಗಿ ತಿಳಿಸಿದ ಮಾತುಗಳು ಈಡೇರುವುವು.

ನಾವು ಚರ್ಚ್ ಅಧಿಕಾರಗಳೊಂದಿಗೆ ಮತ್ತು ಇತರ ಕ್ರೈಸ್ತರೊಂದಿಗೆ ಕೇಳಲು ಬಯಸುತ್ತೇವೆ: ಪ್ರವಾದಿ ಮೋಶೆ ಆಗಮಿಸಿ ಮೂರುವರೆ ಸಾವಿರ ವರ್ಷಗಳಿಗಿಂತ ಹೆಚ್ಚು ವರ್ಷಗಳು ದಾಟಿಹೋದವು. ಅವರು ಭವಿಷ್ಯ ನುಡಿದ ಧರ್ಮಶಾಸ್ತ್ರ ಗ್ರಂಥ ಎಲ್ಲಿದೆ? ಯೇಸು ಮಸೀಹ್ ಆಗಮಿಸಿದಾಗ ಯಾವುದೇ ಧರ್ಮಶಾಸ್ತ್ರ ಗ್ರಂಥ ಅವರ ಕೈಯಲ್ಲಿ ಇರಲಿಲ್ಲ. ಅವರು ಹೇಳಿದುದೇನೆಂದರೆ, "ಪ್ರವಾದಿ ಮೋಶೆಯ ಧರ್ಮಶಾಸ್ತ್ರವನ್ನೇ ಜಾರಿಗೊಳಿಸಲು ನಾನು ಆಗಮಿಸಿದ್ದೇನೆ." ಅನಂತರ ಅವರ ಅನುಯಾಯಿಗಳು ಮೋಶೆಯ ಧರ್ಮಶಾಸ್ತ್ರವನ್ನು ಶಾಪಗ್ರಸ್ತವೆಂದು ಘೋಷಿಸಿದರು. ಸುವಾರ್ತೆಯ ಈ ವಚನ ನೋಡಿರಿ:

"ಯಾವನಾದರೂ ನೇಮ ನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ." (ರೋಮಾಪುರದವರಿಗೆ 3:20)

ಧರ್ಮಶಾಸ್ತ್ರವನ್ನು ಪಾಲನೆ ಮಾಡುವುದನ್ನು ಕೊನೆಗೊಳಿಸಲಾಯಿತು. ಯೇಸು ಮಸೀಹರನ್ನು ನಂಬುವುದೇ ಏಕಮಾತ್ರ ದಾರಿ ಎಂದು ಸೂಚಿಸಲಾಯಿತು. ಹಾಗಾದರೆ ಧರ್ಮಶಾಸ್ತ್ರ ತರುವ ಪ್ರವಾದಿ ಮತ್ತು ಪ್ರವಾದಿಗೆ ದೇವನು ತಿಳಿಸುವ ತನ್ನ ವಾಣಿಯ ಬಗ್ಗೆ ಪ್ರವಾದಿ ಮೋಶೆ ಮೂಲಕ ನೀಡಲಾದ ಭವಿಷ್ಯವಾಣಿ ಏನಾಯಿತು?

ನಾವು ಉಚ್ಚಧ್ವನಿಯಲ್ಲಿ ಹೇಳಬಯಸುವುದೇನೆಂದರೆ, ಭವಿಷ್ಯ ನುಡಿಯಲಾದ ಆ ದೇವ ವಾಣಿ ಪವಿತ್ರ ಖುರ್‌ಆನ್ ಆಗಿದೆ. ಅದರ ಸತ್ಯತೆಗೆ ಸಾಕ್ಷಿ ಬೈಬಲಿನ ಹೇಳಿಕೆಯೇ ಆಗಿದೆ. ಪವಿತ್ರ ಖುರ್‌ಆನ್ ದೇವವಾಣಿ ಎಂದೂ ಅದು ದೇವನಿಂದ ಅವತೀರ್ಣವಾಯಿತೆಂದೂ ವಾದಿಸಿದ ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ವಧಿಸಲ್ಪಡಲಿಲ್ಲ. ಇದೇ ಅವರ ಸತ್ಯಕ್ಕೆ ಸಾಕ್ಷ್ಯವಾಗಿದೆ. ದೇವನೇ ಅವರನ್ನು ರಕ್ಷಿಸಿದನು. ಪ್ರವಾದಿ ಸತ್ಯವಂತನಾದರೆ ಕೊಲ್ಲಲ್ಪಡಲಾರ ಎಂದು ಬೈಬಲ್ ಹೇಳಿದೆ. ಇದೇ ರೀತಿ ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ ತಿಳಿಸಲಾಗಿತ್ತು: "ವಲ್ಲಾಹು ಯಅ್‌ಸಿಮುಕ ಮಿನನ್ನಾಸ್" - ಅಂದರೆ, ಅಲ್ಲಾಹನು ಜನರ ಆಕ್ರಮಣಗಳಿಂದ ನಿನ್ನನ್ನು ರಕ್ಷಿಸುವನು. ನಿನ್ನನ್ನು ಕೊಲ್ಲಲು ಅವರಿಗೆ ಸಾಧ್ಯವಾಗಲಾರದು. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ಶತ್ರುಗಳಿಂದ ಕೊಲ್ಲಲ್ಪಡದೆ ಇದ್ದುದರಿಂದ ಬೈಬಲಿನ ಪ್ರಕಾರ ಅವರು ಸತ್ಯವಂತರೆಂದೂ ನೀತಿವಂತರೆಂದೂ ಸಾಬೀತಾಗುತ್ತದೆ. ಅವರಿಗೆ ಅವತೀರ್ಣಗೊಳಿಸಲ್ಪಟ್ಟ ದೇವವಾಣಿ ಈಡೇರುವುದು. ಏಕೆಂದರೆ ಬೈಬಲ್ ಹೇಳುತ್ತದೆ - ದೇವನ ಹೆಸರಿನಲ್ಲಿ ಪ್ರವಾದಿ ಹೇಳಿದುದು ಸಂಪೂರ್ಣವಾಗಿ ಈಡೇರುವುದು ಎಂದು.

ಪವಿತ್ರ ಖುರ್‌ಆನಿನಲ್ಲಿ ಇರುವ ಅನೇಕ ಭವಿಷ್ಯವಾಣಿಗಳು ಕಳೆದ ಹದಿನಾಲ್ಕು ನೂರು ವರ್ಷಗಳಲ್ಲಿ ಈಡೇರುತ್ತಾ ಇವೆ. ಇನ್ನು ಮುಂದೆ ಸಹ ಅದರಲ್ಲಿ ಅಡಕವಾದ ಭವಿಷ್ಯವಾಣಿಗಳು ಈಡೇರುವುವು.

ಪವಿತ್ರ ಖುರ್‌ಆನಿನ ಸಂಕ್ಷಿಪ್ತ ಚರಿತ್ರೆಯನ್ನು ಇನ್ನು ಮುಂದೆ ವಿವರಿಸುತ್ತೇನೆ:

ಹಝ್‌ರತ್ ಮುಹಮ್ಮದ್ ಪೈಗಂಬರರಿಗೆ ಅವತೀರ್ಣಗೊಳ್ಳುತ್ತಿದ್ದ ದೇವವಾಣಿಯನ್ನು ಅವರು ಅವತೀರ್ಣಗೊಂಡ ಕೂಡಲೆ ಬರೆಯಿಸುತ್ತಿದ್ದರು ಮತ್ತು ಅಲ್ಲಾಹನು ಅವರಿಗೆ ನಿಡುತ್ತಿದ್ದ ಆದೇಶಗಳ ಪ್ರಕಾರ ಅವುಗಳನ್ನು ಕ್ರಮಬದ್ಧವಾಗಿ ಜೋಡಿಸುತ್ತಿದ್ದರು. ಹಝ್‌ರತ್ ಮುಹಮ್ಮದ್ ಪೈಗಂಬರ್(ಸ) ನಿಧನ ಹೊಂದಿದ ನಂತರ ಪ್ರಥಮ ಖಲೀಫ ಹಝುರತ್ ಅಬೂಬಕರ್(ರ) ಅವರು ಹಝ್‌ರತ್ ಉಮರ್‌ರ(ರ) ಸಲಹೆ ಮೇರೆಗೆ ಹಝ್‌ರತ್ ಮುಹಮ್ಮದ್ ಪೈಗಂಬರರ ಬರಹಗಾರ ಹಝ್‌ರತ್ ಝೈದ್ ಬಿನ್ ಸಾಬಿತ್ ಅನ್‌ಸಾರಿಯವರಿಗೆ ಹೀಗೆ ಆದೇಶ ನೀಡಿದರು: ಪವಿತ್ರ ಖುರ್‌ಆನ್ ಹಾಳೆಗಳಲ್ಲಿ ಬರೆಯಲಾಗಿತ್ತು. ಅವುಗಳನ್ನು ಒಗ್ಗೂಡಿಸಿ ಒಂದು ಗ್ರಂಥದ ರೂಪದಲ್ಲಿ ಬರೆದು ಸಂರಕ್ಷಿಸಬೇಕು.

ಹಝ್‌ರತ್ ಝೈದ್ ಬಿನ್ ಸಾಬಿತ್(ರ) ಅವರು ಪವಿತ್ರ ಖುರ್‌ಆನಿನ ಪ್ರತಿಯೊಂದು ವಚನದ ಬಗ್ಗೆ ಲಿಖಿತ ಮತ್ತು ವಾಕ್ ಮೂಲಕ ಸಾಕ್ಷ್ಯವನ್ನು ದಾಖಲಿಸಿ ಒಂದು ಗ್ರಂಥರೂಪದಲ್ಲಿ ಸಂಗ್ರಹಿಸಿದರು. ಅನಂತರ ಇಸ್ಲಾಮ್ ಧರ್ಮ ವಿವಿಧ ದೇಶಗಳಿಗೆ ವ್ಯಾಪಿಸಿದಾಗ ತೃತೀಯ ಖಲೀಫ ಹಝ್‌ರತ್ ಉಸ್ಮಾನ್(ರ) ಅವರು ಹಝ್‌ರತ್ ಝೈದ್ ಬಿನ್ ಸಾಬಿತ್ ಜಮಾಯಿಸಿ ಇಟ್ಟ ಪವಿತ್ರ ಖುರ್‌ಆನಿನ ಪ್ರತಿಗೆ ಅನುಸಾರವಾಗಿ ಅದರ ಅನೇಕ ಅಧಿಕೃತ ಪ್ರತಿಗಳನ್ನು ಬರೆಯಿಸಿ ಎಲ್ಲ ಮುಸ್ಲಿಮ್ ದೇಶಗಳಿಗೆ ಕಳುಹಿಸಿದರು. (ಬುಖಾರಿ : ಫಝಾಯಿಲುಲ್ ಖುರ್‌ಆನ್ ಕನ್‌ಝುಲ್ ಉಮ್ಮಾಲ್ ಬಾಬ್ ಫಿಲ್‌ಖುರ್‌ಆನ್)

## ಪವಿತ್ರ ಖುರ್‌ಆನಿನ ಸುರಕ್ಷೆಯ ವಾಗ್ದಾನ

ಬೈಬಲ್ ಸಹಿತ ಲೋಕದಲ್ಲಿರುವ ಎಲ್ಲ ಧಾರ್ಮಿಕ ಗ್ರಂಥಗಳ ಬಗ್ಗೆ ದೇವನು ಅವುಗಳನ್ನು ತಾನು ಸಂರಕ್ಷಿಸುವುದಾಗಿ ವಾಗ್ದಾನ ಮಾಡಿಲ್ಲ. ಈ ಹಿರಿಮೆ ಮತ್ತು ಗೌರವ ಪವಿತ್ರ ಖುರ್‌ಆನಿಗೆ ಮಾತ್ರ ಇದೆ. ಅದರ ಅಕ್ಷರ ಮತ್ತು ಅರ್ಥದ ಸಂರಕ್ಷಣೆಯ ವಾಗ್ದಾನವನ್ನು ಸರ್ವಶಕ್ತನಾದ ದೇವನೇ ಸ್ವತಃ ನೀಡಿದ್ದಾನೆ. ಇದರ ಬಗ್ಗೆ ಪವಿತ್ರ ಖುರ್‌ಆನಿನ ಈ ವಚನ ನೋಡಿರಿ:

"ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣಗೊಳಿಸಿದೆವು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು." (15:10)

ಪವಿತ್ರ ಖುರ್‌ಆನ್‌ನಲ್ಲಿರುವ ವಾಗ್ದಾನ ಪ್ರಕಾರ ಪವಿತ್ರ ಖುರ್‌ಆನ್ ಸಂರಕ್ಷಿಸಲ್ಪಡು ಒಂದು ವಿಧಾನ, ಅದನ್ನು ಪೂರ್ಣವಾಗಿ ಬಾಯಿಪಾಠ ಮಾಡಿ ಸಂರಕ್ಷಿಸುವುದಾಗಿದೆ. ಹಝ್‌ರತ್ ಮುಹಮ್ಮದ್ ಪೈಗಂಬರರ ಜೀವಿತ ಕಾಲದಲ್ಲಿಯೇ ಪವಿತ್ರ ಖುರ್‌ಆನನ್ನು

ವಚನಗಳ ಮತ್ತು ಅಧ್ಯಾಯಗಳ ಕ್ರಮಬದ್ಧ ರೀತಿಯಲ್ಲಿ ಬಾಯಿಪಾಠ ಮಾಡಲಾಗುತ್ತಿತ್ತು. ಇದಕ್ಕಾಗಿ ಶಿಷ್ಯರ ಒಂದು ಗುಂಪು ನಿಯೋಜಿಸಲ್ಪಟ್ಟಿತ್ತು. ಅವರಲ್ಲಿ ನಾಲ್ವರು ಬಾಯಿಪಾಠಗಾರರನ್ನು ಹಝ್ರತ್ ಪೈಗಂಬರ್[ಸ] ಸ್ವತಃ ಪರಿಶೀಲಿಸಿ ಅವರ ನೈಪುಣ್ಯವನ್ನು ಕಂಡುಕೊಂಡು ಇತರರಿಗೆ ಕಲಿಸಲಿಕ್ಕೋಸ್ಕರ ನೇಮಿಸಿದರು. ಇಸ್ಲಾಮಿನ ದ್ವಿತೀಯ ಖಲೀಫರಾದ ಹಝ್ರತ್ ಉಮರ್[ರ] ಅವರ ಕಾಲದಲ್ಲಿ ಅವರ ಒಂದು ಸೇನಾ ತುಕಡಿಯಲ್ಲಿ ಮುನ್ನೂರಕ್ಕಿಂತ ಹೆಚ್ಚು ಜನರು ಪವಿತ್ರ ಖುರ್‌ಆನ್ ಬಾಯಿಪಾಠ ಮಾಡಿದ ಹಾಫಿಝ್‌ಗಳು ಇದ್ದರು. ಇಂದು ಅಲ್ಲಾಹನ ಅನುಗ್ರಹದಿಂದ ಲಕ್ಷಗಟ್ಟಲೆ ಹಾಫಿಝ್ ಖುರ್‌ಆನ್ (ಪವಿತ್ರ ಖುರ್‌ಆನ್ ಬಾಯಿಪಾಠ ಮಾಡಿದವರು) ಲೋಕದಾದ್ಯಂತ ಇದ್ದಾರೆ. ಇಂದು ಯಾವುದಾದರೂ ಕಾರಣದಿಂದ (ನಊಧುಬಿಲ್ಲಾಹ್ - ಅಲ್ಲಾಹನಿಂದ ಅಭಯ ಯಾಚಿಸುತ್ತೇವೆ) ಪವಿತ್ರ ಖುರ್‌ಆನನ್ನು ನಾಶಮಾಡುವ ಅಪವಿತ್ರ ಮತ್ತು ನಿಂದನೀಯ ಕೆಲಸ ನಡೆಯುವುದಾದರೆ ಲೋಕದಾದ್ಯಂತ ಇರುವ ಲಕ್ಷಾಂತರ ಹಾಫಿಝ್‌ಗಳು (ಪವಿತ್ರ ಖುರ್‌ಆನಿನ ಕಂಠಪಾಠಗಾರರು) ಕೂಡಲೆ ಅದನ್ನು ಪುನಃ ಬರೆಯಲು ಶಕ್ತರಾಗುವರು. ಅಲ್‌ಹಮ್‌ದುಲಿಲ್ಲಾಹ್ (ಅಲ್ಲಾಹನಿಗೆ ಎಲ್ಲ ಸ್ತುತಿಗಳು ಸಲ್ಲುವುವು). ನಮ್ಮ ಕೈಗಳಲ್ಲಿ ಈಗ ಇರುವ ಪವಿತ್ರ ಖುರ್‌ಆನ್ ಹದಿನಾಲ್ಕು ನೂರು ವರ್ಷಗಳ ಹಿಂದೆ ಹಝ್ರತ್ ಪೈಗಂಬರರಿಗೆ ಅವತೀರ್ಣಗೊಂಡ ಅದೇ ಖುರ್‌ಆನಾಗಿದೆ. ಈ ವೈಭವಶಾಲಿ ಸತ್ಯವನ್ನು ಕೆಲವು ಕ್ರೈಸ್ತ ಸಂಶೋಧಕರು ಅಂಗೀಕರಿಸಿರುತ್ತಾರೆ. ಅವರಲ್ಲಿ ಕೆಲವರ ಅಭಿಪ್ರಾಯಗಳು ಹೀಗಿವೆ:

ಸರ್ ವಿಲ್ಯಮ್ ಮ್ಯೂರ್ ಹೀಗೆ ಹೇಳುತ್ತಾರೆ:

*"ಕಳೆದ ಹನ್ನೆರಡು ನೂರು ವರ್ಷಗಳಲ್ಲಿ ಯಾವುದೇ ಬದಲಾವಣೆಗೆ ಮತ್ತು ಹಸ್ತಕ್ಷೇಪಕ್ಕೆ ಒಳಗಾಗದೆ ತನ್ನ ಮೂಲ ರೂಪದಲ್ಲಿ ಬಾಕಿಯಾಗಿ ಉಳಿದ ಗ್ರಂಥ ಪವಿತ್ರ ಖುರ್‌ಆನ್ ಹೊರತು ಬೇರೆ ಯಾವುದೂ ಇಲ್ಲ."*

*"ಮುಹಮ್ಮದ್ ಯಾವ ರೂಪದಲ್ಲಿ ಖುರ್‌ಆನನ್ನು ಲೋಕದ ಮುಂದೆ ಇರಿಸಿದರೋ ಅದೇ ರೂಪದಲ್ಲಿ ಇಂದು ಸಹ ಇದೆ ಎಂಬುದಕ್ಕೆ ಆಂತರಿಕ ಮತ್ತು ಬಾಹ್ಯ ಸಾಕ್ಷ್ಯಗಳು ಇವೆ."*

*"ಖುರ್‌ಆನಿನ ಪ್ರತಿಯೊಂದು ವಚನ ಮುಹಮ್ಮದರ ಕಾಲದಿಂದ ಇಂದಿನ ತನಕ ತನ್ನ ಮೂಲರೂಪದಲ್ಲಿಯೇ ಬಾಕಿಯಾಗಿ ಉಳಿದಿವೆ ಎಂದು ನಾವು ದೃಢವಾಗಿ ಹೇಳಬಲ್ಲೆವು." (ಲೈಫ್ ಆಫ್ ಮುಹಮ್ಮದ್ - ಮುನ್ನುಡಿ ಪುಟ 21, 25, 26)*

ಜರ್ಮನಿಯ ಪ್ರಸಿದ್ಧ ಕ್ರೈಸ್ತ ಸಂಶೋಧಕ ನೋಲ್ ಡೀಕ್ ಪವಿತ್ರ ಖುರ್‌ಆನ್ ಬಗ್ಗೆ ಹೀಗೆ ಹೇಳುತ್ತಾರೆ:

*"ಪ್ರವಾದಿಯ ಶಿಷ್ಯರ ಕಾಲದಲ್ಲಿದ್ದ ಅದೇ ಖುರ್‌ಆನ್ ಇಂದು ನಮ್ಮ ಮುಂದಿದೆ."*

*"ಖುರ್‌ಆನ್‌ನಲ್ಲಿ ಹಸ್ತಕ್ಷೇಪವಾಗಿರುವುದರ ಕುರಿತು ಸಂಶೋಧನೆ ನಡೆಸಿದ ಪಾಶ್ಚಿಮಾತ್ಯ ವಿದ್ವಾಂಸರು ಅದನ್ನು ಸಾಬೀತುಗೊಳಿಸಲು ಸಂಪೂರ್ಣವಾಗಿ ಅಸಮರ್ಥರಾದರು." (ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ "ಖುರ್‌ಆನ್" ಶೀರ್ಷಿಕೆ)*

ಇಂಗ್ಲೆಂಡಿನ ಪ್ರಸಿದ್ಧ ಪ್ರಾಕ್ತನ ಶಾಸ್ತ್ರ ವಿದ್ವಾಂಸ ಪ್ರೊಫೆಸರ್ ನಿಕಲಸ್ ತನ್ನ "ಅರಬ್ ಸಾಹಿತ್ಯ ಚರಿತ್ರೆ" ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ:

*"ಇಸ್ಲಾಮಿನ ಆರಂಭ ಕಾಲದ ಚರಿತ್ರೆಯ ಜ್ಞಾನಗಳಿಸಲು ಖುರ್‌ಆನ್ ಅದ್ವಿತೀಯ ಮತ್ತು ಶಂಕಾತೀತ ಗ್ರಂಥವಾಗಿದೆ. ನಿಶ್ಚಯವಾಗಿಯೂ ಬೌದ್ಧ ಧರ್ಮ, ಕ್ರೈಸ್ತ ಧರ್ಮ ಅಥವಾ ಯಾವುದೇ ಪ್ರಾಚೀನ ಧರ್ಮಗಳಿಗೆ ಇಂತಹ ಅಧಿಕೃತ ಸಮಕಾಲೀನ ದಾಖಲೆಗಳು ಇಲ್ಲ. ಖುರ್‌ಆನ್ ಮೂಲಕ ಇಸ್ಲಾಮಿಗೆ ಇದು ಲಭ್ಯವಾಗಿದೆ." (ಅರಬ್ ಸಾಹಿತ್ಯ ಚರಿತ್ರೆ - ಪುಟ 143)*

ಪವಿತ್ರ ಖುರ್‌ಆನ್ ನಿಸ್ಸಂಶಯವಾಗಿ ಇತರ ಗ್ರಂಥಗಳ ಮೇಲೆ ತನ್ನ ಉನ್ನತ ವೈಭವ ಮತ್ತು ಶ್ರೇಷ್ಠತೆಯನ್ನು ಹೊಂದಿದ್ದು ಅದು ಅದ್ವಿತೀಯವೂ ಏಕಮಾತ್ರವೂ ಆಗಿದೆ. ಪವಿತ್ರ ಖುರ್‌ಆನಿನ ಶ್ರೇಷ್ಠತೆಯ ಎದುರಾಗಿ ಲೋಕದ ಯಾವುದೇ ಧಾರ್ಮಿಕ ಗ್ರಂಥಕ್ಕೆ ತನ್ನ ಶ್ರೇಷ್ಠತೆಯನ್ನು ತೋರಿಸಿ ಕೊಡಲು ಸಾಧ್ಯವಾಗದು.

1. ಪವಿತ್ರ ಖುರ್‌ಆನಿಗೆ ಮುಂಚಿತವಾಗಿ ಅವತೀರ್ಣಗೊಂಡ ಎಲ್ಲ ಗ್ರಂಥಗಳು ಆಯಾಕಾಲಕ್ಕೆ ಸೀಮಿತವೂ ಕೆಲವು ಜನಾಂಗಗಳಿಗೆ ಸೀಮಿತವೂ ಆಗಿದ್ದವು. ಪವಿತ್ರ ಖುರ್‌ಆನ್ ಮಾತ್ರ ಹೀಗೆ ವಾದಿಸುತ್ತದೆ: ಅದು ಸಕಲ ಲೋಕಗಳ ಪ್ರಭುವಿನಿಂದ ಅವತೀರ್ಣಗೊಂಡ ಗ್ರಂಥ. ಸಕಲ ಲೋಕಗಳಿಗೂ ಉಪದೇಶ ನೀಡುವ ಗ್ರಂಥ.

2. ಲೋಕದಲ್ಲಿ ಹಝ್ರತ್ ಆದಮ್[ಅ] ಅವರಿಂದ ಮೊದಲುಗೊಂಡು ಹಝ್ರತ್ ಪೈಗಂಬರ್[ಸ] ತನಕ ಆಗಮಿಸಿದ ಪ್ರವಾದಿಗಳೂ ಸಂದೇಶವಾಹಕರೂ ಸತ್ಯವಂತರೂ ಸರ್ವಲೋಕಗಳ ಸೃಷ್ಟಿಕರ್ತನಿಂದ ಕಳುಹಿಸಲ್ಪಟ್ಟವರೂ ಆಗಿದ್ದರು. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ವ ಇನ್‌ಮ್ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಧೀರ್" - ಮುನ್ನೆಚ್ಚರಿಕೆಗಾರನು ಆಗಮಿಸದ ಯಾವ ಜನಾಂಗವೂ ಇಲ್ಲ.

"ವ ಲಿಕುಲ್ಲಿ ಖೌಮಿನ್ ಹಾದ್" - ಪ್ರತಿಯೊಂದು ಜನಾಂಗಕ್ಕೆ ಒಬ್ಬ ಮಾರ್ಗದರ್ಶಕ ಆಗಮಿಸಿದ್ದನು.

3. ಪವಿತ್ರ ಖುರ್‌ಆನ್ ಹಿಂದಿನ ಯಾವುದೇ ದೈವಿಕ ಗ್ರಂಥವನ್ನು ಅಲ್ಲಗಳೆಯುವುದಿಲ್ಲ; ಬದಲು, ಸತ್ಯಪಡಿಸುತ್ತದೆ. ಪವಿತ್ರ

ಖುರ್‌ಆನಿನ ಒಂದು ವಚನ ಹೀಗಿದೆ:

"ಈ ಖುರ್‌ಆನ್ ಅಲ್ಲಾಹನ ಹೊರತು (ಬೇರೆ ಯಾರಿಂದಲಾದರೂ) ರಚಿತವಾಗಬಹುದಾದ ಗ್ರಂಥವಲ್ಲ. ಬದಲಿಗೆ, ಇದಕ್ಕಿಂತ ಮೊದಲಿನ ಗ್ರಂಥಗಳನ್ನು ಸತ್ಯಪಡಿಸುವ ಮತ್ತು ದೈವಿಕ ನಿಯಮಗಳನ್ನು ವಿವರಿಸುವ ಗ್ರಂಥವಾಗಿದೆ. ಇದು ಸರ್ವಲೋಕ ಪರಿಪಾಲಕನಿಂದ ಬಂದುದೆಂಬುದರಲ್ಲಿ ಏನೂ ಸಂಶಯವಿಲ್ಲ." (10:38)

4. ಪವಿತ್ರ ಖುರ್‌ಆನ್ ವಿವಿಧ ಧರ್ಮಗಳ ಮೂಲ ತತ್ವವಾದ ಏಕದೇವ ವಿಶ್ವಾಸದ ಕಡೆಗೆ ಆಹ್ವಾನ ನೀಡುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ನೋಡಿರಿ:

"ಹೇಳು, ಓ ಗ್ರಂಥದವರೇ, (ಕನಿಷ್ಠ ಪಕ್ಷ) ನಮಗೂ ನಿಮಗೂ ಮಧ್ಯೆ ಒಪ್ಪಿಗೆಯಿರುವ ವಿಚಾರದೆಡೆಗೆ (ಅಂದರೆ) ಏಕದೇವನಲ್ಲದೆ ಯಾರನ್ನೂ ನಾವು ಆರಾಧಿಸುವುದಿಲ್ಲ............ ಎಂಬ ವಿಚಾರದೆಡೆಗೆ ಬನ್ನಿರಿ." (ಪವಿತ್ರ ಖುರ್‌ಆನ್ 3:65)

ಬೈಬಲ್‌ನ ಹಳೆ ಒಡಂಬಡಿಕೆ ಮತ್ತು ಸುವಾರ್ತೆಗಳ ಅನುಯಾಯಿಗಳು ಕೇವಲ ಬಾಯಿಯಲ್ಲಿ ವಾದಿಸುತ್ತಾರೆ. ಪವಿತ್ರ ಖುರ್‌ಆನಿನ, ಮೇಲೆ ಉಲ್ಲೇಖಿಸಿದ ಉಪದೇಶಗಳ ಹಾಗೆ ಇರುವ ಉಪದೇಶಗಳನ್ನು ಮುಸ್ಲಿಮೇತರರು ತಮ್ಮ ಧಾರ್ಮಿಕ ಗ್ರಂಥಗಳಿಂದ ಉಲ್ಲೇಖಗಳನ್ನು ನೀಡಿ ನಮ್ಮ ಮುಂದೆ ಇರಿಸಲಸಾಧ್ಯ. ಇನ್ನು ಮುಂದೆ ಸಹ ಇದು ಎಂದೂ ಸಾಧ್ಯವಾಗಲಾರದು.

ಪವಿತ್ರ ಖುರ್‌ಆನ್ ದೈವಿಕ ಗ್ರಂಥ ಮಾತ್ರವಲ್ಲ, ಅದು ಪವಿತ್ರವಾದ ದೇವವಾಣಿಯೂ ಆಗಿದೆ. ಅದರ ವಚನಗಳ ವ್ಯವಸ್ಥೆ ದೇವನ ಸೂಚನೆ ಮೇರೆಗೆ ಕ್ರಮಾಗತಗೊಳಿಸಲ್ಪಟ್ಟಿದೆ.

ಬೈಬಲಿನ ಹಳೆಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಗಳಲ್ಲಿ ವಿವೇಕಕ್ಕೆ ವಿರುದ್ಧವಾದ ಮತ್ತು ವೈರುಧ್ಯ ಭರಿತ ವಿಷಯಗಳು ಇವೆ. ಅವುಗಳಿಂದ ಕೆಲವು ಉದಾಹರಣೆಗಳು ಹೀಗಿವೆ:

**ವಿವೇಕಕ್ಕೆ ವಿರುದ್ಧವಾದ ವಿಷಯಗಳು:**

1. ಒಂಟೆ, ಮೊಲ, ಬೆಟ್ಟದ ಮೊಲ ಇವುಗಳು ಮೆಲುಕು ಹಾಕುವಂಥವುಗಳಾದರೂ ಸೀಳು ಗೊರಸು ಇಲ್ಲವಾದ ಕಾರಣ ಅವು ನಿಮಗೆ ಅಶುದ್ಧ. (ಧರ್ಮೋಪದೇಶಕಾಂಡ 14:7)

2. ಬಿಲಾಮನ ಕತ್ತೆ ಬಿಲಾಮನೊಂದಿಗೆ ಮಾತನಾಡಿತು. (ಅರಣ್ಯಕಾಂಡ 22:28)

3. ಲೋಟನ ಹೆಂಡತಿ ಅವನ ಹಿಂದೆ ಬರುತ್ತಿರುವಾಗ ಹಿಂದಿರುಗಿ ನೋಡಿದ್ದರಿಂದ ಉಪ್ಪಿನ ಕಂಬವಾದಳು.

(ಆದಿಕಾಂಡ 19:26)

**ಬೈಬಲಿನಲ್ಲಿರುವ ದೌರ್ಜನ್ಯಕಾರಕ ಆಜ್ಞೆಗಳು:**

1. ಒಬ್ಬನು ತನ್ನ ದಾಸನನ್ನಾಗಲಿ ದಾಸಿಯನ್ನಾಗಲಿ ಕೋಲಿನಿಂದ ಹೊಡೆದು ಸಾಯುವಂತೆ ಮಾಡಿದರೆ ಅವನಿಗೆ ಶಿಕ್ಷೆಯಾಗಬೇಕು. ಆ ದಾಸನು ಆಗಲೇ ಸಾಯದೆ ಒಂದೆರಡು ದಿವಸ ಉಳಿದರೆ ಯಜಮಾನನಿಗೆ ಶಿಕ್ಷೆ ವಿಧಿಸಕೂಡದು. ಆ ದಾಸನು ಅವನ ಸೊತ್ತಷ್ಟೆ. (ವಿಮೋಚನಕಾಂಡ 21:20)

2. ಸತ್ತವರಲ್ಲಿ ವಿಚಾರಿಸುವವರೂ ಬೈತಾಳಿಕರೂ ಸ್ತ್ರೀಯರಾಗಲಿ, ಪುರುಷರಾಗಲಿ ಮರಣ ಶಿಕ್ಷೆ ಹೊಂದಬೇಕು. ಕಲ್ಲೆಸೆದು ಅವರನ್ನು ಕೊಲ್ಲಬೇಕು. ಆ ಶಿಕ್ಷೆಗೆ ಅವರೇ ಕಾರಣರು. (ಯಾಜಕ ಕಾಂಡ 20:27)

3. ಮಾಟಗಾರ್ತಿಯನ್ನು ಬದುಕಲು ಬಿಡಬಾರದು. (ವಿಮೋಚನಕಾಂಡ 22:18)

4. ನಿಮ್ಮ ಎದುರಿನಿಂದ ಹೊರಡಿಸುವವನಾಗಿ ಅವರನ್ನು ನಿಮ್ಮಿಂದ ಪರಾಜಯಪಡಿಸುವಾಗ ನೀವು ಅವರನ್ನು ನಿಶ್ಶೇಷವಾಗಿ ಸಂಹರಿಸಬೇಕು. ಅವರ ಸಂಗಡ ಒಡಂಬಡಿಕೆ ಮಾಡಿಕೊಳ್ಳಬಾರದು. ಅವರನ್ನು ಕನಿಕರಿಸಬಾರದು.

(ಧರ್ಮೋಪದೇಶಕಾಂಡ 7:2)

ನೀವು ನೋಡಿರಿ, ಪರಾಜಿತ ಶತ್ರುವಿನೊಂದಿಗೆ ದೌರ್ಜನ್ಯದಿಂದ ವರ್ತಿಸಬೇಕೆಂದು ಹೇಳುವ ಈ ಉಪದೇಶವು ದಯಾಳುವಾದ ದೇವನದಾಗಿರಲು ಸಾಧ್ಯವಿಲ್ಲ. ಒಬ್ಬ ಕ್ರೂರಿ ದೊರೆಯು ಇಂತಹ ಆಜ್ಞೆಗಳನ್ನು ನೀಡಬಲ್ಲನು.

**ಬೈಬಲಿನ ಹಳೆ ಒಡಂಬಡಿಕೆಯ ಟೋರಾ (ಮೋಶೆಯ ಶಾಸನ) ಸಾಚಾ ಅಲ್ಲ :**

ಇಸ್ರಾಯೇಲ್ ಜನಾಂಗಕ್ಕೆ ಸಂಬಂಧಿಸಿದ ಚರಿತ್ರೆಯ ಗ್ರಂಥಗಳು ಹೀಗೆ ಒಮ್ಮತದ ಅಭಿಪ್ರಾಯ ಪ್ರಕಟಿಸಿವೆ: ನೆಬುಕದ್ ನಝ್ರ್ ಎಂಬ ರಾಜನ ಕಾಲದಲ್ಲಿ ಇಸ್ರಾಯೇಲ್ ಜನಾಂಗದ ಗ್ರಂಥಗಳು ಸುಟ್ಟುಹಾಕಲ್ಪಟ್ಟವು. ಅಝ್ರಾ ಪ್ರವಾದಿ ಅವುಗಳನ್ನು ಪುನಃ ಬರೆದರು. ಅಝ್ರಾ ಪ್ರವಾದಿಯ ಬಗ್ಗೆ ಯಹೂದಿ ಗ್ರಂಥಗಳಲ್ಲಿ ಹೀಗೆ ಬರೆಯಲಾಗಿದೆ. ಧರ್ಮಶಾಸ್ತ್ರವನ್ನು ಸುಟ್ಟುಹಾಕಲಾಗಿತ್ತು. ಆದರೆ ಅಝ್ರಾ ಅದನ್ನು ಪುನಃ ಸ್ಥಾಪಿಸಿದರು.

ಇನ್ನೊಂದು ಕಡೆ ಹೀಗೆ ಬರೆಯಲಾಗಿದೆ: ಅರ್ಝ್ರಾ ಟೋರಾವನ್ನು ಪುನಃ ಬರೆಯುವಾಗ ಹಸ್ತ ಪ್ರತಿಯಲ್ಲಿ ಕೆಲವು ಶಬ್ದಗಳ ನಿಖರತೆಯ ಬಗ್ಗೆ ಸಂಶಯ ಸೂಚಿಸಿದ್ದರು. ಅವುಗಳಿಗೆ ಗುರುತು ಹಾಕಿ, ಎಲೀಯ ಪ್ರವಾದಿ ಈ ಶಬ್ದಗಳನ್ನು ಸತ್ಯವೆಂದು ಅಂಗೀಕರಿಸುವುದಾದರೆ ನಾನು ಮಾಡಿದ ಗುರುತುಗಳನ್ನು ಅಸಾಧು ಎಂದು ಗಣಿಸಿರಿ. ಈ ಶಬ್ದಗಳು ಸಂಶಯಕರವೆಂದು ಎಲೀಯ ಪ್ರವಾದಿ ಹೇಳುವುದಾದರೆ ಮುಂದೆ ಈ ಗ್ರಂಥವನ್ನು ಪ್ರತಿ ಮಾಡುವಾಗ ಗುರುತಿಸಲಾದ ಶಬ್ದಗಳನ್ನು ಬಿಟ್ಟುಬಿಡಬೇಕು ಎಂದು ಹೇಳಿದರು. (A.B.P.N. 14th)

ಪ್ರಸಿದ್ಧ ಕ್ರೈಸ್ತ ವಿದ್ವಾಂಸ ರೆವರೆಂಡ್ ಆದಮ್ ಕ್ಲಾರ್ಕ್ 1891ರಲ್ಲಿ ಪ್ರಕಟಿಸಲಾದ ತನ್ನ ಬೈಬಲ್ ವ್ಯಾಖ್ಯಾನ ಗ್ರಂಥದ 1681ನೇ ಪುಟದಲ್ಲಿ ಹೀಗೆ ಬರೆದಿದ್ದಾರೆ: 1 ಪೂರ್ವಕಾಲ ವೃತ್ತಾಂತ ಅಧ್ಯಾಯ 4ರಲ್ಲಿ ಪುತ್ರನೆಂದು ಬರೆಯಬೇಕಾದಲ್ಲಿ ಮೊಮ್ಮಗ ಎಂದು ಅರ್ಝ್ರಾ ಬರೆದಿದ್ದಾರೆ.

ಇಂತಹ ವಿಷಯಗಳಲ್ಲಿ ಸಮನ್ವಯ ಸ್ಥಾಪಿಸಲೆತ್ನಿಸುವುದು ನಿರರ್ಥಕವಾಗಿದೆ. ಯಹೂದಿ ಮತ್ತು ಕ್ರೈಸ್ತ ವಿದ್ವಾಂಸರೇ ಅರ್ಝ್ರಾ ಪ್ರವಾದಿಯ ನೆನಪಿನ ಶಕ್ತಿಯ ಬಗ್ಗೆ ಹೀಗೆ ಅಭಿಪ್ರಾಯ ಹೇಳಿರುವಾಗ ಅನ್ಯರು ಹೇಗೆ ತಾನೆ ಸಂಶಯ ನಿವಾರಣೆ ಪಡೆಯಬಲ್ಲರು?

ಲೂಥರ್ ಹೀಗೆ ಬರೆದಿದ್ದಾರೆ:

ಬೈಬಲಿನಲ್ಲಿ ಘಟನೆಗಳನ್ನು ಅನುಕ್ರಮವಾಗಿ ಬರೆದಿಲ್ಲ. ಅದರಲ್ಲಿ ಬರೆದಿರುವ ವಿಷಯದ ಬಗ್ಗೆ ಭಿನ್ನಾಭಿಪ್ರಾಯ ತಲೆದೋರಿದರೆ ಅದನ್ನು ಸರಿಪಡಿಸುವ ದಾರಿ ಕಾಣಿಸದಿದ್ದರೆ ಅದನ್ನು ಬಿಟ್ಟುಬಿಡಬೇಕು. (ಫರ್ಝಾಯಿಲುಲ್ ಖುರ್‌ಆನ್ ಪುಟ 74)

## ಪವಿತ್ರ ಖುರ್‌ಆನ್ ಬಗ್ಗೆ ಬೈಬಲಿನ ಭವಿಷ್ಯವಾಣಿಗಳು

**"ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಆಜ್ಞಾಪಿಸಿದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು." (ಧರ್ಮೋಪದೇಶಕಾಂಡ 18:18)**

ಈ ಭವಿಷ್ಯವಾಣಿ ಯೇಸು ಮಸೀಹರ ಬಗ್ಗೆ ಹೇಳಿದುದು ಎಂದು ಯಾರೂ ತಪ್ಪುಗ್ರಹಿಸಬಾರದು. ಏಕೆಂದರೆ ಸ್ವತಃ ಯೇಸು ಮಸೀಹ್ ಇದು ತನಗೆ ಸಂಬಂಧಿಸಿದ್ದಲ್ಲವೆಂದು ಹೀಗೆ ಸೂಚಿಸಿದ್ದಾರೆ:

**"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೇ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು." (ಯೋಹಾನ 16:13)**

ಪವಿತ್ರ ಖುರ್‌ಆನನ್ನು ಅಲ್ಲಾಹನು ಅದು ಆವಶ್ಯಕವಾಗಿರುವಾಗ ಅವತೀರ್ಣಗೊಳಿಸಿದನು. ಅದರ ವಚನಗಳನ್ನು ತನ್ನ ಇಚ್ಛೆಗೆ ಅನುಸಾರವಾಗಿ ಕ್ರಮಬದ್ಧಗೊಳಿಸಿದನು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲದಲ್ಲಿಯೇ ಅದನ್ನು ಸಂಗ್ರಹಿಸಿಡುವ, ಅದನ್ನು ಬರೆದಿಡುವ, ಅದನ್ನು ಬಾಯಿಪಾಠ ಮಾಡುವ ಮತ್ತು ಅದನ್ನು ಸಂರಕ್ಷಿಸುವ ವ್ಯವಸ್ಥೆ ಸಹ ಅಲ್ಲಾಹನ ಇಚ್ಛೆಗನುಸಾರವಾಗಿ ಸ್ಥಾಪಿಸಲ್ಪಟ್ಟಿತು. ಆದುದರಿಂದ ಪವಿತ್ರ ಖುರ್‌ಆನ್ ಅದು ಅವತೀರ್ಣವಾಗಲು ಪ್ರಾರಂಭವಾದ ಕಾಲದಿಂದ ಇಂದಿನ ತನಕ ಸಂಪೂರ್ಣವಾಗಿ ಮೂಲ ರೂಪದಲ್ಲಿಯೇ ಇದೆ. ಇನ್ನು ಮುಂದೆ ಸಹ ಪುನರುತ್ಥಾನ ದಿನದ ತನಕ ಹಾಗೆಯೇ ಸಂರಕ್ಷಿಸಲ್ಪಟ್ಟು ಇರುವುದು.

ಪವಿತ್ರ ಖುರ್‌ಆನ್ ಎಷ್ಟು ಶ್ರೇಷ್ಠ ಮತ್ತು ಪರಿಪೂರ್ಣ ಗ್ರಂಥವಾಗಿದೆ ಎಂದರೆ ಇಂದಿನ ಕಾಲಘಟ್ಟದಲ್ಲಿ ಬೈಬಲಿನ ಅನುಯಾಯಿಗಳು ಮಾತ್ರವಲ್ಲ, ಅನ್ಯ ಧರ್ಮಗಳ ಅನುಯಾಯಿಗಳೂ ಅದರ ಮಹತ್ತರ ಅಧ್ಯಾಪನೆಗಳ ಲಾಭ ಪಡೆಯುತ್ತಾ ಇದ್ದಾರೆ.

ಇದಕ್ಕೆ ಉದಾಹರಣೆಯಾಗಿ ನಾವು ಹೀಗೆ ಹೇಳಲು ಬಯಸುತ್ತೇವೆ:

ಬೈಬಲ್ ಮನುಷ್ಯರ ಮಧ್ಯೆ ತಾರತಮ್ಯವನ್ನು ಸೂಚಿಸುತ್ತದೆ. ಬೈಬಲಿನ ಪ್ರಕಾರ ಇಸ್ರಾಯೇಲ್ ಸಂತತಿಗಳ ಹಕ್ಕುಗಳು ಅನ್ಯ ಜನರ ಹಕ್ಕುಗಳಿಗಿಂತ ಬೇರೆಯೇ ಆಗಿವೆ. ಇಸ್ರಾಯೇಲ್ ಸಂತತಿಗಳು ಅನ್ಯ ಜನಾಂಗದವರಿಗಿಂತ ಶ್ರೇಷ್ಠರೆಂದು ಬೈಬಲಿನಲ್ಲಿ ಸೂಚಿಸಲಾಗಿದೆ. ಇಸ್ರಾಯೇಲ್ ಸಂತತಿಗಳಿಗೋಸ್ಕರ ಆಗಮಿಸಿದ ಕೊನೆಯ ಪ್ರವಾದಿ ಯೇಸು ಮಸೀಹ್ ಸಹ ತನ್ನ ಉಪದೇಶಗಳನ್ನು ಹಂದಿಗಳ ಮತ್ತು ನಾಯಿಗಳ ಮುಂದೆ ಎಸೆಯಬಾರದು ಎಂದು ಹೇಳಿದರು. ಅವರು ಅನ್ಯ ಜನಾಂಗದವರನ್ನು ಬಹಳ ಹೀನೈಸುವಿಕೆಯ ದೃಷ್ಟಿಯಿಂದ ನೋಡಿದರು. ತಾನು ಇಸ್ರಾಯೇಲ್ ಸಂತತಿಗಳ ಕಾಣದೆ ಹೋದ ಕುರಿಗಳಿಗೋಸ್ಕರ ಕಳುಹಿಸಲ್ಪಟ್ಟುದಾಗಿ ಅವರು ಹೇಳಿದರು.

ಆರ್ಥಿಕ ವಿಷಯಗಳಿಗೆ ಸಂಬಂಧಿಸಿ ಸಹ ಇಸ್ರಾಯೇಲ್ ಸಂತತಿಗಳ ಹಕ್ಕು ಮತ್ತು ಅನ್ಯ ಜನಾಂಗಗಳ ಹಕ್ಕುಗಳಲ್ಲಿ ವ್ಯತ್ಯಾಸ ಮಾಡಲಾಗಿದೆ. ಬೈಬಲ್‌ನಲ್ಲಿ ಹೀಗೆ ಬರೆದಿದೆ: ಇಸ್ರಾಯೇಲ್ ಸಂತತಿಗಳಿಂದ ಬಡ್ಡಿ ವಸೂಲು ಮಾಡಬಾರದು. ಆದರೆ ಅನ್ಯ ಜನಾಂಗದವರಿಂದ ಬಡ್ಡಿ ತೆಗೆದುಕೊಳ್ಳಬಹುದು.

ಪುರುಷ ಮತ್ತು ಮಹಿಳೆ ಮಧ್ಯೆ ಬೈಬಲ್ ಉಂಟುಮಾಡಿರುವ ವ್ಯತ್ಯಾಸ ಸ್ಪಷ್ಟವಾಗಿವೆ. ಮಹಿಳೆ ದೇವಾಲಯ ಪ್ರವೇಶಿಸುವುದನ್ನು ಸಹ ನಿಷಿದ್ಧಗೊಳಿಸಲಾಗಿತ್ತು. ಪುರುಷನು ದೇವನ ಮಹಿಮೆ ಎಂದೂ ಮಹಿಳೆ ಪುರುಷನ ಮಹಿಮೆ ಎಂದೂ ಪ್ರತಿಪಾದಿಸಲಾಗಿದೆ. ಅನ್ಯ ಜನಾಂಗದ ಮಹಿಳೆಯರನ್ನೂ ಮಕ್ಕಳನ್ನೂ ಕಾಡುಗುಡ್ಡಗಳಲ್ಲಿ ನಿರ್ದಯವಾಗಿ ಕೊಲ್ಲುವುದನ್ನು ದೌರ್ಜನ್ಯ ಎಂದು ಸೂಚಿಸಿಲ್ಲ. ಇವು ಪವಿತ್ರ ಖುರ್‌ಆನನ್ನು ಆಕ್ಷೇಪಿಸುವವರು ನಂಬುವ ಬೈಬಲಿನ ಉಪದೇಶಗಳಾಗಿವೆ.

ಪವಿತ್ರ ಖುರ್‌ಆನ್ ಜಾತಿ, ವರ್ಣ ಭೇದವಿಲ್ಲದೆ ಎಲ್ಲ ಜನರಿಗೋಸ್ಕರ ಅವತೀರ್ಣವಾದ ಗ್ರಂಥವಾಗಿದೆ. ಎಲ್ಲ ಮನುಷ್ಯರು ಮನುಷ್ಯರೆಂಬ ಸ್ಥಿತಿಯಲ್ಲಿ ಸಮಾನರು ಎಂದು ಅದು ಘೋಷಿಸುತ್ತದೆ. ಗುಲಾಮಗಿರಿಯನ್ನು ನಿರುತ್ಸಾಹಪಡಿಸಿದ ಮತ್ತು ಕ್ರಮೇಣ ಕೊನೆಗೊಳಿಸಿದ ಧರ್ಮ ಇಸ್ಲಾಮ್ ಮಾತ್ರವಾಗಿದೆ. ಪುರುಷರಿಗೂ ಮಹಿಳೆಯರಿಗೂ ಸಮಾನ ಹಕ್ಕುಗಳನ್ನು ಅದು ನೀಡಿತು. ಬಡ್ಡಿಯನ್ನು ನಿಷಿದ್ಧಗೊಳಿಸಿ ಯಾರಿಂದಲೂ ಬಡ್ಡಿಯನ್ನು ವಸೂಲಿ ಮಾಡಬಾರದೆಂದು ವಿಧಿಸಿತು. ಹೀಗಿದ್ದರೂ ಪಾದರಿಗಳು ಇಸ್ಲಾಮನ್ನು ಆಕ್ಷೇಪಿಸುತ್ತಾರೆ.

ಖುರ್‌ಆನ್ ಮನುಷ್ಯನ ಎಲ್ಲ ಆವಶ್ಯಕತೆಗಳನ್ನು ಈಡೇರಿಸುವ ಪವಿತ್ರ ಗ್ರಂಥವಾಗಿದೆ. ಬೈಬಲ್ ಪ್ರಕಾರ ವ್ಯಭಿಚಾರಿಣಿಗೆ ಮಾತ್ರ ಪತಿ ವಿವಾಹ ವಿಚ್ಛೇದ ನೀಡಬಹುದು. ಬೇರೆ ಯಾವ ಕಾರಣದಿಂದಲೂ ವಿವಾಹ ವಿಚ್ಛೇದ ಅನುಮತಿಸಲ್ಪಡಲಾರದು. ಪತ್ನಿಗೆ ವಿವಾಹ ವಿಚ್ಛೇದದ ಅನುಮತಿಯನ್ನೇ ಅದು ನೀಡುವುದಿಲ್ಲ. ಆದರೆ ಇಂದು ಬೈಬಲಿನ ಅನುಯಾಯಿಗಳು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಅನುಸರಿಸಿ ವಿವಾಹ ವಿಚ್ಛೇದದ ಕಾನೂನು ಕಾಯಿದೆಗಳನ್ನು ರೂಪಿಸಿದ್ದಾರೆ. ಮದ್ಯಪಾನದ ಬಗ್ಗೆ ಹೇಳುವುದಾದರೆ, ಕ್ರೈಸ್ತರ ಕುಟುಂಬಗಳು ಅದರಿಂದ ಬಹಳ ಕಷ್ಟಪೀಡಿತವಾಗಿವೆ. ಅದನ್ನು ನಿಷಿದ್ಧಗೊಳಿಸಲು ಅವರು ಬಯಸುತ್ತಾರೆ. ಆದರೆ ಬೈಬಲ್ ಮದ್ಯಪಾನವನ್ನು ಅಪರಾಧವೆಂದು ವಿಧಿಸಿಲ್ಲ; ಪ್ರವಾದಿಗಳೂ ಮದ್ಯಪಾನ ಮಾಡುತ್ತಿದ್ದರು ಎಂದು ಬೈಬಲ್‌ನಲ್ಲಿ ಬರೆಯಲಾಗಿದೆ. ಯೇಸು ಮಸೀಹ್ ಪವಾಡದ ರೂಪದಲ್ಲಿ ಮದ್ಯ ತಯಾರಿಸಿದರೆಂದೂ ಮದುವೆಯ ದಿಬ್ಬಣಗಾರರಿಗೆ ಕುಡಿಯಲು ನೀಡಿದರೆಂದೂ ಬೈಬಲಿನಲ್ಲಿ ಬರೆಯಲಾಗಿದೆ.

ಪವಿತ್ರ ಖುರ್‌ಆನ್ ಮದ್ಯಪಾನವನ್ನು ನಿಷಿದ್ಧಗೊಳಿಸಿದೆ. ಈ ಕಾಲಘಟ್ಟದ ಪ್ರಮುಖ ಆವಶ್ಯಕತೆಯನ್ನು ಅದು ಈಡೇರಿಸಿದೆ. ಹೀಗಿರುವಾಗ ಪವಿತ್ರ ಖುರ್‌ಆನ್‌ನಲ್ಲಿ ವೈರುಧ್ಯಗಳಿವೆ ಎಂದು ಪಾದರಿಗಳಿಗೆ ಹೇಳಲು ಹೇಗೆ ತಾನೆ ಸಾಧ್ಯ? ಅವರು ಅದರ ಬಗ್ಗೆ ಸಾಕ್ಷ್ಯಾಧಾರಗಳನ್ನು ನೀಡದೆ ನಿರಾಧಾರವಾಗಿ ಆಕ್ಷೇಪಿಸುತ್ತಾರೆ.

ಇನ್ನೊಂದು ವಿಷಯ ಗಮನಾರ್ಹವಾಗಿದೆ. ಪವಿತ್ರ ಖುರ್‌ಆನ್‌ನಲ್ಲಿರುವ ಭವಿಷ್ಯವಾಣಿಗಳು ಕಳೆದ 1400 ವರ್ಷಗಳ ಕಾಲದಲ್ಲಿ ಈಡೇರುತ್ತಾ ಇರುವುದಾಗಿ ಕಂಡುಬರುತ್ತವೆ. ಇಂದಿನ ಬೃಹತ್ ಜಹಜುಗಳ ಬಗ್ಗೆ, ರೈಲು, ಸಂಚಾರದ ಇತರ ವಾಹನಗಳು, ಟೆಲಿಗ್ರಾಮ್, ಟೆಲಿಫೋನ್, ರೇಡಿಯೋ, ಟೆಲಿವಿಷನ್ ಮೊದಲಾದವುಗಳ ಆವಿಷ್ಕಾರಗಳ ಬಗ್ಗೆ, ನಿರಂಕುಶ ಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ಸ್ಥಾಪನೆ ಬಗ್ಗೆ, ಮ್ಯೂಸಿಯಮ್ ಮತ್ತು ಮೃಗಶಾಲೆಗಳ ಬಗ್ಗೆ, ಮುದ್ರಣಾಲಯಗಳ ಬಗ್ಗೆ ನುಡಿದ ಭವಿಷ್ಯವಾಣಿಗಳು ಈಡೇರುತ್ತಾ ಬಂದಿವೆ. ಪವಿತ್ರ ಖುರ್‌ಆನ್‌ನಲ್ಲಿ ವೈರುಧ್ಯಗಳಿವೆ ಎನ್ನುವುದು ನಿರಾಧಾರವಾಗಿದೆ.

## ಆಕ್ಷೇಪ ಸಂಖ್ಯೆ 5ರ ಉತ್ತರ

ಬೈಬಲಿನ ಹಳೆ ಒಡಂಬಡಿಕೆಯಲ್ಲಿ ಒಬ್ಬ ಪ್ರವಾದಿ ಬರುವ ಬಗ್ಗೆ ಭವಿಷ್ಯವಾಣಿಗಳು ಹೀಗಿವೆ:

**"ನಿಮ್ಮ ದೇವರಾದ ಕರ್ತನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು (ನಿಮಗೆ) ಏರ್ಪಡಿಸುವನು; ಅವನಿಗೇ ನೀವು ಕಿವಿಗೊಡಬೇಕು." (ಧರ್ಮೋಪದೇಶಕಾಂಡ 18:15).**

**"ದೇವಪುರುಷನಾದ ಮೋಶೆ ದೇಹವನ್ನು ಬಿಡುವದಕ್ಕಿಂತ ಮುಂಚೆ ಇಸ್ರಾಯೇಲ್ಯರ ವಿಷಯವಾಗಿ ಹೇಳಿದ ಆಶೀರ್ವಾದವು ಹೇಗೆಂದರೆ –**

**ಕರ್ತನು ಸಿನಾಯಿ ಬೆಟ್ಟದಿಂದ ಬಂದು ಸೇಯೀರ್ ಎಂಬ ಬೆಟ್ಟದ ಸೀಮೆಯೊಳಗಿಂದ ಪ್ರಕಾಶಿಸಿ ಪಾರಾನ್ ಪರ್ವತದಿಂದ ಹೊಳೆದು ಲಕ್ಷಾಂತರ* ಪರಿಶುದ್ಧ ದೂತರ ಮಧ್ಯದಿಂದ ಅವರಿಗೋಸ್ಕರ ದಯಮಾಡಿದನು; ಆತನ ಬಲಪಾರ್ಶ್ವದಲ್ಲಿ ಅಗ್ನಿ ಸದೃಶವಾದ ಧರ್ಮ ಶಾಸ್ತ್ರವಿತ್ತು." (ಧರ್ಮೋಪದೇಶಕಾಂಡ 33:1–2)**

### ಹೊಸ ಒಡಂಬಡಿಕೆಯ ಭವಿಷ್ಯವಾಣಿಗಳು:

**"ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ. ಆತನು ಬಂದು ಪಾಪ ನೀತಿ ನ್ಯಾಯತೀರ್ವಿಕೆ ಈ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು." (ಯೋಹಾನ 16 : 7–8)**

* ಇಂಗ್ಲಿಷ್ ಬೈಬಲಿನಲ್ಲಿ ಹತ್ತು ಸಾವಿರಗಳು ಎಂದು ಬರೆದಿದೆ. (Deuternomy 33:1-2) ನೋಡಿರಿ.

**"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೆ ಮಾತನಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು." (ಯೋಹಾನ 16 : 13)**

ಮೇಲೆ ಉಲ್ಲೇಖಿಸಿದ ಭವಿಷ್ಯವಾಣಿಗಳು ಅತ್ಯಂತ ಭವ್ಯವಾಗಿ ಹಝ್ರತ್ ಮುಹಮ್ಮದ್ ಪೈಗಂಬರ್‌ರಲ್ಲಿ ಈಡೇರಿವೆ.

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸಂಕ್ಷಿಪ್ತ ಜೀವನ ಚರಿತ್ರೆ

**1. ಹಝ್ರತ್ ಪೈಗಂಬರರ ಮಾತೆಯ ಸ್ವಪ್ನ:**

ಹಝ್ರತ್ ಪೈಗಂಬರರ ಮಾತೆ ಹೀಗೆ ಹೇಳಿದರು: ನಾನು ಮುಹಮ್ಮದನ್ನು ಗರ್ಭದಲ್ಲಿ ಧರಿಸಿದ್ದಾಗ ನನ್ನೊಳಗಿಂದ ಒಂದು ಪ್ರಕಾಶ ಜ್ಯೋತಿ ಹೊರಹೊಮ್ಮಿ ಬಹಳ ದೂರ ದೇಶಗಳ ತನಕ ಹಬ್ಬಿತು. ನನ್ನ ಮಗ ಬಹಳ ವೈಭವಶಾಲಿಯಾಗುವನು.

**2. ದೇವದೂತರ ಮೂಲಕ ಹೃದಯದ ಶುಚೀಕರಣ:**

ಹಝ್ರತ್ ಪೈಗಂಬರ್(ಸ) ನಾಲ್ಕು ವರ್ಷದ ಬಾಲಕನಾಗಿದ್ದಾಗ ತನ್ನ ಸಂಗಡಿಗರೊಂದಿಗೆ ಆಡುತ್ತಿದ್ದರು. ಅಚಾನಕವಾಗಿ ಇಬ್ಬರು ಶ್ವೇತವಸ್ತ್ರಧಾರಿಗಳು ಆಗಮಿಸಿ ಅವರನ್ನು ನೆಲದಲ್ಲಿ ಮಲಗಿಸಿ ಎದೆಯನ್ನು ಸೀಳಿದರು. ಹದೀಸ್‌ನಲ್ಲಿ ಹೇಳುವ ಪ್ರಕಾರ ಹಝ್ರತ್ ಜಿಬ್ರೀಲ್(ಅ) ಎದೆಯೊಳಗಿಂದ ಹೃದಯವನ್ನು ಹೊರಗೆ ತೆಗೆದು ಅದರಿಂದ ಏನೋ ವಸ್ತುವನ್ನು ತೆಗೆದು ಬಿಸಾಡಿದರು. "ಬಲಹೀನತೆಯ ಕಶ್ಮಲ ಪದಾರ್ಥವನ್ನು ನಿನ್ನಿಂದ ತೆಗೆದೆಸೆಯಲಾಗಿದೆ" ಎಂದು ಜಿಬ್ರೀಲ್ ಹೇಳಿದರು. ಅನಂತರ ಜಿಬ್ರೀಲ್ ಹೃದಯವನ್ನು ತೊಳೆದು ಎದೆಯೊಳಗೆ ಪುನಃ ಇರಿಸಿ ಜೋಡಿಸಿದರು. (ಮುಸ್ಲಿಮ್)

**3. ಪ್ರವಾದಿತ್ವದ ಚಿಹ್ನೆಗಳು:**

ಹಝ್ರತ್ ಪೈಗಂಬರರ ಪ್ರಾಯ 12 ಆದಾಗ ಅಬೂತಾಲಿಬ್ ಅವರನ್ನು ತನ್ನ ಜೊತೆಗೆ ಶಾಮ್ (ಸಿರಿಯಾ) ದೇಶಕ್ಕೆ ಕರೆದುಕೊಂಡು ಹೋದರು. ಅವರೆಲ್ಲರೂ ಬಸ್ರಾ ಎಂಬಲ್ಲಿದ್ದ ಬಹೀರಾ ಎಂಬ ಭಕ್ತನ ಮಠವನ್ನು ತಲಪಿದಾಗ ಆ ಭಕ್ತ, ಎಲ್ಲಾ ಕಲ್ಲುಗಳೂ ಮರಗಳೂ ಸಾಷ್ಟಾಂಗ ಪ್ರಣಾಮ ಮಾಡಲು ತೊಡಗಿದ್ದಾಗಿ ದರ್ಶನದಲ್ಲಿ ಕಂಡರು. ದೈವಿಕ ಗ್ರಂಥಗಳ ಪ್ರಕಾರ ಒಬ್ಬ ಪ್ರವಾದಿ ಆಗಮಿಸಲಿರುವರೆಂದು ಅವರಿಗೆ ತಿಳಿದಿತ್ತು. (ಬೈಬಲಿನ ಭವಿಷ್ಯವಾಣಿ ಪ್ರಕಾರ.) ಆದುದರಿಂದ ತನ್ನಲ್ಲಿಗೆ ಆಗಮಿಸಿದ ಗುಂಪಿನಲ್ಲಿ ಆ ಪ್ರವಾದಿ ಇರಬಹುದೆಂದು ಅವರು ತನ್ನ ಜ್ಞಾನದಿಂದ ಕಂಡುಕೊಂಡರು. ಅವರು ತನಗೆ ಲಭಿಸಿದ ಜ್ಞಾನದಿಂದ ಪ್ರವಾದಿಯಾಗಲಿರುವವರನ್ನು ಗುರುತಿಸಿದರು. ಅಬೂತಾಲಿಬರಿಗೆ ಆ ವಿಷಯ ತಿಳಿಸಿ ಹಝ್ರತ್ ಪೈಗಂಬರರನ್ನು ಗ್ರಂಥ ನೀಡಲ್ಪಟ್ಟವರ ಕೆಡುಕುಗಳಿಂದ ಸಂರಕ್ಷಿಸಲು ಹೇಳಿದರು.

ಹನ್ನೆರಡು ವರ್ಷದ ಬಾಲಕನಲ್ಲಿ ಪ್ರವಾದಿತ್ವದ ಚಿಹ್ನೆಗಳನ್ನು ಕಂಡ ಆ ವ್ಯಕ್ತಿ ಎಷ್ಟು ಸಾತ್ವಿಕರಾಗಿರಬಹುದೆಂದು ನೀವು ಯೋಚಿಸಿರಿ. ಹಝ್ರತ್ ಪೈಗಂಬರರನ್ನು ಗ್ರಂಥಾನುಯಾಯಿಗಳ ಕೇಡುಗಳಿಂದ ರಕ್ಷಿಸಬೇಕೆಂದು ಅವರು ನೀಡಿದ ಉಪದೇಶ ಎಷ್ಟು ಉದಾತ್ತವಾಗಿದೆ! ದೇವನ ಸಂದೇಶವಾಹಕರ ಸತ್ಯಕ್ಕಿರುವ ಎಲ್ಲ ಸಾಕ್ಷ್ಯಾಧಾರಗಳು ಪ್ರಕಟವಾದ ನಂತರ ಸಹ ಅವರನ್ನು ಗುರುತಿಸದವರು ಎಷ್ಟು ದುರದೃಷ್ಟಶಾಲಿಗಳಾಗಿದ್ದಾರೆ!

**4. ಮಕ್ಕದ ಖುರೈಶರ ಒಮ್ಮತದ ತೀರ್ಪು:**

ಅರಬ್ ದೇಶದಲ್ಲಿ ಹಝ್ರತ್ ಪೈಗಂಬರರಿಗೆ ಮಾತ್ರ ಅಲ್ ಅಮೀನ್ (ವಿಶ್ವಸ್ತ) ಮತ್ತು ಸಿದ್ದೀಖ್ (ಸತ್ಯವಂತ) ಎಂಬ ಪ್ರಶಸ್ತಿ ದೊರಕಿತು ಎಂಬುದು ಚಾರಿತ್ರಿಕ ಸತ್ಯವಾಗಿದೆ. ಬೇರೆ ಯಾರಿಗೂ ಅದು ದೊರಕಲಿಲ್ಲ.

**5. ಹಝ್ರತ್ ಖದೀಜರ(ರ) ಸಾಕ್ಷಿ:**

ಒಬ್ಬ ಪತಿಯ ಬಗ್ಗೆ ಅತ್ಯಂತ ವಿಶ್ವಾಸಾರ್ಹ ಸಾಕ್ಷ್ಯ ಆತನ ಪತ್ನಿಯದು ಆಗಲು ಸಾಧ್ಯ. ಪ್ರಥಮ ಬಾರಿ ದೇವ ಸಂದೇಶ ಲಭಿಸಿದಾಗ ಹಝ್ರತ್ ಪೈಗಂಬರರು ಗಾಬರಿಗೊಂಡು ತಮ್ಮ ಪತ್ನಿ ಖದೀಜರ ಬಳಿಗೆ ಬಂದಾಗ ಪತ್ನಿ ಹೇಳಿದರು: "ಅಲ್ಲಾಹನಾಣೆ! ದೇವನೆಂದೂ ನಿಮ್ಮನ್ನು ಹೀನಾಯಗೊಳಿಸಲಾರನು. ನೀವು ರಕ್ತ ಸಂಬಂಧವನ್ನು ಸ್ಥಾಪಿಸುತ್ತಿರುವಿರಿ. ನೀವು ಸತ್ಯವನ್ನು ನುಡಿಯುತ್ತಿರುವಿರಿ. ನೀವು ಜನರ ಭಾರವನ್ನು ಹೊತ್ತು ಹಗುರಗೊಳಿಸುತ್ತಿರುವಿರಿ. ಲೋಕದಿಂದ ಅಳಿದು ಹೋಗುತ್ತಿರುವ ಸುಸ್ವಭಾವಗಳನ್ನು ಸ್ಥಾಪಿಸುತ್ತಿರುವಿರಿ. ನೀವು ಅತಿಥಿ ಸತ್ಕಾರ ಮಾಡುತ್ತಿರುವಿರಿ ಮತ್ತು ಹಕ್ಕುಗಳನ್ನು ಪಡೆಯಲು ಜನರಿಗೆ ಸಹಾಯ ಮಾಡುತ್ತಿರುವಿರಿ."

**6. ವರಖ ಬಿನ್ ನೌಫಲ್ ನುಡಿದ ವಾಸ್ತವಿಕ ಸ್ಥಿತಿ:**

ಪೈಗಂಬರರಿಗೆ ದೇವ ಸಂದೇಶ ಲಭಿಸಿದ ನಂತರ ಅವರನ್ನು ಅವರ ಪತ್ನಿ ಖದೀಜ ತನ್ನ ಚಿಕ್ಕಪ್ಪನ ಮಗ ವರಖ ಬಿನ್ ನೌಫಲ್ ಬಳಿಗೆ ಕರೆದುಕೊಂಡು ಹೋದರು. ವರಖ ಎಲ್ಲ ವಿಷಯ ತಿಳಿದು ಹೀಗೆ ದೃಢವಾಗಿ ಹೇಳಿದರು: "ಪ್ರವಾದಿ ಮೋಶೆಗೆ

ಅವತೀರ್ಣರಾದ ದೇವದೂತರೇ ನಿಮಗೂ ಅವತೀರ್ಣರಾಗಿದ್ದಾರೆ." ಅವರು ಆ ರೀತಿ ಧರ್ಮೋಪದೇಶಕಾಂಡ 18:18ರ ಭವಿಷ್ಯವಾಣಿಯ ಕಡೆಗೆ ಸೂಚನೆ ನೀಡಿದರು. ವರಖ ಹೇಳಿದ ಅಭಿಪ್ರಾಯವನ್ನು ಹಝ್ರತ್ ಝೈದ್(ರ) ಮತ್ತು ಹಝ್ರತ್ ಅಲಿ(ರ) ಆಲಿಸಿದಾಗ ಅವರಿಬ್ಬರೂ ಮುಸ್ಲಿಮರಾದರು.

### 7. ಹಝ್ರತ್ ಅಬೂಬಕರ್(ರ) ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದುದು:

ಹಝ್ರತ್ ಪೈಗಂಬರರ ವಾದದ ಬಗ್ಗೆ ಆಲಿಸಿದ ಕೂಡಲೇ ಹಝ್ರತ್ ಅಬೂಬಕರ್ ಅವರ ಮುಂದೆ ಹೋಗಿ ನೀವು ಪ್ರವಾದಿತ್ವದ ವಾದ ಮಾಡಿರುವಿರೋ ಎಂದು ಕೇಳಿದರು. ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದ ಕೂಡಲೆ ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ನಿಮ್ಮನ್ನು ನಂಬುತ್ತೇನೆ. ನೀವು ಇದರ ಬಗ್ಗೆ ಸಾಕ್ಷಿ ಆಗಿರಿ. ನಿಮ್ಮ ಪರಿಶುದ್ಧ ಜೀವಿತ ನಿಮ್ಮ ಸತ್ಯಕ್ಕೆ ಸಾಕ್ಷ್ಯವಾಗಿದೆ. ಬೇರೆ ಯಾವ ಸಾಕ್ಷ್ಯಾಧಾರಗಳ ಆವಶ್ಯಕತೆ ಇಲ್ಲ.

ಹಝ್ರತ್ ಅಬೂಬಕರ್ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ಬಗ್ಗೆ ಪ್ರಸಿದ್ಧ ಪೌರಸ್ತ್ಯ ಶಾಸ್ತ್ರ ವಿದ್ವಾಂಸ ಸ್ಪೈರಿಂಗರ್ ಹೀಗೆ ಹೇಳಿದ್ದಾರೆ:

"ಅಬೂಬಕರ್ ಇಸ್ಲಾಮಿನ ಆರಂಭ ಕಾಲದಲ್ಲಿಯೇ ಮುಹಮ್ಮದರ ಅನುಯಾಯಿಯಾದುದರಿಂದ ಸಾಬೀತಾಗುವುದೇನೆಂದರೆ, ಮುಹಮ್ಮದ್ ಪ್ರಾಯಶಃ ತಪ್ಪುಗ್ರಹಿಕೆಗೆ ಗುರಿಯಾಗುವವರಾಗಿದ್ದಿರಬಹುದಾದರೂ ಅವರು ಅನ್ಯರನ್ನು ಖಂಡಿತವಾಗಿಯೂ ವಂಚಿಸುವವರಾಗಿರಲಿಲ್ಲ, ಅವರು ತನ್ನನ್ನು ಹೃತ್ಪೂರ್ವಕವಾಗಿ ದೇವನ ಸಂದೇಶವಾಹಕನೆಂದು ದೃಢವಾಗಿ ನಂಬುತ್ತಿದ್ದರು."

ಸರ್ ವಿಲ್ಯಮ್ ಮ್ಯೂರ್ ಈ ಅಭಿಪ್ರಾಯವನ್ನು ಅನುಮೋದಿಸಿದ್ದಾರೆ. (ಲೈಫ್ ಆಫ್ ಮುಹಮ್ಮದ್)

### 8. ಮಕ್ಕದ ಖುರೈಶರ ವಿರೋಧ:

ಮಕ್ಕದಲ್ಲಿ ಹಝ್ರತ್ ಪೈಗಂಬರರ ಅನುಯಾಯಿಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ಕಂಡಾಗ ಮಕ್ಕದ ಖುರೈಶರ ವಿರೋಧ ಹೆಚ್ಚಾಗುತ್ತಾ ಹೋಯಿತು. ಸರ್ ವಿಲ್ಯಮ್ ಮ್ಯೂರ್ ಇದರ ಬಗ್ಗೆ ಹೀಗೆ ಬರೆಯುತ್ತಾರೆ:

"ಈ ಹೊಸ ಧರ್ಮವನ್ನು ಲೋಕದಿಂದ ನಾಶಪಡಿಸಬೇಕು; ಅದರ ಅನುಯಾಯಿಗಳನ್ನು ಬಲಾತ್ಕಾರದಿಂದ ತಡೆಯಬೇಕು ಎಂದು ಖುರೈಶರು ತಮ್ಮ ವಿರೋಧವನ್ನು ಪ್ರಾರಂಭಿಸಿದ ಕೂಡಲೆ ಹಿಂಸಾಚಾರ ವರ್ಧಿಸುತ್ತಾ ಹೋಯಿತು. ದ್ವೇಷಾಗ್ನಿಯು ಪ್ರಜ್ವಲಿಸುತ್ತಾ ಹೋಯಿತು." (ಲೈಫ್ ಆಫ್ ಮುಹಮ್ಮದ್)

### 9. ಹಝ್ರತ್ ಪೈಗಂಬರರ(ಸ) ಉಪದೇಶದ ಸಂಕ್ಷಿಪ್ತ ರೂಪ:

ಏಕದೇವನನ್ನು ನಂಬಿರಿ. ನಿಷಿದ್ಧ ಮತ್ತು ಧರ್ಮಬದ್ಧ ವಸ್ತುಗಳು ಯಾವುವು ಎಂದು ಗುರುತಿಸಿರಿ. ತಂದೆ ತಾಯಂದಿರನ್ನು ಗೌರವಿಸಿರಿ. ವಿಧವೆಯರ, ಅನಾಥರ, ಬಡವರ ಮತ್ತು ನಿರ್ಬಲರ ಮೇಲೆ ದೌರ್ಜನ್ಯ ಮಾಡಬೇಡಿರಿ. ಅನ್ಯರ ಹಕ್ಕುಗಳನ್ನು ಅಪಹರಿಸಬೇಡಿರಿ. ಸುಳ್ಳು, ವಂಚನೆ, ಕಳ್ಳತನ, ಡಕಾಯಿತಿ, ಮದ್ಯಪಾನ, ಜುಗಾರಿ ಆಟ ಇವುಗಳನ್ನು ಬಿಟ್ಟುಬಿಡಿರಿ. ಮಹಿಳೆಯರನ್ನು ಗೌರವಿಸಿರಿ. ದಯಾಭಾವದಿಂದ ಯಾವಾಗಲೂ ವರ್ತಿಸಿರಿ. ಕೃತಜ್ಞತೆ ಸೂಚಿಸುವವರಾಗಿರಿ. ದೇಶ ಮತ್ತು ಜನರ ಸೇವೆ ಮಾಡಿ ದೇವನ ಸಾಮೀಪ್ಯಗಳಿಸಲು ಪ್ರಯತ್ನಿಸಿರಿ.

### 10. ಶಾಂತಿಪ್ರಿಯ ಉಪದೇಶಗಳ ಬಗ್ಗೆ ಮಕ್ಕದ ಅವಿಶ್ವಾಸಿಗಳ ಪ್ರತಿಕ್ರಿಯೆ:

ಮಕ್ಕದಲ್ಲಿ ಹದಿಮೂರು ವರ್ಷಕಾಲ ಸತ್ಯವಿಶ್ವಾಸಿಗಳನ್ನು ಒರಟು ಕಲ್ಲುಗಳ ಮೇಲೆ ಎಳೆದೊಯ್ಯಲಾಯಿತು. ಬಿಸಿ ಮರಳಿನ ಮೇಲೆ ಮಲಗಿಸಿ ಎದೆಯ ಮೇಲೆ ಭಾರವಾದ ಕಲ್ಲುಗಳನ್ನು ಇರಿಸಲಾಗುತ್ತಿತ್ತು. ಪುಂಡರ ಹೊಡೆತ ಮತ್ತು ಅಲೆದಾಡುವ ಪೋಕರಿ ಹುಡುಗರ ನಿಂದೆ ಮತ್ತು ಬೈಗಳಿಗೂ ಹೊಡೆತಗಳಿಗೂ ಸತ್ಯವಿಶ್ವಾಸಿಗಳು ಗುರಿಯಾದರು. ಅವರು ಹಸಿವೆ, ಬಾಯಾರಿಕೆಗಳಿಂದ ಬಸವಳಿಯಬೇಕಾಯಿತು. ಮೂರು ವರ್ಷಗಳ ಕಾಲ ಅವರು ಬಹಿಷ್ಕಾರಕ್ಕೆ ಗುರಿಯಾದರು. ಎಲ್ಲ ವಿಧಗಳ ಹಿಂಸಾಚಾರಗಳನ್ನು ಸತ್ಯವಿಶ್ವಾಸಿಗಳ ಮೇಲೆ ನಡೆಸಲಾಯಿತು. ಕಷ್ಟಗಳ ಈ ಹೃದ್ರಾವಕ ಕಥೆಗಳು ರಕ್ತಗಂಬನಿ ಸುರಿಸುವಂತೆ ಮಾಡುವಂತಹವುಗಳಾಗಿದ್ದುವು.

ಒಮ್ಮೆ ಹಝ್ರತ್ ಪೈಗಂಬರ್(ಸ) ಆರಾಧನೆ ಮಾಡುತ್ತಾ ಇದ್ದಾಗ ಅವರ ಕೊರಳಿಗೆ ಉರುಳು ಹಾಕಿ ಎಳೆದಾಗ ಅವರ ಕಣ್ಣುಗಳು ಹೊರಬರುವ ಹಾಗಾಯಿತು. ಅವರು ನಮಾಝ್‌ನಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿದಾಗ ಅವರ ಬೆನ್ನ ಮೇಲೆ ಒಂಟೆಯ ಕರುಳನ್ನು ಇರಿಸಿ ಅವರು ಸಾಷ್ಟಾಂಗ ಪ್ರಣಾಮದ ಸ್ಥಿತಿಯಿಂದ ಮೇಲೇಳದಂತೆ ಶತ್ರುಗಳು ಒಮ್ಮೆ ಮಾಡಿದ್ದರು. ಹಝ್ರತ್ ಪೈಗಂಬರರು ಮಾರ್ಗದಲ್ಲಿ ನಡೆದು ಹೋಗುವಾಗ ಪುಂಡರು ಅವರ ಕುತ್ತಿಗೆಗೆ ಹೊಡೆದು "ಪ್ರವಾದಿ ಎಂದು ವಾದಿಸುವವನು ಇವನು" ಎಂದು ಅಪಹಾಸ್ಯ ಮಾಡುತ್ತಿದ್ದರು. ಅವರ ಮನೆಗೆ ಕಲ್ಲೆಸೆಯಲಾಗುತ್ತಿತ್ತು. ಅವರ ಅಡಿಗೆ ಮನೆಯೊಳಗೆ ಕೊಳಕು ಪದಾರ್ಥ ಹಾಕುತ್ತಿದ್ದರು. ಹಝ್ರತ್ ಪೈಗಂಬರರನ್ನು ವಿವಿಧ ಅಡ್ಡ ಹೆಸರುಗಳಿಂದ ಶತ್ರುಗಳು ಕರೆಯುತ್ತಿದ್ದರು.

### 11. ಅಬಿಸೀನಿಯಾ ದೇಶಕ್ಕೆ ವಲಸೆ:

ಮಕ್ಕದ ಖುರೈಶರ ಹಿಂಸಾಚಾರ ಅತ್ಯಂತ ಹೆಚ್ಚಾದಾಗ ಅಲ್ಲಾಹನ ಅನುಮತಿಯ ಪ್ರಕಾರ ಸತ್ಯವಿಶ್ವಾಸಿಗಳನ್ನು ಅಬಿಸೀನಿಯಾ ದೇಶಕ್ಕೆ ವಲಸೆ ಹೋಗಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಮಕ್ಕದ ಅವಿಶ್ವಾಸಿಗಳಿಗೆ ಈ ವಿಷಯ ತಿಳಿದಾಗ ಅನಿಸೀನಿಯಾದ ದೊರೆಯೊಂದಿಗೆ ಮುಸ್ಲಿಮರ ವಿರುದ್ಧ ಕ್ರಮ ಕೈಗೊಳ್ಳಲು ಅವಿಶ್ವಾಸಿಗಳು ಆವಶ್ಯಪಟ್ಟರು.

**12. ತಾಯಿಫ್‌ಗೆ ಪ್ರಯಾಣ:**

ಮಕ್ಕದ ಜನರು ಏಕದೇವ ವಿಶ್ವಾಸದ ಕಡೆಗೆ ಬರುವುದಿಲ್ಲವೆಂದು ಮನವರಿಕೆ ಮಾಡಿದ ಹಝ್ರತ್ ಪೈಗಂಬರ್(ಸ) ತಾಯಿಫ್ ನಗರಕ್ಕೆ ಹೋಗಿ ಅಲ್ಲಿನ ಜನರಿಗೆ ಸತ್ಯಸಂದೇಶ ತಲಪಿಸಿದರು. ಈ ಪ್ರಯಾಣದ ಬಗ್ಗೆ ಸರ್ ವಿಲ್ಯಮ್ ಮ್ಯೂರ್ ಹೀಗೆ ಹೇಳುತ್ತಾರೆ:

"ಮುಹಮ್ಮದ್ ತಾಯಿಫ್ ನಗರಕ್ಕೆ ಹೋದುದು ಒಂದು ಭವ್ಯ ಶೌರ್ಯ ಪ್ರದರ್ಶನವಾಗಿದೆ. ಒಬ್ಬಂಟಿಗನಾದ ಆ ವ್ಯಕ್ತಿಯನ್ನು ಆತನ ಸಮುದಾಯದ ಜನರು ತಾತ್ಸಾರದಿಂದ ಕಂಡರು ಮತ್ತು ಧಿಕ್ಕರಿಸಿದರು. ದೇವನ ಹೆಸರಿನಲ್ಲಿ ಶೌರ್ಯದೊಂದಿಗೆ ನಿನೇವದ ಪ್ರವಾದಿಯ ಹಾಗೆ ಮುಹಮ್ಮದ್ ವಿಗ್ರಹಾರಾಧಕ ನಗರಕ್ಕೆ ಜನರನ್ನು ಪಶ್ಚಾತ್ತಾಪದ ಕಡೆಗೆ ಮತ್ತು ಏಕದೇವನ ಕಡೆಗೆ ತಿರುಗಲು ಆಹ್ವಾನ ನೀಡಲು ಹೊರಟರು. ಮುಹಮ್ಮದ್ ತನ್ನನ್ನು ದೇವನ ಕಡೆಯಿಂದ ಆಗಮಿಸಿದವನೆಂದು ದೃಢವಿಶ್ವಾಸ ಹೊಂದಿದ್ದರೆಂಬುದಕ್ಕೆ ಇದು ಮಹತ್ತರ ಸಾಕ್ಷ್ಯವಾಗಿದೆ." (ಲೈಫ್ ಆಫ್ ಮುಹಮ್ಮದ್)

**13. ಮಕ್ಕದಿಂದ ಮದೀನಕ್ಕೆ ವಲಸೆ ಮತ್ತು ದೈವಿಕ ಸಹಾಯ:**

ಮಕ್ಕದ ಖುರೈಶರ ದೌರ್ಜನ್ಯವನ್ನು ಮತ್ತು ಕ್ರೌರ್ಯವನ್ನು ಸಹಿಸಲಾಗದೆ ಮುಸ್ಲಿಮರು ಮಕ್ಕದಿಂದ ವಲಸೆ ಹೋದುದರಿಂದ ಮಕ್ಕದಲ್ಲಿ ಮುಸ್ಲಿಮರ ಸಂಖ್ಯೆ ಕುಸಿಯುತ್ತಾ ಹೋಯಿತು. ಮಕ್ಕದ ಜನಸಂಖ್ಯೆ ಕುಸಿಯುತ್ತಾ ಹೋಗುತ್ತಿದೆ ಎಂದು ಮನವರಿಕೆ ಮಾಡಿದ ಮಕ್ಕದ ಅವಿಶ್ವಾಸಿಗಳ ಮುಖಂಡರು ಹಝ್ರತ್ ಪೈಗಂಬರರನ್ನು ವಧಿಸುವುದೇ ಉತ್ತಮ ಎಂದು ನಿರ್ಧರಿಸಿದರು. ಅಲ್ಲಾಹನ ವಿಧಿನಿರ್ಣಯ ಪ್ರಕಾರ ಹಝ್ರತ್ ಪೈಗಂಬರರು ವಲಸೆ ಹೋಗಲು ನಿಶ್ಚಯಿಸಿದ ದಿನಾಂಕ ಮತ್ತು ಶತ್ರುಗಳು ವಧಿಸಲು ನಿಗದಿಪಡಿಸಿದ ದಿನಾಂಕವು ಒಂದೇ ಆಗಿತ್ತು. ಖುರೈಶರು ಹಝ್ರತ್ ಪೈಗಂಬರರ ಮನೆಯ ಮುಂದೆ ಜಮಾಯಿಸುತ್ತಾ ಇದ್ದಾಗ, ಹಝ್ರತ್ ಪೈಗಂಬರರು ವಲಸೆ ಹೋಗುವ ನಿರ್ಧಾರದಿಂದ ರಾತ್ರಿಯ ಕತ್ತಲೆಯಲ್ಲಿ ಮನೆಯಿಂದ ಹೊರಗೆ ಹೋದರು. ಹಝ್ರತ್ ಪೈಗಂಬರರು ಹೆದರದೆ ಅವರ ಮುಂದೆ ಧೈರ್ಯದಿಂದ ಹೋದಾಗ ಶತ್ರುಗಳು, "ಈ ವ್ಯಕ್ತಿ ಮುಹಮ್ಮದ್ ಅಲ್ಲ, ಬೇರೆ ಯಾರೋ ಇರಬೇಕು" ಎಂದು ಭಾವಿಸಿ ಅವರನ್ನು ಆಕ್ರಮಿಸದೆ ಮೌನವಾಗಿ ನಿಂತರು. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರರನ್ನು(ಸ) ಸೇರಿಕೊಂಡರು. ಇಬ್ಬರೂ ಮಕ್ಕದಿಂದ ದೂರ ಸೌರ್ ಪರ್ವತದ ಗುಹೆಯಲ್ಲಿ ಅಡಗಿ ಕುಳಿತರು. ಮಕ್ಕದವರು ಹಝ್ರತ್ ಪೈಗಂಬರರನ್ನು ಹುಡುಕುತ್ತಾ ಸೌರ್ ಗುಹೆಯ ಸಮೀಪಕ್ಕೆ ಸಹ ಬಂದರು. ಅವರನ್ನು ಅಲ್ಲಿಗೆ ಕರೆದುಕೊಂಡು ಬಂದ ಪತ್ತೇದಾರನು, "ಮುಹಮ್ಮದ್ ಈ ಗುಹೆಯಲ್ಲಿದ್ದಾರೆ ಅಥವಾ ಆಕಾಶಕ್ಕೆ ಏರಿ ಹೋಗಿದ್ದಾರೆ" ಎಂದನು. ಹಝ್ರತ್ ಅಬೂಬಕರ್(ರ) ತಮ್ಮನ್ನು ಬೆನ್ನಟ್ಟಿದವರನ್ನು ಕಂಡು ಗಾಬರಿಗೊಂಡರು. ಆಗ ಹಝ್ರತ್ ಪೈಗಂಬರ್ ಹೇಳಿದರು: "ನೀವು ಹೆದರಬೇಡಿರಿ. ಅಲ್ಲಾಹನು ನಮ್ಮೊಂದಿಗಿದ್ದಾನೆ."

**14. ಸುರಾಖ ಬೆನ್ನಟ್ಟಿದುದು ಮತ್ತು ಆತನ ಬಗ್ಗೆ ಹಝ್ರತ್ ಪೈಗಂಬರರ ಭವಿಷ್ಯವಾಣಿ:**

ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರನ್ನು ಜೀವಂತವಾಗಿ ಅಥವಾ ಕೊಂದು ತರುವವರಿಗೆ ಒಂದು ನೂರು ಹೆಣ್ಣು ಒಂಟೆಗಳನ್ನು ಬಹುಮಾನವಾಗಿ ನೀಡಲಾಗುವುದು ಎಂದು ಮಕ್ಕದವರು ಪ್ರಕಟಿಸಿದ್ದರು. ಸುರಾಖ ಬಹುಮಾನದ ಆಶೆಯಿಂದ ಹಝ್ರತ್ ಪೈಗಂಬರರನ್ನು ಬೆನ್ನಟ್ಟಿದನು ಮತ್ತು ಮದೀನದ ಮಾರ್ಗದಲ್ಲಿ ಅವರನು ಕಂಡನು. ಅನೇಕ ಸಾರಿ ಅವನು ಹಝ್ರತ್ ಪೈಗಂಬರರ ಸಮೀಪ ತಲಪಲಿದ್ದಾಗ ಅವನ ಕುದುರೆ ಮುಗ್ಗರಿಸುತ್ತಾ ಇತ್ತು ಮತ್ತು ಅವನು ಕುದುರೆಯಿಂದ ಕೆಳಗೆ ಬಿದ್ದು ಬಿಡುತ್ತಿದ್ದನು. ಆಗ ಸುರಾಖನಿಗೆ, "ಈ ಜನರು ಅಲ್ಲಾಹನ ಸಂರಕ್ಷಣೆಯಲ್ಲಿದ್ದಾರೆ" ಎಂದು ಮನವರಿಕೆಯಾಯಿತು. ತನಗೆ ಅವರನ್ನು ಹಿಡಿಯಲಾಗದು ಎಂದು ಅವನು ತಿಳಿದುಕೊಂಡನು. ಆಗ ಸುರಾಖ ಉಚ್ಚಧ್ವನಿಯಲ್ಲಿ ಹೇಳಿದನು: "ನಾನು ಯಾವ ಉದ್ದೇಶದಿಂದ ಬಂದಿರುವೆನೋ ಅದನ್ನು ಕೈಬಿಟ್ಟು ಹಿಂದಿರುಗುತ್ತೇನೆ." ಹಝ್ರತ್ ಪೈಗಂಬರ್ ಹೇಳಿದರು: "ನೀನು ಹೋಗು. ಆದರೆ ಯಾರಿಗೂ ನಮ್ಮ ಬಗ್ಗೆ ತಿಳಿಸಬೇಕು." ಆಗ ಸುರಾಖ ಹೀಗೆ ಯೋಚಿಸಿದನು: ಈ ಮಹಾನುಭಾವ ಸತ್ಯವಂತ. ಅವರು ಜಯಶಾಲಿಯಾಗಲಿರುವರು. ಆದುದರಿಂದ ನನಗೆ ಅಭಯ ನೀಡುವ ಖಾತರಿ ಪಡೆಯಬೇಕು. ಹಝ್ರತ್ ಪೈಗಂಬರರು ಅವನಿಗೆ ಅಭಯ ನೀಡುವ ಖಾತರಿ ಪತ್ರ ಬರೆಯಿಸಿಕೊಟ್ಟರು. ಸುರಾಖ ಹಿಂದಿರುಗಿ ಹೋಗುವಾಗ ಹಝ್ರತ್ ಪೈಗಂಬರರು ಹೇಳಿದರು: "ಕಿಸ್ರಾ ಚಕ್ರವರ್ತಿಯ ಕಂಕಣ ನಿನ್ನ ಕೈಯಲ್ಲಿರುವಾಗ ನಿನ್ನ ಸ್ಥಿತಿ ಹೇಗಾಗುವುದು?"

ಈ ಭವಿಷ್ಯವಾಣಿ 17-18 ವರ್ಷಗಳ ನಂತರ ಬಹಳ ಭವ್ಯವಾಗಿ ಈಡೇರಿತು. ಆಗ ಸುರಾಖ ಮುಸ್ಲಿಮನಾಗಿದ್ದನು. ಹಝ್ರತ್ ಉಮರ್(ರ) ಆತನಿಗೆ ಬಂಗಾರದ ಆ ಕಂಕಣಗಳನ್ನು ಕೈಗಳಲ್ಲಿ ಧರಿಸಲು ನೀಡಿದರು.

ದೈವಿಕ ಸಹಾಯದ ಈ ಘಟನೆಗಳನ್ನು ಪರಾಂಬರಿಸಿರಿ:

1. ಹಝ್ರತ್ ಪೈಗಂಬರರು ಮನೆಯಿಂದ ಹೊರಡುವುದನ್ನು ಕಂಡರೂ ಶತ್ರುಗಳು ಮೌನವಾಗಿ ನಿಂತರು.

2. ಗುಹೆಯ ಸಮೀಪ ಪತ್ತೇದಾರ ತಲುಪಿದರೂ ಮರಳಿ ಹೋದನು.

3. ಸುರಾಖ ಹಝ್ರತ್ ಪೈಗಂಬರರ ಸಮೀಪಕ್ಕೆ ಹೋಗಿ ಆಕ್ರಮಣ ಮಾಡಲು ಶಕ್ತನಾಗಲಿಲ್ಲ. ಹೀಗೆ ಹಲವು ಸಾರಿ ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಅವರು ದೇವನ ಸಂರಕ್ಷಣೆಯಲ್ಲಿದ್ದಾರೆಂದು ಅವನು ತಿಳಿದುಕೊಂಡನು.

4. ಹಝ್ರತ್ ಪೈಗಂಬರರು ಜಯಶಾಲಿಯಾಗುವರೆಂದೂ ಮಕ್ಕವನ್ನು ಜಯಿಸುವರೆಂದೂ ಸುರಾಖ ಯೋಚಿಸಿ ತನಗೆ ಅಭಯ ನೀಡುವ ಖಾತರಿ ಪತ್ರ ಬೇಡಿಕೊಂಡನು.

5. ಖಾತರಿ ಪತ್ರ ಕೊಡುವಾಗ, ಆತನ ಕೈಗಳು, ಮುಂದೆ ಕಿಸ್ರಾ ಚಕ್ರವರ್ತಿಯ ಕಂಕಣಗಳಿಂದ ಅಲಂಕೃತವಾಗುವ ಬಗ್ಗೆ ಭವಿಷ್ಯವಾಣಿಯನ್ನು ನುಡಿಯಲಾಯಿತು.

6. ಈ ಭವಿಷ್ಯವಾಣಿ ಹಝ್ರತ್ ಉಮರರ ಖಿಲಾಫತ್ ಕಾಲದಲ್ಲಿ ಭವ್ಯವಾಗಿ ಈಡೇರಿತು.

## ಮದೀನಕ್ಕೆ ಹಝ್ರತ್ ಪೈಗಂಬರರ ಆಗಮನ

ಎಂಟು ದಿನ ಪ್ರಯಾಣ ಮಾಡಿ ಹಝ್ರತ್ ಪೈಗಂಬರ್(ಸ) 622 ಸೆಪ್ಟೆಂಬರ್ ದಿನಾಂಕ 20ರಂದು ಮದೀನವನ್ನು ತಲುಪಿದರು. ಅವರು ಮದೀನಕ್ಕೆ ತಲುಪಿದ ನಂತರ ತಾನು ಮಕ್ಕದಲ್ಲಿ ಅನುಭವಿಸಿದ ಹಿಂಸಾಚಾರ ಮತ್ತು ಕಷ್ಟಗಳನ್ನು ಹೃದಯ ಮತ್ತು ಮನಸ್ಸಿನಿಂದ ಹೊರಹಾಕಿದರು. ಅವರು ಮಕ್ಕದಲ್ಲಿ ಏಕ ದೇವಾರಾಧನೆಯನ್ನು ಸ್ವತಂತ್ರವಾಗಿ ಮಾಡಲು ಬಯಸಿದ್ದರು. ಮದೀನದ ಸಮೀಪ ಖುಬಾದಲ್ಲಿ ಮಸ್‌ಜಿದನ್ನು ಅವರು ಏಕದೇವಾರಾಧನೆಗೆ ನಿರ್ಮಿಸಿದರು. ಹತ್ತು ದಿನಗಳೊಳಗೆ ಅವರು ಮದೀನದಲ್ಲಿ ಮಸ್‌ಜಿದ್ ನಬವಿಯ ಅಸ್ತಿಭಾರ ಹಾಕಿದರು. ಅದನ್ನು ಬಹಳ ಕಷ್ಟಪಟ್ಟು ನಿರ್ಮಿಸಿದರು.

ಮಕ್ಕದಲ್ಲಿ ಹಝ್ರತ್ ಪೈಗಂಬರರಿಗೆ ಲಭಿಸಿದ ದೇವಸಂದೇಶವನ್ನು ಮದೀನದ ಎಲ್ಲರಿಗೂ ತಲುಪಿಸುವ ವ್ಯವಸ್ಥೆಯನ್ನು ಅವರು ಮಾಡಿದರು. ಐದು ಹೊತ್ತು ಪ್ರತಿದಿನ ಏಕದೇವನ ಸಂದೇಶದ ಧ್ವನಿಯನ್ನು ಉಚ್ಚರಿಸಿ ಜನರನ್ನು ಆರಾಧನೆಗೆ ಕರೆಯುವ ಕೆಲಸ ಪ್ರಾರಂಭಿಸಲ್ಪಟ್ಟಿತು.

ಹಝ್ರತ್ ಪೈಗಂಬರರು ಪ್ರತಿಯೊಬ್ಬ ಮುಹಾಜಿರ್‌ಗೆ (ಮಕ್ಕದಿಂದ ವಲಸೆ ಬಂದವನಿಗೆ) ಒಬ್ಬ ಅನ್‌ಸಾರನನ್ನು (ಮದೀನದ ನಿವಾಸಿಯನ್ನು) ಸಹೋದರನಾಗುವಂತೆ ವ್ಯವಸ್ಥೆ ಮಾಡಿದರು. ಜಗಳ ಪಿತೂರಿಗಳನ್ನು ನಿವಾರಿಸಲು ಮದೀನದ ಪ್ರತಿಯೊಂದು ಗೋತ್ರದೊಂದಿಗೆ ಒಪ್ಪಂದ ಮಾಡಿ ಪ್ರತಿಯೊಬ್ಬ ನಾಗರಿಕನಿಗೆ ಪೌರ ಮತ್ತು ಧಾರ್ಮಿಕ ಹಕ್ಕುಗಳನ್ನು ನೀಡಿದರು.

ಆದರೆ ಮಕ್ಕದ ಖುರೈಶರಿಗೆ ಹಝ್ರತ್ ಪೈಗಂಬರರು ಮದೀನದಲ್ಲಿ ಶಾಂತಮಯ ಜೀವನ ನಡೆಸುವುದು ಇಷ್ಟವಾಗಲಿಲ್ಲ. ಅವರು ಮದೀನದ ಸಮೀಪ ವಾಸಿಸುವ ಗೋತ್ರಗಳು ತಮ್ಮೊಂದಿಗೆ ಸೇರಿ ಮುಸ್ಲಿಮರ ವಿರುದ್ಧ ವರ್ತಿಸಲು ಪ್ರಚೋದಿಸಿದರು.

ಅಝ್‌ಲ್ ಮತ್ತು ಖಾರ ಎಂಬ ಎರಡು ಗೋತ್ರಗಳು ತಮಗೆ ಇಸ್ಲಾಮ್ ಧರ್ಮವನ್ನು ಕಲಿಸಲು ಜನರನ್ನು ಕಳುಹಿಸಬೇಕೆಂದು ಹಝ್ರತ್ ಪೈಗಂಬರರನ್ನು ಅಪೇಕ್ಷಿಸಿದರು. ಹತ್ತು ಮುಸ್ಲಿಮರು ಅದಕ್ಕಾಗಿ ಹೋದಾಗ ಇನ್ನೂರು ಅವಿಶ್ವಾಸಿಗಳು ಅವರನ್ನು ಆಕ್ರಮಿಸಿ ಅವರಲ್ಲಿ ಎಂಟು ಜನರನ್ನು ಕೊಂದರು.

ನಜ್‌ದ್ ಎಂಬ ಸ್ಥಳದ ಜನರು ತಮಗೆ ಅಧ್ಯಾಪಕರನ್ನು ಕಳುಹಿಸಬೇಕೆಂದು ಕೇಳಿಕೊಂಡಾಗ, ಕಳುಹಿಸಲ್ಪಟ್ಟ ನಿರಾಯುಧರಾದ ಅಧ್ಯಾಪಕರನ್ನು ಕೊಲ್ಲಲಾಯಿತು.

ಬದರ್ ಯುದ್ಧವಾಗಲಿ, ಉಹುದ್ ಯುದ್ಧವಾಗಲಿ, ಅಹ್‌ಝಾಬ್ ಯುದ್ಧವಾಗಲಿ, ಪ್ರತಿಯೊಂದು ಯುದ್ಧದ ಪರಿಣಾಮವಾಗಿ ಮುಸ್ಲಿಮರ ಜನಸಂಖ್ಯೆ ಕಡಿಮೆಯಾಗುತ್ತಾ ಇತ್ತು. ಮುಸ್ಲಿಮರ ಬಳಿ ಆಯುಧಗಳ ಕೊರತೆಯೂ ಇತ್ತು.

ಬದ್‌ರ್ ಯುದ್ಧಕೋಸ್ಕರ ಒಂದು ಸಾವಿರ ನುರಿತ ಸೈನಿಕರನ್ನು ಮಕ್ಕದ ಅವಿಶ್ವಾಸಿಗಳು ಯುದ್ಧ ಕ್ಷೇತ್ರಕ್ಕೆ ಇಳಿಸಿದರು. ಅವರನ್ನು ಎದುರಿಸಿದುದು 313 ಅನುಭವರಹಿತ ಮತ್ತು ಸಾಕಷ್ಟು ಆಯುಧಗಳನ್ನು ಹೊಂದಿರದ ಮುಸ್ಲಿಮರಾಗಿದ್ದರು. ಉಹುದ್ ಯುದ್ಧದಲ್ಲಿ ಮೂರು ಸಾವಿರ ಅವಿಶ್ವಾಸಿ ಸೈನಿಕರು ಮುಸ್ಲಿಮರನ್ನು ಆಕ್ರಮಿಸಿದಾಗ ಮುಸ್ಲಿಮ್ ಸೈನಿಕರ ಸಂಖ್ಯೆ ಏಳು ನೂರಾಗಿತ್ತು. ಈ ಯುದ್ಧದಲ್ಲಿ ಮುಸ್ಲಿಮರಿಗೆ ಬಹಳ ನಷ್ಟ ಸಂಭವಿಸಿತು. ಪ್ರತೀಕ್ಷೆ ಮಾಡದಷ್ಟು ಮುಸ್ಲಿಮರು ಹತರಾದರು.

ಬದ್‌ರ್ ಯುದ್ಧದಲ್ಲಿ ಕಠಿಣ ಸೋಲು ಅನುಭವಿಸಿದ ನಂತರ ಉಹುದ್ ಯುದ್ಧದಲ್ಲಿ ಸ್ವಲ್ಪ ಮಟ್ಟಿಗೆ ಜಯಗಳಿಸಿದ ಅವಿಶ್ವಾಸಿಗಳು ತಮ್ಮ ಶತ್ರುತ್ವವನ್ನು ಕೈಬಿಡಲಿಲ್ಲ. ಅವರು ಅನ್ಯ ಅರಬಿ ಗೋತ್ರಗಳನ್ನು ಮದೀನವನ್ನು ಆಕ್ರಮಿಸಲು ಸಿದ್ಧಗೊಳಿಸಿದರು. ಈ ಸೋಲಿಸಲಾಗದ ಸೈನ್ಯವನ್ನು ಎದುರಿಸಲು ಬರೇ ಮೂರು ಸಾವಿರ ಮುಸ್ಲಿಮರಿದ್ದರೆಂದು ಚರಿತ್ರೆ ಸಾಕ್ಷ್ಯ ಹೇಳಿದೆ. ಮದೀನದ ಒಳಗಿದ್ದ ಯಹೂದಿ ಗೋತ್ರಗಳು ಒಪ್ಪಂದವನ್ನು ಮುರಿದು ಇಸ್ಲಾಮಿನ ಶತ್ರುಗಳಿಗೆ ಸಹಾಯ ನೀಡಿದವು. ಈ ಕಾರಣದಿಂದ ಮದೀನದ ಬಾಹ್ಯ ರಕ್ಷಣೆಗೆ ಕೇವಲ ಹನ್ನೆರಡು ನೂರು ಮುಸ್ಲಿಮರು ಲಭ್ಯವಾಗಿದ್ದರು. 24 ಸಾವಿರ ಸೈನಿಕರನ್ನು ಕೇವಲ ಹನ್ನೆರಡು ನೂರು ಮುಸ್ಲಿಮರು ರಾತ್ರಿ ಹಗಲು ಎದುರಿಸಿದರು. ವಾಸ್ತವಿಕವಾಗಿ ಅಲ್ಲಾಹನೇ ದೇವದೂತರನ್ನು ಕಳುಹಿಸಿ 24

ಸಾವಿರ ಸೈನಿಕರನ್ನು ರಣಾಂಗಣದಿಂದ ಓಡಿಸಿದನು.

ಅದು ಹೀಗೆ ಸಂಭವಿಸಿತು: ರಾತ್ರಿ ಬಿರುಗಾಳಿ ಬೀಸಿತು. ಅದು ಡೇರೆಗಳನ್ನು ಹರಿದು ಹಾಕಿತು. ಒಲೆಯಿಂದ ಪಾತ್ರೆಗಳನ್ನು ಉರುಳಿಸಿತು. ಕೆಲವು ಗೋತ್ರಗಳ ಬೆಂಕಿ ಆರಿಹೋಯಿತು. ಬಹುದೇವಾರಾಧಕರು ರಾತ್ರಿ ಇಡೀ ಬೆಂಕಿ ಉರಿಯುತ್ತಾ ಇರುವುದು ಶುಭಲಕ್ಷಣ ಎಂದು ಭಾವಿಸುತ್ತಿದ್ದರು. ಯಾವ ಗೊತ್ರಗಳ ಬೆಂಕಿ ನಂದಿ ಹೋಯಿತೋ ಅವರು ಹಿಂದಕ್ಕೆ ಹೋದರು. ಸುತ್ತಮುತ್ತಲೂ ಇದ್ದ ಗೋತ್ರಗಳು, ಮುಸ್ಲಿಮರು ರಾತ್ರಿಯಲ್ಲಿ ಆಕ್ರಮಣ ಮಾಡಿದರು ಎಂದು ಭಾವಿಸಿದರು. ಅಬೂಸುಫ್‌ಯಾನ್ ದಿಗ್ಭ್ರಮೆಗೊಂಡು ರಣಾಂಗಣದಿಂದ ಓಡಿಹೋದರು. ಈ ರೀತಿ ಬಹುದೇವಾರಾಧಕ ಅವಿಶ್ವಾಸಿಗಳ ಸೈನ್ಯ ರಣಾಂಗಣದಿಂದ ಓಡಿಹೋಯಿತು!

ಕಂದಕದ (ಅಹ್‌ಝಾಬ್) ಯುದ್ಧದ ನಂತರ ಹಝ್‌ರತ್ ಪೈಗಂಬರ್(ಸ) ಹೇಳಿದರು:

"ಇನ್ನು ಮುಂದೆ ಅವಿಶ್ವಾಸಿಗಳು ನಮ್ಮನ್ನು ಆಕ್ರಮಣ ಮಾಡಲು ಬರಲಾರರು. ಇನ್ನು ಮುಂದೆ ಜಯದ ಕಾಲ ಆರಂಭವಾಗಲಿದೆ."

ಇಲ್ಲಿ ಒಂದು ವಿಷಯವನ್ನು ಸ್ಪಷ್ಟಪಡಿಸುವುದು ಆವಶ್ಯಕವಾಗಿದೆ. ಮುಸ್ಲಿಮರು ಶಾಂತಿ ಸ್ಥಾಪನೆಗೆ, ದೌರ್ಜನ್ಯಪೀಡಿತರಿಗೆ ಸಹಾಯ ನೀಡಲು ಮತ್ತು ಸ್ವಯಂರಕ್ಷಣೆಗೆ ಮಾತ್ರ ಯುದ್ಧ ಮಾಡುತ್ತಾ ಇದ್ದರು. ಯಾವುದಾದರೂ ದೇಶವನ್ನು ಸ್ವಾಧೀನಪಡಿಸಲು, ಸಂಪತ್ತನ್ನು ಸಂಗ್ರಹಿಸಲು ಅಥವಾ ಅನ್ಯಧರ್ಮವನ್ನು ನಾಶಮಾಡಲು ಶಕ್ತಿಯನ್ನು ಮುಸ್ಲಿಮರು ಪ್ರಯೋಗಿಸಲಿಲ್ಲ. ಇಸ್ಲಾಮ್ ಯಾವಾಗಲೂ ಶಾಂತಿ ಸ್ಥಾಪನೆಗೆ ಅಗ್ರಸ್ಥಾನ ನೀಡಿತು. ಶಾಂತಿಯ ವಾತಾವರಣವನ್ನು ಸ್ಥಾಪಿಸಿತು. ಯುದ್ಧದಿಂದ ರಕ್ಷಣೆ ಪಡೆಯಲು ಶಾಂತಿ ಒಪ್ಪಂದ ಮಾಡಲು ಆದ್ಯತೆ ನೀಡಿತು. ನೈಜ ಮುಸ್ಲಿಮ್ ಹಿಂದೆ ಶಾಂತಿಪ್ರಿಯನಾಗಿದ್ದ ಹಾಗೆ ಇಂದು ಸಹ ಶಾಂತಿಪ್ರಿಯನಾಗಿದ್ದಾನೆ. ನೈಜ ಮುಸ್ಲಿಮ್ ಪವಿತ್ರ ಖುರ್‌ಆನಿನ ಸಂದೇಶ "ಅಸ್ಸುಲ್‌ಹ್ ಖೈರ್" – ಶಾಂತಿ ಒಪ್ಪಂದ ಉತ್ತಮವಾಗಿದೆ ಮತ್ತು "ಲಾ ಇಕ್ರಾಹ ಫಿದ್ದೀನ್" – ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ ಎಂಬುದನ್ನು ಆಗ ಅನುಸರಿಸುತ್ತಿದ್ದ ಹಾಗೆ ಇಂದು ಸಹ ಅನುಸರಿಸುತ್ತಾನೆ.

ಮದೀನದ ವಿವಿಧ ಗೋತ್ರಗಳೊಂದಿಗೆ ಹಝ್‌ರತ್ ಪೈಗಂಬರ್(ಸ) ಒಪ್ಪಂದ ಮಾಡಿದ್ದರು. ಮಕ್ಕದವರೊಂದಿಗೆ ಸಹ ಅವರು ಒಪ್ಪಂದ ಮಾಡಿದ್ದರು. ಈ ಒಪ್ಪಂದಗಳಲ್ಲಿ ಕಠಿಣ ಶರತ್ತುಗಳು ಇದ್ದುವು. ಅನೇಕ ಮುಸ್ಲಿಮರು ಈ ಶರತ್ತುಗಳೊಂದಿಗೆ ಒಪ್ಪಂದ ಮಾಡಲು ಸಿದ್ಧರಿರಲಿಲ್ಲ. ಆದರೆ ಹಝ್‌ರತ್ ಪೈಗಂಬರರು ಶಾಂತಿ ಒಪ್ಪಂದಗಳನ್ನು ಅಂಗೀಕರಿಸಿದರು. ಈ ಒಪ್ಪಂದಕ್ಕೆ ಹಝ್‌ರತ್ ಪೈಗಂಬರರು ಸಹಿ ಹಾಕುವುದಕ್ಕೆ ಮೊದಲು ಒಂದು ಸಾವಿರದ ನಾಲ್ಕುನೂರು ಶಿಷ್ಯರು ಹಝ್‌ರತ್ ಪೈಗಂಬರಿಗೋಸ್ಕರ ಪ್ರಾಣವನ್ನು ಅರ್ಪಿಸಲು ಸಿದ್ಧರಾಗಿರುವುದಾಗಿ ಪ್ರತಿಜ್ಞೆ ಮಾಡಿದ್ದರು.

ಹಝ್‌ರತ್ ಪೈಗಂಬರರು ಶಾಂತಿಯನ್ನು ಬಯಸುತ್ತಾ ಇದ್ದುದರಿಂದ ಅವರು ಮಕ್ಕದವರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡರು. ಹುದೈಬಿಯಾ ಸಂಧಿ ಎಂದು ಇದನ್ನು ಕರೆಯಲಾಗುತ್ತಿದೆ.

## ಸಂಕ್ಷಿಪ್ತ ಪರಿಶೀಲನೆ

ವಿವೇಕಶಾಲಿಗಳು ಈ ವಿಷಯದ ಬಗ್ಗೆ ಯೋಚಿಸಿರಿ: ಮಕ್ಕದ ಅವಿಶ್ವಾಸಿಗಳು ಮುಸ್ಲಿಮರನ್ನು 13 ವರ್ಷಗಳ ತನಕ ಹಿಂಸಾಚಾರಗಳಿಗೆ ಮತ್ತು ಕ್ರೂರತೆಗೆ ಗುರಿಪಡಿಸಿದರು. ಮುಸ್ಲಿಮರು ಮತ್ತು ಹಝ್‌ರತ್ ಪೈಗಂಬರರು ಮದೀನಕ್ಕೆ ಹೋದಾಗ ಒಂದರ ನಂತರ ಇನ್ನೊಂದು ಯುದ್ಧದ ಹಾಗೆ ಆರು ವರ್ಷಗಳ ಕಾಲ ಅವಿಶ್ವಾಸಿಗಳು ಮುಸ್ಲಿಮರನ್ನು ಶಾಂತಮಯ ಜೀವನ ನಡೆಸುವುದರಿಂದ ತಡೆದಿಟ್ಟರು.

ಈ ರೀತಿ ಮುಸ್ಲಿಮರಿಗೆ ಹಿಂಸೆ ನೀಡಿದ ಕಾಲ 19 ವರ್ಷಗಳಾಗುತ್ತವೆ. ಈ ಕಾಲಾವಧಿಯ ಬಗ್ಗೆ ಲೆಕ್ಕಹಾಕುವುದಾದರೆ, ಪ್ರತಿದಿನ ಒಬ್ಬನು ಮುಸ್ಲಿಮನಾದ ಹಾಗೆ ಆಗುತ್ತದೆ. ಹುದೈಬಿಯಾ ಸಂಧಿಯ ನಂತರ ಮುಸ್ಲಿಮರು ಶಾಂತ ಜೀವಿತ ನಡೆಸಿದಾಗ ಕೇವಲ ಎರಡು ವರ್ಷಗಳಲ್ಲಿ ಪ್ರತಿದಿನ 46 ಜನರು ಮುಸ್ಲಿಮರಾದ ಹಾಗೆ ಆಗುತ್ತದೆ. ಈ ವಿಷಯ ಯೋಚಿಸಬೇಕಾದುದಾಗಿದೆ.

ಹುದೈಬಿಯಾ ಸಂಧಿಯ ಕಾಲದಲ್ಲಿ ಮುಸ್ಲಿಮರ ಸಂಖ್ಯೆ 1400 ಇತ್ತು. ಮಕ್ಕ ಜಯಿಸುವಾಗ ಮುಸ್ಲಿಮರ ಸಂಖ್ಯೆ ಹತ್ತು ಸಾವಿರವಿತ್ತು. ಇದರಿಂದ ಇಸ್ಲಾಮ್ ಬಲಾತ್ಕಾರ ಮೂಲಕ ಹಬ್ಬಲಿಲ್ಲ ಎಂಬ ಚಾರಿತ್ರಿಕ ಸತ್ಯ ಪ್ರಕಟವಾಗುತ್ತದೆ. ಇಸ್ಲಾಮ್ ತನ್ನ ಪ್ರಕಾಶಮಯ ಉಪದೇಶ ಮತ್ತು ಸಾಕ್ಷ್ಯಾಧಾರಗಳ ಕಾರಣದಿಂದ ಜನರ ಹೃದಯಗಳನ್ನು ಜಯಿಸಿತು.

ಶಾಂತಿಯ ಕಾಲದಲ್ಲಿ ಹಝ್‌ರತ್ ಪೈಗಂಬರರು ಕೆಲವು ದೇಶಗಳ ದೊರೆಗಳಿಗೆ ಇಸ್ಲಾಮಿಗೆ ಆಮಂತ್ರಿಸುವ ಪತ್ರ ಬರೆದರು. ಅವರಲ್ಲಿ ಕೆಲವರು ಮುಸ್ಲಿಮರಾದರು.

ಮಕ್ಕವನ್ನು ಜಯಿಸಿದುದು ಹಿಜರಿ ಎಂಟನೆಯ ವರ್ಷ ರಮಝಾನ್ ತಿಂಗಳಲ್ಲಿ (ಡಿಸೆಂಬರ್ 629). ಸೊಲೊಮೋನ ಪ್ರವಾದಿಯ ಭವಿಷ್ಯವಾಣಿ ಪ್ರಕಾರ ಹತ್ತು ಸಾವಿರ ಪರಿಶುದ್ಧರೊಂದಿಗೆ ಹಝ್‌ರತ್ ಪೈಗಂಬರ್(ಸ) ಮಕ್ಕವನ್ನು ಪ್ರವೇಶಿಸಿದರು. ಆ ದಿನ ಮಕ್ಕದ ಅವಿಶ್ವಾಸಿಗಳು ಮಾಡಿದ ಹಿಂಸಾಚಾರಗಳಿಗೆ ಸೇಡು ತೀರಿಸಿಕೊಳ್ಳಬಹುದಾಗಿತ್ತು. ಅಕ್ರಮಿಗಳಿಗೂ ಕಲಹಗಾರರಿಗೂ

ಶಿಕ್ಷೆ ನೀಡಬಹುದಾಗಿತ್ತು. ಆದರೆ ಆಗ ಹಝ್ರತ್ ಪೈಗಂಬರರು ಹೀಗೆ ಪ್ರಕಟಿಸಿದರು: "ಈ ದಿನ ಯಾವ ದುಷ್ಕರ್ಮಿಗೂ ಶಿಕ್ಷೆ ನೀಡುವುದಿಲ್ಲ."

ಒಬ್ಬ ಕವಿ ಹೀಗೆ ಹಾಡಿದ್ದಾರೆ:

ಅಯಾ ಝುಲ್‌ಮ್ ಕಾ ಅಫೂ ಸೇ ಇಂತಿಖಾಮ್, ಅಲೈಕಸ್ಸಲಾತು ಅಲೈಕಸ್ಸಲಾಮ್.

"ದೌರ್ಜನ್ಯಕ್ಕೆ ಕ್ಷಮೆಯ ಮೂಲಕ ಹಝ್ರತ್ ಪೈಗಂಬರ್(ಸ) ಸೇಡು ತೀರಿಸಿದರು. ನಿಮಗೆ ಶಾಂತಿ ಮತ್ತು ಆಶೀರ್ವಾದಗಳು ಸುರಿಸಲ್ಪಡಲಿ."

ಚರಿತ್ರೆಯಲ್ಲಿ ಈ ರೀತಿ ಕ್ಷಮಿಸಲಾದ ಘಟನೆಯ ಉದಾಹರಣೆ ಸಿಗುವುದಿಲ್ಲ. ಇದು ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ ಅದ್ವಿತೀಯ ವೈಶಿಷ್ಟ್ಯವಾಗಿದೆ.

**ದೇವನೊಂದಿಗೆ ಪ್ರೀತಿ ಮತ್ತು ಅವನ ಆರಾಧನೆ:**

ಹಝ್ರತ್ ಪೈಗಂಬರರ ಸಂಪೂರ್ಣ ಜೀವಿತ ದೇವ ಪ್ರೇಮದಲ್ಲಿ ಮುಳುಗಿರುವುದಾಗಿ ಕಾಣಿಸುತ್ತದೆ. ಅವರು ರಾತ್ರಿ ಹಗಲು ದೇವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು. ಅರ್ಧ ರಾತ್ರಿ ದಾಟಿದ ಕೂಡಲೆ ಅವರು ದೇವಾರಾಧನೆಗೋಸ್ಕರ ಎದ್ದು ನಿಲ್ಲುತ್ತಿದ್ದರು. ಬೆಳಗ್ಗಿನ ತನಕ ಆರಾಧನೆ ಮುಂದುವರಿಯುತ್ತಿತ್ತು. ಕೆಲವು ಸಾರಿ ಅವರ ಪಾದಗಳು ಬೀಗುತ್ತಿದ್ದುವು.

ನಮಾಝ್ ಬಗ್ಗೆ ಎಷ್ಟು ಕಾಳಜಿ ಹಝ್ರತ್ ಪೈಗಂಬರರಿಗೆ ಇತ್ತೆಂದರೆ ರೋಗಾವಸ್ಥೆಯಲ್ಲಿ ಮನೆಯಲ್ಲಿ ನಮಾಝ್ ಮಾಡಲು, ಕುಳಿತು ಅಥವಾ ಮಲಗಿ ನಮಾಝ್ ಮಾಡಲು ಅನುಮತಿ ಇದ್ದರೂ ಅವರು ಪರರ ಸಹಾಯದಿಂದ ಮಸ್‌ಜಿದ್‌ಗೆ ನಮಾಝ್ ಮಾಡಲು ಹೋಗುತ್ತಿದ್ದರು.

ಬಹುದೇವಾರಾಧನೆ ಅಥವಾ ಶಿರ್ಕ್ ಬಗ್ಗೆ ಹಝ್ರತ್ ಪೈಗಂಬರರಿಗೆ ಎಂತಹ ಜಿಗುಪ್ಸೆ ಇತ್ತೆಂದರೆ, ಅವರು ಮರಣಾಸನ್ನರಾಗಿ ನೋವನ್ನು ಅನುಭವಿಸುತ್ತಾ ಇದ್ದಾಗ ಸಹ ಹೇಳಿದರು: "ತಮ್ಮ ಪ್ರವಾದಿಗಳ ಗೋರಿಯನ್ನು ಸಾಷ್ಟಾಂಗ ಪ್ರಣಾಮ ಸ್ಥಳವನ್ನಾಗಿ ಮಾಡಿದವರಿಗೆ ಅಲ್ಲಾಹನ ಶಾಪ ಬಂದೆರಗಲಿ."

ಹಝ್ರತ್ ಪೈಗಂಬರರ ಜೀವಿತೋದ್ದೇಶ ದೇವನ ಶ್ರೇಷ್ಠತೆ ಮತ್ತು ಮಹಿಮೆಯನ್ನು ಜನರಲ್ಲಿ ಸ್ಥಾಪಿಸುವುದಾಗಿತ್ತು. ಅವರು ತನ್ನ ಅನುಯಾಯಿಗಳಿಗೆ ಯಾವಾಗಲೂ ಎಲ್ಲ ಕ್ಷಣಗಳಲ್ಲೂ ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಲು, ಅವನನ್ನು ಆರಾಧಿಸಲು ಮತ್ತು ಪ್ರೀತಿಸಲು ಉಪದೇಶಿಸುತ್ತಿದ್ದರು. ಅವರು ಭೂಮಿಯಲ್ಲಿ ಜೀವಿಸುತ್ತಿದ್ದರೂ ಲೋಕದ ವೈಭವ ಮತ್ತು ಸಂಪತ್ತನ್ನು ಎಂದೂ ಪ್ರೀತಿಸಲಿಲ್ಲ. ಅವರು ಇಚ್ಛಿಸಿರುತ್ತಿದ್ದರೆ ದೊರೆಗಳ ಹಾಗೆ ಅತ್ಯಂತ ಉನ್ನತ ಮಟ್ಟದ ಅರಮನೆಗಳನ್ನು ನಿರ್ಮಿಸಬಹುದಾಗಿತ್ತು. ಬೆಲೆಬಾಳುವ ಉಡುಗೆ ತೊಡುಗೆಗಳನ್ನು ಧರಿಸಬಹುದಾಗಿತ್ತು. ಮೃಷ್ಟಾನ್ನ ಭೋಜನ ಸದಾ ಕಾಲ ಮಾಡಬಹುದಾಗಿತ್ತು. ಆದರೆ ಅವರು ಲೌಕಿಕ ಸುಖಕ್ಕೆ ಯಾವುದೇ ಪ್ರಾಮುಖ್ಯತೆ ನೀಡಲಿಲ್ಲ. ಅಂದಿನ ಕಾಲದ ದೊರೆಗಳೊಂದಿಗೆ ಮತ್ತು ಇಂದಿನ ಕಾಲದ ಅಧಿಕಾರಾರೂಢರೊಂದಿಗೆ ಅವರನ್ನು ಹೋಲಿಸಲು ಸಾಧ್ಯವಾಗಲಾರದು.

**ಹಝುರತ್ ಪೈಗಂಬರರ ಆಹಾರ ಪಾನೀಯ:**

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಜೋಳದ ರೊಟ್ಟಿಯನ್ನು ಕೂಡ ಎಂದೂ ಹೊಟ್ಟೆ ತುಂಬ ತಿನ್ನಲಿಲ್ಲ. ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರು ನಿರಂತರ ಮೂರು ದಿನಗಳ ಕಾಲ ಹೊಟ್ಟೆ ತುಂಬಾ ಊಟ ಮಾಡಿರಲಿಲ್ಲ. ಇದೇ ರೀತಿ ಅವರು ನಿಧನಹೊಂದುವ ತನಕ ಮುಂದುವರಿಯಿತು.

**ಹಝ್ರತ್ ಪೈಗಂಬರರ ಉಡುಗೆ ತೊಡುಗೆ:**

ಅವರು ಅಂಗಿ ಮತ್ತು ಲುಂಗಿ ಧರಿಸುತ್ತಿದ್ದರು ಅಥವಾ ಅಂಗಿ ಮತ್ತು ಪೈಜಾಮು ಧರಿಸುತ್ತಿದ್ದರು. ಅವರು ರೇಷ್ಮೆ ಬಟ್ಟೆ ಎಂದೂ ಧರಿಸುತ್ತಿರಲಿಲ್ಲ. ಪುರುಷರು ರೇಷ್ಮೆ ಬಟ್ಟೆ ಧರಿಸಲು ಅವರು ಅನುಮತಿ ನೀಡುತ್ತಿರಲಿಲ್ಲ. ಒಮ್ಮೆ ಹಝ್ರತ್ ಉಮರ್(ರ), ರಾಯಭಾರಿಗಳನ್ನು ಭೇಟಿಯಾಗುವಾಗ ಬೆಲೆಬಾಳುವ ನಿಲುವಂಗಿ ಧರಿಸಬೇಕೆಂದು ಹೇಳಿದಾಗ, ಹಝ್ರತ್ ಪೈಗಂಬರ್(ಸ) ಅದನ್ನು ಇಷ್ಟಪಡಲಿಲ್ಲ. "ಅಲ್ಲಾಹನು ನನ್ನನ್ನು ಇಂತಹ ಕೆಲಸ ಮಾಡಲು ಕಳುಹಿಸಲಿಲ್ಲ" ಎಂದು ಅವರು ಹೇಳಿದರು.

**ಹಾಸಿಗೆಯ ಸರಳತೆ:**

ಅವರ ಹಾಸಿಗೆ ಅತ್ಯಂತ ಸಾಮಾನ್ಯವಾಗಿತ್ತು. ಚರ್ಮ ಅಥವಾ ಒಂಟೆ ರೋಮದ ಹಾಸು ಬಟ್ಟೆಯನ್ನು ಅವರು ಉಪಯೋಗಿಸುತ್ತಿದ್ದರು. ಹಝ್ರತ್ ಆಯಿಶಾ ಹೀಗೆ ಹೇಳುತ್ತಾರೆ: ನಮ್ಮ ಹಾಸಿಗೆ ಚಿಕ್ಕದಾಗಿತ್ತು. ಹಝ್ರತ್ ಪೈಗಂಬರರು ರಾತ್ರಿ ಎದ್ದು ನಮಾಝ್ ಮಾಡುವಾಗ ನಾನು ಒಂದು ಬದಿಗೆ ಸರಿದು ಮಲಗುತ್ತಿದ್ದೆ. ಅವರು ನಿಲ್ಲುವಾಗ ನಾನು ಕಾಲು ಚಾಚುತ್ತಿದ್ದೆ. ಅವರು ಸಾಷ್ಟಾಂಗ ಪ್ರಣಾಮ ಮಾಡುವಾಗ ನಾನು ಕಾಲನ್ನು ಎಳೆದುಕೊಳ್ಳುತ್ತಿದ್ದೆ.

**ಮನೆಯ ಸರಳತೆ:**

ಅವರ ಮನೆಯಲ್ಲಿ ಒಂದು ಕೋಣೆ ಮತ್ತು ಒಂದು ಚಾವಡಿ ಇತ್ತು. ಕೋಣೆಯ ಒಳಗೆ ಹಗ್ಗ ಕಟ್ಟಿ ಪರದೆ ಹಾಕಲಾಗುತ್ತಿತ್ತು. ಸಂದರ್ಶಕರು ಬರುವಾಗ ಪರದೆಯ ಹೊರಭಾಗದಲ್ಲಿ ಅವರೊಂದಿಗೆ ಮಾತನಾಡುತ್ತಿದ್ದರು.

# ವಾಗ್ದತ್ತ ಮಸೀಹರ ಆಗಮನ

★ *ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್*
*ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫ*

ನಮ್ಮ ವಿರುದ್ಧ ಮಾಡಲಾಗುವ ಮತ್ತೊಂದು ಆಕ್ಷೇಪ ಹೀಗಿದೆ:

ನಾವು ಅನ್ಯ ಮುಸ್ಲಿಮರ ನಂಬಿಕೆಗೆ ವಿರುದ್ಧವಾಗಿ ಮುಸ್ಲಿಮ್ ಸಮುದಾಯದಲ್ಲಿ ಒಬ್ಬ ವ್ಯಕ್ತಿ ವಾಗ್ದತ್ತ ಮಸೀಹ್ ಆಗಿರುವರು ಎಂದು ನಂಬುತ್ತೇವೆ. ಈ ನಂಬಿಕೆ ಹದೀಸುಗಳಿಗೆ ವಿರುದ್ಧವಾಗಿದೆ; ಏಕೆಂದರೆ ಹದೀಸುಗಳ ಪ್ರಕಾರ ಹಝ್ರತ್ ಈಸಾ ಮಸೀಹ್ ಅಲೈಹಿಸ್ಸಲಾಮ್ ಸ್ವತಃ ಆಕಾಶದಿಂದ ಇಳಿದು ಬರುವರು.

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್‌ರನ್ನು ವಾಗ್ದತ್ತ ಮಹ್‌ದೀ (ಮಹ್‌ದೀ ಮಸ್‌ಊದ್) ಎಂದು ನಾವು ನಂಬುತ್ತೇವೆ ಎಂಬುದು ಸಂಪೂರ್ಣ ಸತ್ಯವಾಗಿದೆ. ಪವಿತ್ರ ಖುರ್‌ಆನ್, ಹದೀಸುಗಳು ಮತ್ತು ವೈಚಾರಿಕ ಪ್ರಮಾಣಗಳು ಹಝ್ರತ್ ಈಸಾ ಮಸೀಹ್(ಅ) ಮೃತರಾಗಿರುವರು ಎಂದು ಸಾಬೀತುಗೊಳಿಸಿರುವಾಗ ನಮ್ಮ ಈ ನಂಬಿಕೆ ಪವಿತ್ರ ಖುರ್‌ಆನ್ ಮತ್ತು ಹದೀಸಿಗೆ ವಿರುದ್ಧವಾಗುವುದು ಹೇಗೆಂದು ನಮಗೆ ತಿಳಿಯುವುದಿಲ್ಲ. ಪವಿತ್ರ ಖುರ್‌ಆನ್ ಮೂಲಕ ಹಝ್ರತ್ ಈಸಾ ಮಸೀಹರು ಮೃತರಾಗಿರುವರೆಂದು ಸಾಬೀತಾಗಿದೆ. ಹದೀಸುಗಳು ಅದಕ್ಕೆ ಸಾಕ್ಷ್ಯ ಹೇಳಿವೆ. ಇಬ್ನು ಮರ್‌ಯಮ್ ಎಂದು ಹೆಸರಿಸಲಾದ ಒಬ್ಬ ವಾಗ್ದತ್ತ ಮಹಾಪುರುಷ ಆಗಮಿಸುವರು ಎಂದು ಶುಭ ವಾರ್ತೆಯನ್ನು ಹದೀಸುಗಳು ನೀಡುತ್ತಿವೆ. ಹೀಗಿರುವಾಗ ಆಗಮಿಸಲಿರುವ ಮಹಾಪುರುಷರು ಇದೇ ಸಮುದಾಯದ ಒಬ್ಬ ಸದಸ್ಯನಾಗಿ ಆಗಮಿಸುವರೆಂದೂ ಮೃತರಾದ ಹಝ್ರತ್ ಈಸಾ ಮಸೀಹ್(ಅ) ಆಗಮಿಸಲಾರರು ಎಂದೂ ಸ್ಪಷ್ಟವಾಗುತ್ತದೆ.

ಕೆಲವರು ಹೀಗೆ ಹೇಳುತ್ತಾರೆ: ಪವಿತ್ರ ಖುರ್‌ಆನ್ ಮತ್ತು ಹದೀಸುಗಳು ಹಝ್ರತ್ ಈಸಾ ಮಸೀಹ್(ಅ) ನಿಧನ ಹೊಂದಿದರೆಂದು ಸಾಬೀತುಗೊಳಿಸುತ್ತಿದ್ದರೂ ಮಸೀಹ್ ಇಬ್ನು ಮರ್‌ಯಮ್ ಆಗಮಿಸುವರೆಂಬ ಶುಭವಾರ್ತೆ ನೀಡಲ್ಪಟ್ಟ ಕಾರಣ ಅವರ ಆಗಮನದ ಬಗ್ಗೆ ದೃಢವಿಶ್ವಾಸ ಹೊಂದಬೇಕು. ಏಕೆಂದರೆ ಅವರನ್ನು ಪುನರುಜ್ಜೀವಿಸಿ ಲೋಕದ ಸುಧಾರಣೆಗೆ ಕಳುಹಿಸಲು ಅಲ್ಲಾಹನಿಗೆ ಶಕ್ತಿ ಇಲ್ಲವೇ?

ನಾವು ಅಲ್ಲಾಹನ ಶಕ್ತಿಸಾಮರ್ಥ್ಯಗಳನ್ನು ನಿರಾಕರಿಸುತ್ತೇವೆ ಎಂದು ನಮ್ಮ ಮೇಲೆ ಆಕ್ಷೇಪ ಮಾಡಲಾಗುತ್ತದೆ. ವಾಸ್ತವಿಕ ವಿಷಯವೇನೆಂದರೆ, ನಾವು ಅಲ್ಲಾಹನ ಶಕ್ತಿ ಸಾಮರ್ಥ್ಯಗಳನ್ನು ನಿರಾಕರಿಸುವ ಕಾರಣದಿಂದಲ್ಲ, ಅವನ ಶಕ್ತಿ ಸಾಮರ್ಥ್ಯಗಳ ಬಗ್ಗೆ ವಿಶ್ವಾಸ ಹೊಂದಿರುವುದರಿಂದ ನಾವು ಹೀಗೆ ನಂಬುತ್ತೇವೆ. ಮೃತರಾದ ಹಝ್ರತ್ ಈಸಾ ಮಸೀಹರನ್ನು ಪುನರುಜ್ಜೀವಿಸಿ ಅಲ್ಲಾಹನು ಲೋಕಕ್ಕೆ ಕಳುಹಿಸಲಾರನು. ಅವನು ಮುಸ್ಲಿಮ್ ಸಮುದಾಯದಲ್ಲಿಯೇ ಒಬ್ಬರನ್ನು ವಾಗ್ದತ್ತ ಮಸೀಹನ್ನಾಗಿ ಮಾಡಿ ಕಳುಹಿಸಿದನು. ಒಬ್ಬ ಮನುಷ್ಯನು ಪೂರ್ಣ ರೂಪದಲ್ಲಿ ಚಿಂತಿಸುವುದಾದರೆ, ಹಝ್ರತ್ ಈಸಾ ಮಸೀಹರನ್ನು ಪುನರುಜ್ಜೀವಿಸಿ ಕಳುಹಿಸುವುದು ಅಲ್ಲಾಹನು ಶಕ್ತಿ ಸಾಮರ್ಥ್ಯ ಹೊಂದಿದವನೆಂದು ಸಾಬೀತುಗೊಳಿಸುತ್ತದೆ ಎಂದು ಅಂಗೀಕರಿಸಲಾರನು.

ನಾವು ಲೋಕದಲ್ಲಿ ಹೀಗೆ ಕಾಣುತ್ತೇವೆ: ಒಬ್ಬ ಶ್ರೀಮಂತನು ತನ್ನ ಅಂಗಿ ಹಳೆಯದಾದಾಗ ಅದರ ಒಳಭಾಗವನ್ನು ಹೊರಭಾಗಕ್ಕೆ ಬರುವಂತೆ ಪುನಃ ಹೊಲಿಸುವುದಿಲ್ಲ. ಆ ಅಂಗಿಯನ್ನು ಬಿಟ್ಟು ಹೊಸ ಅಂಗಿಯನ್ನು ವಿವಿಧ ರೀತಿಗಳಲ್ಲಿ ಪರಿವರ್ತಿಸಿ ಧರಿಸುತ್ತಾರೆ. ಅವರು ತಮ್ಮ ವಸ್ತುಗಳನ್ನು ಬಹಳ ಜಾಗರೂಕತೆಯಿಂದ ಕಾಪಾಡುತ್ತಾರೆ.

ಆದರೆ ಅಲ್ಲಾಹನು ಕೊರತೆ ಅನುಭವಿಸಿ ಜನರಿಗೆ ಮಾರ್ಗದರ್ಶನ ನೀಡಲಿಕ್ಕಾಗಿ ಮೃತನಾದ ಒಬ್ಬ ಪ್ರವಾದಿಯನ್ನು ಪುನರುಜ್ಜೀವಿಸಿ ಕಳುಹಿಸಬೇಕಾಯಿತೆಂದು ಹೇಳುವುದಾದರೂ ಹೇಗೆ? ಅಲ್ಲಾಹನು ಯಾವಾಗಲೂ ಆಯಾ ಕಾಲದ ಜನರ ಮಾರ್ಗದರ್ಶನಕ್ಕಾಗಿ ಆಯಾ ಕಾಲದ ಜನರಿಂದಲೇ ಪ್ರವಾದಿಯನ್ನು ಆಯ್ಕೆ ಮಾಡಿ ಕಳುಹಿಸುತ್ತಾ ಇದ್ದನು. ಹಝ್ರತ್ ಆದಮ್(ಅ) ಅವರ ಕಾಲದಿಂದ ಮೊದಲುಗೊಂಡು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟದ ತನಕ ಒಮ್ಮೆಯಾದರೂ ಮೃತನಾದ ಒಬ್ಬ ಪ್ರವಾದಿಯನ್ನು ಪುನರುಜ್ಜೀವಿಸಿ ಜನರ ಮಾರ್ಗದರ್ಶನಕ್ಕೋಸ್ಕರ ಕಳುಹಿಸಿದ ಘಟನೆ ನಡೆದಿಲ್ಲ. ಯಾವುದಾದರೊಂದು ಕಾಲಘಟ್ಟದ ಜನರ ಹೃದಯಗಳ ಶುದ್ಧೀಕರಣವು ಅಲ್ಲಾಹನ ಸಾಮರ್ಥ್ಯಕ್ಕೆ ಅತೀತವಾಗಿ ಜನರ ಮೇಲೆ ಅಧಿಕಾರ ಚಲಾಯಿಸಲು ಅವನಿಗೆ ಅಸಾಧ್ಯವಾಗಿರುವಾಗ ಹಾಗೆ ಮಾಡಲು ನಿರ್ಬಂಧಿತನಾಗಬಹುದು. ಆದರೆ ಹೀಗೆ ಎಂದೂ ಸಂಭವಿಸಲಾರದು. ಆದುದರಿಂದ ಒಬ್ಬ ಮೃತ ಪ್ರವಾದಿಯನ್ನು ಸ್ವರ್ಗದಿಂದ ಹೊರಗೆ ತಂದು ಲೋಕದ ಸುಧಾರಣೆಗೆ ಕಳುಹಿಸುವುದು ಸಹ ಎಂದೂ ಸಂಭವಿಸಲಾರದು. ಅಲ್ಲಾಹನು ಸಂಪೂರ್ಣ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನೂ ಅದ್ವಿತೀಯನೂ ಆಗಿದ್ದಾನೆ. ಹಝ್ರತ್ ಈಸಾ ಮಸೀಹರ(ಅ) ನಂತರ ಮುಹಮ್ಮದ್ ರಸೂಲ್

---

ಹಝ್ರತ್ ಪೈಗಂಬರರು ನೆಲದಲ್ಲಿ ಹಾಸುಬಟ್ಟೆ ಹಾಸಿ ಮಲಗುತ್ತಿದ್ದರು. ಹಝ್ರತ್ ಆಯಿಶಾ ಹೇಳುತ್ತಾರೆ: ಹಝ್ರತ್ ಪೈಗಂಬರರ ಕಾಲದಲ್ಲಿ ಅನೇಕ ಸಾರಿ ನಾವು ಖರ್ಜೂರ ತಿಂದು, ನೀರು ಕುಡಿದು ಜೀವಿಸುತ್ತಿದ್ದೆವು.

## ಹಝ್ರತ್ ಪೈಗಂಬರರ ಸ್ವತ್ತು:

ಹಝ್ರತ್ ಉಮರ್ ಬಿನ್ ಹರ್‌ಸ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಮೃತರಾಗುವಾಗ ಯಾವ ಸ್ವತ್ತನ್ನೂ ಬಿಟ್ಟುಹೋಗಲಿಲ್ಲ. ದಿರ್‌ಹಮ್ ಆಗಲಿ, ದೀನಾರ್ ಆಗಲಿ, ದಾಸನಾಗಲಿ, ದಾಸಿಯಾಗಲಿ ಅವರು ಬಿಟ್ಟುಹೋಗಲಿಲ್ಲ. ಅವರು ಒಂದು ಬಿಳಿ ಹೇಸರಗತ್ತೆಯನ್ನು ಮತ್ತು ಕವಚವನ್ನು ಬಿಟ್ಟು ಹೋಗಿದ್ದರು. ಕವಚವನ್ನು ಒಬ್ಬ ಯಹೂದಿಯ ಬಳಿಯಲ್ಲಿ ಗಿರವಿಯಾಗಿ ಇರಿಸಲಾಗಿತ್ತು.

ಸತ್ಯ ಪ್ರಿಯ ಜನರೊಂದಿಗೆ ನಾನು ಅಪೇಕ್ಷಿಸುವುದೇನೆಂದರೆ, ಮೇಲೆ ವಿವರಿಸಿದುದಕ್ಕಿಂತ ಹೆಚ್ಚಿನ ಸ್ವತ್ತನ್ನು ಹಝ್ರತ್ ಪೈಗಂಬರ್(ಸ) ಬಿಟ್ಟು ಹೋಗಿದ್ದರೆ ಅದನ್ನು ಬಹಿರಂಗಪಡಿಸಿರಿ.

★

ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಾಗಿರುವ ಮಹಾಪುರುಷರನ್ನು ಸೃಷ್ಟಿಸಿರುವಾಗ ಹಝ್ರತ್ ಈಸಾ ಮಸೀಹರ ಹಾಗಿರುವ ಅಥವಾ ಅವರಿಗಿಂತ ಶ್ರೇಷ್ಠರಾದ ಒಬ್ಬ ಮಹಾನುಭಾವರನ್ನು ಸೃಷ್ಟಿಸುವುದು ಅವನಿಗೆ ಅಸಾಧ್ಯವಾಗಲಾರದು.

ಹಝ್ರತ್ ಈಸಾ ಮಸೀಹರ(ಅ) ಆಗಮನವನ್ನು ನಾವು ನಿರಾಕರಿಸುವುದು ಅಲ್ಲಾಹನು ಶಕ್ತಿ ಸಾಮರ್ಥ್ಯ ಹೊಂದಿದವನೆಂದು ನಾವು ನಂಬದಿರುವ ಕಾರಣದಿಂದಲ್ಲ. ಅಲ್ಲಾಹನು ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುವನೆಂದು ನಾವು ನಂಬುವುದರಿಂದಲೇ ಹಾಗೆ ಹೇಳುತ್ತೇವೆ. ಅಲ್ಲಾಹನು ಇಚ್ಛಿಸುವಾಗ ತನ್ನ ದಾಸರಲ್ಲಿ ಒಬ್ಬನನ್ನು ಜನರಿಗೆ ಮಾರ್ಗ ದರ್ಶನ ನೀಡಲು ಆಯ್ಕೆ ಮಾಡುತ್ತಾನೆ. ಅವನು ತಾನು ಆಯ್ಕೆ ಮಾಡಿದ ಮಹಾನುಭಾವರ ಮೂಲಕ ಪಥಭ್ರಷ್ಟರನ್ನು ತನ್ನ ಕಡೆಗೆ ಕರೆಯುತ್ತಾನೆ. ಅಲ್ಲಾಹನು ಹೀಗೆ ಮಾಡುವ ಆವಶ್ಯಕತೆ ಉಂಟಾದಾಗ ಅವನು ಮೃತನಾದ, ಹಿಂದೆ ಆಗಮಿಸಿದ ಪ್ರವಾದಿಯನ್ನು ಪುನರುಜ್ಜೀವಿಸಿ ಕಳುಹಿಸುತ್ತಾನೆ ಎಂದು ಯೋಚಿಸುವವರು ತಪ್ಪುಗಾರರಾಗಿದ್ದಾರೆ. **ವಮಾ ಖದರುಲ್ಲಾಹ ಹಖ್ಖ ಖದರಿಹೀ** – ಅಲ್ಲಾಹನ ಅರ್ಹತೆಗೆ ಅನುಸಾರವಾಗಿ ಅವನ ಶಕ್ತಿ ಸಾಮರ್ಥ್ಯಗಳನ್ನು ಅವರು ಅಂದಾಜಿಸಲಿಲ್ಲ.

ಹಝ್ರತ್ ಈಸಾ ಮಸೀಹ್(ಅ) ಮೃತರಾದ ನಂತರ ಪುನರುಜ್ಜೀವನ ಹೊಂದಿ ಪುನರಾಗಮಿಸುವುದರಿಂದ ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಶಂಕೆ ಉಂಟಾಗುತ್ತದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶುದ್ಧೀಕರಣ ಶಕ್ತಿಯ ಬಗ್ಗೆಯೂ ಶಂಕೆ ಉಂಟಾಗುತ್ತದೆ. ಏಕೆಂದರೆ ಹಝ್ರತ್ ಈಸಾ ಮಸೀಹ್(ಅ) ಪುನರಾಗಮಿಸುವುದಾದರೆ, ಅದರ ಅರ್ಥ ಹೀಗಾಗುತ್ತದೆ: ಹಿಂದಿನ ಕಾಲದಲ್ಲಿ ಎಲ್ಲಾ ಜನಸಮೂಹಗಳು ಬಿಗಡಾಯಿಸಿದಾಗ ಅವರ ಸುಧಾರಣೆಗೋಸ್ಕರ ಅಲ್ಲಾಹನು ಅವರ ಮಧ್ಯದಿಂದಲೇ ಒಬ್ಬರನ್ನು ಆಯ್ಕೆ ಮಾಡಿ ನೇಮಿಸುತ್ತಾ ಇದ್ದನು. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯ ಬಿಗಡಾಯಿಸಿದಾಗ ಅವರ ಸುಧಾರಣೆಗೋಸ್ಕರ ಅಲ್ಲಾಹನು ಹಿಂದಿನ ಕಾಲದ ಪ್ರವಾದಿಗಳಲ್ಲಿ ಒಬ್ಬರನ್ನು ಮರಳಿ ತರುವನು. ಹಝ್ರತ್ ಮುಹಮ್ಮದ್ ಪೈಗಂಬರರ ಸಮುದಾಯದಲ್ಲಿ ಯಾವುದೇ ವ್ಯಕ್ತಿ ಈ ಸಮುದಾಯವನ್ನು ಸುಧಾರಣೆ ಮಾಡುವ ಶಕ್ತಿ ಹೊಂದಲಾರ.

ನಾವು ಈ ಮಾತನ್ನು ಅಂಗೀಕರಿಸುವುದಾದರೆ, ನಾವು ನಿಶ್ಚಯವಾಗಿಯೂ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ವಿರೋಧಿಸುವ ಕ್ರೈಸ್ತರಿಗಿಂತಲೂ ಯಹೂದಿಯರಿಗಿಂತಲೂ ಕಡಿಮೆ ಶತ್ರುತ್ವ ಹೊಂದಿದವರಾಗಲಾರೆವು. ಏಕೆಂದರೆ ಅವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುಧಾರಣ ಶಕ್ತಿಯನ್ನು ನಿರಾಕರಿಸುವವರಾಗಿರುತ್ತಾರೆ.

ಒಂದು ದೀಪವು ಉರಿಯುತ್ತಿರುವಾಗ ಅದರಿಂದ ಅನೇಕ ದೀಪಗಳನ್ನು ನಿಶ್ಚಯವಾಗಿಯೂ ಉರಿಸಬಹುದು. ಆದರೆ ನಂದಿಸಲಾದ ದೀಪದಿಂದ ಬೇರೆ ದೀಪಗಳನ್ನು ಉರಿಸಲಾಗದು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯ ಅತ್ಯಂತ ಹೆಚ್ಚು ಬಿಗಡಾಯಿಸಿ ಅದರ ಸುಧಾರಣೆಗೋಸ್ಕರ ಅದೇ ಸಮುದಾಯದಿಂದ ಒಬ್ಬನು ಎದ್ದು ನಿಲ್ಲಲಾರ ಎಂಬ ಸ್ಥಿತಿಯು ಉಂಟಾಗುವುದೆಂದು ಭಾವಿಸುವುದಾದರೆ ಅದರೊಂದಿಗೆ ಹೀಗೆ ಸಹ ಭಾವಿಸಬೇಕಾಗುತ್ತದೆ: ಆ ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹದಾಯಕ ಶಕ್ತಿಯು ಸಹ ಕೊನೆಗೊಂಡಿರುವುದು. (ನಊಧುಬಿಲ್ಲಾಹಿ ಮಿನ್‌ಧಾಲಿಕ – ಹಾಗೆ ಹೇಳುವುದರಿಂದ ರಕ್ಷಣೆಪಡೆಯಲು ಅಲ್ಲಾಹನ ಅಭಯ ಯಾಚಿಸುತ್ತೇವೆ.)

ಹಝ್ರತ್ ಮೂಸಾ(ಅ) ಅವರ ಪ್ರವಾದಿತ್ವದ ಶೃಂಖಲೆ ಜಾರಿಯಲ್ಲಿರಬೇಕೆಂದು ಅಲ್ಲಾಹನು ಇಚ್ಛಿಸಿದ ಕಾಲದ ತನಕ ಅವರನ್ನು ಅನುಸರಣೆ ಮಾಡುತ್ತಾ ಇದ್ದ ಜನರು ಅವರ ಸಮುದಾಯದ ಸುಧಾರಣೆಗೆ ಆಗಮಿಸುತ್ತಾ ಇದ್ದರು. ಅಲ್ಲಾಹನು ಆ ಶೃಂಖಲೆಯನ್ನು ಕೊನೆಗೊಳಿಸಲು ಬಯಸಿದಾಗ, ಅವರ ಸಮುದಾಯದಲ್ಲಿ ಪ್ರವಾದಿತ್ವವನ್ನು ಮುಕ್ತಾಯಗೊಳಿಸಿ ಹಝ್ರತ್ ಇಸ್ಮಾಈಲ್(ಅ) ಅವರ ಸಂತಾನದಲ್ಲಿ ಪ್ರವಾದಿಯನ್ನು ಅಲ್ಲಾಹನು ಕಳುಹಿಸಿದನು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಯಾವುದೇ ಪ್ರವಾದಿ ಹಝ್ರತ್ ಮೂಸಾರ(ಅ) ಶೃಂಖಲೆಯಿಂದ ಆಗಮಿಸುವುದಾದರೆ, ಅದರ ಅರ್ಥವೇನೆಂದರೆ, ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರವಾದಿತ್ವದ ಶೃಂಖಲೆಯನ್ನು ಕೊನೆಗೊಳಿಸುವವನು ಮತ್ತು ಹೊಸದಾದೊಂದು ಶೃಂಖಲೆಯನ್ನು ಆರಂಭಗೊಳಿಸುವವನು. (ನಊಧುಬಿಲ್ಲಾಹಿ ಮಿನ್‌ಧಾಲಿಕ.) ಆ ಕಾಲದಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶುದ್ಧೀಕರಣ ಶಕ್ತಿ ಬಲಹೀನವಾಗಿರುವುದು. ಅವರ ಅನುಗ್ರಹದಾಯಕ ಶಕ್ತಿಗೆ ತನ್ನ ಸಮುದಾಯದ ಯಾವುದೇ ವ್ಯಕ್ತಿಯನ್ನು, ಅವರಿಂದ ಪ್ರಕಾಶ ಪಡೆದು ಅವರ ಸಮುದಾಯವನ್ನು ಸುಧಾರಣೆ ಮಾಡಿ ನೇರಮಾರ್ಗದಲ್ಲಿ ನಡೆಸಲು ಅವರಿಗೆ ಸಾಧ್ಯವಾಗಲಾರದು (ನಊಧುಬಿಲ್ಲಾಹಿ ಮಿನ್‌ಧಾಲಿಕ).

ಖೇದಕರವಾದ ವಿಷಯವೇನೆಂದರೆ, ಜನರು ತಮ್ಮ ಬಗ್ಗೆ ಆವಶ್ಯಕತೆಗಿಂತಲೂ ಹೆಚ್ಚು ಅಭಿಮಾನ ಹೊಂದಿದವರಾಗಿರುತ್ತಾರೆ. ಯಾರೂ ತಮ್ಮ ನ್ಯೂನತೆ ಬಗ್ಗೆ ಪ್ರಸ್ತಾಪಿಸುವುದನ್ನು ಇಷ್ಟಪಡಲಾರರು. ಆದರೆ ಅಲ್ಲಾಹನ ಪ್ರವಾದಿಯ ಬಗ್ಗೆ ಪ್ರತಿಯೊಂದು ರೀತಿಯ ನ್ಯೂನತೆ ಆರೋಪಿಸಲು ಧೈರ್ಯ ಹೊಂದುತ್ತಾರೆ. ಕೇವಲ ಬಾಯಿಗೆ ಸೀಮಿತವಾಗಿದ್ದು ಹೃದಯದಲ್ಲಿ ಅದರ ಯಾವ ಪ್ರಭಾವವೂ ಕಾಣಿಸದ ಪ್ರೀತಿಯನ್ನು ನಾವು ಏನು ಮಾಡಬಹುದು. ಯಾವುದೇ ಸಾಕ್ಷ್ಯಾಧಾರದ ಬೆಂಬಲವಿಲ್ಲದ ವಾದವನ್ನು ನಾವು ಹೇಗೆ ಅಂಗೀಕರಿಸಬಹುದು?

ಜನರು ವಾಸ್ತವಿಕವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವುದಾದರೆ, ಒಬ್ಬ ಇಸ್ರಾಈಲೀ ಪ್ರವಾದಿ ಆಗಮಿಸಿ ಅವರ ಸಮುದಾಯದ ಸುಧಾರಣೆ ಮಾಡುವರೆಂದು ಒಂದು ಕ್ಷಣ ಸಹ ಯೋಚಿಸಲಾರರು. ಒಬ್ಬ ಅಭಿಮಾನಿ ವ್ಯಕ್ತಿ ತನ್ನ ಮನೆಯಲ್ಲಿ ಸಾಮಗ್ರಿಗಳು ಇರುವಾಗ ಅನ್ಯರಿಂದ ಬೇಡಲು ಹೋಗುವನೆ? ತನಗೆ ಶಕ್ತಿ ಇರುವಾಗ ಅನ್ಯರನ್ನು ಸಹಾಯಕ್ಕೋಸ್ಕರ ಕರೆಯುವನೆ?

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದ ಸುಧಾರಣೆಗೆ ಮತ್ತು ಅದನ್ನು ಕಷ್ಟಗಳಿಂದ ರಕ್ಷಿಸಲು ಹಝ್ರತ್ ಈಸ ಮಸೀಹ್(ಅ) ಆಗಮಿಸುವರೆಂದು ಹೇಳುವ ಮೌಲವಿ ತಮ್ಮ ಬಗ್ಗೆ ಎಂತಹ ಅಭಿಮಾನ ಹೊಂದುವರೆಂದರೆ, ವಾದ ಪ್ರತಿವಾದ ನಡೆಯುವಾಗ ಅವರು ಸೋತು ಹೋಗುವಾಗ ಕೂಡ ತಮ್ಮ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ಬೇರೆ ಯಾರನ್ನಾದರೂ ತಮ್ಮ ಸಹಾಯಕ್ಕೆ ಕರೆಯಲು ಇಷ್ಟಪಡುವುದಿಲ್ಲ. ಯಾರಾದರೂ ಸ್ವತಃ ಅವರಿಗೆ ಸಹಾಯ ಮಾಡಲು ಮುಂದೆ ಬಂದರೆ ಅವರಿಗೆ ಕೃತಜ್ಞತೆ ಸೂಚಿಸುವುದಕ್ಕೆ ಪ್ರತಿಯಾಗಿ ಕೋಪಗೊಳ್ಳುತ್ತಾರೆ ಮತ್ತು ಹೇಳುತ್ತಾರೆ: "ನೀನು ನಮಗೆ ಕಲಿಸಿಕೊಡಬೇಕಿಲ್ಲ. ನಾವೇನೂ ಅಜ್ಞಾನಿಗಳಲ್ಲ."

ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲಾಹು ಅಲೈಹಿ ವಸಲ್ಲಮರ ಬಗ್ಗೆ ಅವರು ಹೀಗೆ ಹೇಳುತ್ತಾರೆ:

ಅವರ ಸಮುದಾಯದ ಸುಧಾರಣೆಗೋಸ್ಕರ ಅನ್ಯ ಸಮುದಾಯದ ಪ್ರವಾದಿಯನ್ನು ಕರೆಸಲಾಗುವುದು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶುದ್ಧೀಕರಣ ಶಕ್ತಿ ಏನನ್ನೂ ಮಾಡಲು ಅಸಮರ್ಥವಾಗುವುದು.

ಅಯ್ಯೋ? ಏನು ಹೃದಯಗಳು ಸತ್ತುಹೋದುವೋ? ಬುದ್ಧಿ ಶಕ್ತಿಗೆ ಕುಂದುಂಟಾಗಿದೆಯೋ? ಎಲ್ಲಾ ಅಭಿಮಾನ ತಮಗೋಸ್ಕರ ಮಾತ್ರ ವಿನಿಯೋಗಿಸಲ್ಪಟ್ಟವೋ? ಅಲ್ಲಾಹ್ ಮತ್ತು ಅವನ ಸಂದೇಶ ವಾಹಕರಿಗೋಸ್ಕರ ಅಭಿಮಾನದ ಯಾವುದೇ ಅಂಶ ಬಾಕಿಯಾಗಿ ಉಳಿದಿಲ್ಲವೇ? ಎಲ್ಲ ಕೋಪಗಳು ತಮ್ಮ ಶತ್ರುಗಳಿಗೆ ವಿರುದ್ಧವಾಗಿ ಮಾತ್ರ ಬಳಸಲ್ಪಟ್ಟವೋ? ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ವಿರುದ್ಧ ಆಕ್ರಮಣ ಮಾಡುವವರ ವಿರುದ್ಧ ಬಳಸಲು ಏನೂ ಬಾಕಿಯಾಗಿ ಉಳಿದಿಲ್ಲವೇ?

"ನೀವು ಒಬ್ಬ ಇಸ್ರಾಈಲೀ ಪ್ರವಾದಿಯ ಆಗಮನವನ್ನು ಏಕೆ ನಿರಾಕರಿಸುತ್ತಿರುವಿರಿ?" ಎಂದು ಅವರು ನಮ್ಮೊಂದಿಗೆ ಕೇಳುತ್ತಾರೆ.

ಆದರೆ ನಾವು ನಮ್ಮ ಹೃದಯಗಳನ್ನು ಎಲ್ಲಿಗೆ ಒಯ್ಯಬೇಕು? ನಮ್ಮ ಪ್ರೀತಿಯ ನಕಾಶೆಯನ್ನು ಹೇಗೆ ಅಳಿಸಿಬಿಡುವುದು? ನಮಗೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವಕ್ಕಿಂತ ಮಿಗಿಲಾಗಿ ಬೇರೆ ಯಾರ ಗೌರವವೂ ಪ್ರಿಯಕರವಲ್ಲ. ಹಝ್‌ರತ್ ಮುಹಮ್ಮದ್ ರಸೂಲ್[ಸ] ಬೇರೊಬ್ಬರು ನೀಡಿದ ಸಹಾಯಕ್ಕೋಸ್ಕರ ಕೃತಜ್ಞರಾಗಿದ್ದಾರೆಂದು ಒಂದು ಕ್ಷಣ ಕಾಲ ಸಹ ನಾವು ಸಹಿಸಲಾರೆವು. ಪುನರುತ್ಥಾನ ದಿನ ಆರಂಭದಿಂದ ಅಂತ್ಯದ ತನಕದ ಎಲ್ಲಾ ಸೃಷ್ಟಿಗಳು ಜಮಾಯಿಸಲ್ಪಡುವಾಗ ಪ್ರತಿಯೊಬ್ಬರ ಕೆಲಸಗಳು ಸಾಕ್ಷ್ಯಗಳ ಸಹಿತ ವಿವರಿಸಲ್ಪಡುವುದು. ಆಗ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೊರಳು ತನಗೆ ಇಸ್ರಾಈಲೀ ಮಸೀಹ್ ಮಾಡಿದ ಉಪಕಾರದ ಕಾರಣದಿಂದ ಕೃತಜ್ಞತೆ ಸೂಚಿಸಲು ಬಾಗುವುದು. ಎಲ್ಲ ಸೃಷ್ಟಿಗಳ ಮುಂದೆ ದೇವದೂತರು ಉಚ್ಚಸ್ವರದಿಂದ ಹೇಳುವರು: ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಶುದ್ಧೀಕರಣ ಶಕ್ತಿ ಕುಂದಿಹೋಗಲು ತೊಡಗಿದಾಗ ಹಝ್‌ರತ್ ಈಸಾ ಮಸೀಹ್[ಅ] ಅವರಿಗೆ ಉಪಕಾರ ಮಾಡಲು ಸ್ವರ್ಗದಿಂದ ಹೊರಬರಲು ಇಚ್ಛಿಸಿದರು. ಭೂಲೋಕಕ್ಕೆ ಹೋಗಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯ ವನ್ನು ಸುಧಾರಣೆ ಮಾಡಿದರು. ಅವರನ್ನು ನಾಶದಿಂದ ರಕ್ಷಿಸಿದರು.

ಇಂತಹ ಅಪಮಾನಕರವಾದ ಮಾತನ್ನು ಹೇಳುವುದಕ್ಕಿಂತ ನಮ್ಮ ನಾಲಗೆ ತುಂಡರಿಸಲ್ಪಡಲಿ ಎಂದು ನಾವು ಇಚ್ಛಿಸುತ್ತೇವೆ. ಇಂತಹ ಮಾತುಗಳನ್ನು ಬರೆಯುವುದಕ್ಕಿಂತ ಪ್ರತಿಯಾಗಿ ನಮ್ಮ ಕೈಗಳು ನಿಷ್ಕ್ರಿಯವಾಗಲಿ ಎಂದು ನಾವು ಬಯಸುತ್ತೇವೆ.

ವಾಸ್ತವಿಕ ವಿಷಯವೇನೆಂದರೆ, ಹಝ್‌ರತ್ ಮುಹಮ್ಮದ್ ರಸೂಲ್[ಸ] ಅಲ್ಲಾಹನಿಗೆ ಪ್ರಿಯರಾದವರಾಗಿರುವರು. ಅವರ ಪವಿತ್ರ ಶಕ್ತಿ ಎಂದೂ ಅಳಿದು ಹೋಗಲಾರದು. ಅವರು ಖಾತಮುನ್ನಬಿಯ್ಯೀನ್ ಆಗಿದ್ದಾರೆ. ಅವರ ಅನುಗ್ರಹದಾಯಕ ಶಕ್ತಿ ಎಂದೂ ಸ್ಥಗಿತವಾಗಲಾರದು. ಅವರ ಶಿರವು ಅನ್ಯರ ಉಪಕಾರಕ್ಕೋಸ್ಕರ ಬಾಗಲಾರದು. ಅವರ ಉಪಕಾರ ಎಲ್ಲ ಪ್ರವಾದಿಗಳ ಮೇಲಿದೆ. ಅವರನ್ನು ನಂಬುವಂತೆ ಮಾಡಿದ ಒಬ್ಬ ಪ್ರವಾದಿಯೂ ಇಲ್ಲ. ಅವರ ವಿರೋಧಿಗಳಿಗೆ ಅವರ ಸತ್ಯವನ್ನು ಯಾವ ಪ್ರವಾದಿಯೂ ಮನವರಿಕೆ ಮಾಡಿಕೊಟ್ಟಿಲ್ಲ. ಆದರೆ ಕೋಟಿಗಟ್ಟಲೆ ಜನರು ಇತರ ಪ್ರವಾದಿಗಳನ್ನು ನಂಬುವಂತೆ ಹಝ್‌ರತ್ ಮುಹಮ್ಮದ್ ರಸೂಲ್[ಸ] ಮಾಡಿರುವರು. ಹಿಂದೂಸ್ಥಾನದಲ್ಲಿ ಎಂಟು ಕೋಟಿ* ಮುಸ್ಲಿಮರಿದ್ದಾರೆಂದು ಹೇಳಲಾಗುತ್ತಿದೆ. ಅವರ ಪೈಕಿ ಬಹಳ ಕಡಿಮೆ ಸಂಖ್ಯೆಯ ಜನರು ಅನ್ಯ ದೇಶಗಳಿಗೆ ಸೇರಿದವರಾಗಿದ್ದಾರೆ. ಉಳಿದವರು ಹಿಂದೂಸ್ಥಾನದ ಪ್ರಜೆಗಳಾಗಿದ್ದಾರೆ. ಅವರು ಯಾವ ಪ್ರವಾದಿಯ ಹೆಸರನ್ನು ಸಹ ಕೇಳಿರಲಿಲ್ಲ. ಅವರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ ಕಾರಣ ಹಝ್‌ರತ್ ಇಬ್ರಾಹೀಮ್,[ಅ] ಹಝ್‌ರತ್ ಮೂಸಾ[ಅ] ಮತ್ತು ಹಝ್‌ರತ್ ಈಸಾ[ಅ]ರನ್ನು ನಂಬಿದರು.

ಹಿಂದೂಸ್ಥಾನದ ಈ ಜನರ ಮನೆಗಳಿಗೆ ಇಸ್ಲಾಮ್ ಧರ್ಮವು ಪ್ರವೇಶಿಸದೆ ಇರುತ್ತಿದ್ದರೆ ಈ ಜನರು ಈ ಪ್ರವಾದಿಗಳನ್ನು ನಿಂದಿಸುತ್ತಿದ್ದರು ಮತ್ತು ಅವರನ್ನು ಸುಳ್ಳುಗಾರರೆಂದು ಯೋಚಿಸುತ್ತಿದ್ದರು. ಅವರ ಧರ್ಮಕ್ಕೆ ಸೇರದ ಇತರ ಬಂಧು ಬಾಂಧವರ ಯೋಚನೆ ಹಾಗೆಯೇ ಇದೆ. ಇದೇ ರೀತಿ ಅಫ್‌ಘಾನಿಸ್ತಾನ, ಚೀನ, ಇರಾನ್ ಮೊದಲಾದ ದೇಶಗಳ ಜನರು ಹಝ್‌ರತ್ ಮೂಸಾ[ಅ] ಮತ್ತು ಹಝ್‌ರತ್ ಈಸಾ[ಅ]ರನ್ನು ನಂಬುತ್ತಿರಲಿಲ್ಲ. ಆ ಜನರು ಈ ಪ್ರವಾದಿಗಳನ್ನು ಅಂಗೀಕರಿಸಿ ಗೌರವಿಸುವಂತೆ ಮಾಡಿದುದು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ಆಗಿದ್ದಾರೆ. ಹಿಂದೆ ಆಗಮಿಸಿದ ಎಲ್ಲಾ ಪ್ರವಾದಿಗಳಿಗೆ ಅವರು ಉಪಕಾರ ಮಾಡಿದ್ದಾರೆ. ಆ ಪ್ರವಾದಿಗಳ ಸತ್ಯತೆ ಜನರಿಂದ ಮರೆಯಾಗಿತ್ತು. ಹಝ್‌ರತ್ ಮುಹಮ್ಮದ್ ರಸೂಲ್[ಸ] ಅದನ್ನು ಬಹಿರಂಗಗೊಳಿಸಿದರು. ಆದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನ್ಯ ಪ್ರವಾದಿಗಳ ಉಪಕಾರ ಪಡೆದಿಲ್ಲ. ಅವರ ಅನುಗ್ರಹದಾಯಕ ಶಕ್ತಿಯು ಎಂದೂ ಸ್ಥಗಿತ ಗೊಳ್ಳಲಾರದು. ಬೇರೆ ಜನಾಂಗದ ಪ್ರವಾದಿ ಬಂದು ಸುಧಾರಣೆ ಮಾಡಬೇಕಾದ ಆವಶ್ಯಕತೆ ಉಂಟಾಗಲಾರದು. ಹಝುರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದ ಸುಧಾರಣೆಯ ಆವಶ್ಯಕತೆ ಉಂಟಾದಲ್ಲಿ ಅಲ್ಲಾಹನು ಅವರ ಶಿಷ್ಯರಲ್ಲಿ ಒಬ್ಬರನ್ನು, ಅವರ ಸಮುದಾಯಕ್ಕೆ ಸೇರಿದವರಲ್ಲೊಬ್ಬರನ್ನು ಆಯ್ಕೆ ಮಾಡುವನು. ಆ ವ್ಯಕ್ತಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಎಲ್ಲವನ್ನು ಗಳಿಸಿದವನೂ ಎಲ್ಲವನ್ನು ಕಲಿತವನೂ ಆಗುವನು. ಅಲ್ಲಾಹನಿಂದ ನೇಮಿಸಲ್ಪಟ್ಟ ಆ ಮಹಾನು ಭಾವರು ಸಮುದಾಯದಲ್ಲಿ ಬಿಗಡಾಯಿಸಿದವರನ್ನು ಸುಧಾರಣೆ ಮಾಡುವರು. ಕಾಣದೆ ಹೋದವರನ್ನು ಮರಳಿ ಕರೆದುಕೊಂಡು ಬರುವರು. ಅಲ್ಲಾಹನು ನೇಮಿಸಿದವರು ಮಾಡುವ ಕೆಲಸ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೆಲಸವೇ ಆಗಿರುವುದು. ಏಕೆಂದರೆ ಶಿಷ್ಯನು ತನ್ನ ಗುರುವಿನಿಂದ ಬೇರೆ ಆಗಲು ಸಾಧ್ಯವಿಲ್ಲ. ಉಮ್ಮತಿ (ಸಮುದಾಯಕ್ಕೆ ಸೇರಿದವನು) ತನ್ನ ನಬಿ (ಪ್ರವಾದಿ)ಯಿಂದ ಬೇರೆಯಾಗಿರುವನು ಎಂದು ಹೇಳಲಾಗದು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಕೃತಜ್ಞರಾಗಿ ಅಂತಹ ಜನರ ಕೊರಳು ಅವರ ಮುಂದೆ ಬಾಗಿರುವುದು. ಅವರ ಪ್ರೀತಿ ಎಂಬ ಮದ್ಯದಿಂದ ಅಂತಹ ಜನರ ಹೃದಯ ತುಂಬಿರುವುದು. ಅಂತಹ ಜನರ ಶಿರವು ಅವರ ಬಗ್ಗೆ ಇರುವ ಪ್ರೀತಿಯ ನಶೆಯಿಂದ ಬಾಗಿರುವುದು.

ಒಟ್ಟಾರೆ ಹೇಳುವುದಾದರೆ, ಹಿಂದಿನ ಕಾಲದಲ್ಲಿ ಆಗಮಿಸಿದ ಪ್ರವಾದಿ ಪುನಃ ಬರುವುದರಿಂದ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಪಮಾನ ಉಂಟಾಗುತ್ತದೆ. ಅವರಿಗೆ ಅಲ್ಲಾಹನು ನೀಡಿದ ಪದವಿ ನಿಷ್ಪ್ರಯೋಜಕವಾಗುತ್ತದೆ. ಅಲ್ಲಾಹನು ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ:

*1926ರಲ್ಲಿ ಬರೆದುದು.

إِنَّ اللّٰهَ لَا يُغَيِّرُ مَا بِقَوْمٍ حَتّٰى يُغَيِّرُوْا مَا بِاَنْفُسِهِمْ -

"ಒಂದು ಸಮುದಾಯದವರು ತಮ್ಮ ಹೃದಯದಲ್ಲಿರುವುದಕ್ಕೆ ಸ್ವಯಂ ಮಾರ್ಪಾಟು ಮಾಡುವ ತನಕ ಅವರ ಸ್ಥಿತಿಗೆ ಅಲ್ಲಾಹನು ಮಾರ್ಪಾಟು ಮಾಡಲಾರನು." (13:12)

ಅಲ್ಲಾಹನು ಯಾರಿಗಾದರೂ ಒಂದು ಅನುಗ್ರಹವನ್ನು ದಯಪಾಲಿಸಿದರೆ, ಅದನ್ನು ಕಿತ್ತುಕೊಳ್ಳುವುದಿಲ್ಲ – ಅನುಗ್ರಹ ಪಡೆದವರ ಹೃದಯದಲ್ಲಿ ಯಾವುದಾದರೂ ಕೆಡುಕು ಉಂಟಾಗುವ ತನಕ.

ಪವಿತ್ರ ಖುರ್‌ಆನಿನ ಈ ತತ್ವವನ್ನು ನಂಬಿ ನಾವು ಹೀಗೆ ಹೇಳಬೇಕಾಗುತ್ತದೆ: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ಯಾವುದಾದರೂ ಮಾರ್ಪಾಡು ಉಂಟಾಯಿತು (ನಊಧುಬಿಲ್ಲಾಹ್) ಅಥವಾ ಹೀಗೆ ಹೇಳಬೇಕು: ಅಲ್ಲಾಹನು ತನ್ನ ವಾಗ್ದಾನವನ್ನು ಪಾಲಿಸಲಿಲ್ಲ (ನಊಧುಬಿಲ್ಲಾಹ್). ಅನ್ಯರಿಗೆ ಅನುಗ್ರಹ ನೀಡಿದ ನಂತರ ಅಲ್ಲಾಹನು ಮರಳಿ ತೆಗೆದುಕೊಳ್ಳುವುದಿಲ್ಲ. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅಲ್ಲಾಹನು ತದ್ವಿರುದ್ಧವಾಗಿ ವರ್ತಿಸಿದನು.

ಈ ಮೇಲೆ ವಿವರಿಸಿದ ಎರಡು ಮಾತುಗಳು ಅವಿಶ್ವಾಸ (ಕುಫ್ರ್) ಆಗಿವೆ. ಇವುಗಳಲ್ಲಿ ಒಂದು ಮಾತು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುತ್ತದೆ. ಇನ್ನೊಂದು ಮಾತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿರಾಕರಿಸುತ್ತದೆ. ಈ ಕಾರಣಗಳಿಂದ ನಾವು ಇಂತಹ ವಿಶ್ವಾಸದ ಬಗ್ಗೆ ಬೇಸರಗೊಂಡಿದ್ದೇವೆ. ವಾಗ್ದಾನ ನೀಡಲ್ಪಟ್ಟ ಮಸೀಹ್, ಮುಸ್ಲಿಮ್ ಸಮುದಾಯದಲ್ಲಿಯೇ ಆಗಮಿಸುವರೆಂದು ನಮ್ಮ ವಿಶ್ವಾಸವಾಗಿದೆ. ಅಲ್ಲಾಹನು ತಾನು ಇಚ್ಛಿಸುವವರನ್ನು ಯಾವುದಾದರೂ ಸ್ಥಾನಕ್ಕೆ ಏರಿಸುವುದು ಅವನ ಅಧಿಕಾರಕ್ಕೆ ಸೇರಿದೆ.

ಆಗಮಿಸಲಿರುವ ಮಸೀಹ್, ಮುಸ್ಲಿಮ್ ಸಮುದಾಯದಲ್ಲಿಯೇ ಆಗಮಿಸುವರೆಂದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸುಗಳಿಂದಲೂ ಸಾಬೀತಾಗುತ್ತದೆ. ಅವರು ಹೀಗೆ ಹೇಳಿದರು:

**ಲಲ್ ಮಹ್‌ದೀ ಇಲ್ಲಾ ಈಸಾ**

"ಈಸಾರ ಹೊರತು ಬೇರೆ ಯಾವುದೇ ಮಹ್‌ದೀ ಇಲ್ಲ."

ಇನ್ನೊಂದು ಹದೀಸ್ ಹೀಗಿದೆ:

كَيْفَ اَنْتُمْ اِذَا نَزَلَ فِيْكُمُ ابْنُ مَرْيَمَ وَ اِمَامُكُمْ مِنْكُمْ -

"ನಿಮ್ಮಲ್ಲಿ ಇಬ್ನು ಮರ್‌ಯಮ್ ಇಳಿದು ಬರುವಾಗ ನಿಮ್ಮ ಸ್ಥಿತಿ ಹೇಗಿರುವುದು? ಅವರು ನಿಮ್ಮವರಲ್ಲಿ ನಿಮ್ಮ ಇಮಾಮ್ ಆಗಿರುವರು." (ಬುಖಾರಿ – ಕಿತಾಬುಲ್ ಅಂಬಿಯಾ, ಬಾಬ್ ನುಝೂಲ್ ಈಸಬ್ನು ಮರ್‌ಯಮ್)

ಈ ಎರಡು ಹದೀಸುಗಳನ್ನು ಜೊತೆಗೆ ಪರಿಶೀಲಿಸುವುದಾದರೆ ಹೀಗೆ ಸ್ಪಷ್ಟವಾಗುತ್ತದೆ: ಹಝ್ರತ್ ಮಸೀಹ್‌ರ(ಅ) ಕಾಲದಲ್ಲಿ ಅವರ ಹೊರತು ಬೇರೊಬ್ಬ ಮಹ್‌ದೀ ಇರಲಾರರು. ಅವರು ಈ ಸಮುದಾಯದ ಇಮಾಮ್ (ನಾಯಕ) ಆಗುವರು. ಅವರು ಇದೇ ಸಮುದಾಯಕ್ಕೆ ಸೇರಿದವರಾಗುವರು. ಅವರು ಬೇರೆ ಸಮುದಾಯದಿಂದ ಆಗಮಿಸುವವರಾಗಲಾರರು. ಮಸೀಹ್ ಮತ್ತು ಮಹ್‌ದೀ ಬೇರೆ ಬೇರೆಯಾಗಿರುವ ವ್ಯಕ್ತಿಗಳೆಂಬ ಯೋಚನೆ ಸುಳ್ಳು ಯೋಚನೆ ಆಗಿದೆ. "ಲಲ್ ಮಹ್‌ದೀ ಇಲ್ಲಾ ಈಸಾ" ಎಂಬ ಹದೀಸಿಗೆ ಇದು ವಿರುದ್ಧವಾಗಿದೆ. ಸತ್ಯವಿಶ್ವಾಸಿಗಳು ತಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ಅಧ್ಯಯನ ಮಾಡಬೇಕು. ಅವುಗಳಲ್ಲಿ ವೈರುದ್ಧ್ಯವಿರುವುದಾಗಿ ಅವರಿಗೆ ಬಾಹ್ಯವಾಗಿ ಕಂಡರೆ ಅದರ ಬಗ್ಗೆ ಗಾಢವಾಗಿ ಚಿಂತಿಸಿ ದೂರೀಕರಿಸಬೇಕು.

ಹಝ್ರತ್ ಮುಹಮ್ಮದ್ ರಸೂಲ್(ಸ) ಹೀಗೆ ಒಮ್ಮೆ ಹೇಳಿದ್ದರು: "ಮೊದಲು ಮಹ್‌ದೀ ಆಗಮಿಸುವರು. ಅನಂತರ ಹಝ್ರತ್ ಈಸಾ ಮಸೀಹ್(ಅ) ಆಗಮಿಸಿ ಮಹ್‌ದೀಯವರ ಹಿಂದೆ ನಿಂತು ನಮಾಝ್ ಮಾಡುವರು."

ಹಝ್ರತ್ ಮುಹಮ್ಮದ್ ರಸೂಲ್(ಸ) ಬೇರೆ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: "ಮಸೀಹರೇ ಮಹ್‌ದೀ."

ನಾವು ಈ ಹೇಳಿಕೆಗಳನ್ನು ತಿರಸ್ಕರಿಸಬೇಕೋ ಅಥವಾ ಅವುಗಳೆರಡರ ಬಗ್ಗೆ ಚಿಂತಿಸಬೇಕೋ? ಈ ಎರಡು ಮಾತುಗಳ ಮಧ್ಯೆ ಯಾವುದಾದರೂ ಒಮ್ಮತದ ಸೂಚನೆ ಇದ್ದರೆ ಅದನ್ನು ಗಮನಿಸಬೇಕು. ಸ್ವಲ್ಪ ಮಟ್ಟಿಗೆ ಯೋಚಿಸಿದರೂ ನಮಗೆ ಮನವರಿಕೆ ಆಗಬಹುದಾದ ಸಮನ್ವಯದ ಸೂತ್ರ ಹೀಗಿದೆ: ಲಲ್ ಮಹ್‌ದೀ ಈಸಾ (ಈಸಾ ಹೊರತು ಅನ್ಯ ಮಹ್‌ದೀ ಇಲ್ಲ) ಎಂಬ ಹದೀಸು ಎರಡನೆಯ ಹದೀಸಿನ ವಿವರಣೆಯಾಗಿದೆ.

ಹಝ್ರತ್ ಮುಹಮ್ಮದ್ ರಸೂಲ್(ಸ) ಹಝ್ರತ್ ಈಸಾ ಮಸೀಹರ ಆಗಮನದ ಕುರಿತು ಮೊದಲು ಹೇಳಿದ ಮಾತುಗಳಿಂದ ಬೇರೆ ಬೇರೆ ಇಬ್ಬರ ಕುರಿತು ಸಂಶಯ ಉಂಟಾಗಬಹುದಾಗಿದೆ. ಅದನ್ನು "ಲಲ್ ಮಹ್‌ದೀ ಇಲ್ಲಾ ಈಸಾ" ಎಂಬ ಹದೀಸು ಸ್ಪಷ್ಟಗೊಳಿಸಿತು. ಆ ಮಾತುಗಳು ಆಲಂಕಾರಿಕವಾಗಿ ಪ್ರಯೋಗಿಸಲಾಯಿತೆಂದು ಸ್ಪಷ್ಟಪಡಿಸಲಾಯಿತು. ಅವುಗಳ ಮೂಲಕ ಹೀಗೆ ತಿಳಿಸಲಾಗಿತ್ತು: ಮುಸ್ಲಿಮ್ ಸಮುದಾಯದ ಸುಧಾರಣೆಗೆ ಒಬ್ಬರನ್ನು ನೇಮಿಸಲಾಗುವುದು. ಆದರೆ ಅವರಿಗೆ ಸಂದೇಶವಾಹಕರ ಸ್ಥಾನ ಆಗ ನೀಡಲ್ಪಡಲಾರದು. ಆದರೆ ಅನಂತರ ಈಸಬ್ನು ಮರ್‌ಯಮರ ಆಗಮನದ ಭವಿಷ್ಯವಾಣಿ ಅವರ ಮೂಲಕವೇ ಈಡೇರುವುದು. ಆ ವ್ಯಕ್ತಿ ತಾನೇ ಈಸಾ ಎಂದು ವಾದಿಸುವರು. ಈ ರೀತಿ ಆ ವ್ಯಕ್ತಿಯ ಎರಡು ವಿವಿಧ ಹುದ್ದೆಗಳು ಪ್ರಕಟಗೊಳ್ಳುವ ಕಾಲದ ಬಗ್ಗೆ ಪ್ರಸ್ತಾಪಿಸಲಾಗಿದೆ. ಎಂದರೆ ಮೊದಲು ಆ ವ್ಯಕ್ತಿ ತಾನು ಸುಧಾರಕನೆಂದು ವಾದಿಸುವರು. ಅನಂತರ ತಾನು ಮಸೀಹ್ ಆಗಿರುವುದಾಗಿ ವಾದಿಸುವರು. ಭವಿಷ್ಯವಾಣಿಗಳಲ್ಲಿ ಈ ರೀತಿಯ ಪ್ರಸ್ತಾಪಗಳು ಸಾಮಾನ್ಯವಾಗಿವೆ. ಈ ರೀತಿಯ ಆಲಂಕಾರಿಕ ಪ್ರಯೋಗಗಳನ್ನು ಭವಿಷ್ಯವಾಣಿಗಳಿಂದ ಬೇರ್ಪಡಿಸುವುದಾದರೆ ಅಂತಹ ಭವಿಷ್ಯವಾಣಿಗಳನ್ನು ಅರ್ಥ ಮಾಡಿಕೊಳ್ಳುವುದು ಅಸಾಧ್ಯವಾಗುತ್ತದೆ.

ಪ್ರಸ್ತಾಪಿಸಲಾದ ಹದೀಸುಗಳಿಗೆ ಮೇಲಿನ ರೀತಿಯಲ್ಲಿ ಅರ್ಥ ನೀಡದಿದ್ದರೆ ಎರಡು ವಿಷಯಗಳಲ್ಲಿ ಒಂದನ್ನು ಆವಶ್ಯಕವಾಗಿ ನಂಬಬೇಕಾಗಬಹುದು. ಆದರೆ ಆ ಎರಡು ವಿಷಯಗಳು ಅಪಾಯಕಾರಿಗಳಾಗಿವೆ. "ಲಲ್ ಮಹ್‌ದೀ ಇಲ್ಲಾ ಈಸಾ" ಎಂಬ ಹದೀಸು ಮಿಥ್ಯ ಎಂದು ನಂಬಬೇಕು ಅಥವಾ ಈ ಹದೀಸು ಪ್ರಕಾರ ಮಹ್‌ದಿಗೆ ಬೇರೆ ಅಸ್ತಿತ್ವ ಇಲ್ಲ; ಮಹ್‌ದೀ ಮತ್ತು ಮಸೀಹರ ಪದವಿಗಳನ್ನು ಹೋಲಿಸಿ ಹೇಳಲಾಗಿದೆ. ಅಧಿಕೃತ ಮಹ್‌ದೀ, ಮಸೀಹರೇ ಆಗಿರುವರು. ಬೇರೆ ಮಹ್‌ದೀ ಅವರ ಎದುರಿಗೆ ಯಾವ ಸ್ಥಾನವನ್ನೂ ಹೊಂದಿಲ್ಲ. ಉದಾಹರಣೆಗೆ ಹೀಗೆ ಹೇಳಲಾಗುತ್ತದೆ:

"ಲಾ ಆಲಿಮ ಇಲ್ಲಾ ಫುಲಾನುನ್" – ಈ ಹೆಸರಿನ ವ್ಯಕ್ತಿಯ ಹೊರತು ಅನ್ಯ ವಿದ್ವಾಂಸನಿಲ್ಲ. ಇದರ ಅರ್ಥ, ಆ ವ್ಯಕ್ತಿಯ ಹೊರತು ಬೇರೆ ವಿದ್ವಾಂಸನು ಇಲ್ಲವೇ ಇಲ್ಲ ಎಂದಲ್ಲ. ಆ ವ್ಯಕ್ತಿ ಜ್ಞಾನದಲ್ಲಿ ಎಷ್ಟು ಹೆಚ್ಚು ಪ್ರಗತಿ ಗಳಿಸಿದವನೆಂದರೆ, ಆತನಿಗೆ ಹೋಲಿಸಿದರೆ

ಬೇರೆಯವರ ಜ್ಞಾನ ಬಹಳ ಕಡಿಮೆಯಾಗಿರುತ್ತದೆ.

ಈ ಎರಡು ಅರ್ಥಗಳು ಅಪಾಯಕರ ಪರಿಣಾಮವನ್ನು ಉಂಟುಮಾಡುವವುಗಳು ಆಗಿವೆ. ಏಕೆಂದರೆ ಒಂದು ಹದೀಸನ್ನು ನಿಷ್ಕಾರಣವಾಗಿ ಮಿಥ್ಯ ಎಂದು ಹೇಳುವುದು ಅಪಾಯಕರವಾಗಿದೆ. ವಿಶಿಷ್ಟವಾಗಿ ಸತ್ಯವೆಂದು ಸಾಕ್ಷ್ಯಗಳು ಸೂಚಿಸುವ ಹದೀಸನ್ನು ಹಾಗೆ ಪರಿಗಣಿಸಬಾರದು. ಮಸೀಹರ ಎದುರಿಗೆ ಮಹ್‌ದಿಗೆ ಯಾವುದೇ ಸ್ಥಾನವಿರದು ಎಂದು ಹೇಳುವುದು ಮಹ್‌ದಿಯವರನ್ನು ಇಮಾಮ್ ಎಂದು ಸೂಚಿಸುವ ಹದೀಸುಗಳಿಗೆ ವಿರುದ್ಧವಾಗಿದೆ. ಮಸೀಹರು ಮಹ್‌ದಿಯವರ ನೇತೃತ್ವದಲ್ಲಿ ನಮಾಝ್ ಮಾಡುವರು ಎಂದು ಹೇಳಲಾಗಿದೆ.

ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದಲ್ಲಿ ಒಬ್ಬ ಮಹಾನುಭಾವರು ಆಗಮಿಸುವರು. ಅವರು ತಾನು ಸುಧಾರಕ ಎಂದು ಮೊದಲು ವಾದಿಸುವರು; ಅನಂತರ ತಾನು ವಾಗ್ದತ್ತ ಮಸೀಹ್ ಎಂದು ವಾದಿಸುವರು ಎಂಬ ಅರ್ಥವನ್ನು ಮಾತ್ರ ಮೇಲೆ ಪ್ರಸ್ತಾಪಿಸಿದ ಹದೀಸುಗಳಿಗೆ ನೀಡಲು ಸಾಧ್ಯ.

ಜನರಿಗೆ ತಪ್ಪುಗ್ರಹಿಕೆ ಉಂಟಾಗಲು ಮುಖ್ಯ ಕಾರಣ, ಹದೀಸಿನಲ್ಲಿ ನುಝೂಲ್ (ಇಳಿಯುವಿಕೆ) ಎಂಬ ಶಬ್ದ ಪ್ರಯೋಗಿಸಲ್ಪಟ್ಟುದರಿಂದಾಗಿದೆ. ಈ ಶಬ್ದದ ಕಾರಣ ಇಸ್ರಾಈಲ್ ಸಮುದಾಯಕ್ಕೆ ಆಗಮಿಸಿದ ಅದೇ ಈಸಬ್ನು ಮರ್‌ಯಮ್(ಅ) ಪುನಃ ಆಗಮಿಸುವರೆಂದು ಜನರು ನಂಬಲು ತೊಡಗಿದರು.

ನುಝೂಲ್ ಎಂಬ ಪದದ ಅರ್ಥ ಅದಕ್ಕೆ ಜನರು ನೀಡುವ ಅರ್ಥಕ್ಕೆ ಸೀಮಿತವಲ್ಲ. ಜನರಿಗೆ ಉಪಕಾರ ನೀಡುವ ಜೀವಿಗಳ ಹುಟ್ಟಿನ ಬಗ್ಗೆ ಸಹ ಈ ಪದವನ್ನು ಬಳಸಲಾಗಿದೆ. ಅಲ್ಲಾಹನ ಅನುಗ್ರಹದ ಸುರಿಯುವಿಕೆ ಮತ್ತು ಅಲ್ಲಾಹನ ಪರಾಕ್ರಮದ ಪ್ರಕಟಣೆಗೂ ಈ ಪದವನ್ನು ಅರಬಿ ಭಾಷೆಯಲ್ಲಿ ಬಳಸಲಾಗುತ್ತಿದೆ.

ಉದಾಹರಣೆ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ನೋಡಿರಿ:

ثُمَّ اَنْزَلَ اللّٰهُ سَكِيْنَتَهٗ عَلٰى رَسُوْلِهٖ

1. "ಅನಂತರ ಅಲ್ಲಾಹನು ತನ್ನ ಸಂದೇಶವಾಹಕನಿಗೂ ಸತ್ಯವಿಶ್ವಾಸಿಗಳಿಗೂ ತನ್ನ ಕಡೆಯಿಂದ ಮನಶ್ಶಾಂತಿಯನ್ನು ದಯಪಾಲಿಸಿದನು." (9:26)

ثُمَّ اَنْزَلَ عَلَيْكُمْ مِّنْ بَعْدِ الْغَمِّ اَمَنَةً نُّعَاسًا۔

2. "ಆಮೇಲೆ ದುಃಖದ ಬಳಿಕ ಅವನು ನಿಮಗೆ ಮನಃಶಾಂತಿಯನ್ನು ನೀಡಿದನು." (3:155)

وَاَنْزَلَ لَكُمْ مِّنَ الْاَنْعَامِ ثَمٰنِيَةَ اَزْوَاجٍ۔

3. "ಅವನು ನಿಮಗೆ ಎಂಟು ಜಾತಿಯ ಜಾನುವಾರುಗಳನ್ನು ಜೋಡಿಗಳಾಗಿ ದಯಪಾಲಿಸಿದನು." (39:7)

قَدْ اَنْزَلْنَا عَلَيْكُمْ لِبَاسًا يُّوَارِيْ سَوْاٰتِكُمْ وَرِيْشًا ، وَلِبَاسُ التَّقْوٰى ذٰلِكَ خَيْرٌ ذٰلِكَ مِنْ اٰيٰتِ اللّٰهِ لَعَلَّهُمْ يَذَّكَّرُوْنَ۔

4. "ನಾವು ನಿಮಗೆ ನಿಮ್ಮ ನಗ್ನತೆಯನ್ನು ಮುಚ್ಚಲಿಕ್ಕೆ ಮತ್ತು ವೇಷಭೂಷಣಕ್ಕಾಗಿ ಉಡುಪನ್ನು ಇಳಿಸಿಕೊಟ್ಟಿದ್ದೇವೆ. ಆದರೆ ಭಯಭಕ್ತಿಯ ಉಡುಪೇ ಉತ್ತಮವಾದುದು. ಅದು ಅಲ್ಲಾಹನ ದೃಷ್ಟಾಂತಗಳಲ್ಲಿ ಒಂದಾಗಿದೆ - ಅವರು ಜ್ಞಾಪಿಸಲಿಕ್ಕಾಗಿ." (7:27)

وَاَنْزَلْنَا عَلَيْكُمُ الْمَنَّ وَالسَّلْوٰى

5. "ಮನ್ನ ಮತ್ತು ಸಲ್ವವನ್ನು ನಾವು ನಿಮಗೆ ಇಳಿಸಿಕೊಟ್ಟೆವು." (2:58)

وَاَنْزَلْنَا الْحَدِيْدَ فِيْهِ بَاْسٌ شَدِيْدٌ وَّمَنَافِعُ لِلنَّاسِ وَلِيَعْلَمَ اللّٰهُ مَنْ يَّنْصُرُهٗ وَرُسُلَهٗ بِالْغَيْبِ اِنَّ اللّٰهَ قَوِيٌّ عَزِيْزٌ

6. "ನಾವು ಕಬ್ಬಿಣವನ್ನು ನಿಮಗೆ ಇಳಿಸಿಕೊಟ್ಟೆವು. ಅದರಲ್ಲಿ ತೀವ್ರವಾದ ಮಾರಕ ಶಕ್ತಿಯೂ ಮನುಷ್ಯರಿಗೆ ಹಲವಿಧ ಪ್ರಯೋಜನಗಳೂ ಇವೆ. ತನಗೆ ಮತ್ತು ತನ್ನ ಸಂದೇಶವಾಹಕರಿಗೆ ಅಗೋಚರಾವಸ್ಥೆಯಲ್ಲೂ ನೆರವೀಯುವವರು ಯಾರೆಂದು ಅಲ್ಲಾಹನು ಗೊತ್ತುಹಚ್ಚಲಿಕ್ಕಾಗಿ (ಹೀಗೆ ಮಾಡಲಾಗಿದೆ). ಖಂಡಿತವಾಗಿಯೂ ಅಲ್ಲಾಹನು ಶಕ್ತಿವಂತನೂ ಪ್ರತಾಪಶಾಲಿಯೂ ಆಗಿದ್ದಾನೆ." (57:26)

وَلَوْ بَسَطَ اللّٰهُ الرِّزْقَ لِعِبَادِهٖ لَبَغَوْا فِى الْاَرْضِ وَلٰكِنْ يُّنَزِّلُ بِقَدَرٍ مَّا يَشَآءُ اِنَّهٗ بِعِبَادِهٖ خَبِيْرٌۢ بَصِيْرٌ۔

7. "ಅಲ್ಲಾಹನು ತನ್ನ ದಾಸರಿಗೆ ಆಹಾರವನ್ನು ಸಮೃದ್ಧವಾಗಿ ನೀಡಿದ್ದರೆ ಅವರು ಭೂಮಿಯಲ್ಲಿ ಅತಿರೇಕವಾಗಿ ವರ್ತಿಸುತ್ತಿದ್ದರು. ಆದರೆ ತನ್ನ ಇಚ್ಛೆಯಂತೆ (ಸರಿಯಾದ) ಅಳತೆಗನುಸಾರವಾಗಿ ಅವನು ಅದನ್ನು ಇಳಿಸುತ್ತಾನೆ. ದಿಟವಾಗಿಯೂ ಅವನು ತನ್ನ ದಾಸರ ಬಗ್ಗೆ ಎಲ್ಲವನ್ನು ಅರಿಯುವವನೂ ಎಲ್ಲವನ್ನು ನೋಡುವವನೂ ಆಗಿದ್ದಾನೆ." (42:28)

ಮೇಲಿನ ಪವಿತ್ರ ಖುರ್‌ಆನ್ ವಚನಗಳಲ್ಲಿ ನುಝೂಲ್ ಎಂಬ ಪದ ಬಳಸಿದ ಸಂದರ್ಭಗಳನ್ನು ನೋಡಿರಿ.

ಮನಃಶಾಂತಿ ಹೃದಯದಲ್ಲಿ ಉಂಟಾಗುತ್ತದೆ. ನಿದ್ರೆ ಮೆದುಳಿಗೆ ಸಂಬಂಧಿಸಿದೆ. ಪ್ರಾಣಿಗಳು, ಬಟ್ಟೆ, ಹೊಲಗದ್ದೆಗಳು, ಪಕ್ಷಿಗಳು, ಲೋಹ ಪದಾರ್ಥಗಳು ಮತ್ತು ಇತರ ವಸ್ತುಗಳು ಇದೇ ಭೂಮಿಯಲ್ಲಿ ಹುಟ್ಟುತ್ತವೆ. ಇವುಗಳು ಆಕಾಶದಿಂದ ಇಳಿದು ಬರುವುದನ್ನು ಯಾರೂ ಕಂಡಿಲ್ಲ. ಅವುಗಳು ಆಕಾಶದಿಂದ ಇಳಿದು ಬರುವುದೆಂದು ಪವಿತ್ರ ಖುರ್‌ಆನ್ ನಿಂದಾಗಲಿ, ಹದೀಸುಗಳಿಂದಾಗಲಿ ಸಾಬೀತಾಗುವುದಿಲ್ಲ.

ಅಲ್ಲಾಹನು ಸ್ಪಷ್ಟವಾಗಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

وَجَعَلَ فِيْهَا رَوَاسِيَ مِنْ فَوْقِهَا وَبٰرَكَ فِيْهَا وَقَدَّرَ فِيْهَآ اَقْوَاتَهَا فِىْٓ اَرْبَعَةِ اَيَّامٍ سَوَآءً لِّلسَّآئِلِيْنَ۔

"ಅವನು ಭೂಮಿಯ ಮೇಲೆ ಪರ್ವತಗಳನ್ನು ಉಂಟುಮಾಡಿದ್ದಾನೆ; ಅದರಲ್ಲಿ ಸಮೃದ್ಧಿಯನ್ನು ಅನುಗ್ರಹಿಸಿದ್ದಾನೆ. ಅವನು ಅದರಲ್ಲಿ ನಾಲ್ಕು ಘಟ್ಟಗಳಲ್ಲಿ ಅದರ ಉತ್ಪನ್ನಗಳನ್ನು ಅಪೇಕ್ಷಕರಿಗೆ ತಕ್ಕ ಪ್ರಮಾಣದಲ್ಲಿ ಒದಗಿಸಿದ್ದಾನೆ." (41:11)

ಅಂದರೆ, ಅಲ್ಲಾಹನು ಹೇಳುತ್ತಾನೆ: ನಾವು ಭೂಮಿಯ ಮೇಲೆ ಪರ್ವತಗಳನ್ನು ಸೃಷ್ಟಿಸಿದೆವು. ಭೂಮಿಯಲ್ಲಿ ಅನೇಕ ವಸ್ತುಗಳನ್ನು ಸೃಷ್ಟಿಸಿದೆವು. ಎಲ್ಲಾ ವಿಧಗಳ ಆಹಾರ ವಸ್ತುಗಳನ್ನು ಸೃಷ್ಟಿಸಿದೆವು. ಇವುಗಳೆಲ್ಲಾ ಭೂಮಿಯಲ್ಲಿ ಸೃಷ್ಟಿಸಲ್ಪಟ್ಟವು. ಎಲ್ಲಾ ವಸ್ತುಗಳು ಮತ್ತು ಪ್ರಾಣಿಗಳು ಸೃಷ್ಟಿಸಲ್ಪಡುವುದು ನಾಲ್ಕು ಕಾಲಘಟ್ಟಗಳಲ್ಲಿ ಪೂರ್ಣಗೊಂಡವು.

ಈ ವಿಷಯವು ದೊಡ್ಡ ದೊಡ್ಡ ಭೌತಿಕ ಶಾಸ್ತ್ರದ ಅಂಶಗಳನ್ನು ಒಳಗೊಂಡಿವೆ ಮತ್ತು ಸೂಕ್ಷ್ಮ ಜ್ಞಾನಗಳನ್ನು ಒಳಗೊಂಡಿವೆ. ಅವುಗಳಲ್ಲಿ ಕೆಲವು ಈ ಕಾಲಘಟ್ಟದಲ್ಲಿ ಪ್ರಕಟವಾಗಿವೆ. ಬೇರೆ ಕೆಲವು ಮುಂದಿನ ಕಾಲದಲ್ಲಿ ಬಹಿರಂಗಗೊಳ್ಳುವುವು. ಅವುಗಳ ಬಗ್ಗೆ ಹೊಸ ಹೊಸ ಪ್ರಶ್ನೆಗಳು ತಲೆದೋರುವುವು. ಆದರೆ ನಾವು ಎಂತಹ ಶಬ್ದಗಳನ್ನು ಬಳಸಿ ಈ ವಿಷಯವನ್ನು ನಿರೂಪಿಸಿದ್ದೇವೆಂದರೆ, ಪ್ರತಿಯೊಂದು ವರ್ಗದ ಜನರು, ಪ್ರತಿಯೊಂದು ಕಾಲಘಟ್ಟದ ಜನರು ತಮ್ಮ ಸ್ವಂತ ಜ್ಞಾನ ಮತ್ತು ತಮ್ಮ ಕಾಲದ ಜ್ಞಾನದ ಪ್ರಗತಿಗೆ ಅನುಸಾರವಾಗಿ ಅವುಗಳಿಂದ ಸರಿಯಾದ ಉತ್ತರ ಪಡೆಯುವರು. ಆ ಉತ್ತರ ಅವರಿಗೆ ತೃಪ್ತಿದಾಯಕವಾಗುವುದು.

ಪವಿತ್ರ ಖುರ್‌ಆನ್‌ನಿಂದ ಹೀಗೆ ಸಾಬೀತು ಆಗುತ್ತದೆ; ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಅನ್‌ಝುಲ್‌ನಾ (ನಾವು ಇಳಿಸಿದೆವು) ಎಂದು ಯಾವ ವಸ್ತುಗಳ ಬಗ್ಗೆ ಹೇಳಲಾಗಿದೆಯೇ ಅವುಗಳು ಆಕಾಶದಿಂದ ಇಳಿಸಲ್ಪಡಲಿಲ್ಲ. ಅಲ್ಲಾಹನು ಅವುಗಳನ್ನು ಈ ಭೂಮಿಯಲ್ಲಿಯೇ ಸೃಷ್ಟಿಸಿದನು.

ಇದೇ ರೀತಿ ಆಗಮಿಸಲಿರುವ ಮಸೀಹ್ ಕುರಿತು ಸಹ 'ನುಝೂಲ್' (ಇಳಿಸುವಿಕೆ) ಎಂಬ ಶಬ್ದ ಪ್ರಯೋಗಿಸಲ್ಪಟ್ಟಿದೆ. ಈ ಪದವು ಆಗಮಿಸುವ ಮಸೀಹರ ಉನ್ನತ ಸ್ಥಾನ, ಅವರ ಶ್ರೇಷ್ಠತೆ ಮತ್ತು ಅವರ ಪದವಿಯ ಔನ್ನತ್ಯವನ್ನು ಪ್ರಕಟಿಸಲು ಬಳಸಲಾಗಿದೆ. ಅವರು ವಾಸ್ತವಿಕವಾಗಿಯೂ ಆಕಾಶದಿಂದ ಇಳಿದು ಬರುವವರು ಎಂಬ ಅರ್ಥದಲ್ಲಿ ಈ ಪದವನ್ನು ಬಳಸಲಾಗಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಸಹ ಈ ಪದವನ್ನು ಪವಿತ್ರ ಖುರ್‌ಆನಿನಲ್ಲಿ ಬಳಸಲಾಗಿದೆ. ಪವಿತ್ರ ಖುರ್‌ಆನಿನ ವ್ಯಾಖ್ಯಾನಗಾರರು ಈ ಪದವು ಅವರ ಘನತೆಯನ್ನು ಸೂಚಿಸುತ್ತದೆ ಎಂದು ಹೇಳಿದ್ದಾರೆ. ಹೀಗೆ ಹೇಳಲು ಅವರು ನಿರ್ಬಂಧಿತರಾಗಿದ್ದಾರೆ. ಏಕೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುರೈಶ್ ಗೋತ್ರದ ಒಂದು ಗೌರವಾನ್ವಿತ ಮನೆತನದಲ್ಲಿ ಮಕ್ಕದಲ್ಲಿ ಜನಿಸಿದ್ದರು. ಅವರ ಪಿತ ಅಬ್ದುಲ್ಲಾ ಮತ್ತು ಮಾತೆ ಆಮಿನ ಆಗಿದ್ದರು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನುಝೂಲ್ ಪದವು ಬಳಸಲಾದ ಪವಿತ್ರ ಖುರ್‌ಆನಿನ ವಚನ ಹೀಗಿದೆ:

قَدْ أَنْزَلَ اللهُ إِلَيْكُمْ ذِكْرًا - رَسُولًا يَتْلُوا عَلَيْكُمْ اٰيٰتِ اللهِ مُبَيِّنٰتٍ لِيُخْرِجَ الَّذِيْنَ اٰمَنُوْا وَعَمِلُوا الصّٰلِحٰتِ مِنَ الظُّلُمٰتِ إِلَى النُّوْرِ -

"ಅಲ್ಲಾಹನು ನಿಮ್ಮ ಬಳಿಗೆ ಧಿಕ್ರನ್ನು ಇಳಿಸಿದ್ದಾನೆ – ಎಂದರೆ ಓರ್ವ ಸಂದೇಶವಾಹಕರನ್ನು. ಅವರು ನಿಮಗೆ ಅಲ್ಲಾಹನ ಸ್ಪಷ್ಟವಾದ ದೃಷ್ಟಾಂತಗಳನ್ನು ಓದಿ ಹೇಳುತ್ತಾರೆ – ಸತ್ಯವಿಶ್ವಾಸಿಗಳನ್ನು ಮತ್ತು ಸತ್ಕರ್ಮ ನಿರತರನ್ನು ಅಂಧಕಾರಗಳಿಂದ (ಪಾರುಮಾಡಿ) ಪ್ರಕಾಶದ ಕಡೆಗೆ ಕೊಂಡೊಯ್ಯಲಿಕ್ಕೋಸ್ಕರ." (65:11, 12)

ಎಷ್ಟು ಆಶ್ಚರ್ಯಕರವಾದ ವಿಷಯ ಇದಾಗಿದೆ! ಒಂದು ಪದವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಮತ್ತು ಹಝ್ರತ್ ಮಸೀಹರ ಬಗ್ಗೆ ಬಳಸಲಾಗಿದೆ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಂಬಂಧಿಸಿ ಈ ಪದಕ್ಕೆ ಬೇರೆ ಅರ್ಥ ನೀಡಲಾಗುತ್ತಿದೆ. ಮಸೀಹರಿಗೆ ಸಂಬಂಧಿಸಿ ಬೇರೆಯೇ ಅರ್ಥ ನೀಡಲಾಗುತ್ತಿದೆ. ಇದೇ ಭೂಮಿಯಲ್ಲಿ ಜನಿಸಿದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ನುಝೂಲ್ ಎಂಬ ಪದ ಬಳಸಲಾಗಿರುವಾಗ, ಮುಂದೆ ಆಗಮಿಸಲಿರುವ ಮಸೀಹರ ಬಗ್ಗೆ ಇದೇ ಶಬ್ದ ಬಳಸಿದರೆ ಅದರ ಅರ್ಥ ಅವರ ಜನನ ಮತ್ತು ನೇಮಕವು ಆಗಿರುವುದರಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲ.

ಇನ್ನೊಂದು ಸಂಶಯ ಏನೆಂದರೆ, ಆಗಮಿಸಲಿರುವ ಮಹಾ ಪುರುಷರ ಹೆಸರು ಈಸಬ್ನು ಮರ್‌ಯಮ್ ಎಂದು ಹದೀಸುಗಳಲ್ಲಿ ಬರೆಯಲಾಗಿದೆ. ಆದುದರಿಂದ ಅದೇ ಪ್ರವಾದಿ ಸ್ವತಃ ಆಗಮಿಸುವರು.

ಆದರೆ ಆಕ್ಷೇಪಮಾಡುವವರು ಯೋಚಿಸುವುದಿಲ್ಲ. ಅವರ ಪದ್ಯಗಳಲ್ಲಿ ಈಸಾ ಎಂಬ ಪದವನ್ನು ಬೇರೆ ಜನರಿಗೆ ಅನ್ವಯಿಸಿ ಬಳಸಲಾಗುತ್ತಿದೆ. ಅದನ್ನು ಅವರು ಆಕ್ಷೇಪಾರ್ಹ ಎಂದು ಗಣಿಸುವುದಿಲ್ಲ. ಆದರೆ ಅಲ್ಲಾಹನ ವಚನದಲ್ಲಿ ಒಬ್ಬ ವ್ಯಕ್ತಿಯ ಹೆಸರನ್ನು ಈಸಾ ಎಂದು ಇರಿಸಿದರೆ ಅದರ ಬಗ್ಗೆ ಆಶ್ಚರ್ಯಪಡುತ್ತಾರೆ. ನಿತ್ಯವೂ ಔದಾರ್ಯದಿಂದ ವರ್ತಿಸುವವರನ್ನು ಹಾತಿಮ್ ತಾಯೀ ಎಂದು ಕರೆಯುತ್ತೇವೆ. ದಾರ್ಶನಿಕ ಮನೋಭಾವದವರನ್ನು ತೂಸೀ ಎಂದು ಕರೆಯುತ್ತಾರೆ. ಸಮಸ್ಯೆಗಳನ್ನು ಪರಿಹರಿಸುವವರನ್ನು ಫಖರ್ ರಾಝೀ ಎಂದು ಕರೆಯುತ್ತಾರೆ. ಆದರೆ ಇಬ್ನು ಮರ್‌ಯಮ್ ಎಂಬ ಪದ ಅವರ ಹೃದಯಗಳಲ್ಲಿ ಸಂಶಯಗಳನ್ನು ಸೃಷ್ಟಿಸುತ್ತದೆ. ಇಬ್ನು ಮರ್‌ಯಮ್ ಎಂಬ ಪದ ಆ ಹೆಸರನ್ನು ಹೊಂದಿದ ವಿಶಿಷ್ಟ ವ್ಯಕ್ತಿಯನ್ನು ಮಾತ್ರ ಸೂಚಿಸುತ್ತದೆಯಾದರೆ ತಾಯೀ, ತೂಸೀ, ರಾಝೀ ಎಂಬ ಪದಗಳು ಆ ಹೆಸರನ್ನು ಹೊಂದಿದ ವಿಶಿಷ್ಟ ವ್ಯಕ್ತಿಗಳನ್ನು ಮಾತ್ರ ಸೂಚಿಸುವುದಿಲ್ಲವೇ? ಈ ಪದಗಳನ್ನು ಬಳಸಿದರೂ ವಾಸ್ತವಿಕವಾಗಿ ಆ ಪದವು ತಾಯೀ ಗೋತ್ರದ ಒಬ್ಬ ವ್ಯಕ್ತಿ ಆತನೆಂದು ಉದ್ದೇಶಿಸಲ್ಪಡುವುದಿಲ್ಲ. ತೂಸ್ ಅಥವಾ ದೇ ನಗರದ ನಿವಾಸಿ ಎಂದು ಸಹ ಉದ್ದೇಶಿಸಲ್ಪಡುವುದಿಲ್ಲ.

ಹೀಗಿರುವಾಗ ಇಬ್ನು ಮರ್‌ಯಮ್ ಎಂಬ ಪದದ ಬಳಕೆಯ ಕಾರಣ ಆಗಮಿಸಲಿರುವ ವ್ಯಕ್ತಿ ಪ್ರವಾದಿಯಾಗಿ ಜನಿಸಿದ ಈಸಬ್ನು ಮರ್‌ಯಮರೇ ಆಗಿರುವರೆಂದು ಏಕೆ ನಿರ್ಧರಿಸಬೇಕು? ಅವರು ಹತ್ತೊಂಬತ್ತು ನೂರು ವರ್ಷಗಳ ಹಿಂದೆ ಮೃತರಾಗಿರುವರು.

ವಾಸ್ತವಿಕ ವಿಷಯವೇನೆಂದರೆ, ತಾಯೀ, ತೂಸೀ, ರಾಝೀ ಮೊದಲಾದ ಹೆಸರುಗಳು ಬೇರೆ ಅರ್ಥದಲ್ಲಿ ಆಲಂಕಾರಿಕವಾಗಿ ಬಳಸಲ್ಪಡುವ ಪದಗಳು ಅಲ್ಲ. ಆದರೆ ಮರ್‌ಯಮ್ ಎಂಬ ಹೆಸರು ಹೇಗಿದೆ ಎಂದರೆ ಮನುಷ್ಯನ ಒಂದು ವಿಶಿಷ್ಟ ಆಧ್ಯಾತ್ಮಿಕ ಸ್ಥಿತಿಯನ್ನು ಪ್ರಕಟಿಸಲು ಪವಿತ್ರ ಖುರ್‌ಆನ್‌ನಲ್ಲಿ ಬಳಸಲಾಗಿದೆ.

ಅಲ್ಲಾಹನು ಹೀಗೆ ಹೇಳುತ್ತಾನೆ:

وَضَرَبَ اللهُ مَثَلًا لِّلَّذِيْنَ اٰمَنُوا امْرَاَتَ فِرْعَوْنَ إِذْ قَالَتْ رَبِّ ابْنِ لِيْ عِنْدَكَ بَيْتًا فِي الْجَنَّةِ وَنَجِّنِيْ مِنْ فِرْعَوْنَ وَعَمَلِهٖ وَنَجِّنِيْ مِنَ الْقَوْمِ الظّٰلِمِيْنَ - وَمَرْيَمَ ابْنَتَ عِمْرٰنَ الَّتِيْٓ اَحْصَنَتْ فَرْجَهَا فَنَفَخْنَا فِيْهِ مِنْ رُّوْحِنَا وَصَدَّقَتْ بِكَلِمٰتِ رَبِّهَا وَكُتُبِهٖ وَكَانَتْ مِنَ الْقٰنِتِيْنَ -

"ಫಿರ್‌ಔನನ ಪತ್ನಿಯನ್ನು ವಿಶ್ವಾಸಿಗಳಿಗೆ ಉದಾಹರಣೆಯಾಗಿ ಅಲ್ಲಾಹನು ತೋರಿಸುತ್ತಾನೆ. ಆಕೆ ಪ್ರಾರ್ಥಿಸಿದಳು: 'ನನ್ನ ಪ್ರಭೂ, ನಿನ್ನ ಬಳಿಯಲ್ಲಿ ಸ್ವರ್ಗದಲ್ಲಿ ನನಗೊಂದು ಮನೆಯನ್ನು ನಿರ್ಮಿಸು. ಫಿರ್‌ಔನ್ ಮತ್ತು ಅವನ ಕೃತ್ಯಗಳಿಂದ ನೀನು ನನ್ನನ್ನು ರಕ್ಷಿಸು. ದುಷ್ಕರ್ಮಿಗಳಾದ ಜನರಿಂದಲೂ ನನ್ನನ್ನು ರಕ್ಷಿಸು.'

"ಮತ್ತು ಸತ್ಯವಿಶ್ವಾಸಿಗಳಿಗೆ ಉದಾಹರಣೆಯಾಗಿ (ಅಲ್ಲಾಹನು) ಇಮ್ರಾನ್ ಪುತ್ರಿ ಮರ್‌ಯಮನ್ನುನೀಡುತ್ತಾನೆ. ಆಕೆ ತನ್ನ ಪಾವಿತ್ರ್ಯವನ್ನು ಕಾಪಾಡಿದ್ದಳು. ಆಗ ನಾವು ಆಕೆಗೆ ನಮ್ಮ ವಾಣಿಯನ್ನು ಅರುಹಿದೆವು. ಆಕೆ ತನ್ನ ಪ್ರಭುವಿನ ವಚನಗಳನ್ನೂ ಗ್ರಂಥಗಳನ್ನೂ ಸತ್ಯಪಡಿಸಿದಳು. ಆಕೆ ಪೂರ್ಣವಾಗಿ ವಿಧೇಯಳಾಗಿದ್ದಳು." (66:12, 13)

ಅಲ್ಲಾಹನು ಸತ್ಯವಿಶ್ವಾಸಿಗಳ ಒಂದು ಆಧ್ಯಾತ್ಮಿಕ ಸ್ಥಿತಿಯನ್ನು ಮರ್‌ಯಮೀ ಸ್ಥಿತಿ ಎಂದು ಕರೆಯುತ್ತಾನೆ. ಅಂತಹ ಸತ್ಯವಿಶ್ವಾಸಿಗಳನ್ನು ಮರ್‌ಯಮ್ ಎಂದು ಕರೆಯುತ್ತಾನೆ. ಯಾವುದಾದರೂ ವಾಗ್ದತ್ತ ಮಹಾನುಭಾವರನ್ನು ಅಲ್ಲಾಹನು ಇಬ್ನು ಮರ್‌ಯಮ್ ಎಂದು ಹೆಸರಿಸಿದರೆ ಅದರ ಅರ್ಥ – ಆ ವ್ಯಕ್ತಿ ಮರ್‌ಯಮೀ ಸ್ಥಿತಿಯಿಂದ ಅಭಿವೃದ್ಧಿ ಹೊಂದಿ ಈಸವೀ ಸ್ಥಿತಿಗೆ ತಲಪಿದರೆಂದಾಗುತ್ತದೆ. ಆ ವ್ಯಕ್ತಿಯ ಪ್ರಾರಂಭದ ಜೀವಿತ ಕಾಲ ಮರ್‌ಯಮ್ ಹಾಗೆ ಪರಿಶುದ್ಧವೂ ಕಳಂಕ ರಹಿತವೂ ಆಗಿರುವುದು. ಅವರ ಅಂತಿಮ ಜೀವಿತ ಕಾಲ ಹಝ್ರತ್ ಈಸಾ ಅಲೈಹಿಸ್ಸಲಾಮರ ಹಾಗೆ ಪವಿತ್ರಾತ್ಮದಿಂದ ನೆರವನ್ನು ಗಳಿಸಿದುದಾಗಿರುವುದು ಮತ್ತು ಲೋಕದ ಸುಧಾರಣೆ ಮತ್ತು ಸತ್ಯದ ಸ್ಥಾಪನೆಗೆ ವಿನಿಯೋಗಿಸಲ್ಪಡುವುದು.

ಪವಿತ್ರ ಖುರ್‌ಆನಿನ ಅರ್ಥಗಳ ಬಗ್ಗೆ ಗಾಢವಾಗಿ ಚಿಂತಿಸುವುದು, ಅದರ ಅರ್ಥಗಳ ಸಮುದ್ರಕ್ಕೆ ಹಾರಿ, ಮುಳುಗಿ ಸೂಕ್ಷ್ಮ ಜ್ಞಾನಗಳೆಂಬ ಮುತ್ತನ್ನು ಹೊರತರುವುದು ಈ ಕಾಲಘಟ್ಟದ ವಿದ್ವಾಂಸರಿಗೆ ಹರಾಮ್ (ನಿಷಿದ್ಧ) ಆಗಿದೆ. ಆಧ್ಯಾತ್ಮಿಕ ಸಿದ್ಧಿಯನ್ನು ಪಡೆದ ಹಿಂದಿನ ಕಾಲದ ವಿದ್ವಾಂಸರು ಪವಿತ್ರ ಖುರ್‌ಆನ್ ಬಗ್ಗೆ ತಳಸ್ಪರ್ಶಿಯಾಗಿ ಚಿಂತಿಸಿ, ಪ್ರವಾದಿಗಳ ಜೀವಿತವನ್ನು ವೀಕ್ಷಿಸಿ ತಮ್ಮ ಗ್ರಂಥಗಳಲ್ಲಿ ಬರೆದಿರುವ ನಿಷ್ಕರ್ಷೆಗಳ ಕಡೆಗಾದರೂ ಗಮನ ಹರಿಸುತ್ತಿದ್ದರೆ ಈ ಕಾಲದ ವಿದ್ವಾಂಸರು ತಪ್ಪು ಮಾಡುತ್ತಿರಲಿಲ್ಲ.

ಹಝ್ರತ್ ಶೇಖ್ ಶಿಹಾಬುದ್ದೀನ್ ಸುಹ್ರವರ್ದಿ ತನ್ನ ಗ್ರಂಥವಾದ ಅವಾರಿಫುಲ್ ಮಆರಿಫ್‌ನಲ್ಲಿ ಹೀಗೆ ಬರೆಯುತ್ತಾರೆ:

"ಒಂದು ಪುತ್ರತ್ವ (ವಲಾದತ್) ಶಾರೀರಿಕ ಪುತ್ರತ್ವದಿಂದ ಭಿನ್ನವಾಗಿದೆ. ಅದನ್ನು ವಲಾದತ್ ಮಅನವೀ (ಆಲಂಕಾರಿಕ ಪುತ್ರತ್ವ) ಎಂದು ಕರೆಯುತ್ತಾರೆ." ಇದಕ್ಕೆ ಪುರಾವೆಯಾಗಿ ಹಝ್ರತ್ ಈಸಾ ಅಲೈಹಿಸ್ಸಲಾಮರ ಹೇಳಿಕೆಯನ್ನು ಉಲ್ಲೇಖಿಸುತ್ತಾರೆ. ಅವರು ಹೀಗೆ ಬರೆಯುತ್ತಾರೆ:

يَصِيْرُ الْمُرِيْدُ جُزْءَ الشَّيْخِ كَمَا اَنَّ الْوَلَدَ جُزْءُ الْوَالِدِ فِي الْوِلَادَةِ الطَّبْعِيَّةِ، وَتَصِيْرُ هٰذِهِ الْوِلَادَةُ اَنِفًا وِلَادَةً مَّعْنَوِيَّةً، كَمَا وَرَدَ عَنْ عِيْسٰى صَلَوٰتُ اللّٰهِ عَلَيْهِ: لَنْ يَّلِجَ مَلَكُوْتَ السَّمَآءِ مَنْ لَّمْ يُوْلَدْ مَرَّتَيْنِ، فَبِالْوِلَادَةِ الْاُوْلٰى يَصِيْرُ لَهٗ ارْتِبَاطٌ بِعَالَمِ الْمُلْكِ وَبِهٰذِهِ الْوِلَادَةِ يَصِيْرُ لَهٗ ارْتِبَاطٌ بِالْمَلَكُوْتِ -

"ಶಾರೀರಿಕವಾಗಿ ಪುತ್ರನು ಪಿತನ ಭಾಗವಾಗುವ ಹಾಗೆ ಶಿಷ್ಯನು ಗುರುವಿನ ಭಾಗವಾಗುತ್ತಾನೆ. ಇದನ್ನು ಆಲಂಕಾರಿಕವಾಗಿ ಪುತ್ರತ್ವವೆಂದು ಹೇಳಬಹುದು. ಹಝ್ರತ್ ಈಸಾ[ಅ] ಹೀಗೆ ಹೇಳಿದ್ದರು: ಒಬ್ಬನು ಎರಡು ಸಾರಿ ಹುಟ್ಟದೆ ಸ್ವರ್ಗ ರಾಜ್ಯವನ್ನು ಪ್ರವೇಶಿಸಲಾರನು. ಒಬ್ಬನು ಪ್ರಥಮ ಬಾರಿ ಹುಟ್ಟುವಾಗ ಭೌತಿಕ ಲೋಕದೊಂದಿಗೆ ಆತನ ಸಂಬಂಧ ಜೋಡಿಸಲ್ಪಡುತ್ತದೆ. ಅವನ ಎರಡನೆಯ ಹುಟ್ಟು ಅವನನ್ನು ಆಧ್ಯಾತ್ಮಿಕ ಲೋಕದೊಂದಿಗೆ ಸಂಬಂಧ ಉಂಟುಮಾಡುತ್ತದೆ.

ಅಲ್ಲಾಹನು ಸಹ ಹೀಗೆ ಹೇಳಿರುವನು:

وَكَذٰلِكَ نُرِيْٓ اِبْرٰهِيْمَ مَلَكُوْتَ السَّمٰوٰتِ
وَالْاَرْضِ وَلِيَكُوْنَ مِنَ الْمُوْقِنِيْنَ -

"ಆಕಾಶ ಮತ್ತು ಭೂಮಿಯ ಮೇಲೆ ನಮಗಿರುವ ಸರ್ವಾಧಿಕಾರವನ್ನು ನಾವು ಇಬ್ರಾಹೀಮ್ ಪ್ರವಾದಿಗೆ ತೋರಿಸಿಕೊಟ್ಟೆವು. – ಆತನು ದೃಢವಿಶ್ವಾಸ ಹೊಂದುವವರ ಜೊತೆಗೂಡಲಿಕ್ಕೋಸ್ಕರ."

ಮೇಲಿನ ಉಲ್ಲೇಖದಿಂದ ಹೀಗೆ ತಿಳಿಯುತ್ತದೆ: ಶೇಖ್ ಶಿಹಾಬುದ್ದೀನ್ ಸಾಹೇಬ್ ಸುಹ್ರವರ್ದಿ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೆ ಒಂದು ಆಲಂಕಾರಿಕ ಹೊಸ ಜನ್ಮ ಆವಶ್ಯಕವಾಗಿದೆ. ಅದಕ್ಕೆ ಸಾಕ್ಷ್ಯಾಧಾರವಾಗಿ ಅವರು ಪವಿತ್ರ ಖುರ್‌ಆನಿನ ಒಂದು ವಚನವನ್ನು ಮತ್ತು ಹಝ್ರತ್ ಈಸಾ ಮಸೀಹರು[ಅ] ಹೇಳಿದ ಒಂದು ಮಾತನ್ನು ಉಲ್ಲೇಖಿಸುತ್ತಾರೆ.

ಆಲಂಕಾರಿಕ ಮರುಹುಟ್ಟು ಆವಶ್ಯಕವಾದ ಒಂದು ಪ್ರಕ್ರಿಯೆ ಯಾಗಿದ್ದು ಆಧ್ಯಾತ್ಮಿಕ ಅಭಿವೃದ್ಧಿಗೆ ಅದು ಆವಶ್ಯಕವೆಂದು ಹಝ್ರತ್ ಈಸಾ ಮಸೀಹ್[ಅ] ಹೇಳಿರುವರು. ಹೀಗಿರುವಾಗ ಮಸೀಹರಿಗೆ ಹೋಲಿಕೆ ಹೊಂದಿ ಆಗಮಿಸಿದವರಿಗೆ (ಮಸೀಲೆ ಮಸೀಹ್‌ರಿಗೆ) ಈ ರೀತಿಯ ಮರುಹುಟ್ಟು ಅಸಾಧ್ಯವಾಗುವುದು ಹೇಗೆ?

ಸಂಕ್ಷಿಪ್ತವಾಗಿ ಹೇಳುವುದಾದರೆ, ಇಸ್ರಾಈಲ್ಯರಿಗೆ ಆಗಮಿಸಿದ ಹಝ್ರತ್ ಈಸಾ ಮಸೀಹ್[ಅ] ಪುನರಾಗಮಿಸುವುದು ಅಲ್ಲಾಹನ ಮಹಿಮೆ ಮತ್ತು ಅವನ ವಚನಗಳಿಗೆ ವಿರುದ್ಧವಾಗಿದೆ. ಅದು ಅವನ ಸಂದೇಶವಾಹಕರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಘನತೆಗೂ ವಿರುದ್ಧವಾಗಿದೆ. ಅವರ ಹದಿಸುಗಳಿಗೂ ವಿರುದ್ಧವಾಗಿದೆ. ಈ ನಂಬಿಕೆಗೆ ಕಾರಣ ಅದರ ಬಗ್ಗೆ ಗಾಢವಾಗಿ ಚಿಂತಿಸದೆ ಇರುವುದಾಗಿದೆ. ವಾಸ್ತವಿಕ ವಿಷಯವೇನೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯದಲ್ಲಿ ಒಬ್ಬರು ಮಸೀಹರಾಗಿ ಆಗಮಿಸಲಿಕ್ಕೆ ಇತ್ತು. ಅವರು ಇಷ್ಟರಲ್ಲಿಯೇ ಆಗಮಿಸಿದ್ದಾರೆ. ಅವರ ಮೂಲಕ ಅನೇಕರು ಮಾರ್ಗ ದರ್ಶನ ಪಡೆದರು. ದಾರಿ ತಪ್ಪಿದ ಅನೇಕ ಜನರು ನೇರಮಾರ್ಗದಲ್ಲಿ ಸಂಚರಿಸಲು ತೊಡಗಿದರು.

★

**"ಯುಗರಶ್ಮಿ"ಯ ಉಚಿತ ಪ್ರತಿಗಳನ್ನು ವಿತರಿಸಲು ಧನ ಸಹಾಯ ನೀಡಿದ ಉದಾರಮತಿಗಳು**

| | |
|---|---|
| ಜನಾಬ್ ಕೆ. ಪಿ. ಮಸ್‌ಊದ್ ಸಾಹೇಬ್, ಪಯಂಗಾಡಿ | ೩೦ ಪ್ರತಿಗಳು |
| ಜನಾಬ್ ಎಸ್. ವಿ. ಅಬ್ದುಲ್ ಮಜೀದ್ ಸಾಹೇಬ್, ಪಯಂಗಾಡಿ | ೧೦ ಪ್ರತಿಗಳು |

# ಬುಖಾರಿ ಇಸ್ಲಾಂನ ಮುಖವೆ?

■ *ದೇವೇಂದ್ರ ಸ್ವರೂಪ್*

**ಬುಖಾರಿಯವರಿಗೆ ಮಾತುಕತೆಯಲ್ಲಿ ವಿಶ್ವಾಸವಿಲ್ಲ. ಶಕ್ತಿ ಪ್ರದರ್ಶನದಲ್ಲಿ ವಿಶ್ವಾಸ ಇದೆ. ಅಲಹಾಬಾದ್ ಉಚ್ಚ ನ್ಯಾಯಾಲಯದ ಲಖನೌ ಪೀಠ ಅಯೋಧ್ಯೆಗೆ ಸಂಬಂಧಿಸಿ ಕೊಟ್ಟ ತೀರ್ಪನ್ನು ಬುಖಾರಿಯವರು ತೀವ್ರವಾಗಿ ವಿರೋಧಿಸಿದ್ದರು. ಲಖನೌನಲ್ಲಿ ಓರ್ವ ಮುಸ್ಲಿಂ ಪತ್ರಕರ್ತ ಬುಖಾರಿಯವರೊಂದಿಗೆ ಮಾತುಕತೆಗೆ ಮುಂದಾದಾಗ ಆತನನ್ನು ಹೊಡೆಸಲಾಯಿತು. ಅಣ್ಣಾ ನರೇಂದ್ರ ಮೋದಿಯವರನ್ನು ಟೀಕಿಸದಿದ್ದರೆ ಮುಸಲ್ಮಾನರು ಅವರ ಆಂದೋಲನಕ್ಕೆ ಸಹಕಾರ ನೀಡುವುದಿಲ್ಲ ಎಂದು ಬುಖಾರಿಯವರು ಒಂದು ಇಂಟರ್‌ವ್ಯೂನಲ್ಲಿ ಹೇಳಿದರು. ಬುಖಾರಿಯವರ ಈ ನಿಲುವು ತರ್ಕಬದ್ದೆ ಅಥವಾ ಬಡಿದಾಟದ್ದೆ?**

ಸೆಪ್ಟೆಂಬರ್ 24ರ ಶುಕ್ರವಾರ ದಿಲ್ಲಿಯ ಕಾನ್ಸ್‌ಟಿಟ್ಯೂಶನ್ ಕ್ಲಬ್‌ನಲ್ಲಿ ಒಂದು ಪ್ರದರ್ಶನ ಆರಂಭವಾಯಿತು. ಈ ಪ್ರದರ್ಶನ ರವಿವಾರ ರಾತ್ರಿ 8 ಗಂಟೆಯವರೆಗೆ ನಡೆಯಬೇಕಿತ್ತು. ಪ್ರದರ್ಶನದ ಸಮಯ ಬೆಳಿಗ್ಗೆ 11ರಿಂದ ರಾತ್ರಿ 8 ಗಂಟೆಯವರೆಗೆ. ಇದರ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ಇತ್ತು. ರಾಯಭಾರಿ ಕಚೇರಿಗಳಿಂದ, ಕಾಲೇಜುಗಳಿಂದ, ಇತರ ಪ್ರಮುಖ ಸಂಸ್ಥೆಗಳಿಂದ ಜನ ಪ್ರದರ್ಶನ ನೋಡಲು ಬರಬೇಕೆಂಬ ಆಗ್ರಹ ಇತ್ತು. ಸಂಸತ್ ಸದಸ್ಯರು, ರಾಜಕೀಯ ಮುಖಂಡರು, ಉಪರಾಷ್ಟ್ರಪತಿ ಡಾ. ಹಮೀದ್ ಅನ್ಸಾರಿ, ರಾಷ್ಟ್ರೀಯ ಅಲ್ಪಸಂಖ್ಯಾಕ ಆಯೋಗದ ಅಧ್ಯಕ್ಷ ವಜಾಹತ್ ಹಬೀಬುಲ್ಲಾಹ ಮತ್ತಿತರ ಮುಸ್ಲಿಂ ಗಣ್ಯರಿಗೆ ಪ್ರದರ್ಶನಕ್ಕೆ ವಿಶೇಷ ಆಹ್ವಾನ ಇತ್ತು. 'ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷ ಇಲ್ಲ' – ಇದು ಪ್ರದರ್ಶನದ ಘೋಷವಾಕ್ಯವಾಗಿತ್ತು. ಪ್ರದರ್ಶನದಲ್ಲಿ ಕುರಾನ್ ಮತ್ತು ಜಿಹಾದ್‌ನ ಹೊಸ ವ್ಯಾಖ್ಯೆ ಇತ್ತು. ಪ್ರದರ್ಶನಕಾರರು ಇಸ್ಲಾಂನ್ನು ಶಾಂತಿ ಮತ್ತು ಸಹೋದರ ಭಾವದ ಮತ ಎಂದು ಚಿತ್ರಿಸಿದ್ದರು. ವಿಜ್ಞಾನ, ಸ್ತ್ರೀ – ಮುಂತಾದವುಗಳ ಬಗ್ಗೆ ಇಸ್ಲಾಂನ ಭಾವಾತ್ಮಕ ದೃಷ್ಟಿ ತೋರಿಸಲಾಗಿತ್ತು. ಕುರಾನ್ 53 ಭಾರತೀಯ ಭಾಷೆಗಳಲ್ಲಿ ಮತ್ತು ಯುರೋಪಿನ ಭಾಷೆಗಳಲ್ಲಿ ಭಾಷಾಂತರವಾಗಿದೆ. ಇವೆಲ್ಲ ಪ್ರದರ್ಶನದಲ್ಲಿ ಇದ್ದುವು. ಪ್ರದರ್ಶನದಲ್ಲಿ ಇಸ್ಲಾಂನ್ನು ಉದಾರ ಮತ್ತು ಪ್ರಗತಿಶೀಲ ಮತ ಎಂದು ಚಿತ್ರಿಸುವ ಫಲಕಗಳು, ಚಿತ್ರಗಳು, ಪುಸ್ತಕಗಳು ಇದ್ದುವು.

ಈಗ ವಿಶ್ವದಲ್ಲಿ ಇಸ್ಲಾಂ ಒಂದು ಅಸಹಿಷ್ಣು, ಹಿಂಸಾತ್ಮಕ, ಆಕ್ರಮಕ, ಪ್ರಗತಿವಿರೋಧ ಮತವಾಗಿ ಕಂಡುಬರುತ್ತಿದೆ. ಇಸ್ಲಾಂನ ಇನ್ನೊಂದು ಮುಖವನ್ನು ತೋರಿಸುವುದು ತುಂಬಾ ಅಗತ್ಯವಾಗಿದೆ. ಈಗಂತೂ ಇಸ್ಲಾಂ ಅಂದರೆ ಜಿಹಾದಿಗಳು, ಮುಜಾಹಿದೀನ್‌ಗಳು, ಫಿದಾಯಿನ್‌ಗಳು, ತಾಲಿಬಾನಿಗಳು ಅನ್ನುವಂತಾಗಿದೆ. ಮೂಲಭೂತವಾದಿ ಮುಸ್ಲಿಮರಿಗೆ ಇಸ್ಲಾಂನ ಉದಾರವಾದಿ – ಪ್ರಗತಿಶೀಲ ಮುಖ ಹಿಡಿಸುವುದಿಲ್ಲ. ಅವರು ಪ್ರದರ್ಶನವನ್ನು ವಿರೋಧಿಸಿದರು. ಹಾಗಾಗಿ ಇದನ್ನು ಮೊದಲೇ ಮುಚ್ಚಬೇಕಾಯಿತು. ಜಾಮಾ ಮಸೀದಿಯ ಇಮಾಮ್ ಸೈಯದ್ ಅಹಮದ್ ಬುಖಾರಿ ಮತ್ತು ಅವರ ಸಹೋದರ ಯಾಹ್ಯಾ ಬುಖಾರಿ ಈ ಪ್ರದರ್ಶನದ ವಿರೋಧವಾಗಿ ಪ್ರದರ್ಶನ ನಡೆಸಿದರು. ಇವರೊಂದಿಗೆ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್‌ನ ಕಾರ್ಯಕಾರಿ ಸಮಿತಿಯ ಸದಸ್ಯ ಕಮಾಲ್ ಫಾರುಖಿಯವರೂ ಇದ್ದರು. ಅಖಿಲ ಭಾರತ ಮುಸ್ಲಿಂ ಅಲ್ಪಸಂಖ್ಯಾಕ ಮತ್ತು ದಲಿತ ಬುದ್ಧಿಜೀವಿ ವೇದಿಕೆಯ ಅಧ್ಯಕ್ಷ ಡಾ. ಮುಹಮ್ಮದ್ ಹಸನ್ ಮತ್ತು ದಿಲ್ಲಿಯ ಮಟಿಯಾ ಮಹಲ್ ಕ್ಷೇತ್ರದ ವಿಧಾನಸಭಾ ಸದಸ್ಯ ಶೋಯೆಬ್ ಇಕ್ಬಾಲ್‌ರವರೂ ವಿರೋಧ ಪ್ರದರ್ಶನದಲ್ಲಿ ಭಾಗವಹಿಸಿದರು. ಜಮೀಯತ್ ಉಲ್ ಉಲೇಮಾದ ಅಧ್ಯಕ್ಷರಾದ ಮೌಲಾನಾ ಅಶದ್ ಮದನಿ ಲಂಡನ್‌ನ ಪ್ರವಾಸದಲ್ಲಿದ್ದರು. ಅವರು ಅಲ್ಲಿಂದಲೇ ವಿರೋಧಿ ಪ್ರದರ್ಶನಕ್ಕೆ ತನ್ನ ಬೆಂಬಲ ಪ್ರದರ್ಶಿಸಿದರು. ಭಾರತದ ಉಪರಾಷ್ಟ್ರಪತಿ ಡಾ. ಹಮೀದ್ ಅನ್ಸಾರಿ ಪ್ರದರ್ಶನವನ್ನು ನೋಡಲು ಹೋಗುವವರಿದ್ದರು. ಅವರ ಈ ಕಾರ್ಯಕ್ರಮವನ್ನು ರದ್ದುಪಡಿಸಲಾಯಿತು. ಅಲ್ಪಸಂಖ್ಯಾಕ ಆಯೋಗದ ಅಧ್ಯಕ್ಷರಾದ ವಜಾಹತ ಹಬೀಬುಲ್ಲಾಹ, ತನ್ನ ತಾಯಿ ಹಮೀದಾ ಹಬೀಬುಲ್ಲಾಹರೊಂದಿಗೆ ಪ್ರದರ್ಶನ ನೋಡಲು ಹೋದರು. ಹಮೀದಾರವರಿಗೆ ಪ್ರದರ್ಶನ ನೋಡಿ ತುಂಬಾ ಸಂತೋಷವಾಯಿತು. ಅವರಿಗೆ ಪ್ರದರ್ಶನವನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ ಅನಿಸಿತು.

ಪ್ರದರ್ಶನದ ಮೊದಲ ದಿನ ಶುಕ್ರವಾರವೆ. ಕಮಾಲ್ ಫಾರೂಖಿಯವರು ಅದನ್ನು ನಿಲ್ಲಿಸದಿದ್ದರೆ ಉಗ್ರ ಪ್ರದರ್ಶನ ಮಾಡಲಾಗುವುದು ಎಂದು ಎಚ್ಚರಿಕೆ ಕೊಟ್ಟರು. ಇದರಿಂದ ದಿಲ್ಲಿಯ ಸರಕಾರ ಯೋಚನೆಗೀಡಾಯಿತು. ಪ್ರದರ್ಶನವನ್ನು ಮುಚ್ಚಬೇಕೆಂದು ದಿಲ್ಲಿ ಸರಕಾರ ಪ್ರದರ್ಶನದ ವ್ಯವಸ್ಥೆ ಮಾಡಿದವರ ಮೇಲೆ ಒತ್ತಡ ತರಲಾರಂಭಿಸಿತು. ಪ್ರದರ್ಶನದ ವ್ಯವಸ್ಥಾಪಕರಾದ ಸೈಯದ್ ಸಲಾಹುದ್ದೀನ್, ಸೈಯದ್ ಶಿರಾಜ್ ಅಹಮದ್, ಸೈಯದ್ ತನ್ವೀರ್ ಅಹಮದ್ ತಾವು ಪ್ರದರ್ಶನದ ಮುಖಾಂತರ ಶಾಂತಿಯನ್ನು ಹರಡಲು ಬಯಸುತ್ತೇವೆ; ತಮ್ಮದು ಹಿಂಸೆಯ ಉದ್ದೇಶವಲ್ಲ ಎಂದರು. ಅವರು ಪ್ರದರ್ಶನವನ್ನು ರವಿವಾರದ ಬದಲು ಶನಿವಾರ ರಾತ್ರಿ 8 ಗಂಟೆಗೆ ಮುಚ್ಚಲು ಒಪ್ಪಿದರು. ಪ್ರದರ್ಶನವನ್ನು ವಿರೋಧಿಸುತ್ತಿದ್ದವರಿಗೆ ಇದು ಹಿಡಿಸಲಿಲ್ಲ.

ಶನಿವಾರ ಬೆಳಿಗ್ಗೆ 11 ಗಂಟೆಗೆ ಜಾಮಾ ಮಸೀದಿಯ ಇಮಾಮ್ ಅಹಮದ್ ಬುಖಾರಿ 20-25 ಕಾರುಗಳಲ್ಲಿ 100-150 ಜನರನ್ನು ತುಂಬಿಕೊಂಡು ದಿಯಾಗಂಜ್ ಪೋಲಿಸ್ ಠಾಣೆಯ ಎದುರು ಬಂದರು. ಪ್ರದರ್ಶನವನ್ನು ಒತ್ತಾಯಪೂರ್ವಕವಾಗಿ ನಿಲ್ಲಿಸಲು ಕಾನ್ಸ್‌ಟಿಟ್ಯೂಶನ್ ಕ್ಲಬ್‌ನ ಕಡೆಗೆ ಎಲ್ಲರೂ ಹೊರಟರು. ದಿಲ್ಲಿಯ ಪೊಲೀಸರಿಗೆ ಶಾಂತಿಭಂಗವಾಗುತ್ತಿದೆ ಎಂಬ ಹೆದರಿಕೆಯಾಯಿತು. ಅವರು ಇಮಾಮ್ ಬುಖಾರಿ ಮತ್ತು ಆತನ ಅನುಯಾಯಿಗಳಲ್ಲಿ 56 ಮಂದಿಯನ್ನು ದರಿಯಾಗಂಜ್ ಪೊಲೀಸ್ ಠಾಣೆಯಲ್ಲಿ ಕುಳ್ಳಿರಿಸಿದರು. ಪ್ರದರ್ಶನವನ್ನು ಮುಚ್ಚಿ ಬಿಡಬೇಕೆಂದು ಅದರ ವ್ಯವಸ್ಥಾಪಕರ ಮೇಲೆ ಒತ್ತಡ ತರಲಾರಂಭಿಸಿದರು. ಈ ಒತ್ತಡದಿಂದಾಗಿ ಮಧ್ಯಾಹ್ನ 2.15ಕ್ಕೆ ಪ್ರದರ್ಶನವನ್ನು ಮುಚ್ಚಲಾಯಿತು. ಇಮಾಮ್ ಬುಖಾರಿ ತನ್ನ ಅನುಯಾಯಿಗಳೊಂದಿಗೆ ಸುಮಾರು 3.30ಕ್ಕೆ ತಾನು ಜಯಶಾಲಿಯಾದೆ ಎನ್ನುತ್ತಾ ಸಂತೋಷದಿಂದ ಹೋದರು.

## ಅಹಮದಿಯಾ ಮುಸ್ಲಿಂರೊಂದಿಗೆ ದ್ವೇಷ ಏಕೆ?

ಬುಖಾರಿಯವರು ಹೇಳುವಂತೆ ಪ್ರದರ್ಶನವನ್ನು ಏರ್ಪಡಿಸಿದವರು ಅಹಮದೀಯರು. ಅಹಮದೀಯರು ತಮ್ಮನ್ನು ತಾವು ಮುಸಲ್ಮಾನರೆಂದು ಹೇಳಿಕೊಂಡರೂ ಅವರು ಮುಸಲ್ಮಾನರಲ್ಲ. ಪಾಕಿಸ್ಥಾನ, ಇರಾಕ್, ಇರಾನ್‌ನಂಥ ಮುಸ್ಲಿಂ ದೇಶಗಳು ಕೂಡ ಇವರನ್ನು ಮುಸಲ್ಮಾನರೆಂದು ಒಪ್ಪುವುದಿಲ್ಲ. ಪಾಕಿಸ್ಥಾನದಲ್ಲಿ ಇವರಿಗೆ ಮತದಾನದ ಹಕ್ಕೂ ಇಲ್ಲ. ಪಾಕಿಸ್ಥಾನ ನಿರ್ಮಾಣವಾದ ಆರಂಭದಲ್ಲಿ ಅಲ್ಲಿನ ವಿದೇಶ ಮಂತ್ರಿ ಜಫರುಲ್ಲಾ ಖಾನ್‌ರು ಅಹಮದಿಯಾ ಅಥವಾ ಕಾದಿಯಾನಿ ಸಂಪ್ರದಾಯದವರಾಗಿದ್ದರು. ಅವರು ಸಂಯುಕ್ತ ರಾಷ್ಟ್ರ ಸಂಘ ಮತ್ತು ವಿಶ್ವದ ಇತರ ಕಡೆಗಳಲ್ಲಿ ಪಾಕಿಸ್ಥಾನದ ಹಿತಗಳ ಬಗ್ಗೆ ಪ್ರಭಾವಶಾಲಿಯಾಗಿ ವಾದಿಸಿದ್ದರು. ಪಾಕಿಸ್ಥಾನಕ್ಕೂ ಅವರ ಮೇಲೆ ತುಂಬಾ ಹೆಮ್ಮೆ ಇತ್ತು. ಮುಂದೆ ಪಾಕಿಸ್ಥಾನದಲ್ಲಿ ಸುನ್ನಿಗಳು ಪ್ರಭಾವಶಾಲಿಗಳಾದರು. ಸುನ್ನಿಗಳು ಅಹಮದಿಗಳು ಮುಸ್ಲಿಮರೇ ಅಲ್ಲ ಎಂದು ಘೋಷಿಸಿದರು. ಅಂದಿನಿಂದ ಪಾಕಿಸ್ಥಾನದಲ್ಲಿ ಅಹಮದಿಯಾಗಳನ್ನು ದ್ವೇಷಿಸಲಾಗುತ್ತಿದೆ. ಅವರೊಂದಿಗೆ ಭೇದಭಾವ ಮಾಡಲಾಗುತ್ತಿದೆ.

ಅಖಂಡ ಭಾರತದ ಗುರುದಾಸಪುರ ಜಿಲ್ಲೆಯ ಕಾದಿಯಾನ್ ಎಂಬ ಹಳ್ಳಿಯ ಮಿರ್ಜಾ ಗುಲಾಂ ಅಹಮದ್ ಎಂಬವರು 23.3.1989ರಂದು ಇಸ್ಲಾಂನೊಳಗೆ ಅಹಮದಿಯಾ ಸಂಪ್ರದಾಯವನ್ನು ಸ್ಥಾಪಿಸಿದರು. ಈ ಸಂಪ್ರದಾಯವನ್ನು ಸ್ಥಾಪಿಸಿದವರ ಹೆಸರಿನಿಂದಾಗಿ ಅಹಮದಿಯಾ ಎಂದೂ ಸ್ಥಾಪನೆಯಾದ ಹಳ್ಳಿಯ ಹೆಸರಿನಿಂದಾಗಿ ಕಾದಿಯಾನಿ ಎಂದೂ ಕರೆಯಲಾಗುತ್ತದೆ. ಅಹಮದಿಯಾಗಳು ಉಚ್ಚ ಶಿಕ್ಷಣವನ್ನು ಪಡೆದವರಾಗಿರುತ್ತಾರೆ. ಉದಾರ ಮನಸ್ಸಿನವರೂ ಪ್ರಗತಿಶೀಲರೂ ಆಗಿರುತ್ತಾರೆ. ನಾನು ಅವರ ಸಾಹಿತ್ಯವನ್ನು ನೋಡಿದ್ದೇನೆ. ಅವರು ಕುರಾನನ್ನು ತಮ್ಮ ಪವಿತ್ರ ಗ್ರಂಥ ಎಂದು ಹೇಳುತ್ತಾರೆ. ಮುಹಮ್ಮದರನ್ನು ತಮ್ಮ ಪೈಗಂಬರ ಎಂದು ಒಪ್ಪುತ್ತಾರೆ. ನಮಾಜ್ ಮಾಡುತ್ತಾರೆ, ರಮ್ಜಾನ್‌ನಲ್ಲಿ ಉಪವಾಸ ಮಾಡುತ್ತಾರೆ. ಆದರೆ ಅವರು ಮುಹಮ್ಮದರನ್ನು ಕೊನೆಯ ಪೈಗಂಬರ್ ಎಂದು ಹೇಳಲು ತಯಾರಿಲ್ಲ. ಕಾಲ ಹೋದಂತೆ ಹೊಸ - ಹೊಸ ಸುಧಾರಕರು- ಪೈಗಂಬರರು ಜನ್ಮ ತಾಳುತ್ತಾರೆ ಎಂದು ಮಿರ್ಜಾ ಗುಲಾಂ ಅಹಮದ್ ಹೇಳುತ್ತಾರೆ. ಅವರ ಅನುಯಾಯಿಗಳು ಅವರನ್ನು ಸುಧಾರಕ ಅಥವಾ ಮೆಹದಿ ಎಂದು ಹೇಳುತ್ತಾರೆ.

ಸುನ್ನಿ ಮುಸಲ್ಮಾನರು ಹಜರತ್ ಮುಹಮ್ಮದ್‌ರನ್ನು ಕೊನೆಯ ಪೈಗಂಬರ ಎಂದು ಹೇಳುತ್ತಾರೆ. ಅವರು ಕುರಾನಿನ ಹೊಸ ವ್ಯಾಖ್ಯೆಯನ್ನು ಸಹಿಸುವುದಿಲ್ಲ. ಅವರಲ್ಲಿ ಕುರಾನ್ ಮತ್ತು ಪೈಗಂಬರರ ಬಗ್ಗೆ ಅಂಧಶ್ರದ್ಧೆ ಇದೆ. ಯಾರಾದರೂ ಸುನ್ನಿಗಳನ್ನು ಟೀಕಿಸಿದರೆ ಅವರು ಸಹಿಸುವುದಿಲ್ಲ. ಅದನ್ನು ತಮ್ಮ ಅಪಮಾನ ಎಂದು ತಿಳಿಯುತ್ತಾರೆ. ಅದನ್ನು ವಿರೋಧಿಸತೊಡಗುತ್ತಾರೆ. ಡೆನ್ಮಾರ್ಕ್‌ನಲ್ಲಿ ಓರ್ವ ಕಾರ್ಟೂನಿಸ್ಟ್ ಮುಹಮ್ಮದ್ ಪೈಗಂಬರರ ರೇಖಾಚಿತ್ರವನ್ನು ಬಿಡಿಸಿದ. ಇದನ್ನು ಪ್ರಪಂಚದಾದ್ಯಂತ ಇರುವ ಸುನ್ನಿ ಮುಸಲ್ಮಾನರು ವಿರೋಧಿಸಿದರು. ಅಮೆರಿಕದ ಫ್ಲೋರಿಡಾದಲ್ಲಿ ಓರ್ವ ಪಾದ್ರಿ ಕುರಾನನ್ನು ಸುಟ್ಟು ಬಿಡಬೇಕೆಂದು ಸಾರ್ವಜನಿಕವಾಗಿ ಹೇಳಿದ. ಇಷ್ಟರಿಂದಲೇ ಸುನ್ನಿಗಳು ಸಿಟ್ಟಾಗಿ ಮತ ಪ್ರದರ್ಶನ ನಡೆಸಿದರು. ಅಹಮದಿಯಾ ಸಂಪ್ರದಾಯದ ಈಗಿನ ವಿಶ್ವಗುರು ಹಜರತ್ ಮಿರ್ಜಾ ಮಸ್‌ರೂರ್ ಅಹಮದ್ ಪಾಕಿಸ್ಥಾನದಿಂದ ಹೊರ ಹೋಗಿ ಈಗ ಲಂಡನಿನಲ್ಲಿ ಇದ್ದಾರೆ. ಅಮೆರಿಕದಲ್ಲಿ ಪಾದರಿ ಮಾಡಿದ ಘೋಷಣೆಯ ನಂತರವೇ ಅವರು ಇಸ್ಲಾಂನ ಬಗ್ಗೆ ಪ್ರದರ್ಶನಗಳ ವ್ಯವಸ್ಥೆ ಮಾಡಿದ್ದಾರೆ. ಇಸ್ಲಾಮಿನ ನಿಜವಾದ ಸಂದೇಶವನ್ನು ಜಗತ್ತಿಗೆ ತಿಳಿಸುವುದೇ ಈ ಪ್ರದರ್ಶನಗಳ ಉದ್ದೇಶ. ದಿಲ್ಲಿಯ ಪ್ರದರ್ಶನವೂ ಈ ಕಾರ್ಯಕ್ರಮದ ಒಂದು ಅಂಗ.

**ಬುಖಾರಿಯ ಕಾರುಬಾರು:** ಅಹಮದಿಯಾಗಳು ಯಹೂದಿಗಳ ಮತ್ತು ಅಮೆರಿಕದವರ ಏಜೆಂಟ್‌ಗಳೆಂದು ಇಮಾಮ್ ಬುಖಾರಿ ಹೇಳುತ್ತಾರೆ. ಅಹಮದಿಯಾಗಳು 1901ರಲ್ಲಿ ಕುರಾನಿನಲ್ಲಿ ಬದಲಾವಣೆ ಮಾಡಿದ್ದಾರೆ. ಅವರದ್ದು ಇಸ್ಲಾಂನ ಕುರಾನ್ ಅಲ್ಲ ಎಂದು ಅವರು ಆರೋಪಿಸುತ್ತಾರೆ. ಇಮಾಮ್ ಬುಖಾರಿ ಮತ್ತು ಕಮಾಲ್ ಫಾರುಖಿಯಂಥವರು ಯಾವುದನ್ನು

ಕುರಾನ್ ಎಂದು ಹೇಳುತ್ತಾರೋ ಅದರಿಂದ ಜಿಹಾದಿಗಳು, ಫಿದಾಯಿನ್‌ಗಳು, ಮುಜಾಹಿದೀನ್‌ಗಳು ಏಕೆ ಹುಟ್ಟಿಕೊಳ್ಳುತ್ತಾರೆ ಎಂಬುದೊಂದು ಪ್ರಶ್ನೆ. ಅಫಘಾನಿಸ್ಥಾನದಲ್ಲಿ ರಕ್ತದ ಹೊಳೆಯನ್ನೇ ಹರಿಸುತ್ತಿರುವ ತಾಲಿಬಾನಿಗಳು ಕುರಾನ್‌ನ ಮೇಲೆ ಆಣೆಯಿಟ್ಟೇ ತಮ್ಮ ಕಾರ್ಯಗಳಲ್ಲಿ ತೊಡಗುತ್ತಾರೆ. ಅದೇ ತಮಗೆ ಪ್ರೇರಣಾ ಸ್ರೋತ ಎನ್ನುತ್ತಾರೆ. 1901ರಲ್ಲಿ ಅಹಮದಿಯಾಗಳು ಕುರಾನಿನಲ್ಲಿ ಬದಲಾವಣೆ ತಂದುದು ನಿಜವಾದರೆ ಸುನ್ನಿಗಳು ಅವರೊಂದಿಗೆ ಮಾತುಕತೆ ನಡೆಸಿ ಸಮಸ್ಯೆಗೆ ನಿವಾರಣೆ ಹುಡುಕಬಹುದಿತ್ತು. ಪ್ರದರ್ಶನದ ವಿರುದ್ಧ ಶಕ್ತಿ ಪ್ರದರ್ಶನ ಏಕೆ ಮಾಡಿದರು? ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ ಅಹಮದ್ ಬುಖಾರಿ ಪೊಲೀಸ್ ಠಾಣೆಯಲ್ಲಿ ಕುಳಿತು ಹೀಗೆ ಹೇಳಿದರಂತೆ - "ಪ್ರದರ್ಶನ ನಡೆಸುತ್ತಿರುವವರು ಮುಸಲ್ಮಾನರಲ್ಲ. ಮುಸಲ್ಮಾನರಂತೆ ಪೋಷಾಕು ಧರಿಸಿ 'ಪ್ರದರ್ಶನ' ಮಾಡುತ್ತಿದ್ದಾರೆ. ಇವರು ತಮ್ಮ 'ಲಿಟರೇಚರ್ ಡಿಸ್ಟ್ರಿಬ್ಯೂಟ್' ಮಾಡುತ್ತಿದ್ದಾರೆ. ಮುಗ್ಧ ಮುಸಲ್ಮಾನರನ್ನು ದಾರಿತಪ್ಪಿಸುತ್ತಿದ್ದಾರೆ." ಅಹಮದಿಯಾಗಳ 'ಲಿಟರೇಚರ್' ದಾರಿ ತಪ್ಪಿಸುತ್ತಿದೆಯಾದರೆ ಅದರ ವಿರೋಧವನ್ನು ಇಮಾಮ್ ಬುಖಾರಿಯವರು 'ಲಿಟರೇಚರ್' ಮೂಲಕವೆ ಏಕೆ ಮಾಡುತ್ತಿಲ್ಲ? ಅವರು ಮಾತುಕತೆಗೆ ಏಕೆ ಮುಂದಾಗುವುದಿಲ್ಲ? ಆದರೆ ಬುಖಾರಿಯವರಿಗೆ ಮಾತುಕತೆಯಲ್ಲಿ ವಿಶ್ವಾಸವಿಲ್ಲ. ಶಕ್ತಿ ಪ್ರದರ್ಶನದಲ್ಲಿ ವಿಶ್ವಾಸ ಇದೆ. ಅಲಹಾಬಾದ್ ಉಚ್ಚ ನ್ಯಾಯಾಲಯದ ಲಖನೌ ಪೀಠ ಅಯೋಧ್ಯೆಗೆ ಸಂಬಂಧಿಸಿ ಕೊಟ್ಟ ತೀರ್ಪನ್ನು ಬುಖಾರಿಯವರು ತೀವ್ರವಾಗಿ ವಿರೋಧಿಸಿದ್ದರು. ಲಖನೌನಲ್ಲಿ ಓರ್ವ ಮುಸ್ಲಿಂ ಪತ್ರಕರ್ತ ಬುಖಾರಿಯವರೊಂದಿಗೆ ಮಾತುಕತೆಗೆ ಮುಂದಾದಾಗ ಆತನನ್ನು ಹೊಡೆಸಲಾಯಿತು. ದಿಲ್ಲಿಯ ಜಂಗಪುರಾ ಮೊಹಲ್ಲಾದಲ್ಲಿ ದಿಲ್ಲಿ ವಿಕಾಸ ಪ್ರಾಧಿಕಾರದ ಭೂಮಿಯಲ್ಲಿ ಅಕ್ರಮವಾಗಿ ಮಸೀದಿಯನ್ನು ಕಟ್ಟತೊಡಗಿದರು. ಇದನ್ನು ನಿಲ್ಲಿಸಲು ಪ್ರಯತ್ನಿಸಲಾಯಿತು. ಆಗ ಬುಖಾರಿಯವರು ಗಲಾಟೆ ಮಾಡಿಸಿದರು. ದಿಲ್ಲಿಯ ಮುಖ್ಯಮಂತ್ರಿ ಶೀಲಾ ದೀಕ್ಷಿತರು ಗಲಾಟೆ ನಿಲ್ಲಿಸಲು ಅಲ್ಲಿಗೆ ಬರಬೇಕಾಯಿತು. ಅಣ್ಣ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಆಂದೋಲನವನ್ನು ಬೆಂಬಲಿಸಬಾರದೆಂದು ಬುಖಾರಿಯವರು ತನ್ನ ಅನುಯಾಯಿಗಳಿಗೆ ಹೇಳಿದರು. ಅಣ್ಣಾ ನರೇಂದ್ರ ಮೋದಿಯವರನ್ನು ಟೀಕಿಸದಿದ್ದರೆ ಮುಸಲ್ಮಾನರು ಅವರ ಆಂದೋಲನಕ್ಕೆ ಸಹಕಾರ ನೀಡುವುದಿಲ್ಲ ಎಂದು ಬುಖಾರಿಯವರು ಒಂದು ಇಂಟರ್‌ವ್ಯೂನಲ್ಲಿ ಹೇಳಿದರು. ಬುಖಾರಿಯವರ ಈ ನಿಲುವು ತರ್ಕದ್ದೆ ಅಥವಾ ಬಡಿದಾಟದ್ದೆ?

ನಮ್ಮ ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ, ಪೂಜಾ ಪದ್ಧತಿಯ ಸ್ವಾತಂತ್ರ್ಯವೂ ಇದೆ. ಆದರೂ ಮುಸ್ಲಿಮರ ಈ ಪ್ರವೃತ್ತಿಯ ಎದುರು ಆಗಾಗ ತಲೆ ತಗ್ಗಿಸುವುದು ಏಕೆ? ಇದರಿಂದಲೇ ಸುನ್ನಿ ಮುಸಲ್ಮಾನರು ಮೂಲಭೂತವಾದಿಗಳ ಅನುಯಾಯಿಗಳಾಗುತ್ತಾರೆ. ನಾವು ಮುಸಲ್ಮಾನರಲ್ಲಿ ಉದಾರವಾದಿ ನೇತೃತ್ವ ಎದ್ದು ಬರುವಂತೆ ಏಕೆ ಪ್ರಯತ್ನಿಸುವುದಿಲ್ಲ? ಮುಸಲ್ಮಾನರು ಅಸಹಿಷ್ಣುತೆ, ಹಿಂಸೆ ಮತ್ತು ವಿಸ್ತಾರವಾದಿ ಮಾನಸಿಕತೆಯಿಂದ ಹೊರಬರುವಂತೆ ಪ್ರಾಮಾಣಿಕ ಪ್ರಯತ್ನವನ್ನು ಏಕೆ ಮಾಡುವುದಿಲ್ಲ? ಇಸ್ಲಾಂ ಶಾಂತಿ ಮತ್ತು ಸಹೋದರ ಭಾವ ಹೊಂದಿದೆ ಎಂದು ಹೇಳಲಾಗುತ್ತಿದೆ. ಇಸ್ಲಾಂ ಕ್ರಿ.ಶ. 622ರಲ್ಲಿ ಹುಟ್ಟಿತು. ಇದಾದ 40 ವರ್ಷಗಳಲ್ಲಿ ಮುಹಮ್ಮದ್ ಪೈಗಂಬರರ ನಿಧನದ ನಂತರ 40 ವರ್ಷಗಳಲ್ಲಿ ಕ್ರಿ.ಶ. 661ರಲ್ಲಿ ಖಲೀಫಾ ಪದವಿ ಹೆಸರಿನಲ್ಲಿ ಕರ್ಬಲಾದಲ್ಲಿ ಯುದ್ಧವಾಯಿತು. ಈ ಯುದ್ಧದ ನಂತರ ಶಿಯಾ ಮತ್ತು ಸುನ್ನಿ ಎಂಬ ಪಂಗಡಗಳ ನಿರ್ಮಾಣವಾಯಿತು. ಈ ಭೇದ ಈಗಲೂ ಇದೆ. ಇರಾನ್‌ನಲ್ಲಿ ಶಿಯಾಗಳು ಪ್ರಬಲರಾಗಿದ್ದಾರೆ. ಸೌದಿ ಅರಬ್‌ನಲ್ಲಿ ಸುನ್ನಿಗಳು ಪ್ರಬಲರಾಗಿದ್ದಾರೆ. ಇರಾಕ್‌ನಲ್ಲಿ ಆಳಿದ ಸದ್ದಾಂ ಸುನ್ನಿಯಾಗಿದ್ದ. ಆತ ತನ್ನ ದೇಶದ ಶಿಯಾಗಳನ್ನು ಎರಡನೆಯ ದರ್ಜೆಯ ನಾಗರಿಕರನ್ನಾಗಿ ಘೋಷಿಸಿದ. ಇಂಥವರು ಮುಸಲ್ಮಾನರಲ್ಲದವರನ್ನು ಹೇಗೆ ನಡೆಸಿಕೊಂಡಾರು?

ಇದೆಲ್ಲವನ್ನು ಗಮನಿಸುವಾಗ ಅಹಮದಿಯಾ ಮುಸ್ಲಿಂ ಜಮಾತೆ ಹಿಂದ್‌ನ ಕಾರ್ಯದರ್ಶಿಗಳಾದ ಸೈಯದ್ ತನ್ವೀರ್ ಅಹಮದ್ ಹೇಳಿದುದು ಸರಿ ಎನಿಸುತ್ತದೆ - "ಕುರಾನ್ ಪ್ರದರ್ಶನವನ್ನು ಬಲ ಪ್ರಯೋಗದಿಂದ ನಿಲ್ಲಿಸಿದ್ದು ದೌರ್ಭಾಗ್ಯಪೂರ್ಣ. ನಾವು ಕುರಾನ್‌ನ ಬಗ್ಗೆ ಸರಿಯಾದ ಜ್ಞಾನ ಜನರಿಗೆ ಸಿಗಲಿ ಎಂದು ಪ್ರಯತ್ನಿಸುತ್ತಿದ್ದೆವು. ಈ ಪ್ರದರ್ಶನದಿಂದ ಎಲ್ಲರಿಗೂ ಕುರಾನಿನ ಸರಿಯಾದ ಸಂದೇಶ ತಿಳಿಯುತ್ತಿತ್ತು. ನಾವು ನಿಜವಾದ ಮುಸಲ್ಮಾನರು. ನಾವು ಇಸ್ಲಾಂನ ಮೂಲಭೂತ ತತ್ವಗಳನ್ನು ಅನುಸರಿಸುತ್ತೇವೆ. ನಾವು ಮುಸಲ್ಮಾನರು ಹೌದೋ - ಅಲ್ಲವೋ ಎಂದು ಸರ್ಟಿಫಿಕೇಟ್ ಕೊಡುವ ಅಧಿಕಾರ ಯಾರಿಗಿದೆ?" ತನ್ವೀರರು ಹೇಳಿರುವ ಬಗ್ಗೆ ನಾವು ವಿಚಾರ ಮಾಡಬೇಕು. ಅಹಮದಿಯರು ಕುರಾನನ್ನು ಒಟ್ಟು 53 ಭಾಷೆಗಳಲ್ಲಿ ಭಾಷಾಂತರಿಸಿದ್ದಾರೆ. ಅವರ ಸಾಹಿತ್ಯವು ವಿವೇಚನಾತ್ಮಕವೂ ತರ್ಕಪೂರ್ಣವೂ ಆಗಿದೆ. ಅವರ ಸಾಹಿತ್ಯವನ್ನು ಬೌದ್ಧಿಕ ದೃಷ್ಟಿಯಿಂದ ಅಧ್ಯಯನ ಮಾಡಬೇಕು. ಬಲಪ್ರಯೋಗ ಮಾಡಿ ಪ್ರಯೋಜನವಿಲ್ಲ. ಕುರಾನ್ ಮತ್ತು ಪೈಗಂಬರರ ಬಗ್ಗೆ ಅಂಧಶ್ರದ್ಧೆ ಹಬ್ಬಿದಾಗ ಮುಜಾಹಿದೀನ್ ಮತ್ತು ಫಿದಾಯಿನ್‌ಗಳು ಹುಟ್ಟುವುದು ಖಚಿತ. ಇದರಿಂದ ವಿಶ್ವಶಾಂತಿಗೆ ಧಕ್ಕೆಯಾಗುವುದು ಖಚಿತ.

**(ಹೊಸದಿಗಂತ 30-10-2011)**

**ಪ**ವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

**"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಓ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ." (33:57)**

## ದುರೂದ್ ಶರೀಫ್

ಲೇಖಕ: ಸಿದ್ದೀಖ್ ಅಶ್ರಫ್ ಅಲಿ, ಮೊಗ್ರಾಲ್

(ದುರೂದ್ ಶರೀಫ್‌ನೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗಾಢ ಮತ್ತು ಸ್ನೇಹಪೂರ್ವಕ ಸಂಬಂಧ ಕುರಿತು ಲೇಖಕರು ವಿವರಿಸುತ್ತಾರೆ. - ಸಂಪಾದಕ)

(ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅನುಗ್ರಹ ಮತ್ತು ಶಾಂತಿಯನ್ನು ಬಯಸುವ ಪ್ರಾರ್ಥನೆಯನ್ನು ದುರೂದ್ ಶರೀಫ್ ಎನ್ನುತ್ತಾರೆ.)

ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ನೀಡಿದ ಆಜ್ಞೆ ಪ್ರತಿಯೊಬ್ಬ ಮುಸ್ಲಿಮನು ಕಡ್ಡಾಯವಾಗಿ ಪಾಲಿಸಬೇಕಾಗಿದ್ದರೂ ಈ ಆಜ್ಞೆ ಹಝ್ರತ್ ಪೈಗಂಬರರ(ಸ) ಅನುಯಾಯಿಗಳಲ್ಲಿ ಅತ್ಯಂತ ಅನುಗ್ರಹೀತ ಮಹಾನುಭಾವರನ್ನು ಮೊದಲನೆಯದಾಗಿ ಸಂಬೋಧಿಸುವಂತಹದಾಗಿತ್ತು. ಈ ಆಜ್ಞೆಯನ್ನು ವಾಸ್ತವಿಕವಾಗಿ ಪಾಲಿಸತಕ್ಕವರು ಮಸೀಹ್ ಮೌಊದ್ ಮತ್ತು ಮಹ್‌ದೀ ಮೌಊದ್ ಆಗಿ ಆಗಮಿಸಿದ ಮಹಾನುಭಾವರಾಗಿದ್ದರು. ಅವರು ದುರೂದ್ ಶರೀಫ್‌ನ ಆಳಗಳಲ್ಲಿ ತನ್ನನ್ನು ಮುಳುಗಿಸಲಿಕ್ಕಿತ್ತು. ಅವರು ಈ ಅನುಗ್ರಹಗಳನ್ನು ದುರೂದ್ ಶರೀಫ್ ಮೂಲಕ ಪಡೆಯಲಿಕ್ಕಿತ್ತು. ಅವರು ತಮ್ಮ ಮಾತು ಮತ್ತು ಕೃತ್ಯಗಳ ಮೂಲಕ ಮಾತ್ರವಲ್ಲ, ತಮ್ಮ ಬರಹಗಳ ಮೂಲಕ ಸಹ ದುರೂದ್ ಶರೀಫಿನ ಅನುಗ್ರಹಗಳನ್ನು ಲೋಕದಲ್ಲಿ ಹರಡಿಸಲಿಕ್ಕಿದ್ದಿತು.

### ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ನಿಕಟ ಸಂಬಂಧ

ಹಝ್ರತ್ ಪೈಗಂಬರ್(ಸ) ತನ್ನ ಈ ಸತ್ಯಸಂಧ ಪ್ರೇಮಿಯನ್ನು 14 ನೂರು ವರ್ಷಗಳ ಹಿಂದೆಯೇ ಗುರುತಿಸಿದ್ದರು ಮತ್ತು ಅವರ ಆಗಮನದ ಸಮಾಚಾರ ನೀಡಿದ್ದರು. ತನ್ನ ಪ್ರೀತಿಗೆ ಪಾತ್ರರೂ ತನ್ನನ್ನು ಎಲ್ಲರಿಗಿಂತಲೂ ಮಿಗಿಲಾಗಿ ಪ್ರೀತಿಸುವವರೂ ತನಗೋಸ್ಕರ ಎಲ್ಲರಿಗಿಂತಲೂ ಹೆಚ್ಚು ದುರೂದ್ ಪ್ರಾರ್ಥನೆ ಮಾಡುವವರೂ ಆಗಿರುವ ಅವರು ಬೇಗನೆ ಆಗಮಿಸುವರು ಎಂದು ಹೇಳಿದ್ದರು. ಆ ಹಝ್ರತ್ ಪೈಗಂಬರ್(ಸ) ಹೇಳಿದರು: "ನಾನು ಮುಹಮ್ಮದ್ ಆಗಿದ್ದೇನೆ. ಬರುವವರು ಅಹ್ಮದ್ ಆಗಿರುವವರು. ನಾನು ಸೂರ್ಯನಾದರೆ ಅವರು ಚಂದ್ರನಾಗಿರುವರು. ನಾನು ಪ್ರಥಮನಾಗಿದ್ದರೆ ಅವರು ಅಂತಿಮ. ನಾನು ಹಾದಿ (ಮಾರ್ಗದರ್ಶಕ) ಆಗಿದ್ದರೆ ಅವರು ಮಹ್‌ದೀ ಆಗಿರುವರು. ನಾನು ಮೂಸಾ ಆಗಿದ್ದರೆ ಅವರು ಈಸಾ ಆಗಿರುವರು. ನಾನು ಮೂಲವಸ್ತುವಾಗಿದ್ದರೆ ಅವರು ನನ್ನ ನೆರಳು." ಹಝ್ರತ್ ಪೈಗಂಬರ್(ಸ) ತನ್ನ ಅನುಯಾಯಿಗಳ ಪೈಕಿ ಅವರನ್ನು ಮಾತ್ರ ತನ್ನ ಸಲಾಮ್ ತಲಪಿಸಲು ಆಯ್ಕೆ ಮಾಡಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: "ಹಿಮಗಡ್ಡೆಗಳ ಮೇಲೆ ಮೊಣಕಾಲೂರಿ ನಡೆಯಬೇಕಾಗಿ ಬಂದರೂ ಹಾಗೆ ಚಲಿಸಿಕೊಂಡು ಹೋಗಿ ನನ್ನ ಸಲಾಮ್ ತಲಪಿಸಿ ಅವರ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಮಾಡಬೇಕು." ಇದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ತನ್ನ ಐಕ್ಯತೆಯನ್ನು ಮತ್ತು ಪ್ರೀತಿಯನ್ನು ಸೂಚಿಸಲು ಹೀಗೆ ಹೇಳಿದರು: "ವಾಗ್ದತ್ತ ಮಹ್‌ದೀ ನನ್ನೊಂದಿಗೆ ನನ್ನ ಗೋರಿಯಲ್ಲಿ ದಫನಗೊಳಿಸಲ್ಪಡುವರು. ಪುನರುತ್ಥಾನದ ದಿನ ನಾವಿಬ್ಬರೂ ಒಂದೇ ಗೋರಿಯಿಂದ ಎದ್ದು ಬರುವೆವು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ತನ್ನ ಯಜಮಾನರ ಪ್ರೀತಿಯಲ್ಲಿ ತನ್ಮಯಗೊಳಿಸಿದ್ದರು. ಅವರು ತನ್ನ ಅಸ್ತಿತ್ವವನ್ನೇ ಅಳಿಸಿಬಿಟ್ಟರು. ಅವರಲ್ಲಿ ಮತ್ತು ಅವರ ಯಜಮಾನರಲ್ಲಿ ವ್ಯತ್ಯಾಸವೇನೂ ಉಳಿಯಲಿಲ್ಲ. ಒಬ್ಬ ಕವಿ ಹೇಳಿದ ಹಾಗೆ:

ಮನ್ ತೌ ಶುದಮ್ ತೌ ಮನ್ ಶುದೇ
ಮನ್ ತನ್ ಶುದಮ್ ತೌಜಾನ್ ಶುದೇ
ತಾಕಸ್ ನ ಗೂಯದ್ ಬಅದ್ ಅಝೀಂ
ಮನ್ ದೀಗರಮ್ ತೌ ದೀಗರೇ

"ನಾನು ನೀನಾದೆ; ನೀನು ನಾನಾದೆ.
ನಾನು ಶರೀರವಾದೆ; ನೀನು ಜೀವವಾದೆ.
ಇದರ ನಂತರ ಯಾರಾದರೂ ಹೇಳದಿರಲಿ;
ನಾನು ಬೇರೆ ನೀನು ಬೇರೆ ಎಂದು.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವ ಎಲ್ಲಾ ಹಂತಗಳನ್ನು ಹಝ್ರತ್ ಮಸೀಹ್ ಮೌಊದ್(ಅ) ಉತ್ತಮ ರೀತಿಯಲ್ಲಿ ದಾಟಿ ಅದರಲ್ಲಿ ಯಾವುದೇ ಕೊರತೆ ಇಲ್ಲದಂತೆ ನೋಡಿಕೊಂಡರು. ಅವರು ಸ್ವತಃ ಹೀಗೆ ಹೇಳುತ್ತಾರೆ:

ಬಅದ್ ಅಝ್ ಖುದಾ ಬ ಇಶ್ಕೆ ಮುಹಮ್ಮದ್ ಮುಖಮ್ಮರಮ್
ಗರ್ ಕುಫ್ರ್ ಈಂ ಬವದ್ ಬಖುದಾ ಸಖ್ತ್ ಕಾಫಿರಮ್.

"ಅಲ್ಲಾಹನ ನಂತರ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲಿನ ಪ್ರೀತಿಯಿಂದ ನಾನು ಮತ್ತನಾಗಿರುವೆನು. ಇದನ್ನು ಯಾರಾದರೂ ಕುಫ್ರ್ (ಅವಿಶ್ವಾಸ) ಎಂದು ಹೇಳುವುದಾದರೆ, ದೇವನಾಣೆ ನಾನು ಕಠಿಣ ಕಾಫಿರ್ ಆಗಿದ್ದೇನೆ."

### ದುರೂದ್ ಶರೀಫಿನೊಂದಿಗೆ ಗಾಢ ಸಂಬಂಧ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಉನ್ನತ ಉದ್ದೇಶಕ್ಕೋಸ್ಕರ ತನ್ನ ಜೀವಿತದ ಕ್ಷಣಕ್ಷಣಗಳನ್ನೂ ಬಲಿದಾನ ಮಾಡಿದರು. ಅವರು ಯಾವುದೇ ಕ್ಷಣವನ್ನು ವ್ಯರ್ಥಗೊಳಿಸಲಿಲ್ಲ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹದಿಂದ ಪಾಲನ್ನು ಪಡೆಯಬಹುದಾದ ಪ್ರತಿಯೊಂದು ಸಂದರ್ಭದಿಂದ ಲಾಭಪಡೆಯುವುದನ್ನು ಅವರು ತನ್ನ ಮೇಲೆ ಕಡ್ಡಾಯಗೊಳಿಸಿದ್ದರು.

ಅಲ್ಲಾಹನು ಹೀಗೆ ಹೇಳುತ್ತಾನೆ:

**"(ಓ ಪ್ರವಾದಿ) ಹೇಳು: ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ."**

ಈ ಆಜ್ಞೆ ಪ್ರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದನ್ನು ತನಗೆ ಜೀವದಾಯಕವನ್ನಾಗಿ ಮಾಡಿಕೊಂಡರು. ಅವರು ಹೀಗೆ ತಿಳಿದುಕೊಂಡಿದ್ದರು: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಾಮೀಪ್ಯ ಗಳಿಸಲು ಮತ್ತು ಅವರನ್ನು ಅನುಸರಿಸಲು ಇರುವ ಅತ್ಯುತ್ತಮ ಮಾರ್ಗ ದುರೂದ್ ಶರೀಫನ್ನು ಹೆಚ್ಚು ಹೆಚ್ಚಾಗಿ

ಉಚ್ಚರಿಸುವುದಾಗಿದೆ. ಅನಂತರ ಏನಾಯಿತು? ಅವರು ಕುಳಿತಾಗಲೂ ಎದ್ದೇಳುವಾಗಲೂ ನಿದ್ರಿಸುವಾಗಲೂ ನಿದ್ರೆಯಿಂದ ಎದ್ದೇಳುವಾಗಲೂ ದುರೂದ್ ಶರೀಫಿನಲ್ಲಿ ತಲ್ಲೀನರಾಗುತ್ತಿದ್ದರು. ಮುಹಮ್ಮದ್ ಎಂಬ ಹೆಸರನ್ನು ಅವರು ತನ್ನ ಅಸ್ತಿತ್ವದ ಒಂದು ಭಾಗವನ್ನಾಗಿ ಮಾಡಿಕೊಂಡರು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರಿ ಹಝ್‌ರತ್ ನವಾಬ್ ಮುಬಾರಕ ಬೇಗಮ್ ಸಾಹಿಬ ರಝಿಯಲ್ಲಾಹು ಅನ್‌ಹಾ ಹೀಗೆ ಹೇಳಿದರು:

"ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿದ್ರಿಸುವಾಗ ಮಗ್ಗಲು ಬದಲಿಸುವ ಸಂದರ್ಭದಲ್ಲಿ ಸಹ ಅವರ ನಾಲಗೆಯಿಂದ ಈ ಕೆಳಗಿನ ಶಬ್ದಗಳು ಉಚ್ಚರಿಸಲ್ಪಡುತ್ತಿದ್ದುವು. 'ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್ ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್.' ಅವರು ನನ್ನೊಂದಿಗೆ ಸಹ ಪ್ರಾರ್ಥನೆ ಮಾಡಬೇಕೆಂದು ಹೇಳುತ್ತಾ ಇದ್ದರು."

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾರೆ:

ರಬ್‌ತ್ ಹೈ ಜಾನೆ ಮುಹಮ್ಮದ್ ಸೆ ಮೆರೀ ಜಾನ್‌ಕೋ ಮದಾಮ್. ದಿಲ್ ಕೋ ಓ ಜಾಮೆ ಲಬಾಲಬ್ ಹೈ ಪಿಲಾಯಾ ಹಮ್‌ನೆ.

"ನನ್ನ ಜೀವಕ್ಕೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹ್ ಅಲೈಹಿ ವಸಲ್ಲಮರ ಜೀವದೊಂದಿಗೆ ಯಾವಾಗಲೂ ಜೋಡಣೆ ಇದೆ. ನನ್ನ ಹೃದಯಕ್ಕೆ ಆ ಪಾನೀಯವನ್ನು ನಾನು ಕುಡಿಸಿದೆನು."

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದುರೂದ್ ಶರೀಫಿನೊಂದಿಗೆ ಗಾಢವಾದ ಸಂಬಂಧವಿತ್ತು. ಅವರ ಲೌಕಿಕ ಮತ್ತು ಆಧ್ಯಾತ್ಮಿಕ ಜೀವಿತ ದುರೂದ್ ಶರೀಫಿನೊಂದಿಗೆ ಸಂಬಂಧ ಹೊಂದಿತ್ತು.

## ರೋಗದಿಂದ ಉಪಶಮನ ಪಡೆದುದು

ಅವರು ಹೇಳುತ್ತಾರೆ: ನಾನು ಒಮ್ಮೆ ಬಹಳ ಕಠಿಣವಾಗಿ ರೋಗಪೀಡಿತನಾದೆನು. ನನ್ನ ವಾರೀಸುದಾರರು ಮೂರು ಬೇರೆ ಬೇರೆ ಸಮಯಗಳಲ್ಲಿ, ನಾನು ಕೊನೆಯ ಘಳಿಗೆಯಲ್ಲಿದ್ದೇನೆಂದು ಭಾವಿಸಿ ಆಗ ಜಾರಿಯಲ್ಲಿದ್ದ ಕ್ರಮದ ಪ್ರಕಾರ ಮೂರು ಸಾರಿ ಸೂರತುಲ್ ಯಾಸೀನ್ ನನಗೆ ಓದಿ ಕೇಳಿಸಿದ್ದರು. ನನ್ನ ಕೆಲವು ಬಂಧುಗಳು – ಅವರು ಈಗ ಜೀವಿಸಿಲ್ಲ – ಗೋಡೆಗಳ ಹಿಂದೆ ನಿಂತು ಅಳುತ್ತಾ ಇದ್ದರು. ರೋಗಗ್ರಸ್ತನಾಗಿ ಹದಿನಾರನೆಯ ದಿನದಂದು ನಾನು ಜೀವಿಸುವ ಬಗ್ಗೆ ಸಂಪೂರ್ಣವಾಗಿ ನಿರಾಶೆ ಹೊಂದಿ, ಮೂರನೆಯ ಸಾರಿ ಸೂರತುಲ್ ಯಾಸೀನ್ ನನಗೆ ಕೇಳಿಸಿದರು. ಎಲ್ಲಾ ಸಂಬಂಧಿಕರು, "ಇಂದು ಸಂಜೆಯೊಳಗೆ ಇವನು ಗೋರಿಯೊಳಗಿರುವನು" ಎಂದು ದೃಢವಾಗಿ ನಂಬಿದ್ದರು.

ಆಗ ಏನಾಯಿತೆಂದರೆ ಅಲ್ಲಾಹನು ತನ್ನ ಪ್ರವಾದಿಗಳಿಗೆ ವಿಪತ್ತುಗಳಿಂದ ರಕ್ಷಿಸಲ್ಪಡಲು ಕೆಲವು ಪ್ರಾರ್ಥನೆಗಳನ್ನು ಕಲಿಸುವ ಹಾಗೆ ನನಗೆ ಸಹ ಸಂದೇಶವಾಣಿ ಮೂಲಕ ಹೀಗೆ ಒಂದು ಪ್ರಾರ್ಥನೆಯನ್ನು ಕಲಿಸಿದನು: "ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್."

ಅಲ್ಲಾಹನು ನನ್ನ ಹೃದಯಕ್ಕೆ ಈ ಕೆಳಗಿನಂತೆ ಸಂದೇಶ ವಾಣಿಯನ್ನು ಅರುಹಿದನು:

ಮರಳು ಮಿಶ್ರಿತ ನದಿ ನೀರನ್ನು ಕೈಯಲ್ಲಿ ಹಾಕಿಕೊಂಡು ಮೇಲೆ ಬರೆದ ರೀತಿ ಪ್ರಾರ್ಥನೆ ಮಾಡುತ್ತಾ ಎದೆಯ ಮೇಲೂ ಬೆನ್ನ ಮೇಲೂ ಸವರಬೇಕು. ಎರಡು ತೋಳುಗಳ ಮೇಲೆಯೂ ಮುಖದ ಮೇಲೆಯೂ ಸವರಬೇಕು. ಹೀಗೆ ಮಾಡಿದರೆ ರೋಗ ನಿವಾರಣೆ ಆಗುವುದು.

ಆಗ ಮರಳು ಮಿಶ್ರಿತ ನೀರನ್ನು ನದಿಯಿಂದ ಬೇಗನೆ ತರಿಸಲಾಯಿತು. ನನಗೆ ತಿಳಿಸಲ್ಪಟ್ಟ ಹಾಗೆ ನಾನು ಮಾಡಿದೆ. ಆಗ ನನ್ನ ಸ್ಥಿತಿ ಹೇಗಿತ್ತೆಂದರೆ ಒಂದೊಂದು ರೋಮದಿಂದಲೂ ಬೆಂಕಿ ಹೊರಗೆ ಬರುತ್ತಿತ್ತು. ಶರೀರವಿಡೀ ನೋವು ಭರಿತ ಉರಿಯಿಂದ ಬಾಧಿತವಾಗಿತ್ತು. ಇಂತಹ ಸ್ಥಿತಿಯಲ್ಲಿ ಜೀವಿಸುವುದಕ್ಕಿಂತ ಮರಣಿಸುವುದೇ ಉತ್ತಮ ಎಂದು ತೋಚುತ್ತಿತ್ತು. ಆದರೆ ನಾನು ನನಗೆ ಆದೇಶಿಸಲಾದ ಹಾಗೆ ಮಾಡಲು ಪ್ರಾರಂಭಿಸಿದ ಕೂಡಲೆ ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ದೇವನಾಣೆ, ಒಂದು ಸಾರಿ ಪ್ರಾರ್ಥನೆಯನ್ನು ಮಾಡಿ ಮರಳು ಮಿಶ್ರಿತ ನೀರನ್ನು ಸವರಿದ ಕೂಡಲೆ ಬೆಂಕಿಯ ಉರಿ ಶರೀರದೊಳಗಿಂದ ಹೊರಗೆ ಹೋಗುತ್ತಿರುವಂತೆ ನನಗೆ ಭಾಸವಾಯಿತು. ಉರಿಗೆ ಬದಲಾಗಿ ತಂಪು ಮತ್ತು ಸುಖವು ಉಂಟಾಗುತ್ತಿತ್ತು. ನೀರು ತುಂಬಿಸಿ ತಂದ ಪಾತ್ರೆಯಲ್ಲಿದ್ದ ನೀರು ಮುಗಿಯುವುದರೊಳಗೆ ನನ್ನ ರೋಗ ನನ್ನನ್ನು ಬಿಟ್ಟು ಹೋದುದಾಗಿ ನನಗೆ ಕಾಣಿಸಿತು. ಹದಿನಾರು ದಿನಗಳ ನಂತರ ಆ ದಿನ ರಾತ್ರಿ ಸುಖವಾಗಿ ನಿದ್ರಿಸಿದೆ. (ತಿರ್‌ಯಾಖುಲ್ ಖುಲೂಬ್ – ಪ್ರಥಮ ಮುದ್ರಣ, ಪುಟ 37–38)

ಮೇಲೆ ವಿವರಿಸಿದ ರೀತಿಯಲ್ಲಿ ದುರೂದ್ ಶರೀಫಿನ ಅನುಗ್ರಹದಿಂದ ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹೊಸ ಜೀವನವನ್ನು ನೀಡಿದನು. ಈ ಘಟನೆ ಅವರ ಜೀವಿತವನ್ನೇ ಬದಲಾಯಿಸಿತು. ಅವರು ಒಂದು ಅರಬಿ ಪದ್ಯದಲ್ಲಿ ಹೀಗೆ ಬರೆದರು:

"ನಿಶ್ಚಯವಾಗಿಯೂ ನಾನು ಜೀವಂತನಾದುದು ನೀವು ನನ್ನನ್ನು ಜೀವಂತಗೊಳಿಸಿದುದರಿಂದಾಗಿದೆ. ಎಷ್ಟು ಪವಾಡಸದೃಶವಾಗಿ ನನಗೆ ಜೀವಿತವು ನೀಡಲ್ಪಟ್ಟಿತು! ನೀವು ನನ್ನನ್ನು ಎಷ್ಟು ಚೆನ್ನಾಗಿ ಜೀವಂತಗೊಳಿಸಿದಿರಿ!"

## ದುರೂದ್ ಪ್ರಾರ್ಥನೆ ಮಾಡುವ ಆಜ್ಞೆ

ಅಲ್ಲಾಹನು ಅನೇಕ ಸಾರಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂದೇಶವಾಣಿಯನ್ನು ಅವತೀರ್ಣಗೊಳಿಸಿ, ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಅವರ ಕುಟುಂಬಕ್ಕೋಸ್ಕರ ದುರೂದ್ ಪ್ರಾರ್ಥನೆ ಮಾಡಲು ಆದೇಶಿಸಿದನು. ಯಾವ ವಿಷಯ ಅವರಿಗೆ ಇಷ್ಟಕರವಾಗಿತ್ತೋ ಅದನ್ನೇ ಮಾಡಲು ಅಲ್ಲಾಹನು ಅವರಿಗೆ ಆದೇಶಿಸಿದನು. ಅದರ ಮೂಲಕ ಅವರಿಗೆ ಪುಣ್ಯ ಲಭಿಸಿ ಅವರ ಆಧ್ಯಾತ್ಮಿಕ ಪದನ್ನೋತಿ ಯಾಗುವಂತಾಯಿತು.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಹೀಗೆಯೂ ದೇವವಾಣಿ ದೊರಕಿತು:

"ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದಿನ್
ಸಯ್ಯಿದು ಉಲ್ದಿ ಆದಮ್ ವ ಖಾತಮನ್ನಬಿಯ್ಯೀನ್."

"ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ

ಮತ್ತು ಅವರ ಕುಟುಂಬದವರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡು. ಅವರು ಆದಮ್ ಸಂತತಿಯ ನಾಯಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ." (ಬರಾಹೀನೆ ಅಹ್ಮದಿಯಾ – ಪುಟ 502)

ದುರೂದ್ ಶರೀಫ್ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶರೀರ ಮತ್ತು ಆತ್ಮದ ಆಹಾರವಾಯಿತು. ಅವರು ಇದರ ಬಗ್ಗೆ ಪ್ರೀತಿಪೂರ್ವಕವಾಗಿ ಹೀಗೆ ಹೇಳುತ್ತಾರೆ: "ನಾನು ಸತ್ಯವಾಗಿ ಹೇಳುತ್ತೇನೆ ಮತ್ತು ನನ್ನ ಅನುಭವ ಜ್ಞಾನದಿಂದ ಹೇಳುತ್ತೇನೆ. ಯಾವುದೇ ವ್ಯಕ್ತಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಲ್ಲಿ ತಲ್ಲೀನವಾಗುವುದಿಲ್ಲವೋ ಅಲ್ಲಿಯ ತನಕ ಅವನು ನಿಜವಾಗಿ ಒಳಿತನ್ನು ಮಾಡುವವನೂ ಅಲ್ಲಾಹನ ತೃಪ್ತಿಯನ್ನು ಗಳಿಸುವವನೂ ಆಗಲಾರನು ಮತ್ತು ಉನ್ನತ ಮಟ್ಟದ ಆತ್ಮಶುದ್ಧೀಕರಣದ ಮೂಲಕ ದೊರಕುವ ಜ್ಞಾನ, ಸತ್ಯ ಮತ್ತು ದೈವಿಕ ದರ್ಶನ ಮೊದಲಾದ ಬಹುಮಾನಗಳನ್ನೂ ಅನುಗ್ರಹಗಳನ್ನೂ ಪಡೆಯುವವನಾಗಲಾರನು. ಇದಕ್ಕೆ ಸಾಕ್ಷ್ಯಾಧಾರ ಪವಿತ್ರ ಖುರ್‌ಆನಿನ ಈ ವಚನವಾಗಿದೆ: ಖುಲ್ ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ್ – ಹೇಳು, ನೀವು ಅಲ್ಲಾಹನನ್ನು ಪ್ರೀತಿಸುವಿರಾದರೆ ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ನಿಮ್ಮನ್ನು ಪ್ರೀತಿಸುವನು.

ಅಲ್ಲಾಹನ ಈ ವಾಗ್ದಾನದ ಜೀವಂತ ನಿದರ್ಶನ ನಾನಾಗಿರುವೆನು." (ಅಲ್‌ಹಕಮ್: 17–9–1901 – ಪುಟ 1, 2)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಬ್ಬ ಶಿಷ್ಯರಿಗೆ ಉಪದೇಶಿಸುತ್ತಾ ಹೀಗೆ ಹೇಳಿದರು: "ನೀವು ದುರೂದ್ ಶರೀಫ್ ಪ್ರಾರ್ಥನೆ ಮಾಡುವುದರಲ್ಲಿ ಬಹಳ ಗಮನ ಹರಿಸಿರಿ.... ನೀವು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿಜವಾಗಿಯೂ ಪ್ರೀತಿಸುವವರಾಗಬೇಕು. ನೀವು ಸತ್ಯವಾಗಿಯೂ ಆತ್ಮಸಾಕ್ಷಿಯಾಗಿಯೂ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಪ್ರಾರ್ಥನೆಯಲ್ಲಿರುವ ಅನುಗ್ರಹಗಳನ್ನು ಅಲ್ಲಾಹನಿಂದ ಬೇಡಿಕೊಳ್ಳಬೇಕು. ವಾಸ್ತವಿಕವಾಗಿ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಅನ್ಯರು ಪ್ರಾರ್ಥಿಸಬೇಕೆಂಬ ಆವಶ್ಯಕತೆ ಇಲ್ಲ. ಆದರೆ ದುರೂದ್ ಪ್ರಾರ್ಥನೆ ಮಾಡುವುದರಲ್ಲಿ ಒಂದು ನಿಗೂಢ ರಹಸ್ಯ ಅಡಕವಾಗಿದೆ. ಒಬ್ಬ ವ್ಯಕ್ತಿ ತನಗೆ ಇನ್ನೊಬ್ಬ ವ್ಯಕ್ತಿಯೊಂದಿಗಿರುವ ವೈಯಕ್ತಿಕ ಸಂಬಂಧದ ಕಾರಣ ದೇವಾನುಗ್ರಹಗಳು ಆ ಇನ್ನೊಬ್ಬ ವ್ಯಕ್ತಿಗೆ ಸಿಗಬೇಕೆಂದು ಆಶಿಸುವಾಗ ಹಾಗೆ ಆಶಿಸುವವನು ತನ್ನ ವೈಯಕ್ತಿಕ ಪ್ರೀತಿಯ ಕಾರಣದಿಂದ ಆ ಇನ್ನೊಬ್ಬ ವ್ಯಕ್ತಿಯ ಒಂದು ಭಾಗ ವಾಗುತ್ತಾನೆ. ಯಾರಿಗೋಸ್ಕರ ಪ್ರಾರ್ಥನೆ ಮಾಡಲಾಗುತ್ತಿದೆಯೋ ಆತನಿಗೆ ದೊರಕುವ ದೇವಾನುಗ್ರಹ ಪ್ರಾರ್ಥಿಸುವವನಿಗೂ ದೊರಕುತ್ತದೆ." (ಮಕ್ತೂಬಾತೆ ಅಹ್ಮದಿಯಾ – ಪುಟ 24–25. ಮೌಲಾನ ಮುಹಮ್ಮದ್ ಇಸ್ಮಾಈಲ್ ಸಾಹೇಬರು ಬರೆದ ದುರೂದ್ ಶರೀಫ್ ಎಂಬ ಗ್ರಂಥದಿಂದ – ಪುಟ 36 – ಉಲ್ಲೇಖಿತ)

ಇದೇ ವಿಷಯ ಹದೀಸಿನಲ್ಲಿ ಹೀಗೆ ಬರೆಯಲಾಗಿದೆ:

ಹಝ್‌ರತ್ ಅನಸ್[ರ] ವರದಿ ಮಾಡುತ್ತಾರೆ – ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಪುನರುತ್ಥಾನದ ದಿನ ಅದರ ಅಪಾಯಗಳಿಂದಲೂ ಭಯಾನಕ ಸಂದರ್ಭಗಳಿಂದಲೂ ನಿಮ್ಮ ಪೈಕಿ ಎಲ್ಲರಿಗಿಂತ ಹೆಚ್ಚು ಸಂರಕ್ಷಿಸಲ್ಪಡುವವನು ನಿಮ್ಮ ಪೈಕಿ ಲೋಕದಲ್ಲಿ ಜೀವಿಸಿರುವಾಗ ನನಗೋಸ್ಕರ ಹೆಚ್ಚು ದುರೂದ್ ಪ್ರಾರ್ಥನೆಗಳನ್ನು ಮಾಡಿದವನಾಗಿರುವನು. ಅಲ್ಲಾಹನು ಮತ್ತು ಅವನ ದೂತರು ನನಗೆ ಅನುಗ್ರಹಗಳನ್ನೂ ಆಶೀರ್ವಾದಗಳನ್ನೂ ಸಾಕಷ್ಟು ಸುರಿಸುತ್ತಾ ಇರುತ್ತಾರೆ. ಆದರೆ ನಿಮಗೆ ನನಗೋಸ್ಕರ ದುರೂದ್ ಪ್ರಾರ್ಥನೆ ಮಾಡಲು ಆದೇಶಿಸಿದುದು ನಿಮಗೆ ಅನುಗ್ರಹ ಗಳಿಸುವ ಸಂದರ್ಭ ಒದಗಿಸಲಿಕ್ಕಾಗಿದೆ." (ದುರ್ರೆ ಮನ್‌ಶೂರ್)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಪ್ರಾರ್ಥನೆ ಮಾಡುವ ಬಗ್ಗೆ ನನಗೆ ದೀರ್ಘಕಾಲದಿಂದ ತನ್ಮಯತೆ ಇತ್ತು. ಅಲ್ಲಾಹನ ಮಾರ್ಗಗಳು ಅತ್ಯಂತ ಸೂಕ್ಷ್ಮವಾಗಿವೆ ಎಂದೂ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಖಾಂತರ ಹೊರತು ಅವು ಲಭಿಸಲಾರವು ಎಂದೂ ನನಗೆ ದೃಢ ವಿಶ್ವಾಸವಿತ್ತು. ಅಲ್ಲಾಹನು ಈ ಬಗ್ಗೆ ಹೀಗೆ ಹೇಳಿದ್ದಾನೆ: ವಬ್ತಗೂ ಇಲೈಹಿಲ್ ವಸೀಲತ – 'ಅವನ ಸಾಮೀಪ್ಯ ಪಡೆಯುವ ಮಾಧ್ಯಮವನ್ನು ಹುಡುಕಿರಿ.'" (ಪವಿತ್ರ ಖುರ್‌ಆನ್ 5:36) (ಹಖೀಖತುಲ್ ವಹೀ)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಒಂದು ರಾತ್ರಿ ನಾನು ಎಷ್ಟು ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡಿದೆನೆಂದರೆ ನನ್ನ ಹೃದಯ ಮತ್ತು ಜೀವ ಅದರಿಂದ ಸುವಾಸನೆಭರಿತವಾಯಿತು. ಆ ರಾತ್ರಿ ನಾನು ಕನಸಿನಲ್ಲಿ ಕಂಡೆನು: ದೇವದೂತರು ಪ್ರಕಾಶದ ಹೂಜೆಗಳನ್ನು ನನ್ನ ಮನೆಗೆ ತಂದಿದ್ದಾರೆ. ಅವರಲ್ಲೊಬ್ಬ ಹೇಳಿದರು – ಇದು ನೀನು ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಮಾಡಿದ ದುರೂದಿನ ಅನುಗ್ರಹಗಳಾಗಿವೆ." (ಬರಾಹೀನೆ ಅಹ್ಮದಿಯಾ ಭಾಗ 4)

(ಮೌಲಾನ ಜಲಾಲುದ್ದೀನ್ ಸಾಹೇಬ್ ಶಮ್ಸ್ ರಚಿಸಿದ ಶರಹುಲ್ ಖಸೀದ ಎಂಬ ಗ್ರಂಥದಿಂದ ಉದ್ಧರಣೆ)

## ಅನುಗ್ರಹಗಳ ಮೂಲಸ್ಥಾನ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಲಭಿಸಿದ ಆಧ್ಯಾತ್ಮಿಕ ಅನುಗ್ರಹಗಳು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಲಭಿಸಿದವು. ಅವರು ಗಳಿಸಿದ ಆಧ್ಯಾತ್ಮಿಕ ಅನುಗ್ರಹಗಳು ದುರೂದ್ ಶರೀಫ್ ಮೂಲಕ ಲಭಿಸಿದುವು. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಕುಲ್ಲು ಬರ್‌ಕತಿನ ಮಿನ್ ಮುಹಮ್ಮದಿನ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಫತಬಾರಕ ಮನ್ ಅಲ್ಲಮ ವ ತಅಲ್ಲಮ."

"ಸರ್ವ ಅನುಗ್ರಹಗಳೂ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ದೊರೆತುದಾಗಿವೆ. ನನಗೆ ಕಲಿಸಿದ ಆ ಮಹಾನುಭಾವ ಬಹಳ ಅನುಗ್ರಹದಾಯಕರು. ಆ ಪರಿಶುದ್ಧ ಪ್ರವಾದಿಯಿಂದ ಕಲಿತವನು ಸಹ ಅನುಗ್ರಹದಾಯಕನು."

ಇದೇ ವಿಷಯವನ್ನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿ ಹೀಗೆ ಹೇಳಿದ್ದಾರೆ:

ಸಬ್ ಹಮ್‌ನೆ ಉಸ್‌ಸೆ ಪಾಯಾ ಶಾಹಿದ್ ಹೈ ತೂ ಖುದಾಯಾ
ಓ ಜಿಸ್‌ನೆ ಹಖ್ ದಿಖಾಯಾ ಓ ಮಹ್ ಲಿಖಾ ಯಹೀಹೈ.

ಜೋ ರಾಝೊ ದೀನ್ ಥೆ ಭಾರೇ ಉಸ್‌ನೆ ಬತಾಯೆ ಸಾರೇ
ದೌಲತ್ ಕಾ ದೇನೇವಾಲಾ ಫರ್‌ಮಾ ರವಾಂ ಯಹೀ ಹೈ
ಇಸ್‌ನೂರ್ ಪರ್ ಫಿದಾ ಹೂಂ ಉಸ್‌ಕಾ ಹೀ ಮೈಂ ಹುವಾ ಹೂಂ
ಓ ಹೈ ಮೈಂ ಚೀಝ್ ಕ್ಯಾ ಹೂಂ ಬಸ್ ಫೈಸಲ ಯಹೀ ಹೈ.

"ನಾವು ಎಲ್ಲವನ್ನೂ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಂದ ಗಳಿಸಿದೆವು. ನೀನು ಅದರ ಬಗ್ಗೆ ಸಾಕ್ಷಿಯಾಗಿರುವೆ ಓ ನನ್ನ ಅಲ್ಲಾಹ್. ಸತ್ಯವನ್ನು ಬಹಿರಂಗಪಡಿಸಿದ ಮಹಾನುಭಾವರು ಅವರೇ. ಧರ್ಮಕ್ಕೆ ಸಂಬಂಧಿಸಿದ ಎಲ್ಲ ರಹಸ್ಯಗಳನ್ನು ಅವರು ಬಹಿರಂಗಪಡಿಸಿದರು. ಜ್ಞಾನಸಂಪತ್ತು ನೀಡುವ ದೊರೆ ಅವರೇ ಆಗಿದ್ದಾರೆ. ನಾನು ಈ ಪ್ರಕಾಶದಲ್ಲಿ ಮತ್ತನಾಗಿದ್ದೇನೆ. ನಾನು ಅವರವನೇ ಆಗಿದ್ದೇನೆ. ಅವರೇ ನಿಜವಾದ ಗುರು. ನಾನು ನಿಸ್ಸಾರನು. ತೀರ್ಮಾನ ಇದೇ ಆಗಿದೆ."

## ಅತ್ಯಂತ ಮುಖ್ಯ ಶರತ್ತು ಧರ್ಮದ ಪುನಶ್ಚೇತನ

ಇಸ್ಲಾಮ್ ಧರ್ಮದ ಪುನಶ್ಚೇತನಕ್ಕೋಸ್ಕರ ಎಂತಹ ಮಹಾನುಭಾವರ ಆವಶ್ಯಕತೆ ಇತ್ತೆಂದರೆ ಅಂತಹ ವ್ಯಕ್ತಿಯ ನರನಾಡಿಗಳಲ್ಲಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ತುಂಬಿರಬೇಕಾಗಿತ್ತು. ಅಂತಹ ವ್ಯಕ್ತಿಯ ಪ್ರತಿಯೊಂದು ಉಸಿರು ದುರೂದ್ ಶರೀಫಿನಿಂದ ಆವೃತವಾಗಿರಬೇಕಾಗಿತ್ತು. ಇಂತಹ ಗುಣ ವಿಶೇಷಗಳ ಕಾರಣದಿಂದಲೇ ಅಲ್ಲಾಹನು ಹಝ್‌ರತ್ ಮಸೀಹ್ ವೌಊದ್ ಅಲೈಹಿಸ್ಸಲಾಮರನ್ನು ಇಸ್ಲಾಮ್ ಧರ್ಮದ ಪುನಶ್ಚೇತನಕ್ಕೋಸ್ಕರ ನೇಮಿಸಿದನು. ಅವರು ಹೀಗೆ ಬರೆಯುತ್ತಾರೆ:

"ನನಗೆ ಒಮ್ಮೆ ಹೀಗೆ ಸಂದೇಶವಾಣಿ ಅವತೀರ್ಣಗೊಂಡಿತು; 'ಅಲ್ಲಾಹನು ಧರ್ಮದ ಪುನಶ್ಚೇತನಕ್ಕೋಸ್ಕರ ನಿರ್ಧಾರಮಾಡಿರುವನು. ಆದರೆ ಧರ್ಮದ ಪುನಶ್ಚೇತನವನ್ನು ಯಾರು ಮಾಡಬೇಕೆಂಬುದರ ಬಗ್ಗೆ ಉನ್ನತ ಶ್ರೇಣಿಯ ದೇವದೂತರಲ್ಲಿ (ಮಲವುಅಲ್‌ಲಾದಲ್ಲಿ) ತೀರ್ಮಾನ ಆಗಲಿಲ್ಲ. ಆದುದರಿಂದ ಅವರು ಭಿನ್ನಾಭಿಪ್ರಾಯ ಹೊಂದಿರುವರು.' ಅನಂತರ ನಾನು ಕನಸಿನಲ್ಲಿ ಕಂಡೆನು. ಜನರು ಧರ್ಮವನ್ನು ಪುನಶ್ಚೇತನ ಮಾಡಬಲ್ಲವನಾದ ಒಬ್ಬನನ್ನು ಹುಡುಕುತ್ತಾ ತಿರುಗಾಡುತ್ತಾ ಇದ್ದಾರೆ. ಒಬ್ಬರು ನನ್ನ ಮುಂದೆ ಬಂದು ನಿಂತು ನನ್ನನ್ನು ಸೂಚಿಸಿ ಹೀಗೆಂದರು: ಹಾಧಾ ರಜುಲುಲ್ ಯುಹಿಬ್ಬು ರಸೂಲಲ್ಲಾಹಿ – ಈ ಮನುಷ್ಯ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವವರಾಗಿದ್ದಾರೆ. ಅವರ ಮಾತಿನ ಅರ್ಥವೇನೆಂದರೆ, ಈ ಹುದ್ದೆ ದೊರಕಲು ಪ್ರಮುಖ ಶರತ್ತೇನೆಂದರೆ, ಧರ್ಮವನ್ನು ಪುನಶ್ಚೇತನ ಮಾಡುವವನು ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವವನಾಗಬೇಕು. ಈ ಮನುಷ್ಯ ಅಂತಹ ಯೋಗ್ಯತೆ ಹೊಂದಿದ್ದಾನೆ." (ಬರಾಹೀನೆ ಅಹ್ಮದಿಯ್ಯಾ ಭಾಗ 4, ಪುಟ – 502)

## ದುರೂದ್ ಶರೀಫ್ ಪೈಗಂಬರರ ಸಮೀಪಕ್ಕೆ ಕೊಂಡೊಯ್ಯಲ್ಪಡುತ್ತದೆ

ಅಲ್ಲಾಹನು ದುರೂದ್ ಶರೀಫ್ ಪ್ರಾರ್ಥನೆಯ ಆದೇಶವನ್ನು ಸತ್ಯವಿಶ್ವಾಸಿಗಳಿಗೆ ನೀಡಿರುವ ಹಾಗೆಯೇ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಅದರ ಅನುಗ್ರಹಗಳ ಮತ್ತು ಪ್ರಯೋಜನಗಳ ಬಗ್ಗೆ ಚೆನ್ನಾಗಿ ವಿವರಿಸಿದ್ದಾರೆ. ಒಂದು ಹದೀಸ್ ಹೀಗಿದೆ:

ಒಬ್ಬ ಶಿಷ್ಯರು ಹೀಗೆ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನಾನು ನನಗೋಸ್ಕರ ಯಾವುದೇ ಪ್ರಾರ್ಥನೆ ಮಾಡುವುದಿಲ್ಲ. ನಾನು ನಿಮಗೋಸ್ಕರ ದುರೂದ್ ಪ್ರಾರ್ಥನೆ ಮತ್ತು ಇತರ ಪ್ರಾರ್ಥನೆಗಳನ್ನು ಮಾಡುತ್ತೇನೆ. ಆಗ ಹಝ್‌ರತ್ ಪೈಗಂಬರ್[ಸ] ಹೇಳಿದರು: ನೀವು ಬೇರೆ ಯಾವ ಪ್ರಾರ್ಥನೆಯನ್ನು ಮಾಡುವ ಆವಶ್ಯಕತೆ ಇಲ್ಲ. ಯಾರು ನನಗೋಸ್ಕರ ಪ್ರಾರ್ಥನೆ ಮಾಡುತ್ತಾನೋ ನನಗೋಸ್ಕರ ದುರೂದ್ ಅರ್ಪಿಸುತ್ತಾನೋ ಅಂತಹವನ ಎಲ್ಲ ಕೆಲಸಗಳನ್ನು ಅಲ್ಲಾಹನೇ ಈಡೇರಿಸಿ ಕೊಡುವನು.

ಹಝ್‌ರತ್ ಅಬೂ ಹುರೈರ[ರ] ಹೀಗೆ ವರದಿ ಮಾಡುತ್ತಾರೆ: "ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು – ಯಾರು ನನ್ನ ಗೋರಿಯ ಸಮೀಪಕ್ಕೆ ಬಂದು ನನಗೋಸ್ಕರ ದುರೂದ್ ಪ್ರಾರ್ಥನೆ ಮಾಡುತ್ತಾನೋ ನಾನು ಅದನ್ನು ಆಲಿಸುವೆನು."

ಹಝ್‌ರತ್ ಅನಸ್[ರ] ಹೀಗೆ ವರದಿ ಮಾಡುತ್ತಾರೆ: "ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ಶುಕ್ರವಾರ ನನಗೋಸ್ಕರ ದುರೂದ್ ಪ್ರಾರ್ಥನೆ ಹೆಚ್ಚು ಹೆಚ್ಚಾಗಿ ಮಾಡಿರಿ. ಅವುಗಳನ್ನು ನನಗೆ ತಲಪಿಸಲಾಗುತ್ತದೆ. ಯಾರು ನನಗೋಸ್ಕರ ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡುತ್ತಾರೋ ಅದೇ ಪ್ರಮಾಣದಲ್ಲಿ ಅಂತಹವರಿಗೆ ನನ್ನ ಸಾಮೀಪ್ಯ ಲಭಿಸುವುದು ಮತ್ತು ಅಂತಹ ಜನರ ಸ್ಥಾನ ನನಗೆ ಸಮೀಪವಾಗಿರುವುದು."

## ಹಝ್‌ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅರ್‌ಶ್ (ಮಹಿಮೆಯ ಸ್ಥಾನ)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಯಜಮಾನರೂ ನಾಯಕರೂ ಆಗಿದ್ದ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ, ಮೇಲಿನ ಆದೇಶವನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡು ಅದನ್ನು ಅನುಷ್ಠಾನಕ್ಕೆ ತಂದರು. ಅವರು ತನ್ನ ಜಮಾಅತ್ ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡಬೇಕೆಂದು ಆಗ್ರಹಪಡಿಸಿದರು. 1400 ವರ್ಷಗಳಲ್ಲಿ ಬೇರೆ ಯಾರೂ ಈ ರೀತಿ ದುರೂದ್ ಪ್ರಾರ್ಥನೆಯ ಅನುಗ್ರಹಗಳನ್ನು ಮನವರಿಕೆ ಮಾಡಿಕೊಂಡಿರಲಿಲ್ಲ. ಅದರ ಬಗ್ಗೆ ಅವರಷ್ಟು ಜ್ಞಾನಗಳಿಸಲೂ ಇಲ್ಲ.

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ನಾನು ನೋಡುವುದೇನೆಂದರೆ, ಅಲ್ಲಾಹನ ಅನುಗ್ರಹಗಳು ಅದ್ಭುತ ಪ್ರಕಾಶದ ರೂಪದಲ್ಲಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಲಪುತ್ತದೆ. ಅದನ್ನು ಹಝ್‌ರತ್ ಪೈಗಂಬರರ[ಸ] ಎದೆಯು ಹೀರುತ್ತದೆ. ಅಲ್ಲಿಂದ ಅಸಂಖ್ಯಾತ ನಾಲೆಗಳು ಹೊರಟು ಅರ್ಹತೆಗನುಸಾರವಾಗಿ ಪ್ರತಿಯೊಬ್ಬ ಹಕ್ಕುದಾರನಿಗೆ ಅವು ತಲಪುತ್ತಾ ಇರುತ್ತವೆ. ಖಂಡಿತವಾಗಿಯೂ ಯಾವುದೇ ಅನುಗ್ರಹ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಹೊರತು ಯಾರಿಗೂ ತಲಪಲಾರದು. ದುರೂದ್ ಶರೀಫ್ ಎಂದರೇನು? ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅರ್‌ಶನ್ನು ಅಲುಗಾಡಿಸುವುದೇ ದುರೂದ್ ಪ್ರಾರ್ಥನೆಯಾಗಿದೆ. ಅಲ್ಲಿಂದಲೇ ಪ್ರಕಾಶದ ನಾಲೆಗಳು ಹೊರಡುತ್ತವೆ. ಯಾರು ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ಬಯಸುತ್ತಾನೋ ಅವನು ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡಬೇಕು ಮತ್ತು ಅನುಗ್ರಹವು ಸುರಿಯುವಂತಾಗಲು ಹೀಗೆ ಮಾಡಬೇಕು." (ಅಲ್‌ಹಕಮ್ 28–2–1903)

ಹಝ್‌ರತ್ ಮುಫ್ತೀ ಮುಹಮ್ಮದ್ ಸಾದಿಖ್ ಸಾಹೇಬರಿಗೆ ಬರೆದ ಒಂದು ಪತ್ರದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ದುರೂದ್ ಶರೀಫ್ ಪ್ರಾರ್ಥನೆ ಹೆಚ್ಚು ಹೆಚ್ಚಾಗಿ ಮಾಡಿರಿ.

ಅದೇ ಪಾರಿತೋಷಕ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ತಲಪುತ್ತದೆ." (18-3-1898ರಲ್ಲಿ ಬರೆದ ಪತ್ರ)

ಹಝ್‌ರತ್ ಖಾಝೀ ಝಿಯಾಉದ್ದೀನ್ ಸಾಹೇಬರಿಗೆ(ರ) ಬರೆದ ಪತ್ರದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ನಿಮ್ಮ ಮೇಲೆ ಅನುಗ್ರಹ ಸುರಿಸಲ್ಪಡಲಿಕ್ಕೋಸ್ಕರ ದುರೂದ್ ಶರೀಫ್ ಪ್ರಾರ್ಥನೆ ಬಹಳ ಮಾಡಿರಿ. ಯಾರಾದರೂ ರೋಗಿಯಾಗಿದ್ದರೆ ಅಥವಾ ಬೇರೆ ಯಾವುದಾದರೂ ಕಾರಣದಿಂದ ತಹಜ್ಜುದ್ ನಮಾಝ್ ಮಾಡಲು ಸಾಧ್ಯವಾಗದಿದ್ದರೆ ಅಂತಹ ವ್ಯಕ್ತಿ ಇಸ್ತಿಗ್‌ಫಾರ್, ದುರೂದ್ ಶರೀಫ್ ಮತ್ತು ಸೂರತುಲ್ ಫಾತಿಹದ ಪ್ರಾರ್ಥನೆಗಳನ್ನು ಹೇಳಲಿ. (1-11-1903ರ ಡೈರಿ, ಬದ್ರ್ ಸಂಚಿಕೆ 43, ಸಂಪುಟ 2)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ:

"ಓ ನನ್ನ ಪ್ರಿಯ ದೇವಾ, ನೀನು ಲೋಕಾರಂಭದಿಂದ ಇಂದಿನ ತನಕ ಯಾರ ಮೇಲೆಯೂ ಸುರಿಸಿರದಂತಹ ಅನುಗ್ರಹಗಳನ್ನು ನಮ್ಮ ಪ್ರಿಯ ಪೈಗಂಬರರ ಮೇಲೆ ಸುರಿಸು. ಈ ಮಹಾ ವೈಭವಶಾಲಿ ಪ್ರವಾದಿ ಲೋಕಕ್ಕೆ ಆಗಮಿಸದೆ ಇರುತ್ತಿದ್ದರೆ ಪ್ರವಾದಿ ಯೂಸುಫ್, ಪ್ರವಾದಿ ಅಯ್ಯೂಬ್, ಪ್ರವಾದಿ ಈಸಾ ಮಸೀಹ್, ಪ್ರವಾದಿ ಮಲಾಕಿ, ಪ್ರವಾದಿ ಯಹ್‌ಯಾ, ಪ್ರವಾದಿ ಝಕರಿಯಾ ಮೊದಲಾದ ಚಿಕ್ಕ ಚಿಕ್ಕ ಪ್ರವಾದಿಗಳ ಸತ್ಯತೆಗೆ ನಮ್ಮ ಬಳಿ ಯಾವ ಸಾಕ್ಷ್ಯಾಧಾರವೂ ಇರುತ್ತಿರಲಿಲ್ಲ. ಅವರೆಲ್ಲರೂ ದೇವ ಸಾಮೀಪ್ಯ ಗಳಿಸಿದವರೂ ದೇವನ ಪ್ರೀತಿಗೆ ಪಾತ್ರರಾದ ಸಚ್ಚಾರಿತ್ರ್ಯವಂತರೂ ಆಗಿದ್ದರು. ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿದ ಉಪಕಾರದ ಕಾರಣದಿಂದಲೇ ಈ ಪ್ರವಾದಿಗಳು ಸತ್ಯವಂತರೆಂದು ಗಣಿಸಲ್ಪಟ್ಟರು.

ಅಲ್ಲಾಹುಮ್ಮ ಸಲ್ಲಿ ವಸಲ್ಲಿಮ್ ವ ಬಾರಿಕ್ ಅಲೈಹಿ ವ ಅಸ್‌ಹಾಬಿಹೀ ಅಜ್‌ಮಈನ್. ವ ಆಖಿರು ದ್‌ವಾನಾ ಅನಿಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್.

ಓ ಅಲ್ಲಾಹ್ ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಅವರ ಸಂಗಡಿಗರಿಗೂ ಆಶೀರ್ವಾದಗಳನ್ನೂ ಅನುಗ್ರಹಗಳನ್ನೂ ಸುರಿಸು. ಕೊನೆಯದಾಗಿ ಎಲ್ಲ ಸ್ತುತಿ ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗೆ ಎಂದು ಘೋಷಿಸುತ್ತೇವೆ." (ಇತ್‌ಮಾಮುಲ್‌ಹುಜ್ಜ ಪುಟ 28)

## ಜೀವಂತ ಪ್ರವಾದಿ

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಯಾರೂ ಶಾಶ್ವತವಾಗಿ ಜೀವಿಸಿರಬೇಕೆಂದು ಅಲ್ಲಾಹನು ಇಚ್ಛಿಸಲಿಲ್ಲ. ಆದರೆ ಈ ಮಹಿಮಾಮಯ ಪ್ರವಾದಿ ಯಾವಾಗಲೂ ಜೀವದಿಂದಿರುವರು. ಅವರು ಯಾವಾಗಲೂ ಜೀವಿಸಿರಲು ಅಲ್ಲಾಹನು ಹೇಗೆ ವ್ಯವಸ್ಥೆ ಮಾಡಿದನೆಂದರೆ, ಅವರ ಶರೀಅತಿನ ಅನುಗ್ರಹ ಮತ್ತು ಆಧ್ಯಾತ್ಮಿಕ ಅನುಗ್ರಹ ಪುನರುತ್ಥಾನದ ದಿನದ ತನಕ ಜಾರಿಯಾಗಿರುವಂತೆ ಮಾಡಿದನು." (ಕಿಶ್ತೀನೂಹ್ - ಪುಟ 13)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:
ಖದ್ ಮಾತ ಈಸಾ ಮುತ್‌ರಿಖನ್ ವ ನಬಿಯ್ಯುನಾ
ಹಯ್ಯುನ್ ವರಬ್ಬೀ ಇನ್ನಹೂ ವಾಫಾನೀ

ಎಂದರೆ, ಹಝ್‌ರತ್ ಈಸಾ ತಲೆಬಾಗಿ ಮೃತರಾದರು. ನಮ್ಮ ಪ್ರವಾದಿ ಜೀವಂತವಾಗಿರುವವರು. ನನ್ನ ಪ್ರಭುವಿನಾಣೆ, ಅವರು ನನ್ನನ್ನು ಅನೇಕ ಸಾರಿ ಸಂದರ್ಶಿಸಿರುವರು."

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೀಗೆ ಹೇಳಿದರು:

"ಶಾಶ್ವತವಾದ ಆಧ್ಯಾತ್ಮಿಕ ಜೀವಿತವನ್ನು ಹೊಂದಿರುವ ಪ್ರವಾದಿ, ಶಕ್ತಿ ವೈಭವ ಮತ್ತು ಪರಿಶುದ್ಧಿಯ ಸಿಂಹಾಸನದಲ್ಲಿ ಕುಳಿತಿರುವ ಪ್ರವಾದಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಿರುವರು. ಅವರ ಆಧ್ಯಾತ್ಮಿಕ ಜೀವಿತದ ಮತ್ತು ಪರಿಶುದ್ಧ ಶಕ್ತಿ ವೈಭವದ ಸಾಕ್ಷ್ಯಾಧಾರ ನಮಗೆ ದೊರಕಿದೆ. ಅವರನ್ನು ಅನುಸರಿಸಿ ಪ್ರೀತಿಸುವ ಮೂಲಕ ಪವಿತ್ರಾತ್ಮ ಮತ್ತು ಅಲ್ಲಾಹನ ವಾಣಿ ಹಾಗೂ ದೈವಿಕ ದೃಷ್ಟಾಂತಗಳ ಬಹುಮಾನಗಳನ್ನು ಗಳಿಸುತ್ತೇವೆ." (ತಿರ್‌ಯಾಖಿಲ್ ಖುಲೂಬ್)

ಒಮ್ಮೆ ಪ್ರಥಮ ಖಲೀಫರಾದ ಹಝ್‌ರತ್ ಮೌಲಾನ ಹಕೀಮ್ ನೂರುದ್ದೀನ್ ಸಾಹೇಬರನ್ನು ಒಬ್ಬ ದೊಡ್ಡ ವಿದ್ವಾಂಸ ಹೀಗೆ ಪ್ರಶ್ನಿಸಿದರು:

"ನೀವು ಹಿಂದೂಸ್ಥಾನದ ಹಿರಿಯ ವಿದ್ವಾಂಸರಾಗಿರುವಿರಿ. ನೀವು ಮಿರ್ಝಾ ಗುಲಾಮ್ ಅಹ್ಮದ್ ಸಾಹೇಬರಿಗೆ ಬೈಅತ್ ಮಾಡುವ ಆವಶ್ಯಕತೆ ಏನು?" ಆಗ ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳಿದರು:

"ನಾನು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹಿಂದೆ ಕನಸಿನಲ್ಲಿ ಕಾಣುತ್ತಿದ್ದೆ. ಆದರೆ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ಬೈಅತ್ ಮಾಡಿದ ನಂತರ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಾನು ಎಚ್ಚರದಿಂದಿರುವ ಸ್ಥಿತಿಯಲ್ಲಿಯೇ ಕಾಣುತ್ತಾ ಇದ್ದೇನೆ."

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜೀವಂತ ದೇವನ, ಜೀವಂತ ಪ್ರವಾದಿಯ ಮತ್ತು ಜೀವಂತ ಗ್ರಂಥದ ಪ್ರತಿಪಾದನೆಯನ್ನು ಲೋಕದ ಮುಂದೆ ಮಾಡಿದರು. ಇಸ್ಲಾಮಿನ ಚರಿತ್ರೆಯಲ್ಲಿ ಇಷ್ಟು ಸ್ಪಷ್ಟವಾಗಿ ಯಾರೂ ಅವುಗಳನ್ನು ಪ್ರತಿಪಾದಿಸಿರಲಿಲ್ಲ. ಅವರು ಅದರ ಬಗ್ಗೆ ಬಲಿಷ್ಠ ಸಾಕ್ಷ್ಯಾಧಾರಗಳನ್ನು ನೀಡಿದರು. ಅವರು ಲೋಕಕ್ಕೆ ಪಂಥಾಹ್ವಾನ ನೀಡಿದರು. ತಾನು ತನ್ನ ವಾದಗಳ ಬಗ್ಗೆ ಪವಾಡಗಳನ್ನೂ ದೃಷ್ಟಾಂತಗಳನ್ನೂ ತೋರಿಸುವುದಾಗಿ ಘೋಷಿಸಿದರು.

## ಬೈಅತ್ ಶರತ್ತುಗಳಲ್ಲಿ ದುರೂದ್ ಶರೀಫ್

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸಲ್ಲಾಮ್ ಇಸ್ಲಾಮ್ ಧರ್ಮದ ಪುನಶ್ಚೇತನಕ್ಕೋಸ್ಕರ ಅಲ್ಲಾಹನ ಆದೇಶ ಪ್ರಕಾರ ಸ್ಥಾಪಿಸಿದ ಜಮಾಅತನ್ನು ಸೇರಲಿಕ್ಕೆ ಅವರು ನಿಶ್ಚಯಿಸಿದ ಹತ್ತು ಶರತ್ತುಗಳಲ್ಲಿ ಮೂರನೆಯ ಶರತ್ತು ಹೀಗಿದೆ: ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ದುರೂದ್ ಪ್ರಾರ್ಥನೆಯನ್ನು ಸ್ಥಿರವಾಗಿ ಮಾಡುವುದು ಕಡ್ಡಾಯಗೊಳಿಸಲಾಗಿದೆ.

ಒಂದು ಅರಬಿ ಪದ್ಯದಲ್ಲಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಂಬೋಧಿಸಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

ಇನ್ನೀ ಅಮೂತು ವಲಾ ತಮೂತು ಮಹಬ್ಬತೀ

ಯುದ್‌ರಾ ಬಿ ಧಿಕ್‌ರಿಕ ಫಿತ್ತುರಾಬಿ ನಿದಾಯೀ

"ನಾನು ಮೃತಪಡುವೆನು. ಆದರೆ ನನ್ನ ಪ್ರೀತಿ ಎಂದೂ ಮೃತಪಡಲಾರದು. ಅದು ಯಾವಾಗಲೂ ಜೀವಂತವಾಗಿ ಉಳಿಯುವುದು.

ನನ್ನ ಗೋರಿಯಿಂದಲೂ ನಿಮಗೋಸ್ಕರ ದುರೂದ್ ಪ್ರಾರ್ಥನೆ ಮಾಡುವ ಶಬ್ದ ಕೇಳಿಸುವುದು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡುವುದನ್ನು ತಮ್ಮ ಜೀವಿತದ ಕೊನೆಯ ಉಸಿರಿನ ತನಕ ಮುಂದುವರಿಸಿದರು. ಅವರು ಎಂತಹ ಜಮಾಅತನ್ನು ಸ್ಥಾಪಿಸಿದರೆಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸಿ ತಮ್ಮದೆಲ್ಲವನ್ನೂ ಬಲಿದಾನ ನೀಡಲು ಸಿದ್ಧವಾಗಿರುವ ಮತ್ತು ದುರೂದ್ ಪ್ರಾರ್ಥನೆ ಯಾವಾಗಲೂ ಮಾಡುತ್ತಿರುವವರ ಜಮಾಅತ್ ಅದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮರ ನಂತರ ಖಿಲಾಫತ್ ಸ್ಥಾಪಿತವಾಯಿತು. ಖಲೀಫರು ಯವಾಗಲೂ ದುರೂದ್ ಪ್ರಾರ್ಥನೆ ಮಾಡುವ ಬಗ್ಗೆ ಉಪದೇಶಿಸುತ್ತಾ ಇದ್ದರು. ಅವುಗಳ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ.

ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ (ಪ್ರಥಮ ಖಲೀಫ) ಹೀಗೆ ಹೇಳಿದರು:

"ಇಸ್ಲಾಮ್ ಐವತ್ತು ಸಂದರ್ಭಗಳಲ್ಲಿ ದುರೂದ್ ಪ್ರಾರ್ಥನೆ ಮಾಡಲು ಆಜ್ಞಾಪಿಸಿದೆ. ಕೆಲವು ಸಂದರ್ಭಗಳು ಎಲ್ಲರಿಗೂ ದೊರಕುವುದಿಲ್ಲ. ಉದಾಹರಣೆಗೆ, ಹಜ್ಜ್ ಸಂದರ್ಭ. ಕೆಲವು ಸಂದರ್ಭಗಳು ಲಭಿಸುತ್ತವೆ. ಉದಾಹರಣೆಗೆ, ನಮಾಝ್ ಮಾಡುವಾಗ ಕೊನೆಯ ಅತ್ತಹ್‌ಯಾತ್‌ನಲ್ಲಿ ಮತ್ತು ಖುನೂತ್ ನಮಾಝಿನ ಕೊನೆಯ ರಕ್‌ಅತ್‌ನಲ್ಲಿ. ಮೊದಲನೆಯ ಅತ್ತಹ್‌ಯಾತ್‌ನಲ್ಲಿ ಸಹ ದುರೂದ್ ಪ್ರಾರ್ಥನೆ ಮಾಡುವುದು ಒಳ್ಳೆಯದೆಂದು ಕೆಲವು ಪಂಡಿತರು ಹೇಳಿದ್ದಾರೆ. ಜನಾಝ ನಮಾಝ್‌ನಲ್ಲಿ, ಈದ್ ಮತ್ತು ಜುಮುಅ ಖುತುಬಗಳಲ್ಲಿ, ನಿಕಾಹ್ ಖುತುಬಾದಲ್ಲಿ, ಅಝಾನ್ ಆಲಿಸಿದ ನಂತರ, ನಮಾಝ್‌ನಲ್ಲಿ ತಕ್‌ಬೀರ್ ಹೇಳಿದ ನಂತರ, ದುಆಗಳ ಆರಂಭದಲ್ಲಿ, ಕೊನೆಯ ಭಾಗದಲ್ಲಿ ಮತ್ತು ಮಧ್ಯದಲ್ಲಿ ಸಹ ದುರೂದ್ ಪ್ರಾರ್ಥನೆ ಮಾಡಬೇಕು. ಮಸ್‌ಜಿದ್‌ಗೆ ಪ್ರವೇಶಿಸುವಾಗ ಮತ್ತು ಹೊರಗೆ ಬರುವಾಗ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರು ಪ್ರಸ್ತಾಪಿಸಲ್ಪಡುವಾಗ, ನಿದ್ರೆಯಿಂದ ಏಳುವಾಗ, ಜನರೊಂದಿಗೆ ಒಟ್ಟಿಗೆ ಕುಳಿತಿರುವಾಗ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ಸಲ್ಲಮರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡಬೇಕು. ಯಾವುದಾದರೂ ಜಗಳ ಪರಿಹರಿಸಲ್ಪಟ್ಟಾಗ, ತಬ್ಲೀಗ್ ಮತ್ತು ಪ್ರವಚನ ಮಾಡುವಾಗ, ಯಾವುದಾದರೂ ಆವಶ್ಯಕತೆ ಉಳ್ಳ ವ್ಯಕ್ತಿ ವುಝೂ ಮಾಡಿ ದುರೂದ್ ಪ್ರಾರ್ಥನೆ ಮಾಡಬೇಕು." (ಬದ್ರ್ 18-8-1910)

ಹಝ್ರತ್ ಖಲೀಫತುಲ್ ಮಸೀಹ್ ಸಾನೀ (ದ್ವಿತೀಯ ಖಲೀಫ) ಹೀಗೆ ಹೇಳುತ್ತಾರೆ:

"ದುರೂದ್‌ನಿಂದ ದೊರಕುವ ದೊಡ್ಡ ಲಾಭವೇನೆಂದರೆ, ಯಾರು ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಡುತ್ತಾನೋ ಆತನ ಇತರ ಪ್ರಾರ್ಥನೆಗಳು ಹೆಚ್ಚು ಹೆಚ್ಚಾಗಿ ಅಂಗೀಕರಿಸಲ್ಪಡುತ್ತವೆ. ಅಲ್ಲಾಹನು 'ಈತ ನನ್ನ ಪ್ರೀತಿಗೆ ಪಾತ್ರನಾದವನಿಗೋಸ್ಕರ ದುರೂದ್ ಪ್ರಾರ್ಥನೆ ಮಾಡಿದ್ದಾನೆ; ಆದುದರಿಂದ ನಾನು ಅವನ ಪ್ರಾರ್ಥನೆಗಳನ್ನು ಅಂಗೀಕರಿಸುತ್ತೇನೆ' ಎಂದು ಹೇಳುತ್ತಾನೆ. ನಾವು ಮಸ್‌ಜಿದ್‌ಗೆ ಪ್ರವೇಶಿಸುವಾಗ ದುರೂದ್ ಪ್ರಾರ್ಥನೆ ಮಾಡಬೇಕು. ನಾವು ಮನೆಗೆ ಹೋಗುವಾಗ ಸಹ ದುರೂದ್ ಪ್ರಾರ್ಥನೆ ಮಾಡಬೇಕು." (ಅಲ್‌ಫಝ್ಲ್ 11-12-1925)

ನಮ್ಮ ಇಂದಿನ ಇಮಾಮರಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ (ಪಂಚಮ ಖಲೀಫ) ಇತರ ಪ್ರಾರ್ಥನೆಗಳ ಬಗ್ಗೆ ಒತ್ತಿ ಹೇಳುವುದರೊಂದಿಗೆ ದುರೂದ್ ಪ್ರಾರ್ಥನೆ ಹೆಚ್ಚು ಹೆಚ್ಚಾಗಿ ಮಾಡಲು ಆದೇಶಿಸಿದ್ದಾರೆ. ಅವರು ಹೀಗೆ ಹೇಳುತ್ತಾರೆ:

"ನಾವು ಈ ತಿಂಗಳಲ್ಲಿ (ಎಂದರೆ ರಮಝಾನ್‌ನಲ್ಲಿ) ದುರೂದ್ ಶರೀಫ್ ಪ್ರಾರ್ಥನೆ ಬಹಳ ಹೆಚ್ಚು ಹೆಚ್ಚಾಗಿ ಮಾಡಬೇಕು. ಮುಸ್ಲಿಮ್ ಸಮುದಾಯವನ್ನು ಪರಸ್ಪರ ಜಗಳ, ಪಿತೂರಿ, ಹಿಂಸಾಚಾರಗಳಿಂದ ಸಂರಕ್ಷಿಸಲು ಬಹಳ ಪ್ರಾರ್ಥಿಸಿರಿ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬ, ಅವರ ಶಿಷ್ಯರು ಮತ್ತು ನಮ್ಮ ಪ್ರಿಯ ಯಜಮಾನರು ಪ್ರೀತಿಸಿದ ಎಲ್ಲರೊಂದಿಗೆ ಎಂತಹ ರೀತಿಯಲ್ಲಿ ಪ್ರೀತಿಸಬೇಕೆಂದರೆ ಅದು ಇತರರಿಗೆ ಮಾದರಿಯಾಗಬೇಕು." (ಬದ್ರ್ 12-4-2009)

## ಶತವಾರ್ಷಿಕ ಜೂಬಿಲಿ

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರು ಅಹ್ಮದಿಯಾ ಖಿಲಾಫತಿನ ಶತವಾರ್ಷಿಕ ಜೂಬಿಲಿ ಸಂದರ್ಭದಲ್ಲಿ ಜಮಾಅತಿನ ಸದಸ್ಯರು ಮಾಡಬೇಕೆಂದು ಆದೇಶಿಸಿದ ಪ್ರಾರ್ಥನೆಗಳನ್ನು ಈಗ ಸಹ ಮುಂದುವರಿಸಬೇಕೆಂದು ಉಪದೇಶಿಸಲಾಗಿದೆ. ಆ ದುಆಗಳಲ್ಲಿ ಎರಡು ದುರೂದ್ ಶರೀಫ್ ಪ್ರಾರ್ಥನೆಗಳಾಗಿವೆ. ಒಂದು ಪ್ರಾರ್ಥನೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ದೇವವಾಣಿಯಾಗಿ ಲಭಿಸುದುದಾಗಿದೆ. ಅದು ಹೀಗಿದೆ:

"ಸುಬ್‌ಹಾನಲ್ಲಾಹಿ ವಬಿಹಮ್‌ದಿಹೀ ಸುಬ್‌ಹನಲ್ಲಾಹಿಲ್ ಅಝೀಮ್. ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್."

ಇನ್ನೊಂದು ಪರಿಪೂರ್ಣ ದುರೂದ್ ಶರೀಫಾಗಿದೆ. ಅದು ಹೀಗಿದೆ:

"ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್."

## ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದೊಂದಿಗೆ ಸಂಬಂಧ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನುಡಿದ ಭವಿಷ್ಯವಾಣಿ ಪ್ರಕಾರ ಫಾರಸೀ ವಂಶಜರೂ ಅರಬಿಯೇತರ ಜನಾಂಗಕ್ಕೆ ಸೇರಿದವರೂ ಆಗಿದ್ದರು. ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದರು: "ಸತ್ಯ ವಿಶ್ವಾಸವು ಸುರಯ್ಯಾ ನಕ್ಷತ್ರಕ್ಕೇರಿ ಹೋಗಿದ್ದರೂ ಹಝ್ರತ್ ಸಲ್ಮಾನುಲ್ ಫಾರಸೀಯವರ ಜನಾಂಗಕ್ಕೆ ಸೇರಿದ ಒಬ್ಬರು ಸತ್ಯವಿಶ್ವಾಸವನ್ನು ಪುನಃ ಭೂಮಿಗೆ ತರುವರು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಿರಿಯರು ಪ್ರಸಿದ್ಧ ಬರ್‌ಲಾಸ್ ವಂಶಕ್ಕೆ ಸೇರಿದವರಾಗಿದ್ದರು.

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಇನ್ನೊಂದು ಹದೀಸ್ ನೋಡಿರಿ: "ಸಲ್ಮಾನು ಮಿನ್ನಾ ಅಹ್ಲು ಬೈತಿ." (ತಬ್ರಾನಿ)

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಈದ್ ನಮಾಝ್‌ಗಳು

ವರ್ಷದಲ್ಲಿ ಮುಸ್ಲಿಮರಿಗೆ ಎರಡು ಈದ್‌ಗಳಿವೆ. ಒಂದನೆಯದು, ರಮಝಾನ್ ತಿಂಗಳು ಕೊನೆಗೊಂಡ ನಂತರ ಶವ್ವಾಲ್ ತಿಂಗಳ ಒಂದನೆಯ ದಿನಾಂಕ ಈದುಲ್ ಫಿತ್‌ರ್. ಎರಡನೆಯದು, ಧಿಲ್‌ಹಿಜ್ಜ ತಿಂಗಳ ಹತ್ತನೆಯ ದಿನಾಂಕ ಈದುಲ್ ಅಝ್‌ಹಾ.

ಸ್ತ್ರೀಯರಿಗೂ ಪುರುಷರಿಗೂ ಈದ್ ಪ್ರಾರ್ಥನೆ ಸುನ್ನತಾಗಿದೆ. ಅದರ ಸಮಯ ಸೂರ್ಯನು ದಿಗಂತದಿಂದ ಅಂದಾಜು ಏಳು ಮೊಳ ಮೇಲೇರಿದ ನಂತರ ಮಧ್ಯಾಹ್ನದ ಸಮಯ ದಾಟುವ ತನಕವಾಗಿದೆ. ಆದರೆ ಬೇಗನೆ ನಮಾಝ್ ಮಾಡುವುದು ಉತ್ತಮವಾಗಿದೆ. ಆ ದಿನ ಸ್ನಾನ ಮಾಡಿ, ಒಳ್ಳೆಯ ವಸ್ತ್ರಧರಿಸಿ, ಸುಗಂಧ ದ್ರವ್ಯಗಳನ್ನು ಉಪಯೋಗಿಸುವುದು ಸುನ್ನತಾಗಿದೆ. ಈದುಲ್ ಫಿತ್‌ರ್ ನಮಾಝ್‌ಗೆ ಮೊದಲು ಏನಾದರೂ ಆಹಾರ ತಿನ್ನುವುದು ಸುನ್ನತಾಗಿದೆ. ಆದರೆ ಈದುಲ್ ಅಝ್‌ಹಾ ನಮಾಝ್ ಮಾಡಿದ ನಂತರ ಆಹಾರ ತಿನ್ನವುದು ಸುನ್ನತಾಗಿದೆ. ನಮಾಝ್‌ಗೆ ಮಸ್‌ಜಿದ್‌ಗೆ ಒಂದು ದಾರಿಯಿಂದ ಹೋಗಿ ಇನ್ನೊಂದು ದಾರಿಯಾಗಿ ಹಿಂತಿರುಗಿ ಬರುವುದು ಸಹ ಸುನ್ನತ್ತಾಗಿದೆ. ಈದುಲ್ ಫಿತ್‌ರ್ ನಮಾಝಿಗೆ ಮೊದಲೇ ಸದಕತುಲ್ ಫಿತ್‌ರ್ (ಫಿತ್‌ರ್ ದಾನ) ವಿತರಣೆ ಮಾಡುವುದು ಕಡ್ಡಾಯವಾಗಿದೆ. ಖುರ್‌ಬಾನಿ (ಪ್ರಾಣಿಬಲಿ) ಈದುಲ್ ಅಝ್‌ಹಾ ನಮಾಝ್ ಮಾಡಿದ ನಂತರ ಮಾಡಬೇಕು.

*(...... ಹಿಂದಿನ ಪುಟದಿಂದ)*

ಅಂದರೆ, "ಸಲ್ಮಾನ್ ನಮ್ಮವರು. ನಮ್ಮ ಕುಟುಂಬಕ್ಕೆ ಸೇರಿದವರು."

ಇದರಿಂದ ತಿಳಿಯುವುದೇನೆಂದರೆ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಫಾರಸೀ ವಂಶಜರಾದರೂ ಅವರು ಅಹ್ಲೆಬೈತ್ ಎಂದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಂಶಕ್ಕೆ ಸೇರಿದವರೂ ಆಗುತ್ತಾರೆ.

ದುರೂದ್ ಶರೀಫಿನೊಂದಿಗೆ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗಾಢವಾದ ಸಂಬಂಧ ನಮ್ಮೊಡನೆ ಆವಶ್ಯ ಪಡುವುದೇನೆಂದರೆ, ನಾವು ಸಹ ಆ ಪರಿಶುದ್ಧ ಪ್ರವಾದಿಯಾದ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆಗಳನ್ನು ಮಾಡಬೇಕು.

ನಾವು ದುರೂದ್ ಪ್ರಾರ್ಥನೆ ಮಾಡುವುದು ಏಕೆಂದರೆ, ಸರ್ವ ಲೋಕಗಳ ಪ್ರಭುವಾದ ಅಲ್ಲಾಹನು ಮತ್ತು ಅವನ ದೂತರು ಅವರಿಗೆ ಆಶೀರ್ವಾದ ಮಾಡುತ್ತಾ ಇರುತ್ತಾರೆ. ನಾವು ದುರೂದ್ ಪ್ರಾರ್ಥನೆ ಮಾಡುವ ಮತ್ತೊಂದು ಕಾರಣ ಏನೆಂದರೆ, ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸ್ವತಃ ತನಗೋಸ್ಕರ ದುರೂದ್ ಪ್ರಾರ್ಥನೆ ಮಾಡಬೇಕೆಂದು ಹೇಳಿದ್ದಾರೆ. ನಾವು ದುರೂದ್ ಪ್ರಾರ್ಥನೆ ಮಾಡುವ ಇನ್ನೊಂದು ಕಾರಣವೇನೆಂದರೆ, ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ, ಪೈಗಂಬರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡಲು ಆಜ್ಞಾಪಿಸಿದ್ದನು. ನಾವು ದುರೂದ್ ಪ್ರಾರ್ಥನೆ ಮಾಡಲಿಕ್ಕಿರುವ ಮಗದೊಂದು ಕಾರಣವೇನೆಂದರೆ, ಅಹ್ಮದಿಯಾ ಜಮಾಅತಿನ ಖಲೀಫರೆಲ್ಲರೂ ದುರೂದ್ ಪ್ರಾರ್ಥನೆಯನ್ನು ಹೆಚ್ಚು ಹೆಚ್ಚಾಗಿ ಜಮಾಅತ್ ಮಾಡಬೇಕೆಂದು ಆದೇಶಿಸಿದ್ದಾರೆ.

ಹಝ್‌ರತ್ ಖಲೀಫತುಲ್ ಮಸೀಹ್ ರಾಬಿಅ್ (ಚತುರ್ಥ ಖಲೀಫ) ಹೇಳಿದ್ದಾರೆ:

"ಪ್ರೀತಿಯಿಂದ ಮತ್ತು ವೈಯಕ್ತಿಕ ಬಾಂಧವ್ಯ ಹೊಂದಿ ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡಿರಿ..... ಈ ದಿನವೂ ಇನ್ನು ಮುಂದಿನ ದಿನಗಳಲ್ಲೂ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ದುರೂದ್ ಪ್ರಾರ್ಥನೆ ಮಾಡಿರಿ. ಅವರು ಆಧ್ಯಾತ್ಮಿಕ ಲೋಕವನ್ನು ಬೆಳಗುತ್ತಿರುವ ಸೂರ್ಯನಾಗಿರುವ ಹಾಗೆ ಸ್ವತಃ ನಿಮನ್ನು ಬೆಳಗುವ ಸೂರ್ಯನಾಗಲಿ. ನಿಮ್ಮನ್ನು ಬೆಳಗಿಸುವಂತೆ ಮಾಡಲಿ. ನಿಮ್ಮ ಹೃದಯದೊಳಗೆ ಪ್ರವೇಶಿಸಿ ನಿಮ್ಮ ಇಡೀ ಜೀವಿತವನ್ನು ಬೆಳಗಿಸುವಂತಾಗಲಿ. ಅಹ್ಮದಿಯಾ ಜಮಾಅತಿಗೆ ಇಂತಹ ಲೈಲತುಲ್ ಖದ್‌ರ್ ಲಭಿಸುವುದಾದರೆ ಇಂತಹ ಲೈಲತುಲ್ ಖದ್‌ರಿನ ಅನುಗ್ರಹಗಳನ್ನು ಅಪಹರಿಸಲು ಲೋಕದಲ್ಲಿ ಯಾರಿಗೂ ಸಾಧ್ಯವಾಗದು." (ಖುತುಬ ಜುಮುಅ 8-7-1983 – ಮಸ್‌ಜಿದ್ ಅಖ್‌ಸಾ ರಬ್ವದಲ್ಲಿ)

### ಲಾಹೋರಿನ ಹುತಾತ್ಮರ ದುರೂದ್ ಆಲಾಪನೆ

ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರು (ಪಂಚಮ ಖಲೀಫ) ಲಾಹೋರಿನ ಹುತಾತ್ಮರ ಕುರಿತು ಖುತುಬದಲ್ಲಿ ಪ್ರಸ್ತಾಪಿಸುತ್ತಾ ಹೇಳಿದರು:

'ಲಾಹೋರಿನಲ್ಲಿ ಮಸ್‌ಜಿದ್‌ನೊಳಗೆ ಭಯೋತ್ಪಾದಕರು ಪ್ರವೇಶಿಸಿದಾಗ ಅಹ್ಮದಿಯರೊಂದಿಗೆ ಧಿಕ್ರೆ ಇಲಾಹಿ (ಅಲ್ಲಾಹನ ನಾಮ ಸ್ಮರಣೆ) ಮತ್ತು ದುರೂದ್ ಶರೀಫ್ ಪ್ರಾರ್ಥನೆ ಮಾಡಲು ಅಲ್ಲಿದ್ದ ಜಮಾಅತಿನ ಮುರಬ್ಬಿ (ಮುಬಲ್ಲಿಗ್) ಹೇಳಿದರು. ಅನಂತರ ಅವರು ಸ್ವತಃ ಇತರರೊಂದಿಗೆ ಹುತಾತ್ಮರಾದರು. ಈ ದಾರುಣ ಸಂಭವ ಶುಕ್ರವಾರದ ದಿನ ಜುಮುಅ ನಮಾಝಿನ ಸಮಯದಲ್ಲಿ ಘಟಿಸಿತು. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಸಮಯವನ್ನು ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ಕಾಲವೆಂದು ಹೇಳಿದ್ದಾರೆ. ಹುತಾತ್ಮರ ಎಲ್ಲ ಪ್ರಾರ್ಥನೆಗಳನ್ನು ಶತ್ರುಗಳಿಗೆ ಪ್ರತೀಕಾರ ಮಾಡಬಲ್ಲ ಅಲ್ಲಾಹನು ಅಂಗೀಕರಿಸುವನೆಂದು ನಾವು ದೃಢವಾಗಿ ನಂಬುತ್ತೇವೆ. ದೌರ್ಜನ್ಯ, ನಿರ್ದಯತೆ, ಕ್ರೂರತೆ ಮತ್ತು ಸಂವೇದನೆರಾಹಿತ್ಯ ಇವುಗಳ ಗೋಡೆಗಳನ್ನು ಸೀಳುತ್ತಾ ಲಾಹೋರಿನ ಹುತಾತ್ಮರ ದುರೂದ್ ಪ್ರಾರ್ಥನೆಗಳನ್ನು ಸರ್ವಲೋಕಗಳಿಗೂ ಅನುಗ್ರಹದಾಯಕರಾದ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಗೆ ದೇವದೂತರು ನಿಶ್ಚಯವಾಗಿಯೂ ತಲಪಿಸಿರಬಹುದು."

ಯಾ ರಬ್ಬೀ ಸಲ್ಲಿ ಅಲಾ ನಬಿಯ್ಯಿಕ ದಾಯಿಮನ್
ಫೀ ಹಾಧಿಹಿದ್ದುನ್‌ಯಾ ವ ಬಅಸಿನ್ ಸಾನೀ.

ಓ ಅಲ್ಲಾಹ್, ನೀನು ನಿನ್ನ ಪ್ರವಾದಿಗೆ ಆಶೀರ್ವಾದಗಳನ್ನು ಇಹಲೋಕದಲ್ಲೂ ಪರಲೋಕದಲ್ಲೂ ಸುರಿಸುತ್ತಾ ಇರು. ಆಮೀನ್

★

ನಮಾಝ್‌ಗೆ ಮುಂಚೆ ಪ್ರಾಣಿಬಲಿ ಮಾಡುವುದು ಸರಿಯಲ್ಲ.

ಈದ್ ನಮಾಝಿಗೆ ಅಝಾನ್ ಮತ್ತು ಇಖಾಮತ್ ಇಲ್ಲ. ಈದ್ ನಮಾಝ್ ಮಾಡಿದ ನಂತರ ಖುತುಬ ನೀಡಲಾಗುತ್ತದೆ. ಈದ್ ಖುತುಬ ಎಲ್ಲರೂ ಶ್ರದ್ಧೆಯಿಂದ ಆಲಿಸಬೇಕು. ಈದ್ ನಮಾಝ್ ಪಟ್ಟಣದಿಂದ ಹೊರಗೆ ಅಥವಾ ಯಾವುದಾದರೂ ವಿಶಾಲವಾದ ಸ್ಥಳದಲ್ಲಿ ಮಾಡಬೇಕು. ಮಸ್‌ಜಿದ್‌ಗಳಲ್ಲೂ ಈದ್ ನಮಾಝ್ ಮಾಡಬಹುದು. ಈದ್ ನಮಾಝ್ ಎರಡು ರಕ್‌ಅತಿನದ್ದಾಗಿದೆ. ಅದರ ಮೊದಲು ಅಥವಾ ನಂತರ ಸುನ್ನತ್ ಅಥವಾ ನಫ್‌ಲ್ ನಮಾಝ್‌ಗಳಿಲ್ಲ.

ಈದ್ ನಮಾಝ್ ಮಾಡುವಾಗ ಸೂರತುಲ್ ಫಾತಿಹ ಓದುವ ಮೊದಲು ಒಂದನೆಯ ರಕ್‌ಅತಿನಲ್ಲಿ ಏಳು ಸಲ ಮತ್ತು ಎರಡನೆಯ ರಕ್‌ಅತಿನಲ್ಲಿ ಐದು ಸಲ ಅಲ್ಲಾಹು ಅಕ್‌ಬರ್ ಎಂದು ತಕ್‌ಬೀರ್ ಹೇಳಬೇಕು.

ಈದ್ ಪ್ರಾರ್ಥನೆಯಲ್ಲಿ ಸೂರತುಲ್ ಖಾಫ್ ಮತ್ತು ಇಖ್ತರಬತಿಸ್ಸಾಅತ್ ಅಥವಾ ಸೂರತುಲ್ ಅಅ್‌ಲಾ ಮತ್ತು ಸೂರತುಲ್ ಗಾಶಿಯಾ ಓದಬೇಕು. ಅಥವಾ ಸೂರತುಲ್ ಜುಮುಅ ಮತ್ತು ಸೂರತುಲ್ ಮುನಾಫಿಖೂನ್ ಓದಬಹುದು.

ಧಿಲ್‌ಹಿಜ್ಜ 9ನೇ ದಿನಾಂಕ ಫಜ್‌ರ್ ನಮಾಝಿನ ನಂತರ ದಿನಾಂಕ 12 ಅಸ್‌ರ್ ನಮಾಝ್ ತನಕ ಎಲ್ಲ ನಮಾಝ್‌ಗಳ ನಂತರ ಈ ಕೆಳಗಿನ ತಕ್‌ಬೀರ್ ಓದಬೇಕು.

ಅಲ್ಲಾಹು ಅಕ್‌ಬರ್ ಅಲ್ಲಾಹು ಅಕ್‌ಬರ್
ಲಾ ಇಲಾಹ ಇಲ್ಲಲ್ಲಾಹು ವಲ್ಲಾಹು ಅಕ್‌ಬರ್
ಅಲ್ಲಾಹು ಅಕ್‌ಬರ್ ವಲಿಲ್ಲಾಹಿಲ್ ಹಮ್ದು.

اَللّٰهُ اَكْبَرُ اَللّٰهُ اَكْبَرُ- لَا اِلٰهَ اِلَّا اللّٰهُ وَاللّٰهُ اَكْبَرُ
اَللّٰهُ اَكْبَرُ وَلِلّٰهِ الْحَمْدُ

## ಗ್ರಹಣ ಕಾಲದ ನಮಾಝ್

ಸೂರ್ಯ ಗ್ರಹಣ ಅಥವಾ ಚಂದ್ರ ಗ್ರಹಣ ಆಗುವಾಗ ನಮಾಝ್ ಮಾಡಲಾಗುತ್ತದೆ. ಇದಕ್ಕೆ ಅಝಾನ್ ಮತ್ತು ಇಖಾಮತ್ ಇಲ್ಲ. ಗ್ರಹಣದ ಸಮಯ ಜನರು ಮಸ್‌ಜಿದ್‌ಗಳಲ್ಲಿ ಸೇರಿ ಓರ್ವ ಇಮಾಮ್‌ನ ನೇತೃತ್ವದಲ್ಲಿ ನಮಾಝ್ ನಿರ್ವಹಿಸಬೇಕು. ಈ ನಮಾಝ್ ಎರಡು ರಕ್‌ಅತ್‌ಗಳದ್ದಾಗಿದೆ. ಪ್ರತಿಯೊಂದು ರಕ್‌ಅತಿನಲ್ಲಿ ಎರಡು ರುಕೂಅ್‌ಗಳಿರುತ್ತವೆ. ನಮಾಝ್ ಉಚ್ಚ ಸ್ವರದಲ್ಲಿ ದೀರ್ಘವಾಗಿ ಮಾಡಲಾಗುತ್ತದೆ. ಗ್ರಹಣ ಮುಗಿಯುವ ತನಕ ನಮಾಝ್ ಮುಂದುವರಿಸಬಹುದು. ಧಾರಾಳ ಪ್ರಾರ್ಥಿಸಬಹುದು. ಈ ನಮಾಝ್ ಇಮಾಮ್ ಇಲ್ಲದಿದ್ದರೆ ಒಬ್ಬನೇ ಮಾಡಬಹುದು.

## ಇಸ್ತಿಖಾರ ನಮಾಝ್

ಯಾವುದಾದರೊಂಧು ಪ್ರಧಾನ ಕಾರ್ಯವನ್ನು ಮಾಡಲು ಉದ್ದೇಶಿಸುವುದಾದರೆ ಇಸ್ತಿಖಾರ ನಮಾಝ್ ಮಾಡಬೇಕು. ಇಸ್ತಿಖಾರ ನಮಾಝ್ ಸುನ್ನತ್ ಆಗಿದೆ. ಅಲ್ಲಾಹನಿಂದ ಒಳಿತನ್ನು ಕೋರುವುದು ಈ ನಮಾಝಿನ ಉದ್ದೇಶವಾಗಿದೆ. ಅದರ ಪರಿಣಾಮವಾಗಿ ಅಲ್ಲಾಹನು ಒಳಿತಿನ ಕಡೆಗೆ ಒಯ್ಯುವನು.

ಇಶಾ ಪ್ರಾರ್ಥನೆಯ ನಂತರ ಎರಡು ರಕ್‌ಅತ್ ನಮಾಝ್ ಮಾಡಬೇಕು. ಅನಂತರ ಇಸ್ತಿಖಾರದ ದುಆ ಮಾಡಿ ಮಲಗಬೇಕು. ದುಆ ಹೀಗಿದೆ:

ಅಲ್ಲಾಹುಮ್ಮ ಇನ್ನೀ ಅಸ್ತಖೀರುಕ ಬಿಇಲ್‌ಮಿಕ ವ ಅಸ್ತಖ್‌ದಿರುಕ
ಬಿಖುದ್‌ರತಿಕ ವ ಅಸ್‌ಅಲುಕ ಮಿನ್ ಫಳ್ಲಿಕಲ್ ಅಝೀಮ್. ಫಇನ್ನಕ
ತಖ್‌ದಿರು ವಲಾ ಅಖ್‌ದಿರು ವತಅ್‌ಲಮು ವಲಾ ಅಅ್‌ಲಮು
ವ ಅನ್‌ತ ಅಲ್ಲಾಮುಲ್ ಗುಯೂಬ್.
ಅಲ್ಲಾಹುಮ್ಮ ಇನ್‌ಕುನ್‌ತ ತಅ್‌ಲಮು ಅನ್ನ ಹಾಧಲ್ ಅಮ್‌ರ ಖೈರುನ್ ಲ್ಲೀ
ಫೀ ದೀನೀ ವ ಮಾಆಶೀ ವ ಆಖಿಬತಿ ಅಮ್‌ರೀ ಫಅಖ್‌ದಿರ್‌ಹು
ಲೀ ವ ಯಸ್ಸಿರ್‌ಹು ಲೀ ಸುಮ್ಮ ಬಾರಿಕ್ ಲೀ ಫೀಹಿ. ವ ಇನ್
ಕುನ್‌ತ ತಅ್‌ಲಮು ಅನ್ನ ಹಾಧಲ್ ಅಮ್‌ರ ಶರ್ರುನ್‌ಲ್ಲೀ
ಫೀ ದೀನೀ ವ ಮಾಆಶೀ ವ ಆಖಿಬತಿ ಅಮ್‌ರೀ
ಫಅಸ್‌ರಿಫ್‌ಹು ಅನ್ನೀ ವಅಸ್‌ರಿಫ್‌ನೀ ಅನ್‌ಹು ವಅಖ್‌ದಿರ್
ಲಿಯಲ್ ಖೈರ ಹೈಸು ಕಾನ ಸುಮ್ಮ ಅರ್‌ಝಿನೀ ಬಿಹೀ

اَللّٰهُمَّ اِنِّيْ اَسْتَخِيْرُكَ بِعِلْمِكَ وَاَسْتَقْدِرُكَ
بِقُدْرَتِكَ وَاَسْئَلُكَ مِنْ فَضْلِكَ الْعَظِيْمِ- فَاِنَّكَ
تَقْدِرُ وَلَا اَقْدِرُ وَتَعْلَمُ وَلَا اَعْلَمُ وَاَنْتَ عَلَّامُ الْغُيُوْبِ
اَللّٰهُمَّ اِنْ كُنْتَ تَعْلَمُ اَنَّ هٰذَا الْاَمْرَ خَيْرٌ لِّيْ
فِيْ دِيْنِيْ وَمَعَاشِيْ وَعَاقِبَةِ اَمْرِيْ فَاقْدِرْهُ
لِيْ وَيَسِّرْهُ لِيْ ثُمَّ بَارِكْ لِيْ فِيْهِ- وَاِنْ
كُنْتَ تَعْلَمُ اَنَّ هٰذَا الْاَمْرَ شَرٌّ لِّيْ
فِيْ دِيْنِيْ وَمَعَاشِيْ وَعَاقِبَةِ اَمْرِيْ
فَاصْرِفْهُ عَنِّيْ وَاصْرِفْنِيْ عَنْهُ وَاقْدِرْ
لِيَ الْخَيْرَ حَيْثُ كَانَ ثُمَّ اَرْضِنِيْ بِهٖ-

ಅರ್ಥ: ಓ ಅಲ್ಲಾಹ್, ನಿನ್ನ ಅರಿವಿನೊಂದಿಗೆ ನಾನು ನಿನ್ನಿಂದ ಒಳಿತನ್ನು ಕೋರ ತ್ತೇನೆ. ನಿನ್ನ ಶಕ್ತಿ ಸಾಮರ್ಥ್ಯಗಳಿಂದ ನಾನು ಶಕ್ತಿಯನ್ನು ಕೋರುತ್ತೇನೆ. ನಿನ್ನ ಮಹತ್ವಪೂರ್ಣವಾದ ಅನುಗ್ರಹವನ್ನು ನಾನು ಬೇಡಿ ಕೊಳ್ಳುತ್ತೇನೆ. ನಿಶ್ಚಯವಾಗಿಯೂ ನೀನು ಶಕ್ತಿ

ಸಾಮರ್ಥ್ಯ ಉಳ್ಳವನೂ ನಾನು ಶಕ್ತಿ ಸಾಮರ್ಥ್ಯ ಇಲ್ಲದವನೂ ಆಗಿರುವೆನು. ನೀನು ಎಲ್ಲವನ್ನೂ ಅರಿತಿರುವೆ. ನಾನು ಏನೂ ಅರಿವಿಲ್ಲದವನು. ನೀನು ಅಗೋಚರ ಸಂಗತಿಗಳನ್ನು ಬಲ್ಲವನಾಗಿರುವೆ. ಓ ಅಲ್ಲಾಹ್, ಈ ಸಂಗತಿ ನನ್ನ ಧಾರ್ಮಿಕ ಜೀವಿತದಲ್ಲಿಯೂ ನನ್ನ ಪ್ರಾಪಂಚಿಕ ಜೀವಿತದಲ್ಲಿಯೂ ಉತ್ತಮ ಪರಿಣಾಮವನ್ನುಂಟುಮಾಡುವುದರಲ್ಲಿಯೂ ನನಗೆ ಗುಣಕರವೆಂದು ನೀನು ತಿಳಿದಿರುವೆಯಾದರೆ ನೀನು ನನಗೆ ಅದನ್ನು ಒದಗಿಸಿಕೊಡು. ಅದು ನನಗೆ ಸುಲಭವಾಗಿ ಸಾಧ್ಯವಾಗುವಂತೆ ಮಾಡು ಮತ್ತು ನೀನು ಅದರಲ್ಲಿ ಅನುಗ್ರಹಗಳನ್ನು ಸುರಿಸು. ಈ ಸಂಗತಿ ನನ್ನ ಧಾರ್ಮಿಕ ಜೀವಿತದಲ್ಲಿಯೂ ನನ್ನ ಪ್ರಾಪಂಚಿಕ ಜೀವಿತದಲ್ಲಿಯೂ ಕೆಟ್ಟ ಪರಿಣಾಮ ಬೀರುವುದೆಂದು ನೀನು ತಿಳಿದಿದ್ದರೆ ಅದನ್ನು ನನ್ನಿಂದಲೂ ನನ್ನನ್ನು ಅದರಿಂದಲೂ ದೂರೀಕರಿಸು. ಎಲ್ಲಿ ಒಳಿತು ಇದೆಯೋ ಅಲ್ಲಿಂದ ನನಗೆ ಅದನ್ನು ಒದಗಿಸಿಕೊಡು ಮತ್ತು ನಾನು ಅದರಿಂದ ಸಂತೃಪ್ತನಾಗುವಂತೆ ಮಾಡು. ●

## ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಗತಿ

ಲಂಡನಿನ "ಹದೀಖತುಲ್ ಮಹ್‌ದಿ"ಯಲ್ಲಿ ಜರಗಿದ 45ನೇ ಯು.ಕೆ. ಅಹ್ಮದಿಯಾ ವಾರ್ಷಿಕ ಸಮ್ಮೇಳನದ ಎರಡನೇ ದಿನದಂದು ಅಹ್ಮದಿಯಾ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಅಹ್ಮದಿಯಾ ಜಮಾಅತಿನ ಪ್ರಗತಿ ಕುರಿತು ಹೀಗೆ ವಿವರಿಸಿದರು:

- ★ ಮುಲ್ಲಾಗಳ ಕಟು ವಿರೋಧವಿದ್ದರೂ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ದಿನೇ ದಿನೇ ಅಭಿವೃದ್ಧಿ ಹೊಂದುತ್ತಿದೆ.
- ★ ಈ ವರ್ಷ ಲೋಕದಾದ್ಯಂತ 124 ರಾಷ್ಟ್ರಗಳ 352 ಜನಾಂಗಗಳಿಗೆ ಸೇರಿದ 4 ಲಕ್ಷದ 80 ಸಾವಿರ ಮಂದಿಗೆ ಅಹ್ಮದಿಯತ್ ಅಥವಾ ನೈಜ ಇಸ್ಲಾಮನ್ನು ಸ್ವೀಕರಿಸುವ ಸೌಭಾಗ್ಯ ಲಭಿಸಿತು.
- ★ ಒಟ್ಟು 200 ರಾಷ್ಟ್ರಗಳಲ್ಲಿ ಅಹ್ಮದಿಯತ್ ಸ್ಥಾಪಿಸಲ್ಪಟ್ಟಿದೆ.
- ★ ಚಿಲಿ ಮತ್ತು ಬಾರ್‌ಬಾಡೋಸ್ ಎಂಬೀ ಎರಡು ದೇಶಗಳಲ್ಲಿ ಈ ವರ್ಷ ಅಹ್ಮದಿಯತ್ ಸ್ಥಾಪಿಸಲ್ಪಟ್ಟಿತು.
- ★ ಅಹ್ಮದಿಯಾ ಜಮಾಅತಿನ ವತಿಯಿಂದ ಇಷ್ಟರ ವರೆಗೆ 70 ಭಾಷೆಗಳಲ್ಲಿ ಖುರ್‌ಆನಿನ ಅನುವಾದಗಳನ್ನು ಪ್ರಕಟಿಸಲಾಗಿದೆ.
- ★ ಈ ವರ್ಷ 121 ಮಸೀದಿಗಳನ್ನು ಜಮಾಅತ್ ನಿರ್ಮಿಸಿದೆ. 289 ಮಸೀದಿಗಳು ಜಮಾಅತಿಗೆ ದೊರೆತಿವೆ.
- ★ ಈ ವರ್ಷ 121 ಹೊಸ ಪ್ರಚಾರ ಕೇಂದ್ರಗಳು ಸ್ಥಾಪಿಸಲ್ಪಟ್ಟಿವೆ. ಈ ತನಕ 102 ದೇಶಗಳಲ್ಲಿರುವ ಪ್ರಚಾರ ಕೇಂದ್ರಗಳ ಒಟ್ಟು ಸಂಖ್ಯೆ 2325.
- ★ ಈ ವರ್ಷ 61 ದೇಶಗಳಲ್ಲಿ 539 ಪುಸ್ತಕಗಳೂ ಕಿರುಹೊತ್ತಗೆಗಳೂ ಲೋಕದ 38 ಭಾಷೆಗಳಲ್ಲಿ 7,61,000 ಪ್ರತಿಗಳನ್ನು ಪ್ರಕಟಿಸಲಾಗಿದೆ.
- ★ ಪವಿತ್ರ ಖುರ್‌ಆನಿನ ಅಧ್ಯಾಪನೆಗಳನ್ನು ಪ್ರಚಾರಗೊಳಿಸಲಿಕ್ಕೋಸ್ಕರ ಈ ವರ್ಷ ಲೋಕದಾದ್ಯಂತ 2059 ಎಕ್ಸಿಬಿಷನ್‌ಗಳನ್ನು ಮತ್ತು 5096 ಬುಕ್‌ಸ್ಟಾಲ್‌ಗಳನ್ನು ಏರ್ಪಡಿಸಲಾಯಿತು.
- ★ ಈ ವಾರ್ಷಿಕ ಸಮ್ಮೇಳನದಲ್ಲಿ 93 ದೇಶಗಳ ಪ್ರತಿನಿಧಿಗಳು ಭಾಗವಹಿಸಿದರು.

*(ಆಧಾರ: "ಮಿಶ್ಕಾತ್" ಮಾಸಪತ್ರಿಕೆ – ಸಪ್ಟೆಂಬರ್ 2011)*

## ನಿಧನ ವಾರ್ತೆ

## ಸಾಹಿಬ್‌ಝಾದಿ ಸಯ್ಯಿದ ನಾಸಿರ ಬೇಗಂ ಸಾಹಿಬ

ಜಾಗತಿಕ ಅಹ್ಮದಿಯಾ ಮುಸ್ಲಿಂ ಜಮಾಅತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರ ಮಾತೃ 2011 ಜುಲಾಯಿ 29ರಂದು ಸಂಜೆ ಪಾಕಿಸ್ಥಾನದ ರಬ್ವದಲ್ಲಿ ಶತಾಯುಷಿಯಾಗಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಸಯ್ಯಿದ ನಾಸಿರ ಬೇಗಂ ಸಾಹಿಬ ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅಲೈಹಿಸ್ಸಲಾಮರ ಪ್ರಥಮ ಮೊಮ್ಮಗಳೂ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬ್ (ದ್ವಿತೀಯ ಖಲೀಫ)ರವರ ಪ್ರಥಮ ಪುತ್ರಿಯೂ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಮತ್ತು ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಅವರ ಸಹೋದರಿಯೂ ಆಗಿದ್ದಾರೆ.

ಹಝ್ರತ್ ಸಾಹಿಬ್‌ಝಾದಿ ಸಯ್ಯಿದ ನಾಸಿರ ಬೇಗಂ ಸಾಹಿಬ 1911 ಸಪ್ಟೆಂಬರ್‌ನಲ್ಲಿ ಖಾದಿಯಾನಿನಲ್ಲಿ ಜನಿಸಿದರು. ಅವರ ಮಾತೆ ಹಝ್ರತ್ ಸಾಹಿಬ್‌ಝಾದಿ ಮಹ್ಮೂದ ಬೇಗಂ ಸಾಹಿಬ. 1934 ಜುಲಾಯಿ 2ರಂದು ಅವರ ನಿಕಾಹ್ ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹೇಬರ ಪುತ್ರ ಹಝ್ರತ್ ಮಿರ್ಝಾ ಮನ್‌ಸೂರ್ ಅಹ್ಮದ್ ಸಾಹೇಬರೊಂದಿಗೆ ನಡೆಯಿತು.

ಅವರು ಪಾಕಿಸ್ಥಾನದ ರಬ್ವ ಜಮಾಅತಿನ ಲಜ್‌ನಾ ಇಮಾಇಲ್ಲಾಹ್ ಸಂಘಟನೆ (ವನಿತಾ ಸಂಘಟನೆ)ಯ ಅಧ್ಯಕ್ಷೆ ಆಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಅವರು FA ತೇರ್ಗಡೆ ಹೊಂದಿ 1929ರಲ್ಲಿ 'ಮೌಲ್ವಿ' ಪದವಿ ಪಡೆದಿದ್ದರು. 2005ರಲ್ಲಿ ಖಾದಿಯಾನಿನಲ್ಲಿ ಜರಗಿದ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನ)ದಲ್ಲಿ ಅವರು ಭಾಗವಹಿಸಿದ ಸಂದರ್ಭದಲ್ಲಿ ತನ್ನ ಪುತ್ರ ಖಲೀಫತುಲ್ ಮಸೀಹ್ ಖಾಮಿಸ್‌ರನ್ನು ಕೊನೆಯದಾಗಿ ಭೇಟಿಯಾಗಿದ್ದರು.

ಅವರು ಮಹಾ ಸಾಧ್ವಿಯಾಗಿದ್ದರು. ಅವರು ಇಬ್ಬರು ಪುತ್ರರನ್ನೂ ಮೂವರು ಪುತ್ರಿಯರನ್ನೂ ಅಪಾರ ಬಂಧು ಬಾಂಧವರನ್ನೂ ಅಗಲಿದ್ದಾರೆ.

ಅಲ್ಲಾಹನು ದಿವಂಗತರಿಗೆ ಜನ್ನತುಲ್ ಫಿರ್‌ದೌಸ್‌ನಲ್ಲಿ ಉನ್ನತ ಸ್ಥಾನ ನೀಡಿ ಅನುಗ್ರಹಿಸಲಿ. ಆಮೀನ್.

# ಅಹ್ಮದಿಯಾ ಮುಸ್ಲಿಮ್ ಜಮಾಅತ್ ಶಾಂತಿಪ್ರಿಯ; ಉಗ್ರವಾದಕ್ಕೆ ವಿರೋಧಿ

**ಆರ್ಯ ಸಮಾಜದ ವರ್ಲ್ಡ್ ಕೌನ್ಸಿಲ್ ಅಧ್ಯಕ್ಷರಾದ ಶ್ರೀ ಸ್ವಾಮಿ ಅಗ್ನಿವೇಶ್‌ರವರು 2010 ಡಿಸೆಂಬರ್‌ನಲ್ಲಿ ಖಾದಿಯಾನಿನ ಜಾಗತಿಕ ಅಹ್ಮದಿಯಾ ಸಮ್ಮೇಳನದಲ್ಲಿ ಮಾಡಿದ ಭಾಷಣದ ಆಯ್ದ ಭಾಗಗಳು.**

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್. ಸರ್ವಸಂರಕ್ಷಕನಾದ ಅಲ್ಲಾಹನ ನಾಮದಲ್ಲಿ ನಾನು ಪ್ರಾರಂಭಿಸುತ್ತೇನೆ. ಮಹಿಳೆಯರೇ, ಮಹನೀಯರೇ, ನಾನು ಈ ಮಾತನ್ನು ಅರಬಿ ಭಾಷೆಯಲ್ಲಿ ಹೇಳುವಾಗ ಜನರು ಭಾವಿಸುತ್ತಾರೆ: ಪ್ರಾಯಶಃ ನಾನೊಬ್ಬ ಮೌಲಾನ ಆಗಿರಬಹುದೆಂದು. ಇದೇ ಮಾತನ್ನು ನಾನು ಸಂಸ್ಕೃತ ಭಾಷೆಯಲ್ಲಿ ಹೇಳಿದರೆ ಇವರೊಬ್ಬ ಹಿಂದೂ ಆರ್ಯ ಸಮಾಜಿ ಆಗಿದ್ದಾರೆಂದು ಹೇಳುವರು. ಇದನ್ನೇ ನಾನು ಪಂಜಾಬಿ ಭಾಷೆಯಲ್ಲಿ ಹೇಳಿದರೆ ಇವರೊಬ್ಬ ಸಿಖ್ಖ್ ಸರ್ದಾರ್ ಆಗಿದ್ದಾರೆಂದು ಹೇಳುವರು.

ಧರ್ಮವನ್ನು ಯಾವ ರೀತಿಯಲ್ಲಿ ಹಂಚಿಕೊಳ್ಳಲಾಗಿದೆ ಎಂದರೆ ನಾವು ಒಂದೇ ಮಾತನ್ನು ಬೇರೆ ಬೇರೆ ಭಾಷೆಗಳಲ್ಲಿ ಹೇಳಿದರೆ ಬೇರೆ ಬೇರೆ ಧರ್ಮಗಳ ಹೇಳಿಕೆ ಎಂದು ಭಾಸವಾಗುತ್ತದೆ.

ಒಬ್ಬನೇ ದೇವನನ್ನು ಆರಾಧಿಸುವ ನಾವೆಲ್ಲರೂ ಪರಸ್ಪರ ಮಂದಿರ ಮಸ್‌ಜಿದ್‌ಗಳ ಹೆಸರಲ್ಲಿ, ಜುಟ್ಟು ಗಡ್ಡಗಳ ಹೆಸರಲ್ಲಿ ವಿಂಗಡಿಸಲ್ಪಟ್ಟಿದ್ದೇವೆ. ನನ್ನ ಒಬ್ಬ ಸಹೋದರ ಗಡ್ಡ ಇಟ್ಟುಕೊಂಡರೆ ಅವನನ್ನು ಮುಸ್ಲಿಮನೆಂದು ಹೇಳುತ್ತಾರೆ. ಮರುದಿನ ಗಡ್ಡವನ್ನು ಬೋಳಿಸಿ ಅದರ ಕೂದಲನ್ನು ತಲೆಯ ಹಿಂಭಾಗಕ್ಕೆ ಅಂಟಿಸುವುದಾದರೆ ಆತನು ಪಂಡಿತ್‌ಜಿ ಆಗುತ್ತಾನೆ.

ನಮ್ಮ ಸಹೋದರ ಪೂರ್ವಕ್ಕೆ ಮುಖ ತಿರುಗಿಸಿ ಆರಾಧಿಸಿದರೆ ಹಿಂದೂ ಆಗುತ್ತಾನೆ. ಪಶ್ಚಿಮದ ಕಡೆಗೆ ಅಭಿಮುಖೀಕರಿಸಿ ಆರಾಧಿಸಿದರೆ ಮುಸ್ಲಿಮನಾಗುತ್ತಾನೆ.

ಇಂತಹ ವಿಷಯಗಳ ಬಗ್ಗೆ ನಾವು ಜಗಳ ಮಾಡುತ್ತಾ ಇದ್ದೆವು. ಈಗಲೂ ಜಗಳ ಮಾಡುತ್ತಿದ್ದೇವೆ.

ಹಲವಾರು ವರ್ಷಗಳಿಂದ ಇಂತಹ ವಿಷಯಗಳ ಬಗ್ಗೆ ನಮ್ಮನ್ನು ಜಗಳ ಮಾಡಿಸಲಾಗುತ್ತದೆ. ಪರಸ್ಪರ ಜಗಳ ಹುಟ್ಟು ಹಾಕಿಸುವ ಕೊಳಕು ರಾಜಕೀಯವೂ ಈ ದೇಶದಲ್ಲಿ ಜಾರಿಗೊಳಿಸಲಾಗುತ್ತಿದೆ.

ನಾನು ಇಲ್ಲಿಗೆ ಪ್ರಥಮ ಬಾರಿ ಆಗಮಿಸಿರುವೆನು. ನೀವು ನಿಮ್ಮ ವಾರ್ಷಿಕ ಸಮ್ಮೇಳನಕ್ಕೆ ನನ್ನನ್ನು ಎಷ್ಟು ಪ್ರೀತಿಯಿಂದ ಆಹ್ವಾನಿಸಿದರೆಂದರೆ, ನಾನು ಅದರ ಬಗ್ಗೆ ನಿಮಗೆ ಬಹಳ ಕೃತಜ್ಞನಾಗಿದ್ದೇನೆ. ಲೋಕದಲ್ಲಿ ಅಹ್ಮದಿಯಾ ಜನರ ಬಹಳ ಉತ್ತಮ ವರ್ಚಸ್ಸು ಇದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿಯವರು ಲೋಕದಲ್ಲಿ ತನ್ನ ನಿಲುವಿನ ಪ್ರಕಾರ ಒಂದು ಹೊಸ ಅಭಿಯಾನವನ್ನು ಪ್ರಾರಂಭಿಸಿದರು. ಇಸ್ಲಾಮ್ ಧರ್ಮವನ್ನು ಆಧಾರವಾಗಿಟ್ಟುಕೊಂಡು ಉಗ್ರವಾದವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ ಎಂದು ಲೋಕದ ಜನರಿಗೆ ಮನವರಿಕೆಯಾಗಲು ತೊಡಗಿದೆ.

ಇಸ್ಲಾಮ್ ಎಂದರೆ ಪ್ರೀತಿಯ ಸಂದೇಶವಾಗಿದೆ. ಇಸ್ಲಾಮಿನ ಹೆಸರಿನಲ್ಲಿ ದ್ವೇಷವು ಪ್ರಕಟವಾಗಲು ಸಾಧ್ಯವೇ ಇಲ್ಲ. 110 ವರ್ಷಗಳ ಹಿಂದೆ ಈ ಖಾದಿಯಾನಿನಲ್ಲಿ ಒಂದು ಕ್ರಾಂತಿ ಉಂಟಾಯಿತು. ಅದು



ವಿಶ್ವದ 198 ದೇಶಗಳಲ್ಲಿ ಹಬ್ಬಿತು. ಇಂದು ಈ ಮಹಾಸಭೆಯನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಕಾಶ್ಮೀರದಿಂದ ಕನ್ಯಾಕುಮಾರಿ ತನಕದ ಪ್ರದೇಶಗಳಿಂದ ಮಾತ್ರವಲ್ಲ, ನಮ್ಮ ನೆರೆಹೊರೆಯ ಪಾಕಿಸ್ತಾನದಿಂದಲೂ ಸ್ನೇಹಿತರು ಆಗಮಿಸಿದ್ದಾರೆ. ಇದು ಬಹಳ ಸಂತೋಷದ ವಿಷಯವಾಗಿದೆ. ಭಾರತದ ನಾಝಿರೇ ಆಲಾ (ಪ್ರಧಾನ ಕಾರ್ಯದರ್ಶಿ) ಬಹುಮಾನ್ಯ ಮುಹಮ್ಮದ್ ಇನ್‌ಆಮ್ ಘೋರಿ ಸಾಹೇಬರ ಮಾತುಗಳನ್ನು ಮತ್ತು ಎಲ್ಲಾ ಪದ್ಯಾಲಾಪನೆಗಳನ್ನು ಆಲಿಸಿ ನಾನು ಬಹಳ ಪ್ರಭಾವಿತನಾಗಿದ್ದೇನೆ.

110-112 ವರ್ಷಗಳ ಹಿಂದೆ ಖಾದಿಯಾನಿನಲ್ಲಿ ಉಂಟಾದ ಕ್ರಾಂತಿಯು 1400 ವರ್ಷಗಳ ಹಿಂದೆ ಇಸ್ಲಾಮ್ ಯಾವ ರೀತಿ ಇದ್ದಿತೋ, ಅದರ ಸ್ಥಾಪನೆಗೋಸ್ಕರವಾಗಿತ್ತು. ಅದರ ಮೇಲೆ ಸ್ವಲ್ಪ ಮಟ್ಟಿಗೆ ಧೂಳು ಆವರಿಸಿದ್ದಿತು. ಅದರ ವ್ಯಾಖ್ಯಾನ ಮಾಡುವವರು ನಿರ್ಲಕ್ಷ್ಯಹೊಂದಿದ್ದರು. ವಿಶ್ವಕ್ಕೆ ಇಸ್ಲಾಮ್ ಧರ್ಮವು ಎಷ್ಟು ಅನುಯೋಜ್ಯವಾಗಿದೆ ಎಂಬುದನ್ನು ಲೋಕಕ್ಕೆ ತಿಳಿಸಿಕೊಡಲು ಖಾದಿಯಾನಿನಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಸಾಹೇಬರು ಆಗಮಿಸಿದರು. ಅವರು ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು.

**ವಿಶ್ವದಲ್ಲಿ ಇಸ್ಲಾಮಿನ ಅನೇಕ ಬೇರೆ ಜಮಾಅತುಗಳು ಇವೆ. ಆದರೆ ಎಲ್ಲರಿಗಿಂತಲೂ ಹೆಚ್ಚು ಶಾಂತಿ ಪ್ರಿಯ ಮತ್ತು ಉಗ್ರವಾದಕ್ಕೆ ಅತ್ಯಂತ ಹೆಚ್ಚು ವಿರೋಧ ಸೂಚಿಸುವ ಯಾವುದಾದರೂ ಜಮಾಅತ್ ಇರುವುದಾದರೆ ಅದು ಅಹ್ಮದಿಯಾ ಮುಸ್ಲಿಮ್ ಜಮಾಅತಾಗಿದೆ.**

ಇಸ್ಲಾಮ್ ಎಂದರೆ ಶಾಂತಿ. ಇಂಗ್ಲಿಷ್‌ನಲ್ಲಿ Peace ಎಂದು ಇದರ ಅರ್ಥ. ಇದರಲ್ಲಿ ಭೀಕರ ಕೃತ್ಯಗಳಿಗೆ ಎಡೆ ಎಲ್ಲಿದೆ? ಉಗ್ರವಾದಕ್ಕೆ ಸಂದರ್ಭ ಎಲ್ಲಿದೆ? ಗೊತ್ತಾಗುವುದಿಲ್ಲ. ಇಸ್ಲಾಮಿನ ಅರ್ಥವನ್ನು ಬಿಗಡಾಯಿಸುವವರು ಬಿಗಡಾಯಿಸುತ್ತಾ ಮುಂದುವರಿಯುತ್ತಾರೆ.

ಇಸ್ಲಾಮ್ ಎಂದರೆ ಶಾಂತಿ ಎಂದು ಅರ್ಥವೆಂದು ನಾನು ಈಗಾಗಲೇ ಹೇಳಿರುತ್ತೇನೆ. ಒಬ್ಬ ಮುಸ್ಲಿಮ್ ಇನ್ನೊಬ್ಬರನ್ನು ಕಾಣುವಾಗ ಹೇಳುತ್ತಾರೆ: ಅಸ್ಸಲಾಮು ಅಲೈಕುಮ್. (ನಿಮ್ಮ ಮೇಲೆ ಶಾಂತಿ ಇರಲಿ.) ಅದಕ್ಕೆ ಉತ್ತರ: ವ ಅಲೈಕುಮುಸ್ಸಲಾಮ್ (ನಿಮ್ಮ ಮೇಲೆಯೂ ಶಾಂತಿ ಇರಲಿ). ಇದರ ಅರ್ಥ ನಿಮ್ಮ ಜೀವಿತ ಸಹ ಶಾಂತಿಮಯವಾಗಿರಲಿ; ಪರಸ್ಪರ ಸಹೋದರ ಭಾವ ಸ್ಥಾಪಿತವಾಗಲಿ ಎಂದಾಗಿದೆ. ಇಷ್ಟು ಸುಂದರ ಮತ್ತು ಮಹತ್ವಪೂರ್ಣವಾದ ವಸ್ತು ಬೇರೆ ಯಾರಲ್ಲಿದೆ ಎಂದು ನನಗೆ ತಿಳಿಸಿರಿ. ಮುಸ್ಲಿಮರು ಮಧ್ಯಾಹ್ನ ಗುಡ್ ಆಫ್ಟರ್ ನೂನ್ ಎಂದು ಹೇಳುವುದಿಲ್ಲ. ಸಾಯಂಕಾಲ ಗುಡ್ ಈವಿನಿಂಗ್ ಎಂದೂ ಹೇಳುವುದಿಲ್ಲ. ಅವರು ಗುಡ್ ಮಾರ್ನಿಂಗ್ ಎಂದು ಬೆಳಗ್ಗೆಯೂ ಹೇಳುವುದಿಲ್ಲ. ಅವರು ಬೆಳಗ್ಗೆ, ರಾತ್ರಿ, ಮಧ್ಯಾಹ್ನ, ಸಾಯಂಕಾಲ, ವೃದ್ಧರಾಗಲಿ ಯುವಕರಾಗಲಿ ಬಾಲಕ ಬಾಲಿಕೆಯರಾಗಲಿ ಪರಸ್ಪರ ಹೇಳುತ್ತಾರೆ: ಅಸ್ಸಲಾಮು ಅಲೈಕುಮ್. ಶಾಂತಿ, ಶಾಂತಿ, ಶಾಂತಿ ಎಂಬ ಪದಗಳು ಯಾರ ನಾಲಗೆಯಿಂದ ಹೊರಡುತ್ತಿವೆಯೋ ಅವರ ಬಗ್ಗೆ ಆರೋಪಿಸಲಾಗುತ್ತಿದೆ – ಅವರು ಭೀಕರ ಕೃತ್ಯಗಳನ್ನು ಹಬ್ಬಿಸುತ್ತಾರೆಂದು.

ಸಂಪರ್ಕ ಮಾಧ್ಯಮಗಳಲ್ಲಿ ಇದೇ ಪ್ರಚಾರ ನಡೆಸಲಾಗುತ್ತಿದೆ.

ಈ ಎಲ್ಲಾ ವಿಷಯಗಳನ್ನು ಸಂಪೂರ್ಣ ಶಕ್ತಿಯಿಂದ ಎದುರಿಸಬಲ್ಲ ಏಕಮಾತ್ರ ಸಂಘಟನೆ ಅಹ್ಮದಿಯಾ ಜಮಾಅತಾಗಿದೆ. ಅವರು ಧೈರ್ಯದಿಂದ ಎದ್ದು ನಿಂತು ಹೇಳಬಲ್ಲರು – ಇಸ್ಲಾಮನ್ನು ಆಕ್ಷೇಪಿಸಲು ನಿಮಗೆ ಯಾವ ರೀತಿಯಲ್ಲೂ ಸಾಧ್ಯವಿಲ್ಲವೆಂದು.

ನೀವು ಪರಸ್ಪರ ಹೇಳುತ್ತೀರಿ: ಅಸ್ಸಲಾಮು ಅಲೈಕುಮ್; ವ ಅಲೈಕುಮುಸ್ಸಲಾಮ್. ನೀವು ಪರಸ್ಪರ ಶಾಂತಿಯನ್ನು ಹಾರೈಸುತ್ತಿರುವಿರಿ.

ಪಾಶ್ಚಿಮಾತ್ಯ ದೇಶಗಳ ಜನರು ತಮ್ಮನ್ನು ಹ್ಯೂಮನ್ ರೈಟ್ಸ್ ಚಾಂಪಿಯನ್ಸ್ (ಮಾನವ ಹಕ್ಕುಗಳ ಶ್ರೇಷ್ಠ ಪ್ರತಿಪಾದಕರು) ಎಂದು ಹೇಳಿಕೊಳ್ಳುತ್ತಾರೆ. ಅಂತಹ ದೇಶಗಳಿಗೆ ನಾನು ಹೋದಾಗ ಅವರು ಶಾಂತಿಯನ್ನು ಹಾರೈಸಿ ಅಭಿವಂದಿಸುವುದಿಲ್ಲ. ಅವರು ಹೇಳುತ್ತಾರೆ: ಹಾಯ್ ಸ್ವಾಮೀ ಹಾಯ್. ನೀವು ನೋಡಿರಿ, ನಮ್ಮ ದೇಶದಲ್ಲಿ ಯಾರಾದರೂ ಸತ್ತು ಹೋದರೆ ಹಾಯ್, ಹಾಯ್ ಎನ್ನುತ್ತಾರೆ.

ಹುಚ್ಚರಾದ ಆ ಜನರು ಪರಸ್ಪರ ಅಭಿವಂದಿಸಲು ಹಾಯ್ ಹಾಯ್ ಎನ್ನುತ್ತಾರೆ. ತಮ್ಮನ್ನು ಬಹಳ ಪ್ರಗತಿ ಹೊಂದಿದವರೆಂದು ಗಣಿಸುವ ಈ ಪಾಶ್ಚಿಮಾತ್ಯರು ಬಹಳ ಹಿಂದುಳಿದವರಾಗಿದ್ದಾರೆ. ಅವರು ಇಂತಹ ಸಮ್ಮೇಳನಗಳಿಗೆ ಆಗಮಿಸಿ ಶಿಷ್ಟಾಚಾರ ಕಲಿಯಬೇಕು. ಮಾನವರ ಸಂಬಂಧ ಹೇಗಿರಬೇಕೆಂದು ಅವರು ತಿಳಿದುಕೊಳ್ಳಬೇಕು. ಪ್ರೀತಿ ಬಾಂಧವ್ಯಗಳು ಹೇಗಿರಬೇಕೆಂದೂ ಪರಸ್ಪರ ಹೇಗೆ ಗೌರವಿಸಬೇಕೆಂದೂ ಅವರು ಕಲಿಯಬೇಕು.

ಸ್ನೇಹಿತರೇ, ಇಂತಹ ಅನೇಕ ವಿಷಯಗಳಿವೆ. ನಾವು ಹಝ್‌ರತ್ ಮುಹಮ್ಮದ್ ಮುಸ್ತಫಾರವರನ್ನು ನೆನಪಿಸುವಾಗ, "ಸಲ್ಲಲ್ಲಾಹು ಅಲೈಹಿ ವಸಲ್ಲಮ್" ಎಂದು ಹೇಳುತ್ತೇವೆ. ಇದರ ಅರ್ಥ ಸಹ ಅವರ ಮೇಲೆ ಶಾಂತಿ ಇರಲಿ ಎಂದಾಗಿದೆ. ಇದೆಷ್ಟು ಮನೋಹರವಾಗಿದೆ! ಅವರನ್ನು ಆಕ್ಷೇಪಿಸುವವರು ಹೇಳುತ್ತಾರೆ: ಅವರು ಭೀಕರ ವಾದಕ್ಕೆ ಆಶ್ರಯ ನೀಡಿದರೆಂದು. ಆದರೆ ಈ ಆಕ್ಷೇಪಗಳೆಲ್ಲವೂ ತಪ್ಪಾಗಿವೆ.... ಇಸ್ಲಾಮಿನ ಮೇಲೆ ಆವರಿಸಿದ್ದ ಧೂಳನ್ನು ದೂರಸರಿಸಿ, ಇಸ್ಲಾಮಿನ ಸಾಚಾ, ಪವಿತ್ರ ಹೊಳೆಯುತ್ತಿರುವ ವದನವನ್ನು ಪ್ರಕಟಿಸಿದವರು ಮತ್ತು ಮೇಘಾವೃತವಾದ ಸೂರ್ಯನಿಂದ ಮೇಘಗಳನ್ನು ದೂರ ಸರಿಸಿ ಇಸ್ಲಾಮ್ ಎಂಬ ಸೂರ್ಯನ ಪ್ರಕಾಶಮಾನವಾದ ಬೆಳಕನ್ನು ಬಹಿರಂಗ ಪಡಿಸಿದವರು ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಆಗಿದ್ದಾರೆ. ಅವರು ಅಹ್ಮದಿಯಾ ಜಮಾಅತನ್ನು ಈ ಉದ್ದೇಶಕ್ಕಾಗಿ ಸ್ಥಾಪಿಸಿದರು.

ಅವರು ಲೋಕಕ್ಕೆ ಒಂದು ಸಂದೇಶ ನೀಡಿದರು. ನಮ್ಮನ್ನು ಒಗ್ಗೂಡಿಸುವ ವಸ್ತು ಯಾವುದು? ಅದು ನಮ್ಮನ್ನು ಸೃಷ್ಟಿಸಿದ ನಮ್ಮ ರಕ್ಷಕನಾದ ಒಬ್ಬನೇ ಒಬ್ಬನಾದ ಅಲ್ಲಾಹನಾಗಿದ್ದಾನೆ. ಲಾ ಇಲಾಹ ಇಲ್ಲಲ್ಲಾಹ್. ಬೇರೊಬ್ಬ ದೇವನಿಲ್ಲ. ಈ ಏಕದೇವನನ್ನೇ ಆರಾಧಿಸಬೇಕು. ಮಹರ್ಷಿ ದಯಾನಂದರು ಇದೇ ಮಾತನ್ನು ವೇದಗಳನ್ನು ಉಲ್ಲೇಖಿಸಿ ಹೇಳಿದರು. ಬ್ರಹ್ಮ ಒಬ್ಬನೇ, ಪರಮಾತ್ಮ ಒಬ್ಬನೇ. ಬೇರೆ ಯಾವ ದೇವನೂ ಇಲ್ಲ. ಸೃಷ್ಟಿಗಳ ಕಣಕಣಗಳೂ ಒಬ್ಬನೇ ದೇವನನ್ನು ಸೂಚಿಸುತ್ತವೆ. ಅವನನ್ನೇ ಆರಾಧಿಸಬೇಕು. ಬೇರೆ ಯಾರನ್ನೂ ಆರಾಧಿಸಬಾರದು. ಬೇರೆ ಯಾರ ಮುಂದೆಯೂ ಸಾಷ್ಟಾಂಗ ಪ್ರಣಾಮ ಮಾಡಬಾರದು. ಈ ಮಾತುಗಳನ್ನು ಮಹರ್ಷಿ ದಯಾನಂದರು ಒತ್ತಿ ಹೇಳಿರುವರು. ಆದುದರಿಂದ ಆರ್ಯ ಸಮಾಜದಲ್ಲಿ ಎಲ್ಲಿಯೂ ನೀವು ಯಾವ ಮೂರ್ತಿಯನ್ನೂ ಕಾಣಲಾರಿರಿ. ಮೂರ್ತಿ ಪೂಜೆಯನ್ನು ನೀವು ಕಾಣಲಾರಿರಿ. ಆದುದರಿಂದ ನಿಮ್ಮ ಮತ್ತು ನಮ್ಮ ಮಧ್ಯೆ ಎಷ್ಟು ಏಕಾಭಿಪ್ರಾಯ ಇದೆ ಎಂದರೆ ನನಗೆ ಬಹಳ ಸಂತೋಷವಾಗುತ್ತದೆ. ನನಗೆ ಇದರಿಂದ ಬಹಳ ಶಕ್ತಿ ದೊರಕುತ್ತಿದೆ.

ಕೆಲವು ಆರ್ಯ ಸಮಾಜಿಗಳು ಅಹ್ಮದಿಯಾ ಜಮಾಅತ್ ಹಾಗಿದೆ ಹೀಗಿದೆ ಎಂದು ಹೇಳಿ ವಿರೋಧಿಸಿ ವಾದ ಪ್ರತಿವಾದಗಳನ್ನು ಮಾಡಿದ ಕಾಲಘಟ್ಟ ಎಂತಹದೆಂದು ನನಗೆ ತಿಳಿಯದು. ಆದರೆ ಇಂದು ಆರ್ಯ ಸಮಾಜದ ಜಾಗತಿಕ ಕೌನ್ಸಿಲ್ ಪ್ರೆಸಿಡೆಂಟ್ (President of World Council of Arya Samaj) ಆಗಿರುವ ನಾನು ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಇಲ್ಲಿಗೆ ಆಗಮಿಸಿದ್ದೇನೆ. ಇದೊಂದು ಸಾಮಾನ್ಯ ಸಮ್ಮೇಳನವಲ್ಲ. ಇದೊಂದು ಚಾರಿತ್ರಿಕ ಸಮ್ಮೇಳನವಾಗಿದೆ. ಆರ್ಯ ಸಮಾಜದ ಜಾಗತಿಕ ಕೌನ್ಸಿಲ್ ಪ್ರೆಸಿಡೆಂಟ್ ಆಗಿರುವ ನಾನು ನಿಮ್ಮ ಕಡೆಗೆ ನನ್ನ ತೋಳುಗಳನ್ನು ಚಾಚಿ ನಾನು ನಿಮಗೆ ಆಹ್ವಾನ ನೀಡುತ್ತೇನೆ. ನೀವು ಬನ್ನಿರಿ, ನಾವು ಮತ್ತು ನೀವು ಒಟ್ಟಿಗೆ ಸೇರಿ ಏಕದೇವನ ಆರಾಧನೆಗೋಸ್ಕರ ಲೋಕದ ಜನರನ್ನೆಲ್ಲಾ ಒಗ್ಗೂಡಿಸುವ.

ನಾನು ಇನ್ನೊಂದು ಮಾತನ್ನು ಹೇಳಲು ಬಯಸುತ್ತೇನೆ. ಅಹ್ಮದಿಯಾ ಜಮಾಅತಿನ ಪ್ರತಿನಿಧಿಗಳು ದೆಹಲಿಯಲ್ಲಿ ನನ್ನನ್ನು ಈ ಸಮ್ಮೇಳನಕ್ಕೆ ಆಹ್ವಾನಿಸಲು ಬಂದಾಗ ಅವರು ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬರ ಭಾಷಣದ ಸಂಗ್ರಹವನ್ನೊಳಗೊಂಡ ಗ್ರಂಥವನ್ನು ನನಗೆ ನೀಡಿದ್ದರು. ನಾನು ಆ ಎಲ್ಲಾ ಭಾಷಣಗಳನ್ನು ಓದಿದೆನು. ಆ ಭಾಷಣಗಳಲ್ಲಿ ಯಾವುದಾದರೂ ಭಾಗವನ್ನು ಗುರುತು ಮಾಡಿ, ಅದನ್ನು ನಾನು ಅಂಗೀಕರಿಸುವುದಿಲ್ಲ ಎಂದು ಹೇಳಬಹುದಾದ ಒಂದು ಅಂಶವನ್ನು ನಾನು ಕಾಣಲಿಲ್ಲ. ಅವರ ಒಂದೊಂದು ಮಾತು ನಮ್ಮ ಸ್ವಂತ ಹೃದಯದ ಮಾತು ಎಂಬಂತೆ ನನಗೆ ಭಾಸವಾಯಿತು. ★

## ಬೆಂಗಳೂರು ಬುಕ್ ಫೇರ್‌ನಲ್ಲಿ ಅಹ್ಮದಿಯಾ ಸ್ಟಾಲ್



**ಕಳೆದ ನವೆಂಬರ್ 18ರಿಂದ 27ರ ವರೆಗೆ ಬೆಂಗಳೂರಿನಲ್ಲಿ ನಡೆದ ಬುಕ್ ಫೇರ್‌ನಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಸ್ಟಾಲನ್ನು ಏರ್ಪಡಿಸಲಾಗಿತ್ತು. ಭಾರತದ ಎರಡನೇ ಅತಿ ದೊಡ್ಡ ಬುಕ್‌ಫೇರ್ ಎಂದು ಹೇಳಲ್ಪಡುವ ಈ ಬುಕ್ ಫೇರ್‌ನಲ್ಲಿ ಭಾರತದ ವಿವಿಧ ಸಂಘ ಸಂಸ್ಥೆಗಳ 350 ಸ್ಟಾಲ್‌ಗಳು ಲಕ್ಷಗಟ್ಟಲೆ ಸಂದರ್ಶಕರನ್ನು ಆಕರ್ಷಿಸಿದವು.**

**ಅಹ್ಮದಿಯಾ ಸ್ಟಾಲ್‌ನಲ್ಲಿ ಕನ್ನಡ, ಹಿಂದಿ, ಉರ್ದು, ಇಂಗ್ಲಿಷ್, ಮಲಯಾಳಂ, ತಮಿಳು, ತೆಲುಗು ಮುಂತಾದ ಭಾಷೆಗಳಲ್ಲಿ ಖುರ್‌ಆನ್ ಅನುವಾದ ಮತ್ತು ಇತರ ಸಾಹಿತ್ಯಗಳನ್ನು ಮಾರಾಟ ಮಾಡಲಾಯಿತು. ಅಹ್ಮದಿಯಾ ಸಂಘಟನೆಯ ವತಿಯಿಂದ ಲೋಕದ 70 ಭಾಷೆಗಳಲ್ಲಿ ಪ್ರಕಟಿಸಲಾಗಿದ್ದ ಖುರ್‌ಆನ್ ಅನುವಾದಗಳಲ್ಲಿ 30 ಭಾಷೆಗಳ ಅನುವಾದಗಳನ್ನು ಸ್ಟಾಲ್‌ನಲ್ಲಿ ಪ್ರದರ್ಶಿಸಲಾಯಿತು. ಇಸ್ಲಾಮ್ ಧರ್ಮ ಮತ್ತು ಅಹ್ಮದಿಯಾ ಜಮಾಅತ್ ಬಗ್ಗೆ ಸಂದರ್ಶಕರಿದ್ದ ಸಂಶಯಗಳನ್ನು ಚರ್ಚೆಗಳ ಮೂಲಕ ನಿವಾರಿಸಲಾಯಿತು.**

ಓದಿದ್ದು

## ಕ್ರಿಸ್ಮಸ್‌ನ ವಾಣಿಜ್ಯೀಕರಣ : ಪೋಪ್ ಬೆನೆಡಿಕ್ಟ್ ತರಾಟೆ

**ವ್ಯಾಟಿಕನ್** : ಹದಿನಾರನೇ ಪೋಪ್ ಬೆನೆಡಿಕ್ಟ್ ಅವರು ಅನುಯಾಯಿಗಳಿಗೆ ನೀಡಿರುವ ಕ್ರಿಸ್ಮಸ್ ಸಂದೇಶದಲ್ಲಿ ಕ್ರಿಸ್ಮಸ್ ಹಬ್ಬ ವಾಣಿಜ್ಯೀಕರಣಗೊಳ್ಳುತ್ತಿರುವುದನ್ನು ತೀಕ್ಷ್ಣವಾಗಿ ತರಾಟೆಗೆ ತೆಗೆದುಕೊಂಡು ಧರ್ಮ ವಿಶ್ವಾಸಿಗಳಿಗೆ ರಜೆಯ ಮೋಜಿನ ಹೊರತಾದ ಹಬ್ಬದ ನಿಜವಾದ ಅರ್ಥವನ್ನು ಕಂಡುಕೊಳ್ಳಲು ಹೇಳಿದ್ದಾರೆ.

ಸೈಂಟ್ ಪೀಟರ್ಸ್ ಬೆಸಿಲಿಕದಲ್ಲಿ ಕಿಕ್ಕಿರಿದು ತುಂಬಿದ್ದ ಧರ್ಮಾನುಯಾಯಿಗಳಿಗೆ ಕ್ರಿಸ್ಮಸ್ ಹಬ್ಬದ ಪವಿತ್ರ ಸಂದೇಶವನ್ನು ನೀಡಿದ ಪೋಪ್ ಕ್ರಿಸ್ಮಸ್ ಹಬ್ಬವನ್ನು ವಾಣಿಜ್ಯ ಆಚರಣೆಯಾಗಿ ಮಾಡುತ್ತಿರುವ ಪ್ರವೃತ್ತಿ ಹೆಚ್ಚುತ್ತಿದೆ ಮತ್ತು ಕ್ರೈಸ್ತನ ಸರಳತೆಯ ಸಂದೇಶವನ್ನು ಜನರು ಮರೆಯುತ್ತಿದ್ದಾರೆಂದು ಕಳವಳ ವ್ಯಕ್ತಪಡಿಸಿದರು.

ನಿಜವಾದ ಸಂತೋಷ ಮತ್ತು ಬೆಳಕನ್ನು ಕಂಡುಕೊಳ್ಳಲು ನೆರವಾಗುವಂತೆ ದೇವರನ್ನು ಪ್ರಾರ್ಥಿಸುವ, ಬಡವರನ್ನು, ನಿರ್ಗತಿಕರನ್ನು ಮರೆಯದಿರೋಣ ಎಂದರು.

ಭೌತಿಕದ ಮೋಹದಿಂದ ಹೊರ ಬಂದು ಸರಳ ಹೃದಯನಾದ ದೇವರಲ್ಲಿ ಸರಳತೆಯನ್ನು ಕೊಡಲು ಪ್ರಾರ್ಥಿಸೋಣ ಎಂದರು. ಜಾಗತಿಕವಾಗಿ ನಡೆಯುತ್ತಿರುವ ಹಿಂಸಾಚಾರಕ್ಕೆ ಅವರು ಇದೇ ಸಂದರ್ಭದಲ್ಲಿ ಕಳವಳ ವ್ಯಕ್ತಪಡಿಸಿದರು.

**("ಉದಯವಾಣಿ" – 26 ಡಿಸೆಂಬರ್ 2011)**

## ಶಿಶುಕಾಮಿಗಳಿಗೆ ಶಿಕ್ಷೆ

**ವ್ಯಾಟಿಕನ್** : ಶಿಶುಕಾಮಿ ಧರ್ಮಗುರುಗಳ ಕುಕೃತ್ಯವನ್ನು ಸಂಬಂಧಿಸಿದವರ ಗಮನಕ್ಕೆ ತಂದು ಕಾನೂನು ಕ್ರಮ ಎದುರಿಸುವಂತೆ ಮಾಡಲು, ವ್ಯಾಟಿಕನ್ ಬಿಷಪ್‌ಗಳಿಗೆ ಶಿಶುಕಾಮಿ ವಿರೋಧಿ ಮಾರ್ಗಸೂಚಿಯ ಕುರಿತು ಬರೆದಿರುವ ಪತ್ರದಲ್ಲಿ ಹೇಳಿದೆ. ಜಗತ್ತಿನ ವಿವಿಧೆಡೆಗಳಲ್ಲಿ ಸಂಭವಿಸಿರುವ ಧರ್ಮ ಗುರುಗಳ ಲೈಂಗಿಕ ಹಗರಣಗಳು ಕ್ಯಾಥೋಲಿಕ್ ಚರ್ಚ್‌ಗಳ ಬೇರನ್ನೇ ಅಲ್ಲಾಡಿಸಲು ತೊಡಗಿರುವುದರಿಂದ ವ್ಯಾಟಿಕನ್ ಅಂತಹ ಅಧರ್ಮದಲ್ಲಿ ತೊಡಗಿರುವವರನ್ನು ನಿಯಂತ್ರಿಸಲು ಬಿಶಪ್‌ಗಳಿಗೆ ಮಾರ್ಗಸೂಚಿಯನ್ನು ನೀಡಿದೆ. ಶಿಶುಕಾಮಿ ಧರ್ಮಗುರುಗಳಿಗೆ ಶಿಕ್ಷೆ ವಿಧಿಸುವ ಅಧಿಕೃತರನ್ನು ಗುರುತಿಸುವ ಜವಾಬ್ದಾರಿ ಬಿಷಪರದ್ದು ಎಂದು ಈ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

**("ಉದಯವಾಣಿ" – 17 ಮೇ 2011)**

## ಕರಪತ್ರ ಹಂಚಿಕೆ : ಹತ್ಯೆಗೆ ಪ್ರಚೋದನೆ

**ಇಸ್ಲಾಮಾಬಾದ್** : ಅಲ್ಪಸಂಖ್ಯಾತ ಸಮುದಾಯ ಎಂದೇ ಗುರುತಿಸಿಕೊಂಡಿರುವ ಅಹ್ಮದಿಯಾ ಸಮುದಾಯದ ಸದಸ್ಯರನ್ನು ಹತ್ಯೆ ಮಾಡುವಂತೆ ಹಾಗೂ ಅವರ ಮೇಲೆ ದಾಳಿ ನಡೆಸುವಂತೆ ಜನರನ್ನು ಪ್ರಚೋದಿಸುವ ಕರಪತ್ರಗಳನ್ನು ಪಾಕ್‌ನ ಜವಳಿ ನಗರಿ ಎಂದೇ ಹೆಸರಾದ ಫೈಸಲಾಬಾದ್‌ನಲ್ಲಿ ಬಹಿರಂಗವಾಗಿ ಹಂಚುತ್ತಿರುವ ಸಂಗತಿಯನ್ನು ಮಾಧ್ಯಮಗಳು ವರದಿ ಮಾಡಿವೆ. ಕರಪತ್ರದಲ್ಲಿ ಅಹ್ಮದಿಯಾ ಸಮುದಾಯಕ್ಕೆ ಸೇರಿದ ನಾನಾ ಕೈಗಾರಿಕೋದ್ಯಮಿಗಳು ಮತ್ತು ವೈದ್ಯರ ಹತ್ಯೆಗೆ ಪ್ರಚೋದನೆ ನೀಡುವಂತಹ ಬರಹಗಳಿವೆ ಎಂದು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ಪತ್ರಿಕೆ ಹೇಳಿದೆ.

ಆಲ್ ಪಾಕಿಸ್ತಾನ್ ಸ್ಟೂಡೆಂಟ್ಸ್ ಖತಮ್-ಇ-ನುಬುವತ್ ಫೆಡರೇಶನ್ ಸಂಘಟನೆಯ ಹೆಸರಿನಲ್ಲಿ ಪ್ರಕಟಗೊಂಡಿರುವ ಈ ಕರಪತ್ರಗಳನ್ನು ನಗರದ ಮಳಿಗೆಗಳು ಹಾಗೂ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ವಿತರಿಸಲಾಗುತ್ತಿದೆ. 'ಅಹ್ಮದಿಯಾ ಸಮುದಾಯದವರನ್ನು ಹತ್ಯೆ ಮಾಡುವುದು ಜಿಹಾದ್‌ನ ಒಂದು ಕರ್ತವ್ಯ ಮತ್ತು ಅಂತಹವರ ಹತ್ಯೆಯು ಆಶೀರ್ವಾದದ ಒಂದು ಭಾಗ' ಎಂದು ಕರಪತ್ರ ಹೇಳುತ್ತದೆ.

**("ವಿಜಯಕರ್ನಾಟಕ" – 10 ಜೂನ್ 2011)**

## ಪಾಕ್ : ಅಹಮದಿ ವಿದ್ಯಾರ್ಥಿನಿಯ ಉಚ್ಚಾಟನೆ

**ಇಸ್ಲಾಮಾಬಾದ್** : ತಾಂತ್ರಿಕ ಶಿಕ್ಷಣ ಸಂಸ್ಥೆಯೊಂದರ ಕ್ಯಾಂಪಸ್‌ನಲ್ಲಿ ಅಂಟಿಸಲಾಗಿದ್ದ ಅಹಮದಿ ವಿರೋಧಿ ಪೋಸ್ಟರನ್ನು ಹರಿದು ಹಾಕಿದ ಆಪಾದನೆಯಡಿ ಅಲ್ಪಸಂಖ್ಯಾಕ ಅಹಮದಿ ಸಮುದಾಯಕ್ಕೆ ಸೇರಿದ ಐಟಿ ವಿದ್ಯಾರ್ಥಿನಿಯೋರ್ವಳನ್ನು ಕಾಲೇಜಿನಿಂದ ಉಚ್ಚಾಟಿಸಲಾಗಿದೆ.

ಲಾಹೋರ್‌ನ ಕಾಮ್‌ಸ್ಯಾಟ್ ಇನ್‌ಸ್ಟಿಟ್ಯೂಟ್ ಆಫ್ ಮಾಹಿತಿ ತಂತ್ರಜ್ಞಾನ ವಿದ್ಯಾರ್ಥಿನಿ ರಬಿಯಾ ಸಲೀಂ ವಿರುದ್ಧ ಧರ್ಮನಿಂದನೆ ಆಪಾದನೆ ಹೊರಿಸಲಾಗಿದ್ದು ಆಕೆಯ ಶಿರಚ್ಛೇದ ಮಾಡುವಂತೆ ಹಲವು ಸಹಪಾಠಿಗಳು ಆಗ್ರಹಿಸಿದ್ದಾರೆ.

ಕ್ಯಾಂಪಸ್ ಆವರಣದಲ್ಲಿ ಅಂಟಿಸಲಾಗಿದ್ದ ಅಹಮದಿ ವಿರೋಧಿ ಪೋಸ್ಟರನ್ನು ಸಲೀಂ ಹರಿದು ಹಾಕಿದ ಹಿನ್ನಲೆಯಲ್ಲಿ ಆಕೆಯನ್ನು ಕಾಲೇಜಿನಿಂದ ಉಚ್ಚಾಟಿಸಲಾಗಿದೆ ಎಂದು ಅಹಮದಿ ಟೈಮ್ಸ್ ಡಾಟ್ ಬ್ಲಾಗ್‌ಸ್ಪಾಟ್ ಡಾಟ್ ಕಾಮ್ ತಿಳಿಸಿದೆ. ಅಂತಿಮ ವರ್ಷದ ಅಹಮದಿ ವಿದ್ಯಾರ್ಥಿನಿ ರಬೀಯಾ ಸಲೀಂಳ ಈ ವರ್ತನೆ ಧರ್ಮನಿಂದನೆಗೆ ಸಮನಾಗಿದೆ ಎಂದು ಭಯೋತ್ಪಾದಕ ಸಂಘಟನೆಯ ವಿದ್ಯಾರ್ಥಿ ಘಟಕ "ತಹಾಫುಜ್-ಎ-ಖತಿಮಾ-ಎ-ನುಬುವಾಟ್" ಹೇಳಿದೆ.

**("ಉದಯವಾಣಿ" – 28 ನವೆಂಬರ್ 2011)**

## ಪಾಕ್ ಮಕ್ಕಳಿಗೆ ಹಿಂದು ದ್ವೇಷ ಪಾಠ

**ವಾಷಿಂಗ್ಟನ್ :** ಪಾಕಿಸ್ಥಾನದ ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವ ಪಠ್ಯ ಪುಸ್ತಕಗಳಲ್ಲಿ ಅಲ್ಪಸಂಖ್ಯಾಕ ದ್ವೇಷ ನಿರ್ದಿಷ್ಟವಾಗಿ ಹಿಂದೂ ದ್ವೇಷ ತುಂಬಿದೆ ಮತ್ತು ಶಿಕ್ಷಕರು ಈ ಅಲ್ಪಸಂಖ್ಯಾಕರನ್ನು ಇಸ್ಲಾಮ್‌ನ ವಿರೋಧಿಗಳು ಎಂದು ಬೋಧಿಸುತ್ತಾರೆ ಎನ್ನುತ್ತಿದೆ ಅಮೆರಿಕ ಸರಕಾರದ ಒಂದು ವರದಿ.

ಪಾಕಿಸ್ಥಾನದ ಸಾಮಾಜಿಕ ಅಧ್ಯಯನ ಪಠ್ಯ ಪುಸ್ತಕಗಳಲ್ಲಿ ಭಾರತ ಮತ್ತು ಬ್ರಿಟನ್ ವಿರುದ್ಧ ದ್ವೇಷ ಹುಟ್ಟಿಸುವ ಸಂಗತಿಗಳೇ ತುಂಬಿವೆ. ಹಿಂದೂಗಳ ಬಗ್ಗೆ ಪ್ರತ್ಯೇಕವಾದ ಟೀಕೆಗಳು ಮತ್ತು ಸಂದರ್ಶನಾ ಪ್ರತಿಸ್ಪಂದನಗಳಿವೆ. ಈ ಅಸಹನೆ ಮತ್ತು ಪೂರ್ವಗ್ರಹ ಕ್ರೈಸ್ತ ಮತ್ತು ಅಹ್ಮದಿಗಳಂತಹ ಇತರ ಅಲ್ಪಸಂಖ್ಯಾಕ ಸಮುದಾಯಗಳಿಗೂ ವಿಸ್ತರಿಸಿದೆ. ಅಹ್ಮದಿಗಳು ತಮ್ಮನ್ನು ಮುಸ್ಲಿಮರೆಂದು ಹೇಳಿಕೊಂಡರೂ ಪಾಕಿಸ್ಥಾನದ ಸಂವಿಧಾನ ಅವರಿಗೆ ಮುಸ್ಲಿಮರ ಮಾನ್ಯತೆಯನ್ನು ಕೊಟ್ಟಿಲ್ಲ.

ಇಸ್ಲಾಮ್ ಮೂಲತತ್ವವಾದಿಗಳ ಬೆಂಬಲದಿಂದ ಅಧಿಕಾರದಲ್ಲಿದ್ದ ಜಿಯಾ-ಉಲ್-ಹಕ್ ಕಾಲದಲ್ಲೇ ಪಠ್ಯ ಪುಸ್ತಕಗಳ ಇಸ್ಲಾಮೀಕರಣ ಶುರುವಾಗಿತ್ತು. ಹಿಂದೂಗಳು ಮತ್ತು ಮುಸ್ಲಿಮರು ಶತಮಾನಗಳಿಂದ ಸಹಬಾಳ್ವೆ ಮಾಡುತ್ತಾ ಬಂದಿದ್ದಾರೆಂದು ಇತಿಹಾಸ ಹೇಳುತ್ತಿದ್ದರೂ ಪಠ್ಯ ಪುಸ್ತಕಗಳಲ್ಲಿ ಹಿಂದೂಗಳನ್ನು ಉಗ್ರರು ಮತ್ತು ಇಸ್ಲಾಮ್‌ನ ವಿರೋಧಿಗಳು ಎಂಬಂತೆ ಚಿತ್ರಿಸಲಾಗಿದೆ. ಹಿಂದೂ ಸಮಾಜವನ್ನು ಕ್ರೂರ ಮತ್ತು ಅನ್ಯಾಯಗಾರರು ಮತ್ತು ಇಸ್ಲಾಮ್ ಶಾಂತಿಯ ಮತ್ತು ನ್ಯಾಯದ ಸಂಕೇತ ಎಂದು ಬಣ್ಣಿಸಲಾಗಿದೆ. ಪಾಕಿಸ್ಥಾನದ ಸರಕಾರಿ ಶಾಲೆಗಳಲ್ಲಿ ಮತ್ತು ಖಾಸಗಿ ಮದ್ರಸಗಳಲ್ಲಿ ಬಾಲ್ಯದಿಂದಲೇ ಮಕ್ಕಳಲ್ಲಿ ಅಸಹನೆ ಮತ್ತು ದ್ವೇಷವನ್ನು ತುಂಬುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ.

**("ಉದಯವಾಣಿ" – 10 ನವೆಂಬರ್ 2011)**

## ತಸೀರ್ ಹಂತಕನಿಗೆ ಕ್ಷಮೆ : ಜರ್ದಾರಿಗೆ ಜಮಾತೆ ಆಗ್ರಹ

**ಇಸ್ಲಾಮಾಬಾದ್ :** ಪಂಜಾಬ್ ಗವರ್ನರ್ ಸಲ್ಮಾನ್ ತಸೀರ್‌ನ ಹತ್ಯೆ ನಡೆಸಿರುವುದಾಗಿ ಒಪ್ಪಿಕೊಂಡಿರುವ ಮುಮ್ತಾಜ್ ಖಾದ್ರಿಗೆ ಕ್ಷಮಾದಾನ ನೀಡಲು ತಮ್ಮ ವಿಶೇಷಾಧಿಕಾರ ಬಳಸುವಂತೆ ಪಾಕಿಸ್ಥಾನದ ಮೂಲಭೂತವಾದಿ ಪಕ್ಷ ಜಮಾತೆ ಇಸ್ಲಾಮಿ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರನ್ನು ಆಗ್ರಹಿಸಿದೆ. ಖಾದ್ರಿಗೆ ಕಳೆದ ತಿಂಗಳು ಮರಣದಂಡನೆ ಘೋಷಿಸಲಾಗಿತ್ತು.

ರಾಷ್ಟ್ರೀಯ ಹೊಂದಾಣಿಕೆ ಅಧ್ಯಾದೇಶ (ಎನ್‌ಆರ್‌ಒ)ದಡಿ ಖಾದ್ರಿಗೆ ಕ್ಷಮಾದಾನ ಪ್ರಕಟಿಸುವಂತೆ ಜಮಾತೆ ಇಸ್ಲಾಮಿಯ 'ಶೂರಾ' ಅಥವಾ ಮಂಡಲಿ ನಿರ್ಣಯವೊಂದರಲ್ಲಿ ಜರ್ದಾರಿ ಅವರನ್ನು ಆಗ್ರಹಿಸಿದೆ. ಮಾಜಿ ಮಿಲಿಟರಿ ಆಡಳಿತಗಾರ ಪರ್ವೇಜ್ ಮುಶರ್ರಫ್ ಅವರು ವಿವಿಧ ಕ್ರಿಮಿನಲ್ ಕೇಸುಗಳನ್ನು ಎದುರಿಸುತ್ತಿದ್ದ ಆಳುವ ಪಿಪಿಪಿ ರಾಜಕಾರಣಿಗಳಿಗೆ ಪರಿಹಾರ ಕಲ್ಪಿಸುವ ಸಲುವಾಗಿ ಈ ಶಾಸನ ಜಾರಿಗೆ ತಂದಿದ್ದರು. ವಿವಾದಾತ್ಮಕ ಧರ್ಮನಿಂದೆ ಶಾಸನಕ್ಕೆ ತಸೀರ್ ವ್ಯಕ್ತಪಡಿಸಿದ್ದ ವಿರೋಧದಿಂದ ಆಕ್ರೋಶಕ್ಕೊಳಗಾಗಿದ್ದ ಖಾದ್ರಿ ತಸೀರ್ ಅವರನ್ನು ತಾನು ಹತ್ಯೆಗೈದಿರುವುದಾಗಿ ಭಯೋತ್ಪಾದನೆ ನಿಗ್ರಹ ಕೋರ್ಟ್‌ವೊಂದರಲ್ಲಿ ಒಪ್ಪಿಕೊಂಡಿದ್ದ. ಕೋರ್ಟ್ ಆತನಿಗೆ ಮರಣದಂಡನೆ ವಿಧಿಸಿತ್ತು. ಈ ತೀರ್ಪಿನ ವಿರುದ್ಧ ಆತ ಇಸ್ಲಾಮಾಬಾದ್ ಹೈಕೋರ್ಟ್‌ಗೆ ಮನವಿಯೊಂದನ್ನು ಸಲ್ಲಿಸಿದ್ದಾನೆ.

**("ಉದಯವಾಣಿ" – 24 ಅಕ್ಟೋಬರ್ 2011)**

## ಶಾಲೆಯಲ್ಲಿ ನಮಾಜ್ : ವಿರೋಧ

**ಟೊರಾಂಟೋ :** ಟೊರಾಂಟೋದ ಉಪನಗರ ನಾರ್ತ್ ಯಾರ್ಕ್‌ನ ಶಾಲೆಯೊಂದರಲ್ಲಿ ಶುಕ್ರವಾರದ 'ನಮಾಜ್' ಪ್ರಾರ್ಥನೆಗೆ ಅವಕಾಶ ಮಾಡಿಕೊಟ್ಟಿರುವ ಆಡಳಿತ ಮಂಡಳಿ ಕ್ರಮದ ವಿರುದ್ಧ ಹಿಂದೂ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. 400 ಮಂದಿ ಮುಸ್ಲಿಂ ವಿದ್ಯಾರ್ಥಿಗಳಿರುವ ವ್ಯಾಲಿ ಪಾರ್ಕ್ ಪ್ರಾಥಮಿಕ ಶಾಲೆಯಲ್ಲಿ ಮಧ್ಯಾಹ್ನದ ವೇಳೆಯ ಪ್ರಾರ್ಥನೆಗೆ ಅವಕಾಶ ನೀಡಲಾಗಿತ್ತು.

ಇಮಾಮರಿಂದ ನಡೆಸಲ್ಪಡುವ 40 ನಿಮಿಷಗಳ ಪ್ರಾರ್ಥನೆಯನ್ನು ತತ್‌ಕ್ಷಣವೇ ನಿಲ್ಲಿಸಬೇಕು ಎಂದು ಆಗ್ರಹಿಸಿ ರೋನ್ ಬ್ಯಾನರ್ಜಿ ನೇತೃತ್ವದಲ್ಲಿ ಸ್ಥಳೀಯ ಕೆನಡಿಯನ್ ಹಿಂದೂ ಸಂಘಟನೆಯು ಶಾಲಾ ಆವರಣದಲ್ಲಿ ಪ್ರತಿಭಟನೆ ಹಮ್ಮಿಕೊಂಡಿತ್ತು.

**("ಉದಯವಾಣಿ" – 11 ಜುಲಾಯಿ 2011)**

## ಶಿಶು ಆತ್ಮಾಹುತಿ ಬಾಂಬರ್‌ಗಳ ಬಳಕೆ : ಖಂಡನೆ

**ಕಾಬೂಲ್ :** ಭಯೋತ್ಪಾದಕ ದಾಳಿಯಲ್ಲಿ ಶಿಶು ಆತ್ಮಾಹುತಿ ಬಾಂಬರ್‌ಗಳ ಬಳಕೆಯನ್ನು ಅಫ್ಘಾನ್ ಅಧ್ಯಕ್ಷ ಹಮೀದ್ ಕರ್ಜಾಯಿ ಖಂಡಿಸಿದ್ದಾರೆ. ಭಯೋತ್ಪಾದನೆ ಸಲುವಾಗಿ ಮಕ್ಕಳನ್ನು ಆಯ್ಕೆ ಮಾಡಿಕೊಳ್ಳುವ ಉಗ್ರರು "ಇಸ್ಲಾಂ ವಿರೋಧಿಗಳು" ಹಾಗೂ "ಮಕ್ಕಳ ವಿರೋಧಿಗಳಾಗಿದ್ದಾರೆ" ಎಂದು ಅವರು ಹೇಳಿದ್ದಾರೆ. ಮುಗ್ಧ ಅಫ್ಘನ್ನರನ್ನು ಹತ್ಯೆ ಮಾಡಲು ತಾಲಿಬಾನ್ ಹಾಗೂ ಇತರ ಉಗ್ರ ಸಂಘಟನೆಗಳು ಮಕ್ಕಳನ್ನು ಹೇಗೆ ಆತ್ಮಾಹುತಿ ಬಾಂಬರ್‌ಗಳನ್ನಾಗಿ ಬಳಸಿಕೊಳ್ಳುತ್ತಿವೆ ಎಂಬುದರ ಬಗ್ಗೆ ಅಧ್ಯಕ್ಷರು ತಮ್ಮ ಸಂದೇಶದಲ್ಲಿ ವಿಶ್ಲೇಷಿಸಿದ್ದಾರೆ.

**("ಉದಯವಾಣಿ" – 25 ಆಗಸ್ಟ್ 2011)**

## ಸರ್ಕೋಜಿ ಮನಗೆದ್ದ ಭಾರತದ ಬಾಲೆ



ಬುರ್ಖಾ ನಿಷೇಧ ಕುರಿತು ಭಾರತದ ಹುಡುಗಿಯೊಬ್ಬಳು ಬರೆದ ಪತ್ರ ಫ್ರಾನ್ಸ್ ಅಧ್ಯಕ್ಷರ ಮನ ಗೆದ್ದಿದೆ... ಆಕೆಯನ್ನು ಪ್ಯಾರಿಸ್‌ಗೆ ಆಹ್ವಾನಿಸಲಾಗಿದೆ. ಬುರ್ಖಾ ಪದ್ಧತಿ ನಿಷೇಧಿಸಿ ತಾವು ಹೊರಡಿಸಿರುವ ಆದೇಶ ವಿರೋಧಿಸಿ 16ರ ಪ್ರಾಯದ ಭಾರತದ ಹುಡುಗಿಯೊಬ್ಬಳು ಬರೆದ ಪತ್ರ ಫ್ರಾನ್ಸ್ ಅಧ್ಯಕ್ಷರ ಮನ ತಟ್ಟಿದೆ. ಆ ಹುಡುಗಿಯ ಹೆಸರು ಆಕಾಂಕ್ಷಾ ಗುಪ್ತಾ. ನೊಯ್ಡಾ ಶಾಲೆಯೊಂದರಲ್ಲಿ 11ನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಈಕೆ ಪ್ರಬಂಧ ಸ್ಪರ್ಧೆ ಅಂಗವಾಗಿ ಬರೆದ ಪತ್ರವನ್ನೇ ಫ್ರಾನ್ಸ್ ಅಧ್ಯಕ್ಷ ನಿಕೋಲಸ್ ಸರ್ಕೋಜಿಗೆ ಕಳುಹಿಸಿದ್ದಾಳೆ. ಫ್ರಾನ್ಸ್‌ನಲ್ಲಿ ಬುರ್ಖಾ ವಿರುದ್ಧ ಹೇರಿರುವ ನಿಷೇಧ ಸರಿಯಲ್ಲ ಎಂದು ವಾದಿಸಿ ಆಕಾಂಕ್ಷಾ ಪ್ರಬಂಧ ಬರೆದಿರುವುದುಂಟು. ಆಕೆ ಮಂಡಿಸಿರುವ ಪ್ರಖರ ವಾದಕ್ಕೆ ಮಾರು ಹೋದ ಸರ್ಕೋಜಿ, ವಿಷಯ ಕುರಿತು ಇನ್ನಷ್ಟು ಆಳದ ಚರ್ಚೆ ನಡೆಸಲು ಮುಂದಾಗಿದ್ದಾರೆ. ಆಕಾಂಕ್ಷಗೆ ಆಹ್ವಾನ ಕೂಡ ಕಳುಹಿಸಿದ್ದಾರೆ. ಮುಂಬರುವ ತಿಂಗಳಲ್ಲಿ ಸರ್ಕೋಜಿ–ಆಕಾಂಕ್ಷಾ ಭೇಟಿ ಪ್ಯಾರಿಸ್‌ನಲ್ಲಿ ನಡೆಯಲಿದೆ.

ಅದು ರೂಢಿಯಂತೆ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಾಗಿತ್ತು. ಜಾಗತಿಕ ಸಮಸ್ಯೆಗಳ ಕುರಿತು "ವಿಶ್ವ ನಾಯಕರಿಗೊಂದು ಮನವಿ" ಎನ್ನುವ ವಿಷಯ ನಿಗದಿಯಾಗಿತ್ತು. ಆಗ ಬುರ್ಖಾ ನಿಷೇಧವನ್ನು ನಾನು ಯಾಕೆ ವಿರೋಧಿಸುತ್ತೇನೆ ಎನ್ನುವ ಕುರಿತು ಸರ್ಕೋಜಿಗೆ ಮನವರಿಕೆ ಮಾಡಿಕೊಡುವ ವಿಷಯ ಆಯ್ದುಕೊಂಡೆ' ಎನ್ನುತ್ತಾರೆ ಗುಪ್ತಾ. ಫ್ರಾನ್ಸ್‌ನಲ್ಲಿ ಕಳೆದ ಎಪ್ರಿಲ್‌ನಿಂದ ಸಾರ್ವಜನಿಕ ಸ್ಥಳಗಳಲ್ಲಿ ಬುರ್ಖಾ ಧರಿಸಿ ಓಡಾಡುವುದನ್ನು ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸಿದವರ ವಿರುದ್ಧ ಅಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಸರ್ಕೋಜಿಯ ಈ ಕ್ರಮ ಖಂಡಿಸಿ ವಿಶ್ವಾದ್ಯಂತ ತೀವ್ರ ಪ್ರತಿಭಟನೆ ವ್ಯಕ್ತವಾಗಿತ್ತು. ಇದರಿಂದ ತಮ್ಮ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ ಎಂದು ಮುಸ್ಲಿಂ ನಾಯಕರು ತಕರಾರು ಎತ್ತಿದ್ದರು. "ಮಾನ್ಯ ಸರ್ಕೋಜಿಯವರೇ, ನಾನಿಲ್ಲಿ ಫ್ರಾನ್ಸ್ ಬಗ್ಗೆ ಅಪಸ್ವರ ನುಡಿಯುತ್ತಿಲ್ಲ. ಬದಲಿಗೆ ವಿಶ್ವ ನಾಗರಿಕ ಸಮುದಾಯವನ್ನು ಕಳವಳಕ್ಕೆ ದೂಡಿದ ಸಂಗತಿ ಕುರಿತು ತಮ್ಮೊಂದಿಗೆ ಪ್ರಸ್ತಾವಿಸಬಯಸುವೆ" ಎನ್ನುವ ಸಾಲುಗಳೊಂದಿಗೆ ಪತ್ರ ಶುರು ಮಾಡಿದ್ದಾರೆ. ಬುರ್ಖಾ ವಿಷಯದಲ್ಲಿ ಬೆಲ್ಜಿಯಂ, ನೆದರ್‌ಲ್ಯಾಂಡ್ ಸೇರಿದಂತೆ ಯುರೋಪಿನ ಹಲವು ರಾಷ್ಟ್ರಗಳು ಫ್ರಾನ್ಸ್ ಮಾದರಿಯನ್ನೇ ಅನುಸರಿಸಿದ್ದರ ಬಗ್ಗೆ ಆಕಾಂಕ್ಷಾ ನೆನಪಿಸಿದ್ದಾರೆ. ಇಂತಹ ಕ್ರಮಗಳಿಂದ ಅಂತಿಮವಾಗಿ ಆತಂಕದ ವಾತಾವರಣ ನಿರ್ಮಾಣವಾಗುತ್ತದೆ. ಅದರಿಂದ ಪ್ರಜಾಪ್ರಭುತ್ವದ ಉಸಿರುಗಟ್ಟುತ್ತದೆ ಎಂದು ಪತ್ರ ಮುಕ್ತಾಯಗೊಳಿಸಿದ್ದಾರೆ.

**("ತರಂಗ" ಸಂಪುಟ – 30 ಸಂಚಿಕೆ 1)**

## "ಆತ್ಮಾಹುತಿ ಬಾಂಬ್ ದಾಳಿ ಧರ್ಮಬಾಹಿರ"

**ಇಸ್ಲಾಮಾಬಾದ್ :** ಆತ್ಮಾಹುತಿ ಬಾಂಬ್ ದಾಳಿ ಕಾನೂನುಬಾಹಿರವಾಗಿದ್ದು, ಪ್ರಕ್ಷುಬ್ಧ ಪ್ರಾಂತದಲ್ಲಿ ಅಡಗಿರುವ ಎಲ್ಲಾ ವಿದೇಶಿ ಉಗ್ರರು ಇಂಥ ದಾಳಿಯನ್ನು ನಿಲ್ಲಿಸಬೇಕು ಎಂದು ಪಾಕಿಸ್ಥಾನದ ಉತ್ತರ ವಜೀರಿಸ್ಥಾನದ ಬುಡಕಟ್ಟು ಪ್ರಾಂತದಲ್ಲಿನ ನೂರಾರು ಇಸ್ಲಾಮಿಕ ಧರ್ಮಗುರುಗಳು ಕರೆ ನೀಡಿದ್ದಾರೆ.

ಆತ್ಮಾಹುತಿ ಬಾಂಬ್ ದಾಳಿಯು ಅಕ್ರಮ ಅಥವಾ ಇಸ್ಲಾಮ್ ಧರ್ಮಕ್ಕೆ ವಿರುದ್ಧವಾದುದು ಎಂದು ಸುಮಾರು 300ಕ್ಕೂ ಅಧಿಕ ಧರ್ಮಗುರುಗಳು ಸರ್ವಾನುಮತದ ಘೋಷಣೆ ಹೊರಡಿಸಿದ್ದಾರೆ. ಮಾತ್ರವಲ್ಲದೇ ಉತ್ತರ ವಜೀರಿಸ್ಥಾನದ ಬುಡಕಟ್ಟು ಪ್ರಾಂತದಲ್ಲಿನ ಎಲ್ಲ ಮಾದರಿಯ ಭಯೋತ್ಪಾದಕ ಚಟುವಟಿಕೆಗಳನ್ನು ಖಂಡಿಸಿದ್ದಾರೆ.

ಆತ್ಮಾಹುತಿ ದಾಳಿಕೋರರ ನೇಮಕ ಹಾಗೂ ತರಬೇತಿಯಲ್ಲಿ ಪಾಲ್ಗೊಂಡವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಧರ್ಮಗುರುಗಳು ಇಂಥ ದಾಳಿ ಮುಂದುವರಿದಲ್ಲಿ ಭವಿಷ್ಯದಲ್ಲಿ ಗಂಭೀರ ಪರಿಣಾಮ ಎದುರಿಸಬೇಕಾದೀತು ಎಂದು ಎಚ್ಚರಿಸಿದ್ದಾರೆ ಎಂದು ಜಿಯೋ ನ್ಯೂಸ್ ಚಾನಲ್ ವರದಿ ಮಾಡಿದೆ.

**("ಉದಯವಾಣಿ" – 22 ಜೂನ್ 2011)**

## ಮಸೀದಿಯಲ್ಲಿ ಸಂಭ್ರಮ

**ಲಂಡನ್ :** ರಾಜಕುಮಾರ ವಿಲಿಯಂ ಹಾಗೂ ಕೇಟ್ ಮಿಡ್ಲ್‌ಟನ್ ಅವರ ವಿವಾಹವನ್ನು ಬ್ರಿಟನ್‌ನ ಅತಿ ದೊಡ್ಡ ಹಾಗೂ ಪುರಾತನ ಮಸೀದಿಯ ಸಭಾಂಗಣದಲ್ಲಿ ಶುಕ್ರವಾರ ಸಂಭ್ರಮದಿಂದ ಆಚರಿಸಲಾಯಿತು. ಸ್ಥಳೀಯ ನಿವಾಸಿಗಳು ಹಾಗೂ ಅತಿಥಿಗಳು ಪರಸ್ಪರ 'ಸಲಾಮ್ ಮುಬಾರಕ್' ಹೇಳುತ್ತಾ ಸಂಭ್ರಮಪಟ್ಟರು.

ಸುರ್ರೆಯಲ್ಲಿನ ಬೈತುಲ್ ಫುತು ಮಸೀದಿಯಲ್ಲಿ ನಡೆದ ವಿಲಿಯಂ–ಕೇಟ್ ಮದುವೆಯ ಸಂಭ್ರಮಾಚರಣೆಗೆ ಸ್ಥಳೀಯರನ್ನು ಅಹಮದೀಯ ಮುಸ್ಲಿಂ ಸಮುದಾಯ ಆಹ್ವಾನಿಸಿತ್ತು. 5.2 ಎಕ್ರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಈ ಮಸೀದಿಯಲ್ಲಿ ಏಕಕಾಲಕ್ಕೆ 10,000 ಮಂದಿಗೆ ಆಸನ ವ್ಯವಸ್ಥೆ ಒದಗಿಸಬಹುದಾಗಿದೆ. ಮದುವೆ ಪ್ರಯುಕ್ತ ಮಸೀದಿಯಲ್ಲಿ ಭರ್ಜರಿ ಔತಣಕೂಟವನ್ನು ಆಯೋಜಿಸಲಾಗಿತ್ತು.

1889ರಲ್ಲಿ ಹದ್ರತ್ ಮಿರ್ಜಾ ಗುಲಾಮ್ ಅಹಮದ್ ಅವರಿಂದ ಸ್ಥಾಪಿಸಲ್ಪಟ್ಟಿದ್ದ ಅಹಮದಿಯ ಪಂಥ ಪ್ರಸ್ತುತ ಬ್ರಿಟನ್‌ನಲ್ಲಿ 50,000 ಸದಸ್ಯರನ್ನು ಹೊಂದಿದೆ.

**("ಉದಯವಾಣಿ" – 30 ಎಪ್ರಿಲ್ 2011)**

## "ಪಾಕ್‌ನಿಂದ ಉಗ್ರರ ಪೋಷಣೆ"

**ಪಟ್ನಾ** : ಭಯೋತ್ಪಾದಕರನ್ನು ಬಗ್ಗು ಬಡಿಯಲು ಸಹಕರಿಸಬೇಕೆಂದು ಭಾರತ ಹತ್ತು ಹಲವು ಬಾರಿ ಮನವಿ ಮಾಡಿದರೂ ಅದನ್ನು ಕಿವಿಗೆ ಹಾಕಿಕೊಳ್ಳದೆ ಪಾಕಿಸ್ಥಾನ ಭಯೋತ್ಪಾದಕರಿಗೆ ಪ್ರೋತ್ಸಾಹ ನೀಡುತ್ತಿದೆ. ಉಗ್ರರನ್ನು ಸದೆ ಬಡಿಯುವ ಬದಲು ಅವರಿಗೆ ತರಬೇತಿ ನೀಡಿ ಭಾರತದ ಗಡಿಯೊಳಗೆ ಬಿಡುತ್ತಲಿದೆ ಎಂದು ಭಾರತ ಹೇಳಿದೆ.

'ಈ ವಿಚಾರವಾಗಿ ನಾವು ಪಾಕಿಸ್ಥಾನದೊಂದಿಗೆ ಮತ್ತೆ ಚರ್ಚಿಸಬೇಕಾಗಿದೆ. ಈ ಹಿಂದೆಯೂ ನಾವು ಇದೇ ವಿಚಾರವಾಗಿ ಚರ್ಚಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ' ಎಂದು ಕೇಂದ್ರ ಗೃಹ ಕಾರ್ಯದರ್ಶಿ ಆರ್. ಕೆ. ಸಿಂಗ್ ವರದಿಗಾರರಿಗೆ ಹೇಳಿದರು.

ಗಡಿಯಾಚೆಗಿನ ಉಗ್ರವಾದಕ್ಕೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಅವರು ಈ ಮಾತುಗಳನ್ನು ಹೇಳಿದರು. 'ನಾವು ಉಗ್ರರನ್ನು ತರಬೇತುಗೊಳಿಸುವುದಾಗಲಿ ಅಥವಾ ಪ್ರೋತ್ಸಾಹಿಸುವುದಾಗಲಿ ಮಾಡುತ್ತಿಲ್ಲ ಎಂದು ಪಾಕಿಸ್ಥಾನ ಹೇಳುತ್ತಲೇ ಬಂದಿದೆಯಾದರೂ ಅದು ಉಗ್ರರನ್ನು ತರಬೇತುಗೊಳಿಸಿ ಭಾರತದ ಗಡಿಯೊಳಗೆ ಕಳುಹಿಸುವ ತನ್ನ ಕಾಯಕವನ್ನು ಬಿಟ್ಟಿಲ್ಲ' ಎಂದು ಅವರು ಹೇಳಿದರು.

**("ಉದಯವಾಣಿ" – 7 ನವೆಂಬರ್ 2011)**

## ಬಾಂಗ್ಲಾ : 'ಅಲ್ಲಾ' ವಿಚಾರದಲ್ಲಿ ಘರ್ಷಣೆ

**ಢಾಕಾ** : ಸಂವಿಧಾನಕ್ಕೆ ಇತ್ತೀಚೆಗೆ ತರಲಾದ ತಿದ್ದುಪಡಿಯಲ್ಲಿ 'ಅಲ್ಲಾ' ಹೆಸರನ್ನು ಮರಳಿ ಸೇರಿಸಬೇಕು ಎಂದು ಆಗ್ರಹಿಸಿ ತೀವ್ರಗಾಮಿ ಸಂಘಟನೆ ಜಮಾತ್–ಎ–ಇಸ್ಲಾಮಿ ಕರೆ ನೀಡಿದ್ದ 30 ತಾಸುಗಳ ದೇಶವ್ಯಾಪಿ ಪ್ರತಿಭಟನೆ ವೇಳೆ ವ್ಯಾಪಕ ಹಿಂಸಾಚಾರ ವ್ಯಕ್ತಗೊಂಡಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಬಂದರು ಪಟ್ಟಣ ನಾರಾಯಣಗಂಜ್‌ನ ಸಮೀಪವಿರುವ ಢಾಕಾ – ಚಿತ್ತಗಾಂಗ್ ಹೆದ್ದಾರಿಯಲ್ಲಿ ಬಿದಿರು ದೊಣ್ಣೆ ಹಾಗೂ ಕಲ್ಲುಗಳನ್ನು ಹಿಡಿದು ಮುನ್ನುಗ್ಗಿದ ಬಲಪಂಥೀಯ ಕಾರ್ಯಕರ್ತರನ್ನು ತಡೆಯಲು ಪೊಲೀಸರು ಮುಂದಾದಾಗ ಹಿಂಸಾಚಾರ ಏರ್ಪಟ್ಟಿತು ಎಂದು ಪೊಲೀಸರು ಹೇಳಿದ್ದಾರೆ.

ಸಂವಿಧಾನಕ್ಕೆ ಇತ್ತೀಚೆಗೆ ತರಲಾದ ತಿದ್ದುಪಡಿಯಲ್ಲಿ 'ಕ್ರಿಯೇಟರ್' ಬದಲಿಗೆ 'ಅಲ್ಲಾ' ಹೆಸರನ್ನು ಸೇರಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದ್ದರು. ಈ ಪ್ರತಿಭಟನೆಗೆ ಪ್ರತಿಯಾಗಿ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಕಾರ್ಯಕರ್ತರು ಸಹ ಬೀದಿಗಿಳಿದು ಪ್ರತಿಭಟನೆಗೆ ಮುಂದಾದರಲ್ಲದೇ ಸರಕಾರದ ವಿರುದ್ಧ ಪ್ರತಿಭಟನೆಯಲ್ಲಿ ತೊಡಗಿದ್ದವರನ್ನು ಚದುರಿಸಿ ಓಡಿಸಲು ಪ್ರಯತ್ನಿಸಿದ ಸಂದರ್ಭ ಸಂಘರ್ಷ ಏರ್ಪಟ್ಟಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

**("ಉದಯವಾಣಿ" – 11 ಜುಲಾಯಿ 2011)**

## ಅಮೆರಿಕ : 6 ಮಂದಿಯಲ್ಲೊಬ್ಬ ಬಡವ

**ವಾಷಿಂಗ್ಟನ್** : ಪ್ರತೀ 6 ಮಂದಿಯಲ್ಲಿ ಒಬ್ಬರು ಬಡತನದ ಬೇಗೆಗೆ ಸಿಲುಕುವ ಮೂಲಕ ಅಮೆರಿಕದಲ್ಲಿ ಬಡತನದ ಪ್ರಮಾಣ ಗರಿಷ್ಠ ಮಟ್ಟಕ್ಕೆ ತಲುಪಿದೆ. ಸುದೀರ್ಘಾವಧಿಯ ನಿರುದ್ಯೋಗವು ಲಕ್ಷಾಂತರ ಮಂದಿ ಅಮೆರಿಕನರನ್ನು ನೌಕರಿಗಾಗಿ ಹೋರಾಟ ನಡೆಸುವಂತೆ ಮಾಡಿದೆ. ವಿಮಾರಹಿತರ ಪ್ರಮಾಣ 4.99 ಕೋಟಿಗೆ ತಲುಪಿದ್ದು ಇದು ಕಳೆದೆರಡು ದಶಕಗಳಿಗೆ ಹೋಲಿಸಿದಲ್ಲಿ ಅತ್ಯಧಿಕವೆನಿಸಿದೆ.

**("ಉದಯವಾಣಿ" – 15 ಸೆಪ್ಟೆಂಬರ್ 2011)**

## ಇಟಲಿ : ಬುರ್ಖಾ ನಿಷೇಧ

**ರೋಮ್** : ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರು ಮುಖ ಪರದೆ (ಬುರ್ಖಾ) ಧರಿಸುವುದನ್ನು ನಿಷೇಧಿಸುವ ಕರಡು ಶಾಸನವನ್ನು ಇಟಲಿಯ ಸಂಸದೀಯ ಸಮಿತಿ ಗುರುವಾರ ಅನುಮೋದಿಸಿದೆ.

ಸಾಂವಿಧಾನಿಕ ವ್ಯವಹಾರಗಳ ಸಮಿತಿ ಅನುಮೋದಿಸಿದ ಕರಡು ಶಾಸನದ ಅನ್ವಯ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಮುಖ ಮುಚ್ಚುವ ಬುರ್ಖಾ ಧರಿಸುವುದನ್ನು ನಿಷೇಧಿಸಲಗಿದೆ. ದಶಕಗಳ ಹಿಂದೆ ಭದ್ರತೆ ದೃಷ್ಟಿಯಿಂದ ಸಾರ್ವಜನಿಕ ಸ್ಥಳಗಳಲ್ಲಿ ಜನತೆ ಮುಖವಾಡ ಧರಿಸಿ ಓಡಾಡುವುದನ್ನು ಸರಕಾರ ನಿರ್ಬಂಧಿಸಿತ್ತು.. ನೂತನ ಶಾಸನವು ಈ ಕಾಯ್ದೆಯ ಮುಂದುವರಿದ ಭಾಗವಾಗಿದೆ.

ನೂತನ ಶಾಸನವನ್ನು ಉಲ್ಲಂಘಿಸುವ ಮಹಿಳೆಗೆ 100 ಯೂರೋಗಳಿಂದ 300 ಯೂರೋಗಳಷ್ಟು ದಂಡ ವಿಧಿಸಬಹುದಾಗಿದೆ.

ಬುರ್ಖಾ ಧರಿಸುವಂತೆ ಮಹಿಳೆಗೆ ಬಲವಂತ ಪಡಿಸುವ ಮೂರನೇ ವ್ಯಕ್ತಿಗೆ 30,000 ಯೂರೋ ದಂಡ ಹಾಗೂ 12 ತಿಂಗಳ ಜೈಲು ಶಿಕ್ಷೆ ವಿಧಿಸಬಹುದಾಗಿದೆ.

ಫ್ರಾನ್ಸ್ ಹಾಗೂ ಬೆಲ್ಜಿಯಂನಲ್ಲಿ ಈಗಾಗಲೇ ಬುರ್ಖಾ ಧರಿಸುವುದನ್ನು ನಿಷೇಧಿಸಲಾಗಿದ್ದು, ಪ್ರಸ್ತುತ ಈ ದೇಶಗಳ ಸಾಲಿಗೆ ಇಟಲಿ ಕೂಡ ಸೇರ್ಪಡೆಗೊಂಡಿದೆ.

**("ಉದಯವಾಣಿ" – ಆಗಸ್ಟ್ 2011)**

ಎಂ. ಎಫ್. ಹುಸೇನ್ ಅವರು ಮುಸ್ಲಿಂ ಎಂಬ ಕಾರಣದಿಂದಲೇ ಅವರು ರಚಿಸಿದ ನಗ್ನಚಿತ್ರಗಳು ಆಕ್ಷೇಪಕ್ಕೆ ಗುರಿಯಾದವು. ಅದೇ ಕೆಲಸವನ್ನು ನಾನು ಮಾಡಿದ್ದರೆ ಯಾರೂ ಪ್ರಶ್ನಿಸುತ್ತಿರಲಿಲ್ಲ.

– ಎಸ್. ಜಿ. ವಾಸುದೇವ್ (ಖ್ಯಾತ ಕಲಾವಿದ)

("ಉದಯವಾಣಿ" – 19 ಜೂನ್ 2011)

## ಅಫ್ಘಾನ್ : ಕಲ್ಲು ತೂರಿ ತಾಲಿಬಾನ್ ಕಮಾಂಡರ್‌ನ ಹತ್ಯೆ

**ವಾಷಿಂಗ್ಟನ್ :** ತಮ್ಮ ವಿಚಾರಧಾರೆಗಳನ್ನು ಒಪ್ಪದ ಬಡಜನರನ್ನು ಕಲ್ಲು ಹೊಡೆದು ಸಾಯಿಸುವ ತಾಲಿಬಾನಿಗಳ ಹೇಯಕೃತ್ಯ ಅಫ್ಘಾನ್‌ನಲ್ಲಿ ಅವರಿಗೇ ತಿರುಗುಬಾಣವಾಗಿ ಪರಿಣಮಿಸಿದೆ. ಗ್ರಾಮದ ಹಿರಿಯ ವ್ಯಕ್ತಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದ ಸಂಘಟನೆಯ ಹಿರಿಯ ಕಮಾಂಡರ್ ಹಾಗೂ ಆತನ ಅಂಗರಕ್ಷಕನನ್ನು ಆಕ್ರೋಶಿತ ಸ್ಥಳೀಯ ಗ್ರಾಮಸ್ಥರು ಕಲ್ಲು ಹೊಡೆದು ಭೀಕರವಾಗಿ ಹತ್ಯೆ ಮಾಡಿದ್ದಾರೆ.

ಟ್ರೆಕ್ ಜಬೇರ್ ಗ್ರಾಮದ ಮಸೀದಿಯೊಂದರ ಬಳಿ ಪವಿತ್ರ ತಿಂಗಳು ರಂಜಾನ್ ಉಪವಾಸ ಮುರಿದು ಇಫ್ತಿಯಾರ್ ಕೂಟಕ್ಕಾಗಿ ಕಾಯುತ್ತಿದ್ದ ಯಾರ್ ಮೊಹಮ್ಮದ್ ಮತ್ತಾತನ ಇಬ್ಬರು ಮಕ್ಕಳ ಮೇಲೆ ದ್ವಿಚಕ್ರ ವಾಹನದಲ್ಲಿ ಆಗಮಿಸಿದ ತಾಲಿಬಾನಿ ಉಗ್ರರು ಗುಂಡು ಹಾರಿಸಿದರು. ಘಟನೆಯಲ್ಲಿ ಮೊಹಮ್ಮದ್ ಸ್ಥಳದಲ್ಲಿಯೇ ಸಾವನ್ನಪ್ಪಿದ. ಕಣ್ಣೆದುರೇ ತಂದೆ ಸಾವನ್ನಪ್ಪಿದ್ದನ್ನು ನೋಡಿದ ಮಕ್ಕಳು ಹಾಗೂ ಗ್ರಾಮದ ಇತರರು ಉಗ್ರರಿಗೆ ಕಲ್ಲು ಹೊಡೆದು ಸಾಯಿಸಿದರು.

("ಉದಯವಾಣಿ" – 24 ಆಗಸ್ಟ್ 2011)

## ಕಾಶ್ಮೀರದಲ್ಲಿ ಕ್ರಿಸ್ತನ ಸಮಾಧಿ : ಮತ್ತೆ ವಿವಾದ

ಇಲ್ಲಿನ ಹೆಸರಾಂತ ಪ್ರವಾಸಿ ತಾಣ ರೋಜ್‌ಬಾಲ್ ದೇಗುಲದಲ್ಲಿರುವ ಸಮಾಧಿ ಯೇಸು ಕ್ರಿಸ್ತನದೇ? ಅಥವಾ ಈಗ ನಂಬಲಾಗಿರುವಂತೆ ಸೂಫಿ ಸಂತ ಯೂಜ್ ಅಸಫ್ ಅವರದೇ?

ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದ ನಂತರವೂ ಆತ ಬದುಕುಳಿದ. ಕಾಶ್ಮೀರ ಪ್ರವಾಸದಲ್ಲಿದ್ದಾಗ ಆತ ಮೃತಪಟ್ಟಿದ್ದ. ಆಗ ಆತನನ್ನು ಶ್ರೀನಗರದ, ಈಗ ರೋಜಾಬಾಲ್ ದೇಗುಲ ಇರುವ ಜಾಗದಲ್ಲಿಯೇ ಹೂಳಲಾಯಿತು ಎನ್ನುತ್ತವೆ ಈ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ದಂತಕಥೆಗಳು. ನ್ಯೂಯಾರ್ಕ್ ಮೂಲದ ಲೇಖಕಿ ಸಲೂಜಾನ್ನೆ ಒಲ್ಸನ್ ಈ ಸಮಾಧಿಯನ್ನು ಅಗೆಯಲು ಯತ್ನಿಸಿದರೆನ್ನಲಾದ ಘಟನೆಯ ನಂತರ ಈ ದಂತಕಥೆಗಳಿಗೆ ಜೀವ ಬಂದಿದೆ. 'ನಮ್ಮ ಕುಟುಂಬದ ಮೂಲ ಫ್ರಾನ್ಸ್. ಯೇಸು ಕ್ರಿಸ್ತ ಹಾಗೂ ಆತನ ಪತ್ನಿ ಮೇರಿ ಮ್ಯಾಗ್ಡಲೀನ್, ಅಲ್ಲಿ ಶಿಲುಬೆಗೆ ಏರಿಸಿದ ನಂತರ 30 ವರ್ಷ ನೆಲೆಸಿದ್ದರು. ಅವರಿಗೆ ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದರು. ಅವರಲ್ಲಿ ಒಬ್ಬ ಪುತ್ರನ ವಂಶಸ್ಥರು ನಾವಾಗಿದ್ದೇವೆ. ನೀವು ನಮ್ಮ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾದರೆ ಸರ್ ಲಾರೆನ್ಸ್ ಗಾರ್ಡ್ನರ್ ಬರೆದಿರುವ ಬ್ಲಡ್‌ಲೈನ್ ಆಫ್ ದಿ ಗ್ರೇಲ್ ಪುಸ್ತಕ ಓದಿ' ಎಂದು ದೇಗಲದ ಆಡಳಿತ ಮಂಡಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ ಒಲ್ಸನ್. ಅಷ್ಟೇ ಅಲ್ಲ, ನಿಮ್ಮ ವಾದ ಏನೇ ಇದ್ದರೂ ಅದಕ್ಕೆ ಮಾನ್ಯತೆ ಇಲ್ಲ. ನಾವು ನಮ್ಮ ತಾತನನ್ನು ಶ್ರೀನಗರದಿಂದ ಹೊತ್ತೊಯ್ಯಲು ಬಯಸುತ್ತೇವೆ ಎಂದೂ ಆಕೆ ಸವಾಲು ಹಾಕಿದ್ದಾರೆ. ಯೇಸು ಕ್ರಿಸ್ತ, ಶ್ರೀನಗರ ಬಳಿ ಇರುವ ಬೌದ್ಧ ಧರ್ಮದ ಆಶ್ರಮಕ್ಕೂ ಭೇಟಿ ನೀಡಿದ್ದನಂತೆ. 19ನೇ ಶತಮಾನದಲ್ಲಿ ಇಸ್ಲಾಂ, ಬೌದ್ಧ ಹಾಗೂ ಕ್ರೈಸ್ತ ಧರ್ಮಗಳ ವಿದ್ವಾಂಸರು ಬರೆದಿರುವ ಹಲವು ಕೃತಿಗಳು ಈ ಭೇಟಿಯನ್ನು ಒಪ್ಪಿಕೊಂಡಿವೆ. ಕ್ರೈಸ್ತ, ಬೌದ್ಧ ಧರ್ಮದ ಕೆಲವು ವಿಚಾರಗಳನ್ನೂ ತನ್ನ ಧರ್ಮದಲ್ಲಿ ಅಳವಡಿಸಿಕೊಂಡ ಎಂಬ ವಾದವೂ ಇದೆ.

("ವಿಜಯಕರ್ನಾಟಕ" – 10 ಮೇ 2010)

## ಜೀಸಸ್ ಕ್ರಿಸ್ತ ಮೃತಪಟ್ಟಿದ್ದು ಕಾಶ್ಮೀರದಲ್ಲಿ

**ಜಮ್ಮು :** ಭಾರತದ ಕಾಶ್ಮೀರದಲ್ಲಿ ಜೀಸಸ್ ಕ್ರಿಸ್ತನ ಸಮಾಧಿ ಇದೆ ಎಂದು ಭಾರತೀಯ ಫಿಲಂಸ್ ಡಿವಿಷನ್ ನಿರ್ಮಿಸಿರುವ ಚಿತ್ರವೊಂದು ಪ್ರತಿಪಾದಿಸಿದೆ.

ಒಂದು ಗಂಟೆ ಕಾಲಾವಧಿಯ ಈ ಚಿತ್ರವನ್ನು ಕೇರಳದ 4ನೇ ಅಂತಾರಾಷ್ಟ್ರೀಯ ಡಾಕ್ಯುಮೆಂಟರಿ ಮತ್ತು ಕಿರುಚಿತ್ರ ಪ್ರದರ್ಶನದಲ್ಲಿ ಪ್ರದರ್ಶಿಸಲಾಯಿತು. ಬೌದ್ಧ ಧರ್ಮ ಜನ್ಮ ತಾಳಲು ಜೀಸಸ್ ಕ್ರಿಸ್ತ ಪ್ರಮುಖ ಪಾತ್ರವಹಿಸಿದರು ಎಂಬ ಮಹತ್ವದ ಮಾಹಿತಿಯನ್ನೂ ಚಿತ್ರದಲ್ಲಿ ತೋರಿಸಲಾಗಿದೆ. ಈ ಚಿತ್ರವನ್ನು ಯತೇಂದ್ರ ಪ್ರಸಾದ್ ಎಂಬವರು ನಿರ್ದೇಶಿಸಿದ್ದಾರೆ. ಚಿತ್ರದ ಬಗ್ಗೆ ಮಾತನಾಡಿದ ಯತೇಂದ್ರ ಪ್ರಸಾದ್, "ಕಾಶ್ಮೀರದಲ್ಲಿ ಕ್ರಿಸ್ತ ಕಳೆದ ಕೊನೆಯ ದಿನಗಳ ಬಗ್ಗೆ ನನ್ನ ಚಿತ್ರ ಬೆಳಕು ಚೆಲ್ಲುತ್ತದೆ" ಎಂದಿದ್ದಾರೆ.

"ಪಾಲಿ, ಸಂಸ್ಕೃತ ಹಾಗೂ ಅರೇಬಿಕ್ ಭಾಷೆಗಳಲ್ಲಿ ದೊರೆತಿರುವ ಐತಿಹಾಸಿಕ ದಾಖಲೆಗಳಲ್ಲಿ ಪ್ರವಾದಿ ಯುಝ್ ಅಸಫ್ ಅವರನ್ನು ಇಲ್ಲೇ ಮಣ್ಣು ಮಾಡಲಾಯಿತು. ಅವರು ಬೇರಾರೂ ಅಲ್ಲ ಜೀಸಸ್ ಕ್ರಿಸ್ತ" ಎಂದವರು ವಿವರಿಸಿದ್ದಾರೆ. "ಜೀಸಸ್ ಅವರನ್ನು ಹತ್ಯೆ ಮಾಡಿ ಶಿಲುಬೆಗೇರಿಸಿಲ್ಲ. ಅವರು ಪ್ಯಾಲೆಸ್ತೀನ್‌ನಿಂದ ಭಾರತಕ್ಕೆ ಬಂದರು. ಪ್ರವಾದಿಗಳು ಸಮಾಜವನ್ನು ಒಡೆಯಲಿಲ್ಲ. ಅದನ್ನು ಒಂದು ಮಾಡಲು ಪ್ರಯತ್ನಿಸಿದರು ಎಂಬ ಸಂದೇಶ ಸಾರುತ್ತದೆ" ಎಂದಿದ್ದಾರೆ ಅವರು.

("ಕರಾವಳಿ ಅಲೆ" – 4 ಆಗಸ್ಟ್ 2011)

## ಟೋನಿ ಬ್ಲೇರ್ ಕುರಾನ್ ಪಠನ

**ಲಂಡನ್** : ಅನ್ಯ ಧರ್ಮಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿರುವ ಬ್ರಿಟನಿನ ಮಾಜಿ ಪ್ರಧಾನಿ ಟೋನಿ ಬ್ಲೇರ್ ಅವರು ಪ್ರಸ್ತುತ ಪ್ರತಿನಿತ್ಯ ಕುರಾನ್‌ನ್ನು ಒದುತ್ತಿದ್ದಾರೆ.

2007ರಲ್ಲಿ ನಂ. 10, ಡೌನಿಂಗ್ ಸ್ಟ್ರೀಟ್ ತ್ಯಜಿಸಿದ್ದ ಕ್ಯಾಥೊಲಿಕ್ ಮತಕ್ಕೆ ಮತಾಂತರ ಹೊಂದಿದ್ದ ಬ್ಲೇರ್ ವಾಸ್ತವವಾಗಿ ಧರ್ಮದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿಲ್ಲ ಎಂದು ಈ ಹಿಂದೆ ವರದಿಯಾಗಿತ್ತು. ಪ್ರಸ್ತುತ ನಂಬಿಕೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಪಡೆಯುವ ಸಲುವಾಗಿ ಲೇಬರ್ ಪಕ್ಷದ ಮಾಜಿ ನಾಯಕ ಬ್ಲೇರ್ ಅವರು ಪ್ರತಿನಿತ್ಯ ಮುಸ್ಲಿಮರ ಪವಿತ್ರ ಗ್ರಂಥ ಕುರಾನನ್ನು ಓದುತ್ತಿದ್ದಾರೆ ಎಂದು ಡೈಲಿ ಮೇಲ್ ಹೇಳಿದೆ. ವಿಶ್ವದಲ್ಲಿ ಧಾರ್ಮಿಕ ನಂಬಿಕೆಗಳ ಮೇಲೆ ವಿಶ್ವಾಸ ಇರಿಸುವುದು ಮಹತ್ವದ ವಿಷಯವಾಗಿದೆ. ತಾನದನ್ನು ಅರಿತುಕೊಂಡಿದ್ದೇನೆ, ಹೀಗಾಗಿಯೇ ಪ್ರತಿನಿತ್ಯ ಕುರಾನನ್ನು ಓದುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ.

("ಉದಯವಾಣಿ" – 15 ಜೂನ್ 2011)

## ರಾಮಾಯಣ

ವಾಲ್ಮೀಕಿ ಮಹರ್ಷಿಯು ರಾಮಾಯಣವನ್ನು ಬರೆದ ಅನಂತರ ಇದುವರೆಗೆ ಅದು 300ಕ್ಕೂ ಅಧಿಕ ಪಾಠಾಂತರಗಳನ್ನು ಕಂಡಿದೆ. ಇದು ಬಹಿರಂಗ ಸತ್ಯ. ಮೂಲರೂಪದಲ್ಲಿ ವಾಲ್ಮೀಕಿ ರಾಮಾಯಣವು ಸುಮಾರು 50,000 ಸಾಲುಗಳನ್ನು ಒಳಗೊಂಡಿದ್ದು ಅದನ್ನು ಏಳು ಕಾಂಡಗಳಾಗಿ ವಿಂಗಡಿಸಲಾಗಿದೆ. ರಾಮಾಯಣದಂತಹ ಪ್ರಮುಖ ಕೃತಿಯೊಂದು ಪ್ರಾದೇಶಿಕ ಮೌಲ್ಯಗಳನ್ನು ಪ್ರತಿಬಿಂಬಿಸುವಂತಹ ರೀತಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಕಂಡು ಶತಮಾನಗಳಿಂದೀಚೆಗೆ ಬೇರೆ ಬೇರೆ ಖಂಡಗಳಿಗೆ ತೆರಳಿ ಸುತ್ತಾಡಿದೆ. ಹಾಗೆ ಸುತ್ತಾಡುವಾಗ ಅದು ತನ್ನ ಮೂಲರೂಪವನ್ನೇ ಉಳಿಸಿಕೊಳ್ಳುವುದು ಅಸಾಧ್ಯದ ಮಾತು. ರಾಮಾಯಣವು ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿದೆ. ಬೌದ್ಧ ರಾಮಾಯಣ ಹಾಗೂ ಜೈನ ರಾಮಾಯಣಗಳೂ ಪ್ರಚಲಿತದಲ್ಲಿವೆ. ಅವುಗಳ ಮೂಲ ರಾಮಾಯಣಕ್ಕಿಂತ ಬಹಳಷ್ಟು ವ್ಯತ್ಯಾಸವನ್ನು ಹೊಂದಿವೆ. ಅವುಗಳನ್ನು ನಾವು ಒಪ್ಪಿಕೊಳ್ಳುವ ಅವಶ್ಯಕತೆಯೇನೂ ಇಲ್ಲ. ಇಂಡೋನೇಷ್ಯಾ, ಥ್ಯಾಲಂಡ್, ಲಾವೋಸ್ ಮತ್ತಿತರ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲೂ ರಾಮಾಯಣವನ್ನು ಬರೆಯಲಾಗಿದ್ದು ಅದು ವಾಲ್ಮೀಕಿಯು ಬರೆದ ರಾಮಾಯಣಕ್ಕಿಂತ ವಿಭಿನ್ನವಾಗಿದೆ. ಅದನ್ನೂ ನಾವು ಗಂಭೀರವಾಗಿ ಪರಿಗಣಿಸಬೇಕಾಗಿಲ್ಲ. – **ಎಂ. ವಿ. ಕಾಮತ್**.

("ಉದಯವಾಣಿ" – 4 ಡಿಸೆಂಬರ್ 2011)

## ಠಾಕ್ರೆ ಮೊಮ್ಮಗಳ ಮದುವೆ ಮುಸ್ಲಿಂ ಜತೆ!

**ಮುಂಬಯಿ** : ಹಿಂದೂ ಸಂಸ್ಕೃತಿಯ ರಕ್ಷಕನೆಂದು ಸ್ವಯಂ ಘೋಷಣೆ ಮಾಡಿಕೊಂಡಿರುವ, ಮುಸ್ಲಿಮರ ಬಗ್ಗೆ ಸದಾ ಕಿಡಿಕಾರುವ ಶಿವಸೇನೆಯ ಪರಮೋಚ್ಚನಾಯಕ ಬಾಳಾ ಠಾಕ್ರೆಯ ಮೊಮ್ಮಗಳು ಮುಸ್ಲಿಂ ಯುವಕನನ್ನು ಮದುವೆಯಾಗಿದ್ದಾಳೆ.

ಬಾಳಾ ಠಾಕ್ರೆಯ ಹಿರಿಯ ಮಗ ದಿವಂಗತ ಬಿಂದು ಮಾಧವ ಅವರ ಪುತ್ರಿ ನೇಹಾ ಗುಜರಾತಿ ಮುಸ್ಲಿಂ ಯುವಕ ಮನ್ನನ್ ಎಂಬಾತನ ಕೈಹಿಡಿದಿದ್ದಾಳೆ. ಕಳೆದ ರವಿವಾರ ಮುಂಬೈನ ಹೊಟೇಲ್ ತಾಜ್ ಲಾಂಡ್ಸ್ ಎಂಡ್‌ನಲ್ಲಿ ಮದುವೆ ನಡೆದಿದೆ ಎಂದು ಕೆಲ ಪತ್ರಿಕೆಗಳು ವರದಿ ಮಾಡಿವೆ.

ಮನ್ನನ್‌ನ ತಂದೆ, ಬಿಂದುಮಾಧವ ಹಾಗೂ ಮಹಾರಾಷ್ಟ್ರ ನವನಿರ್ಮಾಣ ಸೇನೆ ನಾಯಕ ರಾಜ್ ಠಾಕ್ರೆಗೆ ಹಳೆಯ ಸ್ನೇಹಿತ. ಬಾಳಾ ಠಾಕ್ರೆ ಈ ಮದುವೆಗೆ ಬಂದಿರಲಿಲ್ಲ. ನೇಹಾಳ ತಾಯಿ ಮಾಧವಿ ಠಾಕ್ರೆ ಅತಿಥಿ ಸತ್ಕಾರ ಮಾಡಿದರು. ಮದುವೆಗೆ ರಾಜ್ ಠಾಕ್ರೆ ಕುಟುಂಬ, ಮನೋಹರ ಜೋಶಿ, ರಾಮ ಕದಮ್ ಮುಂತಾದವರು ಆಗಮಿಸಿದ್ದರು. ಠಾಕ್ರೆಯ ಮಗ ಉದ್ಧವ್ ಕೂಡ ಆಗಮಿಸಿದ ಬಗ್ಗೆ ಮಾಹಿತಿಯಿಲ್ಲ ಎಂದು ವರದಿ ಹೇಳಿದೆ.

("ಉದಯವಾಣಿ" – 11 ಡಿಸೆಂಬರ್ 2011)

## ಪಾಕ್ : ಉಪವಾಸ ಮುರಿದ 25 ಮಂದಿ ಬಂಧನ

**ಇಸ್ಲಾಮಾಬಾದ್** : ಇಸ್ಲಾಮಿಕ್ ಪವಿತ್ರ ಮಾಸ ರಂಜಾನ್ ಅವಧಿಯಲ್ಲಿ ಸಾರ್ವಜನಿಕವಾಗಿ ಆಹಾರ ಸೇವಿಸಿದ ಆಪಾದನೆಯಡಿ ಸೆಂಟ್ರಲ್ ಪಂಜಾಬ್ ಪ್ರಾಂತ್ಯದ 25 ಮಂದಿಯನ್ನು ಪಾಕ್ ಸರಕಾರ ಬಂಧಿಸಿ ಜೈಲಿಗೆ ಕಳುಹಿಸಿದೆ. ಎಹ್‌ತೆರಾಮ್-ಇ-ರಂಜಾನ್ ಅಧ್ಯಾದೇಶವನ್ನು ಉಲ್ಲಂಘಿಸಿದ ಆಪಾದನೆಯಡಿ ಫೈಸಲಾಬಾದ್ ನಗರದಲ್ಲಿ ಇವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಆಹಾರ ಸೇವಿಸುವವರನ್ನು ಪತ್ತೆ ಹಚ್ಚಿ ಬಂಧಿಸಲು ವಿಶೇಷ ಪಡೆಯೊಂದನ್ನು ರಚಿಸಲಾಗಿದೆ. ಈ ತಂಡವು ನಗರದ ವಿವಿಧೆಡೆ ದಾಳಿ ನಡೆಸಿ ಸಾರ್ವಜನಿಕವಾಗಿ ಆಹಾರ ಸೇವನೆ ಹಾಗೂ ಪಾನೀಯ ಕುಡಿಯುತ್ತಿದ್ದ 25 ಮಂದಿಯನ್ನು ಬಂಧಿಸಿದೆ. ಬಂಧಿತರಿಗೆ 72 ತಾಸುಗಳ ಜೈಲು ಶಿಕ್ಷೆ ವಿಧಿಸಲಾಗಿದೆ ಎಂದು ನಗರ ಜಿಲ್ಲಾ ಸರಕಾರದ ವಕ್ತಾರರು ಹೇಳಿದ್ದಾರೆ.

ರಂಜಾನ್ ತಿಂಗಳ ಪಾವಿತ್ರತ್ಯೆಯನ್ನು ಕಾಪಾಡುವ ನಿಟ್ಟಿನಲ್ಲಿ ರಂಜಾನ್ ಉಪವಾಸದ ಅವಧಿಯಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಆಹಾರ ಹಾಗೂ ಪಾನೀಯ ಸೇವನೆ ಮತ್ತು ಧೂಮಪಾನವನ್ನು ನಿಷೇಧಿಸಿ ಪಾಕ್ ಸರಕಾರ ಆದೇಶ ಹೊರಡಿಸಿತ್ತು. ಈ ಆದೇಶವು ರಂಜಾನ್ ತಿಂಗಳಲ್ಲಿ ಮಾತ್ರ ಅನ್ವಯವಾಗಲಿದ್ದು, ಸೇನಾ ಸರ್ವಾಧಿಕಾರಿ ಜಿಯಾ ಉಲ್ ಹಕ್ ಕಾಲದಿಂದ ಜಾರಿಯಲ್ಲಿದೆ.

("ಉದಯವಾಣಿ" – 6 ಆಗಸ್ಟ್ 2011)

# “ಯುಗರಶ್ಮಿ”ಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಸನ್ಮಾನ



ಕರ್ನಾಟಕ ರಾಜ್ಯದಲ್ಲಿ ಎರಡು ದಶಕಗಳನ್ನು ಪೂರೈಸಿ ಮುನ್ನಡೆಯುತ್ತಿರುವ ಸುಮಾರು 70 ಪತ್ರಿಕೆಗಳನ್ನು ಗುರುತಿಸಿ ಸಂಪಾದಕರನ್ನು ಸನ್ಮಾನಿಸುವ ಕಾರ್ಯಕ್ರಮ ನವೆಂಬರ್ 28ರಂದು ಬೆಂಗಳೂರಿನಲ್ಲಿ ನಡೆಯಿತು.

“ಯುಗರಶ್ಮಿ” ತ್ರೈಮಾಸಿಕ 1975ರಲ್ಲಿ ಮುಹಮ್ಮದ್ ಯೂಸುಫ್‌ರವರ ಸಂಪಾದಕತ್ವದಲ್ಲಿ ಆರಂಭವಾಗಿದ್ದು, ದೇವಾನುಗ್ರಹದಿಂದ ಮೂರು ದಶಕಗಳನ್ನು ಪೂರೈಸಿ ಮುನ್ನಡೆಯುತ್ತಿರುವ, ಇಸ್ಲಾಮ್ ಧರ್ಮವನ್ನು ಪ್ರತಿಪಾದಿಸುವ ಹಿರಿಯ ಪತ್ರಿಕೆಯಾಗಿದೆ.

ಕರ್ನಾಟಕ ಸರ್ಕಾರ

## ಕರ್ನಾಟಕ ಮಾಧ್ಯಮ ಅಕಾಡೆಮಿ

ಬೆಂಗಳೂರು

## ಸರ್ಟಿಫಿಕೇಟ್

ರಾಜ್ಯದಲ್ಲಿ ಎರಡು ದಶಕಗಳನ್ನು ಪೂರೈಸಿ ಮುನ್ನಡೆಯುತ್ತಿರುವ ಪತ್ರಿಕೆಗಳನ್ನು ಗುರುತಿಸುವ ಮೂಲಕ ಕರ್ನಾಟಕ ಮಾಧ್ಯಮ ಅಕಾಡೆಮಿಯು **ಯುಗರಶ್ಮಿ** ~~ದಿನ/ಸಂಜೆ/ವಾರ/ಪಾಕ್ಷಿಕ/ಮಾಸ~~/ತ್ರೈಮಾಸಿಕ ಪತ್ರಿಕೆ ಮಂಗಳೂರು, ಈ ಪತ್ರಿಕೆಗೆ 2011ರಲ್ಲಿ ಗೌರವಿಸಿ ಸನ್ಮಾನಿಸಲಾಗಿದೆ.

ಡಿ.ಪಿ. ಪರಮೇಶ್ವರ
ಅಧ್ಯಕ್ಷರು
ಕರ್ನಾಟಕ ಮಾಧ್ಯಮ ಅಕಾಡೆಮಿ

ಹಮೀದ್ ಖಾನ್
ಕಾರ್ಯದರ್ಶಿ
ಕರ್ನಾಟಕ ಮಾಧ್ಯಮ ಅಕಾಡೆಮಿ

ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001

# ಅಹ್ಮದಿಯಾ ಖಲೀಫರಿಂದ ಪೋಪ್‌ರಿಗೆ ಸಂದೇಶ



ಪೋಪ್ 16ನೇ ಬೆನೆಡಿಕ್ಟ್ ಅವರ ಆಹ್ವಾನದ ಮೇರೆಗೆ ಕಳೆದ ನವೆಂಬರ್ 11ರಂದು ಧಾರ್ಮಿಕ ನೇತಾರರ ಒಂದು ತಂಡ ಅವರನ್ನು ಭೇಟಿಯಾಗಿತ್ತು. ಆ ತಂಡದಲ್ಲಿ ಕಬಾಬೀರ್‌ನ ಅಹ್ಮದಿಯಾ ಅಮೀರ್ ಶರೀಫ್ ಔಧೇ ಸಾಹೇಬರು ಇದ್ದರು. ಅವರು ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ ಪವಿತ್ರ ಖುರ್‌ಆನಿನ ಇಟೆಲಿಯನ್ ಅನುವಾದ ಮತ್ತು ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರ ಒಂದು ಸಂದೇಶವನ್ನು ಪೋಪ್‌ರಿಗೆ ನೀಡಿದರು. ಆ ಸಂದೇಶದ ಸಂಕ್ಷಿಪ್ತ ರೂಪ ಹೀಗಿದೆ:

"ಹೇಳು : 'ಎಲೈ ಗ್ರಂಥದವರೇ, ನಮಗೂ ನಿಮಗೂ ಮಧ್ಯೆ ಒಪ್ಪಿಗೆಯಿರುವ ವಿಚಾರದೆಡೆಗೆ – (ಅಂದರೆ) ಏಕದೇವನಲ್ಲದೆ ಯಾರನ್ನೂ ನಾವು ಆರಾಧಿಸುವುದಿಲ್ಲ, ಅವನಿಗೆ ಯಾರನ್ನೂ ಸಹಭಾಗಿಯಾಗಿ ಭಾವಿಸಲಿಕ್ಕಿಲ್ಲ, ಅವನನ್ನು ಹೊರತು ನಮ್ಮಲ್ಲಿ ಕೆಲವರು ಬೇರೆ ಕೆಲವರನ್ನು ಒಡೆಯರನ್ನಾಗಿ ಪರಿಗಣಿಸಲಿಕ್ಕಿಲ್ಲ ಎಂಬ ವಿಚಾರದೆಡೆಗೆ – ಬನ್ನಿರಿ." (ಪವಿತ್ರ ಖುರ್‌ಆನ್ 3:65)

ಈ ಕಾಲದಲ್ಲಿ ಇಸ್ಲಾಂ, ಲೋಕ ಸಮಕ್ಷ ಆಕ್ಷೇಪಕ್ಕೆ ಗುರಿಯಾಗುತ್ತಿದೆ. ಅದರ ತತ್ವಗಳು ಪರಿಹಾಸಕ್ಕೆ ಗುರಿಯಾಗುತ್ತಿವೆ. ಇವೆಲ್ಲ ಕೆಲವು ಮುಸ್ಲಿಮರ ವರ್ತನೆಗಳ ಪರಿಣಾಮವಾಗಿದ್ದರೂ ಈ ರೀತಿಯಲ್ಲಿ ಅಪಹಾಸ್ಯ ಮಾಡುವುದು ಸರಿಯಲ್ಲ. ಕೆಲವು ಮುಸ್ಲಿಮರ ಕೃತ್ಯಗಳ ಫಲವಾಗಿ ವಿದ್ಯಾಸಂಪನ್ನರು ಕೂಡ ಇಸ್ಲಾಮ್ ಮತ್ತು ಮುಹಮ್ಮದ್ ಪೈಗಂಬರರ(ಸ) ಮೇಲೆ ಆಕ್ರಮಣ ಮಾಡಲು ಧೈರ್ಯ ತೋರಿಸುತ್ತಾರೆ. ಎಲ್ಲ ಧರ್ಮ ಸ್ಥಾಪಕರ ಮತ್ತು ಧರ್ಮಗಳ ಲಕ್ಷ್ಯ, ಸೃಷ್ಟಿಗಳನ್ನು ಸೃಷ್ಟಿಕರ್ತನೊಂದಿಗೆ ಜೋಡಿಸುವುದಾಗಿದೆ. ಇಸ್ಲಾಮಿನ ಬೋಧನೆ ಸಹ ಇದೇ ಆಗಿದೆ. ಆದುದರಿಂದ ಕೆಲವರ ವರ್ತನೆಗಳ ಕಾರಣವಾಗಿ ಇಸ್ಲಾಮಿನ ಮೇಲೆ ಆಕ್ರಮಣ ಮಾಡುವುದು ಸಮರ್ಥನೀಯವಲ್ಲ.

ಇಸ್ಲಾಂ ಎಲ್ಲ ಪ್ರವಾದಿಗಳನ್ನು ಗೌರವಿಸಲಿಕ್ಕೆ ಕಲಿಸುತ್ತದೆ. ಖುರ್‌ಆನ್ ಮತ್ತು ಬೈಬಲ್‌ನಲ್ಲಿ ಆ ಪ್ರವಾದಿಗಳ ಬಗ್ಗೆ ಪ್ರಸ್ತಾವನೆಗಳಿವೆ. ಹಝ್ರತ್ ಮುಹಮ್ಮದ್ ಪೈಗಂಬರರ ವಿನೀತ ದಾಸರಾದ ನಮಗೆ ಪೈಗಂಬರರ ಅಭಿಮಾನಕ್ಕೆ



ಕುಂದುಂಟಾಗುವ ರೀತಿಯ ನಿಂದಾ ಮಾತುಗಳನ್ನು ಆಲಿಸುವಾಗ ಅತಿಯಾದ ನೋವಾಗುತ್ತದೆ. ಇದಕ್ಕೆ ಉತ್ತರ ನಾವು ಕೊಡುತ್ತಿದ್ದೇವೆ – ಆ ಮಹಾಪುರುಷರ ಉದಾತ್ತವಾದ ಬೋಧನೆಗಳನ್ನು ಲೋಕ ಸಮಕ್ಷ ಸಮರ್ಪಿಸುತ್ತಲೂ ಪವಿತ್ರ ಖುರ್‌ಆನಿನ ಪಾಠಗಳನ್ನು ಜಗತ್ತಿನ ಮುಂದೆ ತೋರಿಸುತ್ತಲೂ. ಅದು ಪ್ರೀತಿ ಮತ್ತು ಸೌಹಾರ್ದದ ಅಧ್ಯಾಪನವಾಗಿದೆ. ಇಸ್ಲಾಮಿನ ಮೂಲಭೂತ ಉಪದೇಶ ಭಯಭಕ್ತಿಯಲ್ಲಿ ಮುನ್ನೇರುವುದಾಗಿದೆ.

ಇಂದು ಜಗತ್ತಿನಲ್ಲಿ ಶಾಂತಿ ನಾಸ್ತಿಯಾಗಲು ಕಾರಣ, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರು ಹೇಳಿ ಕೆಲವರು ಬೇರೆ ಕೆಲವರ ಭಾವೋದ್ವೇಗಗಳನ್ನು ಬಡಿದೆಬ್ಬಿಸುವುದರ ಫಲವಾಗಿದೆ. ಧಾರ್ಮಿಕವಾಗಿಯೂ ತೊಂದರೆಗೊಳಪಡಿಸಲಾಗುತ್ತದೆ. ಈಗ ಲೋಕದಲ್ಲಿ ಚಿಕ್ಕಮಟ್ಟಿಗೆ ಯುದ್ಧಗಳು ನಡೆಯುತ್ತಿವೆ. ಈ ಯುದ್ಧಗಳನ್ನು ಕೊನೆಗೊಳಿಸುವ ಪ್ರಯತ್ನ ಇಂದು ಜಗತ್ತಿಗೆ ಅತಿ ಅಗತ್ಯ. ಇಲ್ಲವಾದರೆ ಅದು ಜಾಗತಿಕ ಮಹಾಯುದ್ಧವಾಗಿ ಮಾರ್ಪಡಬಹುದು. ಆದುದರಿಂದ ಭೌತಿಕವಾದ ಪ್ರಗತಿ ಹೆಚ್ಚುಗಳಿಸಬೇಕೆಂಬ ಯೋಚನೆಯನ್ನು ತ್ಯಜಿಸಿ, ಲೋಕವನ್ನು ನಾಶದಿಂದ ಪಾರುಮಾಡಲು ಹೆಚ್ಚು ಗಮನಿಸಲೇಬೇಕಾಗಿದೆ. ಇಲ್ಲವಾದರೆ ನಾಶ ಸುನಿಶ್ಚಿತ. ಆದುದರಿಂದ ಧಾರ್ಮಿಕ ನಾಯಕರು ಪರಸ್ಪರವಿರುವ ಶತ್ರುತ್ವ, ಹಕ್ಕು ಧ್ವಂಸನೆ ಇತ್ಯಾದಿಗಳನ್ನು ಬಿಟ್ಟು ಜಗತ್ತನ್ನು ರಕ್ಷಿಸಲು ಶ್ರಮಿಸಬೇಕಾಗಿದೆ.

ತಮಗೆ ಲೋಕದಲ್ಲಿ ಒಂದು ಸ್ಥಾನವಿದೆ. ದೊಡ್ಡ ಅನುಯಾಯಿ ವೃಂದವಿದೆ. ಆದ್ದರಿಂದ ಇದಕ್ಕೋಸ್ಕರ ಪ್ರಯತ್ನಿಸಿರಿ. ಇಂದು ಲೋಕದ ಧರ್ಮಗಳೆಲ್ಲ ಪರಸ್ಪರ ಸಹಕರಿಸಿಕೊಂಡು ಶಾಂತಿಗೋಸ್ಕರ ಪರಿಶ್ರಮಿಸಬೇಕಾಗಿದೆ. ಈ ರೀತಿಯಲ್ಲಿ ನಮ್ಮನ್ನು ಸೃಷ್ಟಿಸಿದ ಒಡೆಯನನ್ನು ಜನರು ಗುರುತಿಸುವಂತಾಗಬೇಕಾಗಿದೆ.

Registered with the Registrar of Newspapers for India No. R.N. 27354/75
Yugarashmi Kannada Quarterly, December - 2011. Price : Rs. 10/-

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ
ಪ್ರಪ್ರಥಮ ಇಸ್ಲಾಮೀ ಟಿ.ವಿ. ಚ್ಯಾನೆಲ್

ಮುಸ್ಲಿಂ ಟಿಲಿವಿಷನ್ ಅಹ್ಮದಿಯಾ
ಇಂಟರ್‌ನೇಶನಲ್

# THE FIRST ISLAMIC SATELLITE CHANNEL

## Broadcasting Round the clock

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.50 EAST | SYMBOL RATE | : 26000 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-MAIL : INFO@ALISLAM.ORG WEBSITE : HTTP:WWW.ALISLAM.ORG/MTA.TV




ಅಹ್ಮದಿಯಾ ಮುಸ್ಲಿಂ ಜಮಾಅತಿನ
ವತಿಯಿಂದ ಪ್ರಕಟಿಸಲ್ಪಟ್ಟ

## ಪವಿತ್ರ ಖುರ್‌ಆನ್
ಕನ್ನಡ ಭಾಷಾಂತರ

**ಬೆಲೆ : ರೂ. 200/-**

### ದೊರೆಯುವ ವಿಳಾಸ

AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Car street, Mangalore - 575 001